**ಮಂಗಳೂರು ವಿಶ್ವ ವಿದ್ಯಾನಿಲಯದ 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಕಂಡು ಬಂದ ನ್ಯೂನತೆಗಳಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತದ ವಿವರಗಳು.**

| ಕ್ರ.ಸಂ | ಕಂಡಿಕೆಸಂಖ್ಯೆ | ವಿವರ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|
| 1 | 1 | ಲೆಕ್ಕಪರಿಶೋಧನಾ ವರದಿಯ ಬಿಡುಗಡೆ | - | - |
| 2 | 2 | ಲೆಕ್ಕಪರಿಶೋಧನಾ ವರದಿಯಲ್ಲಿ ಉಲ್ಲೇಖಿಸಿರುವ ನಿಯಮಗಳು | - | - |
| 3 | 3 | ಲೆಕ್ಕಪರಿಶೋಧನಾ ವರದಿಗೆ ಕೈಗೊಳ್ಳಬೇಕಾದ ಕ್ರಮ | - | - |
| 4 | 4 | ವಿಶ್ವ ವಿದ್ಯಾನಿಲಯದ ಅಧಿಕಾರಿಗಳ ಹೆಸರು ಮತ್ತು ಪದನಾಮ | - | - |
| 5 | 5 | ವಿಶ್ವ ವಿದ್ಯಾನಿಲಯದಲ್ಲಿ ಅಳವಡಿಸಿಕೊಂಡಿರುವ ಲೆಕ್ಕಪದ್ಧತಿ | - | - |
| 6 | 6 | ಮಾಸಿಕ ಲೆಕ್ಕಪತ್ರಗಳು ಹಾಗೂ ನಗದು ಲೆಕ್ಕಗಳ ಸಲ್ಲಿಕೆ | - | - |
| 7 | 7 | ವಿಚಾರಣಾ ಪತ್ರಗಳ ಮೇಲೆ ಕೈಗೊಂಡ ಕ್ರಮ | - | - |
| 8 | 8 | ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ಕಂಡಿಕೆಗಳ ತೀರುವಳಿ ಬಗ್ಗೆ | - | - |
| 9 | 9 | **ಆಯವ್ಯಯ ಅಂದಾಜುಗಳು** | - | - |
| | | **10. ವಿಶ್ವ ವಿದ್ಯಾಲಯದ ಸ್ವೀಕೃತಿಗಳು** | | |
| 10 | 10.1 | ವಿದ್ಯಾರ್ಥಿಗಳಿಗೆ ಪ್ರವೇಶಾತಿ ಶುಲ್ಕದಲ್ಲಿ ನೀಡಿರುವ ವಿನಾಯಿತಿ ಮೊತ್ತವನ್ನು ಸರ್ಕಾರದಿಂದ ಮರುಭರಿಕೆ ಮಾಡಿಕೊಳ್ಳದಿರುವುದು. | - | - |
| 11 | 10.2 | ದೂರ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪ್ರವೇಶ ಶುಲ್ಕದ ವಸೂಲಾತಿ ವಿವರ | - | - |
| 12 | 10.3 | ವಿಶ್ವ ವಿದ್ಯಾಲಯವು ತನ್ನ ವ್ಯಾಪ್ತಿಗೊಳಪಡುವ ಕಾಲೇಜುಗಳಿಂದ ಸಂಯೋಜನಾ ಶುಲ್ಕವನ್ನು ಕಡಿಮೆ ವಸೂಲಿ ಮಾಡಿರುವುದು. | - | 24,04,550 |
| 13 | 10.4 | ಸಂಯೋಜನಾ ವಸೂಲಿಸುವಾಗ ಜಿ.ಎಸ್.ಟಿ ಸಂಗ್ರಹಿಸದಿರುವುದು. | - | 1,15,01,746 |
| 14 | 10.5 | ಸ್ವಾಯತ್ತ ಕಾಲೇಜುಗಳ ವಾರ್ಷಿಕ ಶುಲ್ಕವನ್ನು ಕಡಿಮೆ ವಸೂಲಿಸಿರುವುದು | - | 87,750 |
| 15 | 10.6 | ವಸತಿಗೃಹ/ವಾಣಿಜ್ಯ ಕಟ್ಟಡ ಬಾಡಿಗೆ ಬೇಡಿಕೆ ವಸೂಲಿ ಬಾಕಿ ವಹಿಯನ್ನು ಹಾಜರು ಪಡಿಸದಿರುವುದು. | - | - |
| 16 | 10.7 | ಸ್ವೀಕೃತಿಯ ಮೊತ್ತವನ್ನು ವಿಶ್ವ ವಿದ್ಯಾನಿಲಯದ ಲೆಕ್ಕಕ್ಕೆ ತಾರದೆ ನೇರವಾಗಿ ವೆಚ್ಚ ಮಾಡಿರುವುದು. | - | 1,48,100 |
| | | **11. ವಿಶ್ವವಿದ್ಯಾನಿಲಯದನಿಧಿ** | | |
| 17 | 11.1 | ವಿಶ್ವ ವಿದ್ಯಾನಿಲಯದ ಆರ್ಥಿಕ ವ್ಯವಹರಣೆಯ ವಿವರ | - | - |
| 18 | 11.2 | ವ್ಯವಹರಣೆಯಿಲ್ಲದ ಬ್ಯಾಂಕ್ ಖಾತೆಗಳು | - | - |
| 19 | 11.3 | ಅವಧಿ ಮೀರಿದ ನಗದಾಗದ ಧನಾದೇಶಗಳನ್ನು ನಗದು ಪುಸ್ತಕದಲ್ಲಿ ಸ್ವೀಕೃತಿ ತೆಗೆದುಕೊಂಡು ಲೆಕ್ಕ ಸಮನ್ವಯಗೊಳಿಸದಿರುವುದು | - | - |
| 20 | 11.4 | ನಗದು ಪುಸ್ತಕ ಹಾಗೂ ಬ್ಯಾಂಕ್ ತಃಖ್ತೆಯನ್ನು ಹಾಜರು ಪಡಿಸದಿರುವುದು | - | - |
| 21 | 11.5 | ವಿಶ್ವ ವಿದ್ಯಾಲಯದ ಹೂಡಿಕೆಗಳು | - | - |
| 22 | 11.6 | ಸರ್ಕಾರದ ಸುತ್ತೋಲೆಗಳ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ವಿಶ್ವ ವಿದ್ಯಾನಿಲಯದ ಪತ್ತಿನ ಸಹಕಾರ ಸಂಘದಲ್ಲಿ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿರುವುದು. | 1,11,46,636 | - |
| 23 | 11.7 | ರಾಷ್ಟ್ರೀಯ ಉಚ್ಚತಮ ಶಿಕ್ಷಣ ಅಭಿಯಾನ ಯೋಜನೆಯ ಅನುದಾನವನ್ನು ತಾತ್ಕಾಲಿಕವಾಗಿ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿರುವುದು. | - | - |
| 24 | 11.8 | ವಿಶ್ವ ವಿದ್ಯಾನಿಲಯವು ಅನುದಾನದ ಹೂಡಿಕೆ ಸಂದರ್ಭದಲ್ಲಿ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸದಿರುವುದು. | - | - |

| | | | | |
|---|---|---|---|---|
| **12. ವೆಚ್ಚಗಳ ಮೇಲೆ ನಿಯಂತ್ರಣ** | | | | |
| 25 | 12.1 | ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ವಿವರಗಳನ್ನು ಹಾಜರುಪಡಿಸದಿರುವುದು | - | - |
| **13. ಹಣ ದುರುಪಯೋಗದ ಪ್ರಕರಣಗಳು** | | | | |
| 26 | 13.1 | ಕಡಿಮೆ ಇರಸಾಲು ಮಾಡಿರುವುದು | - | - |
| 27 | 13.2 | ಹಣಕಾಸು ವಿಭಾಗದಿಂದ ವಸೂಲಿಸಿದ ಮೊತ್ತದಿಂದ ಕಡಿಮೆ ಇರಸಾಲು ಮಾಡಿರುವುದು. | - | - |
| **14. ಫಲಧಾಯಕವಲ್ಲದ/ಅಳತೆ ಮೀರಿದ ವೆಚ್ಚಗಳು** | | | | |
| 28 | 14.1 | ಸರ್ಕಾರವು ಒದಗಿಸುವ ತಂತ್ರಾಂಶವನ್ನು ಬಳಸಿಕೊಳ್ಳದೇ ಖಾಸಗಿ ಸಂಸ್ಥೆಯಿಂದ ತಂತ್ರಾಂಶವನ್ನು ಖರೀದಿಸಿರುವುದು | - | 1,50,68,600 |
| **15.ಅನುದಾನಗಳಮಾರ್ಗಪಲ್ಲಟ** | | | | |
| 29 | 15.1 | ಪ್ರಾಯೋಜಿತ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಅನುದಾನವನ್ನು ಸಾಮಾನ್ಯ ನಿಧಿಗೆ ವರ್ಗಾವಣೆ ಮಾಡಿರುವುದು. | - | - |
| 30 | 15.2 | ನಿಯಂತ್ರಣವಿಲ್ಲದ ಆಂತರಿಕ ವರ್ಗಾವಣೆಗಳನ್ನು(Uncontrolled Internal Fund Transfers)ಮಾಡಿರುವುದು | - | - |
| 31 | 15.3 | ಕೆನರಾ ಬ್ಯಾಂಕ್(ಸಾಮಾನ್ಯ) ಖಾತೆಯಿಂದ ಎಸ್.ಬಿ.ಐ ಮಂಗಳಗಂಗೋತ್ರಿ ಖಾತೆಗೆ ಹಣ ವರ್ಗಾವಣೆಯಾಗದಿರುವುದು. | - | 1,51,515 |
| 32 | 15.4 | ರಾಷ್ಟ್ರೀಯ ಉಚ್ಛತಮ ಶಿಕ್ಷಣ ಅಭಿಯಾನ ಯೋಜನೆಗೆ ಬಿಡುಗಡೆಯಾದ ಅನುದಾನವನ್ನು ಸಾಮಾನ್ಯನಿಧಿಗೆ ವರ್ಗಾವಣೆಮಾಡಿರುವುದು. | - | - |
| **16. ಬ್ಲಾಕ್ ಗ್ರಾಂಟ್ಸ್** | | | | |
| **17. ಕೇಂದ್ರ ಸರ್ಕಾರ ಮತ್ತು ವಿಶ್ವ ವಿದ್ಯಾನಿಲಯ ಧನ ಸಹಾಯ ಆಯೋಗದ ಅನುದಾನಗಳು** | | | | |
| 33 | 17.1 | **ರಾಷ್ಟ್ರೀಯ ಉಚ್ಚತರ್ ಶಿಕ್ಷಣ ಅಭಿಯಾನದಡಿ ಬಿಡುಗಡೆಯಾದ ಅನುದಾನವನ್ನು** ಯೋಜನಾ ಮಾರ್ಗಸೂಚಿಗಳಿಗೆ ವಿರುದ್ಧವಾಗಿ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿರುವುದು | | |
| 34 | 17.2 | **ರಾಷ್ಟ್ರೀಯ ಉಚ್ಚತರ್ ಶಿಕ್ಷಣ ಅಭಿಯಾನ** ಯೋಜನೆಯಡಿ ಸಾಕ್ಷ್ಯ ಚಿತ್ರ ನಿರ್ಮಿಸಿರುವುದು. | 2,90,200 | - |
| 35 | 17.3 | ಯು.ಜಿ.ಸಿ 12ನೇ ಯೋಜನೆಯಡಿ ಬಿಡುಗಡೆಯಾದ ಅನುದಾನವನ್ನು ಬಳಸಿಕೊಳ್ಳದೆ ಬಡ್ಡಿ ಸಹಿತ ಹಿಂದಿರುಗಿಸಿರುವುದು. | - | - |
| 36 | 17.4 | ವಿಶ್ವವಿದ್ಯಾನಿಲಯದ ಸಂಶೋಧನಾ ಯೋಜನೆಗಳ ಅನುಷ್ಠಾನದಲ್ಲಿ ಕಂಡು ಬಂದ ನ್ಯೂನತೆಗಳು. | - | - |
| **18. ಇತರೆ ಪ್ರಾಧಿಕಾರಗಳಿಂದ ಅನುದಾನಗಳು** | | | | |
| 37 | 18.೧ | ಅಧ್ಯಯನ ಪೀಠಗಳಲ್ಲಿ ಲಭ್ಯವಿರುವ ಅನುದಾನವನ್ನು ನಿಗದಿತ ಕಾರ್ಯ ಚಟುವಟಿಕೆಗಳಿಗೆ /ಉಪನ್ಯಾಸಗಳಿಗೆ ಬಳಕೆ ಮಾಡಿಕೊಳ್ಳದಿರುವುದು. | - | - |
| 38 | 18.2 | ಎಂ.ಸಿ. ಶಾಸ್ತ್ರಿ ದತ್ತಿಪೀಠದ ಆರ್ಥಿಕ ವಹಿವಾಟನ್ನು "ಚಾಲ್ತಿಖಾತೆ" (Current Account)ಯಲ್ಲಿನಿರ್ವಹಣೆಮಾಡುತ್ತಿರುವುದು | - | - |
| 39 | 18.3 | ಹೈಎಂಡ್ ಕಾನ್ಫೋಕಲ್ ಸೂಕ್ಷ್ಮದರ್ಶಕ ಯಂತ್ರದ ಖರೀದಿಯಲ್ಲಿ ಅಬಕಾರಿ ಸುಂಕಕ್ಕೆ ವಿನಾಯಿತಿ ಪಡೆಯಲು ಅವಕಾಶವಿದ್ದರೂ ಕೂಡ ದಂಡ ಶುಲ್ಕ ದೊಂದಿಗೆ ಅಬಕಾರಿ ಸುಂಕ ಪಾವತಿಸಿರುವುದು. | - | 17,813 |
| 40 | 18.4 | ಏಕ ಬಿಡ್ ಟೆಂಡರ್ ಅನ್ನು ಅಂಗೀಕರಿಸಿ ವೆಚ್ಚ ಭರಿಸಿರುವುದು. | 2,37,20,185 | - |
| 41 | 18.5 | ಟೆಂಡರ್ ಕಡತಗಳನ್ನು ಹಾಜರು ಪಡಿಸದಿರುವುದು. | 1,43,488 | - |
| 42 | 18.6 | ಪ್ರಾಯೋಜಿತ ಕಾರ್ಯಕ್ರಮಗಳಡಿ ಅನುದಾನವನ್ನು ಬಳಕೆಮಾಡಿಕೊಳ್ಳದಿರು ವುದು. | - | - |
| 43 | 18.7 | ಮುಕ್ತಾಯಗೊಂಡ ಪ್ರಾಯೋಜಿತ ಯೋಜನೆಗಳ ಬಾಕಿ ಮೊತ್ತವನ್ನು ಅನುದಾನ | - | - |

| | | | | |
|---|---|---|---|---|
| | | ನೀಡಿರುವ ಸಂಸ್ಥೆಗಳಿಗೆ ಹಿಂದಿರುಗಿಸಿರುವ ಬಗ್ಗೆ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸದಿರುವುದು. | | |
| 44 | 18.8 | ಡಿ.ಎಸ್.ಟಿ. ಪರ್ಸ್ ಯೋಜನೆಯಡಿ ಪ್ರಯೋಗಾಲಯ ಅಭಿವೃದ್ಧಿಗಾಗಿ ಬಿಡುಗಡೆಯಾದ ಅನುದಾನವನ್ನು ಸಮರ್ಪಕವಾಗಿ ಬಳಸದಿರುವುದು. | - | - |
| **19. ರಾಜ್ಯ ಸರ್ಕಾರದ ಅನುದಾನಗಳು** | | | | |
| **20. ಅಧಿಕಾರಿ ಮತ್ತು ಬೋಧಕ ವರ್ಗದವರ ವೇತನ ಮತ್ತು ಭತ್ಯೆಗಳು** | | | | |
| 45 | 20.1 | ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ತಜ್ಞರ ಸಮಿತಿ ವಿಷಯವಾರು ಬೋಧನಾ ಅವಧಿಗಳನ್ನು ನಿಗದಿಪಡಿಸಿರುವ ಕಡತಗಳನ್ನು ಹಾಜರು ಪಡಿಸದಿರುವುದು. | 7,72,42,437 | - |
| 46 | 20.2 | ಡಾ. ಐರಾನಿ ಮೊಹಮದ್ ಖಾನ್, ಪ್ರಾಧ್ಯಾಪಕರು ಇವರಿಗೆ ಹೆಚ್ಚುವರಿ ತುಟ್ಟಿ ಭತ್ಯ ಪಾವತಿಸಿರುವುದು. | - | - |
| 47 | 20.3 | ಆಡಳಿತಾತ್ಮಕ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳು ಬೋಧನೆ ಮಾಡಿರುವ ಬೋಧನಾ ಅವಧಿಗಳ ಮಾಹಿತಿಯನ್ನು ಹಾಜರು ಪಡಿಸದಿರುವುದು. | - | - |
| 48 | 20.4 | ಯು.ಜಿ.ಸಿ. 6ನೇ ವೇತನ ಪರಿಷ್ಕರಣೆಯ ಹಿಂಬಾಕಿ ಮೊತ್ತವನ್ನು ದಿನಾಂಕ : 01.01.2006ರ ನಂತರ ನೇಮಕವಾದ ಬೋಧಕರುಗಳಿಗೆ ಪಾವತಿಸಿರುವುದು. | - | 18,84,477 |
| 49 | 20.5 | ಕರ್ನಾಟಕ ನಾಗರಿಕ ಸೇವಾ ನಿಯಮಗಳನ್ನು ಉಲ್ಲಂಘಿಸಿ ಗಳಿಕೆ ರಜೆಯನ್ನು ರಜೆ ಲೆಕ್ಕಕ್ಕೆ ಜಮೆ ಮಾಡಿರುವುದು. | - | - |
| 50 | 20.6 | ಕರ್ನಾಟಕ ನಾಗರಿಕ ಸೇವಾನಿಯಮಗಳನ್ನು ಉಲ್ಲಂಘಿಸಿ ಗಳಿಕೆ ರಜೆ ಲೆಕ್ಕಕ್ಕೆ ಹೆಚ್ಚುವರಿ ಗಳಿಕೆ ರಜೆಯನ್ನು ಜಮೆಮಾಡಿ ನಿವೃತ್ತಿ ನಂತರ ಗಳಿಕೆ ರಜಾ ನಗಧೀಕರಣ ಸೌಲಭ್ಯ ನೀಡಿರುವುದು. | - | 21,53,895 |
| **21. ಬೋಧಕೇತರ ಸಿಬ್ಬಂದಿಗಳ ವೇತನ ಮತ್ತು ಭತ್ಯೆಗಳು** | | | | |
| 51 | 21.1 | ಸರ್ಕಾರದ ಮಾರ್ಗ ಸೂಚಿಗಳನ್ನು ಉಲ್ಲಂಘಿಸಿ ತಾತ್ಕಾಲಿಕ ಹಾಗೂ ಸಂಚಿತ ವೇತನದಡಿಯಲ್ಲಿ ಬೋಧಕೇತರ ನೌಕರರನ್ನು ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದು. | 5,02,53,107 | - |
| 52 | 21.2 | ಸರ್ಕಾರದ ಆದೇಶ ಉಲ್ಲಂಘಿಸಿ ನಿವೃತ್ತ ನೌಕರರನ್ನು ನೇಮಕ ಮಾಡಿಕೊಂಡಿರುವುದು. | - | 4,01,548 |
| 53 | 21.3 | ಸರ್ಕಾರದ ಮಾರ್ಗ ಸೂಚಿಗಳನ್ನು ಉಲ್ಲಂಘಿಸಿ ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲ ಸೇವೆಯನ್ನು ಮಾಡಿಕೊಂಡಿರುವುದು. | 1,32,70,103 | - |
| 54 | 21.4 | ಗ್ರಂಥಾಲಯ ಶಿಕ್ಷಾರ್ಥಿಗಳನ್ನು ನೇಮಕ ಮಾಡಿಕೊಂಡು ವೇತನ ಪಾವತಿಸಿರು ವುದು. | 5,59,021 | - |
| 55 | 21.5 | ಶ್ರೀಮತಿ ಪಿ. ನಾಗವೇಣಿ ಹಿರಿಯ ಸಹಾಯಕರು ಇವರಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಉಲ್ಲಂಘಿಸಿ ನೇರವಾಗಿ ಸಹಾಯಕ ಕುಲಸಚಿವರ ಹುದ್ದೆಗೆ ಪದೋನ್ನತಿ ನೀಡಿರುವುದು. | - | - |
| 56 | 21.6 | ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿದ್ದ ವಾಹನ ಚಾಲಕರನ್ನು ಖಾಯಂಗೊಳಿಸಿರು ವುದು. | 12,91,922 | - |
| 57 | 21.7 | ವಿಶ್ವ ವಿದ್ಯಾನಿಲಯದ ಪರಿನಿಯಮವನ್ನು ಉಲ್ಲಂಘಿಸಿ ಶ್ರೀಮತಿ ಭಾಗ್ಯಲಕ್ಷ್ಮಿ ರವರಿಗೆ ಅಧೀಕ್ಷಕರಾಗಿ ಪದೋನ್ನತಿ ನೀಡಿರುವುದು. | - | - |
| 58 | 21.8 | ಎನ್.ಎಂ.ಆರ್/ **ವರ್ಕ್‌ಚಾರ್ಜ್ ನೆಲೆಯಲ್ಲಿ** ಕರ್ತವ್ಯ ನಿರ್ವಹಿಸಿರುವ ಬೋಧಕೇತರ ಸಿಬ್ಬಂದಿಗಳಿಗೆ ವೇತನವನ್ನು ಸೇವಾ ಸಕ್ರಮಾತಿಗೊಳಿಸಿದ ದಿನಾಂಕದಿಂದ ನಿಗಧಿಪಡಿಸುವ ಕುರಿತು. | | |

| | | | | |
|---|---|---|---|---|
| **22. ಪ್ರಯಾಣ ಭತ್ಯೆಗಳು** | | | | |
| **23. ಸಾದಿಲ್ವಾರು ವೆಚ್ಚಗಳು** | | | | |
| 59 | 23.1 | ಕೆ.ಟಿ.ಪಿ.ಪಿ. ನಿಯಮ ಪಾಲಿಸದೆ ಮೆ\|\| ಬೇಸ್ ಕಂಪ್ಯೂಟರ್‌ರವರಿಂದ ಗಣಕ ಯಂತ್ರಗಳ ವಾರ್ಷಿಕ ನಿರ್ವಹಣೆ ಮಾಡಿರುವುದು. | 15,47,317 | - |
| 60 | 23.2 | ಸರಕು ಮತ್ತು ಸೇವೆ ಒದಗಿಸಿದ ಸಂಸ್ಥೆಗಳಿಗೆ ಪಾವತಿಸಿದ ಬಿಲ್ಲುಗಳಿಂದ ಜಿ.ಎಸ್.ಟಿ ಟಿ.ಡಿ.ಎಸ್ ಕಟಾಯಿಸದಿರುವುದು. | - | - |
| 61 | 23.3 | ಕೆ.ಟಿ.ಪಿ.ಪಿ. ನಿಯಮಗಳನ್ನು ಪಾಲಿಸದೇ ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸಿ ಕೊಂಡಿರುವುದು. | 90,81,947 | - |
| 62 | 23.4 | ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಖಾಲಿ ಅಂಕಪಟ್ಟಿ & ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸಿಕೊಳ್ಳದೇ ಖಾಸಗಿಯವರಿಂದ ಮುದ್ರಿಸಿಕೊಂಡಿರುವುದು. | 28,98,972 | - |
| 63 | 23.5 | ಕೇಂದ್ರ ಅಬಕಾರಿ ಸುಂಕ ಮತ್ತು ಕೇಂದ್ರ ತೆರಿಗೆ ಇಲಾಖೆಗೆ ಸೇವಾ ತೆರಿಗೆಯನ್ನು ವಿಳಂಬವಾಗಿ ಪಾವತಿಸಿರುವುದಕ್ಕೆ ಬಡ್ಡಿ ಮತ್ತು ದಂಡವನ್ನು ಪಾವತಿಸಿರುವುದು. | - | 2,12,950 |
| 64 | 23.6 | ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ಆರೋಗ್ಯ ಕೇಂದ್ರಕ್ಕೆ ಔಷಧಿ ಖರೀದಿಸಿರುವುದು. | 9,00,602 | - |
| 65 | 23.7 | ತ್ವರಿತ ಅಂಚೆ ಲಕೋಟೆಗಳನ್ನು ರವಾನಿಸಿದ ಬಾಬ್ತು ಬಿಲ್ಲುಗಳ ವಿಳಂಬ ಪಾವತಿಗಾಗಿ ದಂಡ ಪಾವತಿಸಿರುವುದು. | - | 22,200 |
| 66 | 23.8 | ಕೆ.ಟಿ.ಪಿ.ಪಿ. ನಿಯಮ ಉಲ್ಲಂಘಿಸಿ ಕಸ ವಿವೇವಾರಿ ವೆಚ್ಚ ಭರಿಸಿರುವುದು. | 5,40,000 | - |
| 67 | 23.9 | ಲೈಸನಿಂಗ್ ಆಫೀಸರ್‌ಗಳ ನೇಮಕಾತಿ ಕಡತವನ್ನು ಹಾಜರು ಪಡಿಸದಿರುವುದು. | - | - |
| 68 | 23.10 | ಸಾಮಾನ್ಯ ಖಾತೆಯಡಿ ಪಾವತಿಸಲಾದ ಮೊತ್ತಕ್ಕೆ ಕಡತಗಳನ್ನು ಹಾಜರು ಪಡಿಸದಿರುವುದು. | 71,49,512 | - |
| 69 | 23.11 | ಗುತ್ತಿಗೆದಾರರಿಂದ ಭದ್ರತಾ ಠೇವಣಿ ಪಡೆಯದೆ ಗುತ್ತಿಗೆ ಕರಾರು ಮಾಡಿಕೊಂಡು ವಾರ್ಷಿಕ ನಿರ್ವಹಣಾ ವೆಚ್ಚಗಳನ್ನು ಭರಿಸಿರುವುದು. | - | - |
| 70 | 23.12 | ಕೆ.ಟಿ.ಪಿ.ಪಿ. ನಿಯಮಾವಳಿಗಳನ್ನು ಉಲ್ಲಂಘಿಸಿ ಮಡಿಕೇರಿ ಕಾಲೇಜಿಗೆ ಸಾಮಾಗ್ರಿಗಳನ್ನು ಖರೀದಿಸಿರುವುದು. | 1,41,450 | - |
| 71 | 23.13 | ಮೆ\|\| ಆಟ್ರಿಸ್ ಟೆಕ್ನಾಲಜೀಸ್ ಬೆಂಗಳೂರು ರವರಿಗೆ ಪರೀಕ್ಷಾ ಕಾರ್ಯನಿರ್ವಹಣಾ ಗುತ್ತಿಗೆಯನ್ನು ನೀಡಿರುವುದು. | 2,21,83,848 | - |
| 72 | 23.14 | ಪರೀಕ್ಷಾಂಗ ಖಾತೆಯಿಂದ ವೆಚ್ಚ ಮಾಡಿರುವ ಮೊತ್ತಕ್ಕೆ ವೋಚರ್‌ಗಳನ್ನು ಹಾಜರು ಪಡಿಸದಿರುವುದು. | 13,23,280 | - |
| 73 | 23.15 | ಸ್ವಯಂ ಆರ್ಥಿಕ ಯೋಜನೆಯಡಿ ಎಲೆಕ್ಟ್ರಾನಿಕ್ಸ್ ವಿಭಾಗಕ್ಕೆ ಕ್ಲೌಡ್ ಆಧಾರಿತ ಕೇಂದ್ರೀಕೃತ ಸೌಲಭ್ಯ ವ್ಯವಸ್ಥೆಗೆ ಅಗತ್ಯ ಯಂತ್ರಾಂಶ ಮತ್ತು ತಂತ್ರಾಂಶವನ್ನು ಟೆಂಡರ್ ಕರೆಯದೇ ಖರೀದಿಸಿರುವುದು. | 30,00,000 | - |
| 74 | 23.16 | ಎಂ.ಬಿ.ಎ. ವಿಭಾಗದ ಗಣಕ ಯಂತ್ರ ಪ್ರಯೋಗಾಲಯದಲ್ಲಿ ಪ್ರೊವೆಸ್ ಡಾಟಾ ಬೇಸ್‌ನ ವಾರ್ಷಿಕ ನವೀಕರಣದ ವೆಚ್ಚ ಮಾಡಿರುವುದು. | 2,33,640 | - |
| 75 | 23.17 | ಮಂಗಳೂರು ವಿಶ್ವ ವಿದ್ಯಾನಿಲಯದ ವಿವಿಧ ವಿದ್ಯುತ್ ಸ್ಥಾವರಗಳ ವಿದ್ಯುತ್ ಸರಬರಾಜು ಬಿಲ್ಲುಗಳಲ್ಲಿ Interest charges for Revenue Over due, Interest ಮತ್ತು Interest on revenue arrears ಎಂದು ಹೆಚ್ಚುವರಿ ಪಾವತಿಸಿರುವುದು. | - | 66,377 |
| 76 | 23.18 | ಮೆ. ಕೆನಾನ್ ಡಿಟೆಕ್ಟಿವ್ ಅಂಡ್ ಸೆಕ್ಯುರಿಟಿ ಸರ್ವಿಸ್ ಪ್ರೈ., ಲಿ., ಬೆಂಗಳೂರು ರವರ ಬಿಲ್ಲುಗಳಲ್ಲಿ ಸರಕು ಮತ್ತು ಸೇವಾ ತೆರಿಗೆಯ ಟಿಡಿಎಸ್ ನ್ನು (GST-TDS) ಕಟಾಯಿಸದೇ ಬಿಲ್ಲುಗಳನ್ನು ಪಾವತಿಸಿರುವುದು. | - | 7,99,746 |

| | | | | |
|---|---|---|---|---|
| **24. ಪರೀಕ್ಷಕರ ಸಂಭಾವನೆ ಪಾವತಿಗಳು** | | | | |
| 77 | 24.1 | ಪರೀಕ್ಷಾ ಕಾರ್ಯಕ್ಕೆ ಹಾಜರಾದ ಯು.ಜಿ.ಸಿವೃಂದದ ಬೋಧಕ ವರ್ಗದವರಿಗೆ ಮೌಲ್ಯ ಮಾಪನ ಸಂಭಾವನೆ ಪಾವತಿಸಿರುವುದು. | - | ೧೧,೩೪,೧೩೪ |
| **25. ಕಾಮಗಾರಿ ವೆಚ್ಚಗಳು** | | | | |
| 78 | 25.1 | ಅಳತೆ ಪರಿಶೀಲನೆ ಮಾಡದೇ ಕಾಮಗಾರಿ ಬಿಲ್ಲುಗಳನ್ನು ಪಾವತಿಸಿರುವುದು. | 73,51,846 | - |
| 79 | 25.2 | 2019-20ನೇ ಸಾಲಿನಲ್ಲಿ ಅಭಿವೃದ್ಧಿ ಲೆಕ್ಕ ಶೀರ್ಷಿಕೆಯಿಂದ ವೆಚ್ಚ ಭರಿಸಲಾದ ಸಂಬಂಧ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು. | 81,73,998 | - |
| 80 | 25.3 | ಟೆಂಡರ್ ಆಹ್ವಾನಿಸದೇ ದರಪಟ್ಟಿಕರೆಯುವ ಮೂಲಕ ಕಾಮಗಾರಿಯನ್ನು ನಿರ್ವಹಿಸಿರುವುದು. | 27,54,416 | - |
| 81 | 25.4 | ಕಾಮಗಾರಿ ವಹಿಯನ್ನು ನಿರ್ವಹಿಸದಿರುವುದು. | - | - |
| 82 | 25.5 | ಕಾಮಗಾರಿ ಬಿಲ್ಲುಗಳಲ್ಲಿ ಕಡಿತ ಮಾಡಿದ ಶಾಸನಬದ್ದ ತೆರಿಗೆಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ಜಮೆ ಮಾಡಿದ ದಾಖಲೆಗಳನ್ನು ಹಾಜರು ಪಡಿಸದಿರುವುದು. | 4,19,625 | - |
| 83 | 25.6 | ಅಳತೆ ಪುಸ್ತಕಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸದೇ ಇರುವುದು. | 11,68,571 | - |
| 84 | 25.7 | ವಿಶೇಶ ಘಟಕ/ಗಿರಿಜನ ಉಪಯೋಜನೆಯಡಿ ನಿರ್ವಹಿಸಿದ ಕಾಮಗಾರಿಯ ವೋಚರ್‌ಗಳನ್ನು ಹಾಜರು ಪಡಿಸದಿರುವುದು. | 63,35,917 | - |
| 26. **ದಾಸ್ತಾನು ಲೆಕ್ಕಗಳು** | | | | |
| 85 | 26.1 | ರಶೀದಿ ಪುಸ್ತಕಗಳ ದಾಸ್ತಾನು. | - | - |
| 86 | 26.2 | ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಹಾಜರು ಪಡಿಸದಿರುವುದು. | - | - |
| 87 | 26.3 | ದೂರ ಶಿಕ್ಷಣ ವಿಭಾಗದ ಅಧ್ಯಯನ ಸಾಮಾಗ್ರಿಗಳ (Study Materials) ದಾಸ್ತಾನು ವಹಿ ಪರಿಶೀಲನೆ. | - | - |
| 88 | 26.4 | ಪ್ರಸಾರಾಂಗದ ದಾಸ್ತಾನಿನಲ್ಲಿ ಬಾಕಿ ಉಳಿದಿರುವ ಪುಸ್ತಕಗಳ ವಿವರ. | - | - |
| **27. ವಿಶ್ವ ವಿದ್ಯಾಲಯ ಮುದ್ರಣಾಲಯ** | | | | |
| **28. ವಾಹನ ಖರೀದಿ ಮುಂಗಡಗಳು** | | | | |
| **29.ಗೃಹ ನಿರ್ಮಾಣ ಮುಂಗಡಗಳು** | | | | |
| **30. ಇತರೆ ಮುಂಗಡಗಳು** | | | | |
| 89 | 30.1 | ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಎ.ಸಿ.ಬಿಲ್ಲುಗಳ ಮೂಲಕ ವೆಚ್ಚ ಭರಿಸಿರುವುದು. | 68,97,315 | - |
| 90 | 30.2 | ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ ಖರ್ಚಾಗದೇ ಉಳಿದ ಮೊತ್ತಗಳು ವಿಶ್ವವಿದ್ಯಾನಿಲಯಕ್ಕೆ ಮರು ಜಮೆಯಾದ ಬಗ್ಗೆ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸದಿರುವುದು. | 7,74,720 | - |
| 91 | 30.3 | ಸಂಕ್ಷಿಪ್ತ ಸಾದಿಲ್ವಾರು (A.C) ಬಿಲ್ಲುಗಳ ಮೂಲಕ ಡ್ರಾ ಮಾಡಿರುವ ಮೊತ್ತಗಳಿಗೆ ಎನ್.ಡಿ.ಸಿ. ಸಲ್ಲಿಸಿರುವ ಬಗ್ಗೆ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸದಿರುವುದು. | 1,17,84,561 | - |
| 92 | 30.4 | ಮುಂಜಾಗ್ರತಾ ಠೇವಣಿ ಮೊತ್ತ (caution deposit)ವನ್ನು ಹಿಂದುರುಗಿಸಿರುವ ವಿವರ. | - | - |
| 93 | 30.5 | ಹೊಂದಾಣಿಕೆ ಬಿಲ್ಲುಗಳಲ್ಲಿ ನಿಯಮ ಉಲ್ಲಂಘಿಸಿ ವೆಚ್ಚ ಭರಿಸಿರುವುದು | 37,99,844 | - |
| 94 | 30.6 | ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು ಡ್ರಾ ಮಾಡುವಾಗ ನಿಯಮಾವಳಿಗಳನ್ನು ಉಲ್ಲಂಘಿಸಿರುವುದು. | - | - |

| | | | | |
|---|---|---|---|---|
| **31. ಸಹಾಯಾನುದಾನಗಳು** | | | | |
| **32. ವಿದ್ಯಾರ್ಥಿ ವೇತನ ಮತ್ತು ಬಹುಮಾನಗಳ ದತ್ತಿಗಳು** | | | | |
| 95 | 32.1 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ವಸತಿ ನಿಲಯದ ವಿದ್ಯಾರ್ಥಿಗಳಿಂದ ಮೆಸ್ ಬಾಬ್ತು ಸರ್ಕಾರದಿಂದ ಮರುಭರಿಕೆಯಾಗದಿರುವುದು. | - | 74,16,271 |
| 96 | 32.2 | ವಿದ್ಯಾರ್ಥಿ ನಿಲಯಗಳಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕ ಸರ್ಕಾರದಿಂದ ಮರು ಭರಿಕೆಯಾಗದಿರುವುದು ಹಾಗೂ ವಿದ್ಯಾರ್ಥಿಗಳಿಂದ ಕಡಿಮೆ ಶುಲ್ಕ ವಸೂಲಿಸಿರುವುದು. | - | 5,900 |
| **33. ಭವಿಷ್ಯನಿಧಿ** | | | | |
| **34. ಪಿಂಚಣಿ ಸೌಲಭ್ಯ ಯೋಜನೆಗಳು** | | | | |
| 97 | 34.1 | ನೂತನ ಪಿಂಚಣಿ ಯೋಜನೆಗೆ (NPS) ಒಳಪಡುವ ವಿಶ್ವ ವಿದ್ಯಾನಿಲಯದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರ ವಿವರವನ್ನು ಎನ್.ಎಸ್.ಡಿ.ಎಲ್. ಸಂಸ್ಥೆಯೊಂದಿಗೆ ನೊಂದಣಿ ಮಾಡಿಸದೆ ಭಾರತೀಯ ಜೀವ ವಿಮಾ ನಿಗಮಕ್ಕೆ (LIC) ವಂತಿಗೆಯನ್ನು ಜಮೆ ಮಾಡುತ್ತಿರುವುದು. | - | - |
| 98 | 34.2 | ಪಿಂಚಣಿ ಪ್ರಕರಣಗಳಲ್ಲಿ ಅಂತಿಮ ವೇತನವನ್ನು ದೃಢೀಕರಿಸಿ ಕೊಂಡ ತಃಖ್ತೆಯನ್ನು ನಿರ್ವಹಿಸದೇ ಇರುವುದು. | - | - |
| 99 | 34.3 | ತಾತ್ಕಾಲಿಕ ಸೇವಾ ಅವಧಿಯನ್ನು ಪಿಂಚಣಿ ಸೌಲಭ್ಯಕ್ಕಾಗಿ ಅರ್ಹತಾ ದಾಯಕ ಸೇವೆಯೆಂದು ಪರಿಗಣಿಸಿರುವುದು. | - | 4,46,382 |
| 100 | 34.4 | ಪಿಂಚಣಿ ಪಾವತಿಗೆ ಸಂಬಂಧಿಸಿದಂತೆ ಸೇವಾ ಪುಸ್ತಕವನ್ನು ಪರಿಶೀಲನೆಗೆ ಹಾಜರು ಪಡಿಸದೇ ಇರುವುದು. | 29,14,883 | - |
| **35. ಪುಸ್ತಕಗಳ ಮಾರಾಟ** | | | | |
| 101 | 35.1 | ಪ್ರಸಾರಾಂಗ ವಿಭಾಗದಿಂದ ಸಾಲ ನೀಡಲಾದ ಪುಸ್ತಗಳ ಪರ್ಣ ಮೊತ್ತವನ್ನು ವಸೂಲಿ ಮಾಡದಿರುವುದು. | - | 1,44,798 |
| | | **ಒಟ್ಟು** | **27,92,93,363** | **4,40,68,752** |

ಅಪರ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,
ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು..

## ವಿಶ್ವ ವಿದ್ಯಾನಿಲಯದ ಸ್ಥೂಲ ನೋಟ


### ವಿಶ್ವ ವಿದ್ಯಾನಿಲಯದ ಸ್ಥಾಪನೆಯ ಹಿನ್ನೆಲೆ

ಮಂಗಳೂರು ವಿಶ್ವ ವಿದ್ಯಾನಿಲಯವು ಮಂಗಳೂರಿನಿಂದ 21 ಕಿ.ಮೀ. ದೂರದಲ್ಲಿರುವ ಕೊಣಾಜೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಮಂಗಳ ಗಂಗೋತ್ರಿ ಆವರಣದಲ್ಲಿ 1980ನೇ ಇಸವಿಯಲ್ಲಿ ಸ್ಥಾಪನೆ ಗೊಂಡಿರುತ್ತದೆ. ವಿಶ್ವ ವಿದ್ಯಾನಿಲಯದ ಆವರಣವು ಸುಮಾರು 360 ಎಕರೆಯ ವಿಶಾಲ ಪ್ರದೇಶವನ್ನು ಹೊಂದಿದೆ. ಪ್ರಸ್ತುತ ದಕ್ಷಿಣ ಕನ್ನಡ, ಉಡುಪಿ ಹಾಗೂ ಕೊಡಗು ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ನೀಡುವ ಕಾರ್ಯ ವ್ಯಾಪ್ತಿಯನ್ನು ಹೊಂದಿರುತ್ತದೆ. ವಿಶ್ವ ವಿದ್ಯಾನಿಲಯವುಕಲೆ, ವಿಜ್ಞಾನ ಮತ್ತು ತಂತ್ರ ಜ್ಞಾನ, ವಾಣಿಜ್ಯ, ನಿರ್ವಹಣಾ ಶಾಸ್ತ್ರ, ಶಿಕ್ಷಣ ಹಾಗೂ ಕಾನೂನು ಅಧ್ಯಯನಗಳಿಗೆ ಸಂಬಂಧಿಸಿದಂತೆ ಸುಮಾರು ನಲವತ್ತಕ್ಕೂ ಹೆಚ್ಚು ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮೂಲಕ ಶಿಕ್ಷಣ ನೀಡುತ್ತಿದೆ. ಮಂಗಳೂರಿನ ಹಂಪನಕಟ್ಟೆಯ ವಿಶ್ವ ವಿದ್ಯಾನಿಲಯ ಕಾಲೇಜು, ಫೀಲ್ಡ್ ಮಾರ್ಷಲ್ ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇವುಗಳೂ ಸಹ ವಿಶ್ವ ವಿದ್ಯಾನಿಲಯದ ನೇರ ಆಡಳಿತಕ್ಕೊಳಪಟ್ಟಿವೆ. ವಿಶ್ವ ವಿದ್ಯಾನಿಲಯವು ಕೊಡಗಿನ ಕುಶಾಲನಗರದ ಬಳಿಯ ಚಿಕ್ಕಅಳುವಾರದಲ್ಲಿ ಸ್ನಾತಕೋತ್ತರ ಅಧ್ಯಯನ ಕೇಂದ್ರವನ್ನು ಹೊಂದಿದೆ. ದಕ್ಷಿಣಕನ್ನಡ, ಉಡುಪಿ ಹಾಗೂ ಕೊಡಗು ಜಿಲ್ಲಾ ವ್ಯಾಪ್ತಿಯ ಸುಮಾರು ಇನ್ನೂರಕ್ಕೂ ಅಧಿಕ ಪದವಿ ಕಾಲೇಜುಗಳು ವಿಶ್ವ ವಿದ್ಯಾನಿಲಯದ ಸಂಯೋಜನೆಯನ್ನು ಹೊಂದಿರುತ್ತವೆ. ಮಂಗಳೂರು ವಿಶ್ವ ವಿದ್ಯಾನಿಲಯವು ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ತಿನಿಂದ (NAAC) ನಿಂದ 'ಎ' ಗ್ರೇಡ್ ಮಾನ್ಯತೆಯನ್ನು ಹೊಂದಿದೆ. "ಜ್ಞಾನವೇ ಬೆಳಕು" ವಿಶ್ವ ವಿದ್ಯಾನಿಲಯದ ಧ್ಯೇಯ ವಾಕ್ಯವಾಗಿದೆ.

ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯಗಳ ಅಧಿನಿಯಮ-20000, ಕರ್ನಾಟಕ ನಾಗರಿಕಸೇವಾ ನಿಯಮಗಳು-1958, ಕರ್ನಾಟಕ ಆರ್ಥಿಕ ಸಂಹಿತೆ - 1958, ಸಾದಿಲ್ವಾರು ವೆಚ್ಚಗಳ ಕೈಪಿಡಿ - 1958, ಕರ್ನಾಟಕ ಮೆಡಿಕಲ್ ಅಟೆಂಡನ್ಸ್ ರೂಲ್ಸ್ - 1963, ಕರ್ನಾಟಕ ಲೋಕೋಪಯೋಗಿ ಲೆಕ್ಕ ಪತ್ರ ಸಂಹಿತೆ ಹಾಗೂ ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆ (P.W.A & D Code), ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಅಧಿ ನಿಯಮ 1999, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ನಿಯಮಗಳು 2000 ಹಾಗೂ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ನಿಯಮಗಳು 2003 ಹಾಗೂ ಸರ್ಕಾರದಿಂದ ಕಾಲ ಕಾಲಕ್ಕೆ ಹೊರಡಿಸುವ ಆದೇಶಗಳಿಗೆ ಬದ್ಧವಾಗಿ ವಿಶ್ವವಿದ್ಯಾಲಯವು ಆಡಳಿತವನ್ನು ನಿರ್ವಹಿಸುತ್ತಿದೆ.

### ವಿಶ್ವ ವಿದ್ಯಾನಿಲಯದ ಸಾಂಸ್ಥಿಕ ರಚನೆ

**ವಿಶ್ವ ವಿದ್ಯಾನಿಲಯದ ಆಡಳಿತದ ಪ್ರಮುಖ ಸಾಂಸ್ಥಿಕ ರಚನೆಯು ಈ ಕೆಳಗಿನಂತಿರುತ್ತದೆ.**



**ವಿಶ್ವ ವಿದ್ಯಾನಿಲಯದ ಸಮಿತಿಗಳು**

| ಕ್ರ. ಸಂ | ಮಂಡಳಿ/ಸಮಿತಿಯಹೆಸರು | ಅಧಿನಿಯಮದಲ್ಲಿನಅವಕಾಶ | ಸಮಿತಿಯಅಧ್ಯಕ್ಷರು |
|---|---|---|---|
| 1 | ಸಿಂಡಿಕೇಟ್ | ಪ್ರಕರ - 28(1) | ಕುಲಪತಿಗಳು |
| 2 | ಶಿಕ್ಷಣ ಮಂಡಳಿ | ಪ್ರಕರಣ - 30(1) | ಕುಲಪತಿಗಳು |
| 3 | ಹಣಕಾಸು ಸಮಿತಿ | ಪ್ರಕರಣ – 32(1) | ಕುಲಪತಿಗಳು |
| 4 | ಯೋಜನೆ, ಉಸ್ತುವಾರಿ ಮತ್ತು ಮೌಲ್ಯ ಮಾಪನ ಮಂಡಳಿ | ಪ್ರಕರಣ – 35(1) | ಕುಲಪತಿಗಳು |
| 5 | ಕಾಲೇಜು ಅಭಿವೃದ್ಧಿ ಮಂಡಳಿ | ಕ.ರಾ.ವಿ.ವಿ ಕಾಯ್ದೆ-2000 ದ ಅನುಸಾರ ಹಾಗೂ ಪರಿ ನಿಯಮದ ಅನುಸಾರ ದಿ. 23-08.2006 ರಿಂದ | ಕುಲಪತಿಗಳು |

**ವಿಶ್ವ ವಿದ್ಯಾನಿಲಯದ ಅಧಿಕಾರಿಗಳ ಆಂತರಿಕ ಹೊಣೆಗಾರಿಕೆಗಳ ಸ್ಥೂಲ ಪರಿಚಯ**

| ಕ್ರ.ಸಂ | ಪ್ರಾಧಿಕಾರ | ಹೊಣೆಗಾರಿಕೆ |
|---|---|---|
| 1 | ಕುಲಪತಿಗಳು | ಪ್ರಕರಣ-15ರ ಅನುಸಾರ ಕುಲಪತಿಗಳು ವಿಶ್ವ ವಿದ್ಯಾನಿಲಯದ ಸಿಂಡಿಕೇಟ್, ಶಿಕ್ಷಣ ಮಂಡಳಿ ಹಾಗೂ ಹಣ ಕಾಸು ಸಮಿತಿಯ ಪದ ನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಈ ಸಮಿತಿಗಳ ಸಭೆಗಳನ್ನು ತಾನು ಅಥವಾ ತಾನು ಅಧಿಕಾರ ನೀಡಿರುವ ಅಧಿಕಾರಿಗಳ ಮೂಲಕ ಲಿಖಿತವಾಗಿ ಸಭಾಸೂಚನೆ ಹೊರಡಿಸುವ ಮೂಲಕ ಕರೆಯುವ ಮತ್ತು ಸಮಿತಿಗಳ ನಿರ್ಣಯಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಕರ್ನಾಟಕ ವಿಶ್ವ ವಿದ್ಯಾನಿಲಯದ ಅಧಿನಿಯಮ, ಪರಿನಿಯಮಗಳು, ಅಧ್ಯಾದೇಶಗಳು, ಕಾನೂನು ಕಾಯ್ದೆಗಳ ಉಪಬಂಧಗಳು ಪಾಲನೆಯಾಗಿರುವುದನ್ನು ನೋಡಿಕೊಳ್ಳುವ ಅಗತ್ಯ ಅಧಿಕಾರವನ್ನು ಹೊಂದಿರುತ್ತಾರೆ. |
| 2 | ಕುಲಸಚಿವರು (ಆಡಳಿತ) | ಪ್ರಕರಣ-17ರ ಅನುಸಾರ ಕುಲ ಸಚಿವರು (ಆಡಳಿತ) ರವರು ವಿಶ್ವ ವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು ಸಿಂಡಿಕೇಟ್ ಹಾಗೂ ಶಿಕ್ಷಣ ಮಂಡಳಿಗಳ ಪದ ನಿಮಿತ್ತ ಕಾರ್ಯದರ್ಶಿ ಮತ್ತು ಹಣಕಾಸು ಸಮಿತಿಯ ಪದ ನಿಮಿತ್ತ ಸದಸ್ಯರಾಗಿರುತ್ತಾರೆ. ವಿಶ್ವ ವಿದ್ಯಾನಿಲಯದ ದಾಖಲೆಗಳು, ಮೊಹರು ಹಾಗೂ ಕುಲಪತಿಗಳು ಮತ್ತು ಸಿಂಡಿಕೇಟ್‌ಗಳು ತಮಗೆ ವಹಿಸಿ ಕೊಟ್ಟ ಇತರೆ ಆಸ್ತಿಗಳ ಅಭಿರಕ್ಷಕರಾಗಿರುತ್ತಾರೆ ಮತ್ತು ವಿಶ್ವವಿದ್ಯಾನಿಲಯದ ಅಧಿಕೃತ ಪತ್ರವ್ಯವಹಾರಗಳನ್ನು ಸಂಬಂಧಿಸಿದ ಪ್ರಾಧಿಕಾರಗಳೊಡನೆ ಮಾಡುವುದು, ಸಿಂಡಿಕೇಟ್ ಹಾಗೂ ಶಿಕ್ಷಣ ಮಂಡಳಿಗಳ, ವ್ಯಾಸಂಗ ಶಾಖೆಗಳ ಹಾಗೂ ಅಧ್ಯಯನ ಮಂಡಳಿಗಳ ಸಭಾ ಸೂಚನಾಪತ್ರಗಳನ್ನು ಹೊರಡಿಸುವ ಮತ್ತು ನಿರ್ಣಯಗಳ ನಡವಳಿಗಳನ್ನು ನಿರ್ವಹಿಸುವ ಕಾರ್ಯಗಳನ್ನು ಮಾಡುತ್ತಾರೆ. ವಿಶ್ವ ವಿದ್ಯಾನಿಲಯದ ಪ್ರಾಧಿಕಾರಗಳು ನಡೆಸುವ ಸಭೆಗಳ ಸಭಾ ಕಾರ್ಯಸೂಚಿಯನ್ನು ಹಾಗೂ ಸಭೆ ನಡೆದ ಒಂದು ತಿಂಗಳೊಳಗೆ ಸಭಾ ನಡವಳಿಗಳನ್ನು ಮಾನ್ಯ ಕುಲಾಧಿಪತಿಗಳು ಮತ್ತು ಸರ್ಕಾರಕ್ಕೆ ಕಳುಹಿಸಿಕೊಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ವಿಶ್ವ ವಿದ್ಯಾನಿಲಯದ ಪರಿನಿಯಮಗಳು, ಅಧ್ಯಾದೇಶಗಳು ಮತ್ತು ನಿಬಂಧನೆಗಳಲ್ಲಿ ನಿಗದಿಪಡಿಸಿರುವ ಹಾಗೂ ಕಾಲಕಾಲಕ್ಕೆ ಕುಲಪತಿಗಳು ಪ್ರತ್ಯಾಯೋಜಿಸುವ ಅಧಿಕಾರಗಳನ್ನು ನಿರ್ವಹಿಸುತ್ತಾರೆ. |
| 3 | ಕುಲಸಚಿವರು (ಪರೀಕ್ಷಾಂಗ) | ಪ್ರಕರಣ-18ರ ಅನುಸಾರ ಕುಲಸಚಿವರು (ಪರೀಕ್ಷಾಂಗ) ರವರು ವಿಶ್ವ ವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು ಸಿಂಡಿಕೇಟ್ ಹಾಗೂ ಶಿಕ್ಷಣ ಮಂಡಳಿ, ಹಣಕಾಸು ಸಮಿತಿ ಹಾಗೂ ಎಲ್ಲಾ ವ್ಯಾಸಂಗ ಶಾಖೆಗಳ ಪದ ನಿಮಿತ್ತ ಸದಸ್ಯರಾಗಿರುತ್ತಾರೆ. ಪರೀಕ್ಷೆಗಳನ್ನು ನಡೆಸುವ ಮತ್ತು ಅದಕ್ಕೆ ಸಂಬಂಧಿಸಿದ ಪೂರಕ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. |

| | | |
|---|---|---|
| 4 | ವಿತ್ತಾಧಿಕಾರಿ (ಹಣಕಾಸು ಅಧಿಕಾರಿ) | ಪ್ರಕರಣ-19ರ ಅನುಸಾರ ವಿತ್ತಾಧಿಕಾರಿ (ಹಣಕಾಸುಅಧಿಕಾರಿ) ರವರು ವಿಶ್ವ ವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು ಶಿಕ್ಷಣ ಮಂಡಳಿಯ ಪದನಿಮಿತ್ತ ಸದಸ್ಯ ಹಾಗೂ ಹಣಕಾಸು ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರುತ್ತಾರೆ. ಇವರು ಹಣಕಾಸು ಸಮಿತಿಯ ನಿಯಂತ್ರಣದಲ್ಲಿ ವಿಶ್ವ ವಿದ್ಯಾನಿಲಯದ ಪರಿನಿಯಮಗಳು, ಅಧ್ಯಾದೇಶಗಳು ಮತ್ತು ನಿಬಂಧನೆಗಳಲ್ಲಿ ನಿಗದಿ ಪಡಿಸಿರುವ ಹಾಗೂ ಕಾಲ ಕಾಲಕ್ಕೆ ಕುಲಪತಿಗಳು ಹಾಗೂ ಕುಲಸಚಿವರು (ಆಡಳಿತ) ರವರು ಪ್ರತ್ಯಾಯೋಜಿಸುವ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. |

**ಮಂಗಳೂರು ವಿಶ್ವ ವಿದ್ಯಾನಿಲಯ, ಮಂಗಳೂರು ಇಲ್ಲಿನ 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ**

**<u>ಸಾಮಾನ್ಯ ಮಾಹಿತಿ</u>**

| | | |
|---|---|---|
| 1 | ಲೆಕ್ಕ ಪರಿಶೋಧನಾ ಸಂಸ್ಥೆಯ ಹೆಸರು | **ಮಂಗಳೂರು ವಿಶ್ವ ವಿದ್ಯಾನಿಲಯ, ಮಂಗಳೂರು** |
| 2 | ಲೆಕ್ಕ ಪರಿಶೋಧನಾ ಅವಧಿ | **2019-20 ನೇ ಸಾಲು** |
| 3 | ಲೆಕ್ಕಪರಿಶೋಧನಾತಂಡದವಿವರ | **ಲೆಕ್ಕ ಪರಿಶೋಧನಾಧಿಕಾರಿ**<br>1. ನಾರಾಯಣ ಸಿ.ಎಲ್.<br>2. ಮುರುಳಿಧರ್ ಬಿ.ಎನ್.<br>3. ರವಿದಾಸ್ ಬಿ.ಆರ್.<br>**ಲೆಕ್ಕಾಧೀಕ್ಷಕರು**<br>1. ರಮೇಶ<br>2. ಚಂದ್ರಪ್ರಸಾದ್<br>3. ಶಿವಲಿಂಗೇಗೌಡ ಕೆ.ಎನ್.<br>4. ಮಧುಚಂದ್ರ ಎಸ್.ಎಂ.<br>**ಲೆಕ್ಕಸಹಾಯಕರು**<br>1. ಸರ್ವಮಂಗಳಮ್ಮ. ಎನ್<br>2. ದಿವ್ಯ ಎನ್.<br>3. ತೇಜೆಶ್ವಿನಿ ಬಿ.ಎನ್. |
| 4 | ಲೆಕ್ಕ ಪರಿಶೋಧನೆ ಪ್ರಾರಂಭವಾದ ದಿನಾಂಕ | 02.08.2021 |
| 5 | ಲೆಕ್ಕ ಪರಿಶೋಧನೆ ಮುಕ್ತಾಯವಾದ ದಿನಾಂಕ | 20.11.2021 |
| 6 | ಲೆಕ್ಕ ಪರಿಶೋಧನೆಗೆ ಉಪಯೋಗಿಸಿದ ಮಾನವ ದಿನಗಳು | 751 ಏಕ ಮಾನವ ದಿನಗಳು |
| 7 | ಲೆಕ್ಕ ಪರಿಶೋಧನಾ ವರದಿಯನ್ನು ಪುನರ್ಪರಿಶೀಲಿಸಿದ ಅಧಿಕಾರಿಗಳ ಹೆಸರು ಮತ್ತು ಪದನಾಮ | ಡಾ. ಸಿದ್ದರಾಜು<br>ಅಪರ ನಿರ್ದೇಶಕರು<br>ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು<br>ಲೆಕ್ಕ ಪತ್ರ ಇಲಾಖೆ, ಪ್ರಾಂತೀಯ ಕಛೇರಿ, ಮೈಸೂರು<br>ವಿಭಾಗ, ಮೈಸೂರು. |
| 8 | ಲೆಕ್ಕ ಪರಿಶೋಧನಾ ವರದಿಯನ್ನು ಪುನರ್ಪರಿಶೀಲಿಸಿದ ದಿನಾಂಕ | 23-12-2021 |

**<u>ಮಂಗಳೂರು ವಿಶ್ವ ವಿದ್ಯಾನಿಲಯದ 2019-20ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿ</u>**

## 1.ಪ್ರಸ್ತಾವನೆ

ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000ದಲ್ಲಿನ ಪ್ರಕರಣ-47(1)ರ ಅನ್ವಯ ವಿಶ್ವವಿದ್ಯಾಲಯವು ತನ್ನ ವಾರ್ಷಿಕ ಲೆಕ್ಕಪತ್ರಗಳನ್ನು ಸಿಂಡಿಕೇಟ್‌ನ ನಿರ್ದೇಶನಗಳನುಸಾರ ತಯಾರಿಸಬೇಕಾಗಿರುತ್ತದೆ. ಹೀಗೆ ತಯಾರಿಸಿದ ವಾರ್ಷಿಕ ಲೆಕ್ಕಗಳನ್ನು

ಅಧಿನಿಯಮದ ಪ್ರಕರಣ-47(2)ರ ಅನ್ವಯ ವಿಶ್ವ ವಿದ್ಯಾಲಯದ ಶೈಕ್ಷಣಿಕ ಮಂಡಳಿಯು ಪರಿಶೀಲಿಸಿ ತನ್ನ ನಿರ್ಣಯ/ಶಿಫಾರಸ್ಸಿನೊಡನೆ ಸಿಂಡಿಕೇಟ್‌ಗೆ ಕಳುಹಿಸಬೇಕು. ಸಿಂಡಿಕೇಟ್ ಸಭೆಯು ಶೈಕ್ಷಣಿಕ ಮಂಡಳಿಯ ಶಿಫಾರಸ್ಸುಗಳನ್ನು ಪರಿಗಣಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಂಡು, ಕೈಗೊಂಡ ಕ್ರಮಗಳ ಬಗ್ಗೆ ಅಥವಾ ಕ್ರಮ ಕೈಗೊಳ್ಳದುದಕ್ಕೆ ಕಾರಣಗಳ ಬಗ್ಗೆ ಮಾಹಿತಿಯನ್ನು ಶೈಕ್ಷಣಿಕ ಮಂಡಳಿಯ ಅದರ ಮುಂದಿನ ಸಭೆಗೆ ಕಳುಹಿಸಿ ಕೊಡಬೇಕು. ಸಿಂಡಿಕೇಟ್ ಅನುಮೋದಿಸಿದ ಮಂಗಳೂರು ವಿಶ್ವವಿದ್ಯಾಲಯದ 2019-20ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳ ಲೆಕ್ಕ ಪರಿಶೋಧನೆಯನ್ನು ಅಧಿ ನಿಯಮದ ಪ್ರಕರಣ-47(3)ರ ಅನುಸಾರ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಧಾನ ನಿರ್ದೇಶಕರು ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಮೈಸೂರು ಪ್ರಾಂತೀಯ ಕಛೇರಿಯಿಂದ ಕೈಗೊಂಡು ವರದಿಯನ್ನು ಬಿಡುಗಡೆಮಾಡಲಾಗಿದೆ.

## 2. ಲೆಕ್ಕ ಪರಿಶೋಧನಾ ವರದಿಯಲ್ಲಿ ಉಲ್ಲೇಖಿಸಿರುವ ನಿಯಮಗಳು

2019-20ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳನ್ನು ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ-2000, ಪರಿನಿಯಮಗಳು, ಅಧ್ಯಾದೇಶಗಳು, ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಬಜೆಟ್ ಕೈಪಿಡಿ ನಿಯಮಗಳು, ಕರ್ನಾಟಕ ಲೋಕೋಪಯೋಗಿ ಲೆಕ್ಕ ಸಂಹಿತೆ ಮತ್ತು ಇಲಾಖಾ ಸಂಹಿತೆ, ಕರ್ನಾಟಕ ಸಾದಿಲ್ವಾರು ಕೈಪಿಡಿ ನಿಯಮಗಳು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-1999 ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳು-2000ದ ಉಪಬಂಧಗಳ ಅನ್ವಯ ತಪಾಸಣೆ ಮಾಡಿ ಈ ವರದಿಯನ್ನು ಸಿದ್ಧಪಡಿಸಲಾಗಿದೆ.

## 3. ಲೆಕ್ಕಪರಿಶೋಧನಾ ವರದಿಗೆ ಕೈಗೊಳ್ಳಬೇಕಾದ ಕ್ರಮ

ಈ ಲೆಕ್ಕಪರಿಶೋಧನಾ ವರದಿಯ ಕಂಡಿಕೆಗಳಿಗೆ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ-2000ದ ಪ್ರಕರಣ-47(4)ರ ಅನುಸಾರ ವಿಶ್ವವಿದ್ಯಾನಿಲಯವು ಅನುಸರಣಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

## 4.ವಿಶ್ವವಿದ್ಯಾನಿಲಯದ ಅಧಿಕಾರಿಗಳ ಹೆಸರು ಮತ್ತು ಪದನಾಮ

2019-20 ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವಿಶ್ವವಿದ್ಯಾನಿಲಯದ ಅಧಿಕಾರಿಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ಪದನಾಮ | ಹೆಸರು | ಅವಧಿ |
|---|---|---|---|
| 1 | ಕುಲಪತಿಗಳು | 1) ಪ್ರೊ. ಈಶ್ವರ ಪಿ, (ಪ್ರಭಾರ)<br>2) ಪ್ರೊ. ಪಿ.ಎಸ್. ಯಡಪಡಿತ್ತಾಯ | ದಿ:01.04.2019ರಿಂದ 03.06.2019<br>ದಿ:03.06.2019ರಿಂದ31.03.2020 |
| 2 | ಕುಲಸಚಿವರು | 1) ಪ್ರೊ. ಎ.ಎಂ.ಖಾನ್ | ದಿ: 01.04.2019 ರಿಂದ 31.03.2020 |
| 3 | ಕುಲಸಚಿವರು(ಪರೀಕ್ಷಾಂಗ) | 1) ಪ್ರೊ.ವಿ. ರವೀಂದ್ರಾಚಾರಿ<br>2) ಪ್ರೊ.ಪಿ.ಎಲ್.ಧರ್ಮ | ದಿ: 01.04.2018 ರಿಂದ 16.03.2020<br>ದಿ:16.03.2020 ರಿಂದ 31.03.2020 |
| 4 | ಹಣಕಾಸುಅಧಿಕಾರಿಗಳು | 1) ಡಾ.ದಯಾನಂದ ನಾಯ್ಕ್<br>2) ಪ್ರೊ. ಶ್ರೀಪತಿ ಕಲ್ಲೂರಾಯ ಪಿ. | ದಿ:01.04.2019ರಿಂದ01.07.2019<br>ದಿ:01.07.2019 ರಿಂದ 31.03.2020 |

### 5. ವಿಶ್ವ ವಿದ್ಯಾನಿಲಯದಲ್ಲಿ ಅಳವಡಿಸಿಕೊಂಡಿರುವ ಲೆಕ್ಕಪದ್ಧತಿ.

ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರ ಹಾಗೂ ನಗದು ಪುಸ್ತಕಗಳನ್ನು ಲೆಕ್ಕ ಪರಿಶೋಧನೆಯಲ್ಲಿ ಪರಿಶೀಲಿಸಲಾಗಿ, ವಾರ್ಷಿಕ ಲೆಕ್ಕಪತ್ರದಲ್ಲಿ ಕೇವಲ ಸ್ವೀಕೃತಿ ಮತ್ತು ಪಾವತಿ ವಿವರಗಳಿರುವುದನ್ನು ಗಮನಿಸಲಾಗಿದೆ. ಈ ಬಗ್ಗೆ ವಿವರಣೆ ಕೋರಿ, ನೀಡಲಾದ ವಿಚಾರಣೆ ಪತ್ರ ಸಂ: 38/2021-22/16.08.2021ಕ್ಕೆ ದಿನಾಂಕ: 01.09.2021ರಂದು ವಿಶ್ವವಿದ್ಯಾನಿಲಯವು ನೀಡಿರುವ ಅನುಪಾಲನಾ ವರದಿಯಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000ರ ಪ್ರಕರಣ-46 ಹಾಗೂ 47ರ ಪ್ರಕಾರ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಲಾಗುತ್ತಿದೆ. ಆಯಾ ಆರ್ಥಿಕ ವರ್ಷದಲ್ಲಿ ಸ್ವೀಕರಿಸಲಾದ ಎಲ್ಲಾ ಸ್ವೀಕೃತಿಗಳನ್ನು ಹಾಗೂ ವಾಸ್ತವಿಕ ವೆಚ್ಚಗಳನ್ನು ಆಯವ್ಯಯದಲ್ಲಿ ನಿಗದಿ ಪಡಿಸಿದ ಲೆಕ್ಕಶೀರ್ಷಿಗಳಿಗೆ ಅನುಗುಣವಾಗಿ ನಗದು ಪುಸ್ತಕಗಳಲ್ಲಿ ದಾಖಲಿಸಿ, ಅದರ ಆಧಾರದಲ್ಲಿ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಲಾಗುತ್ತದೆ. ಎಲ್ಲಾ ನಗದು ಪುಸ್ತಕಗಳನ್ನು ಮಾಸಾಂತ್ಯಕ್ಕೆ ಬ್ಯಾಂಕ್ ಪಾಸ್ ಪುಸ್ತಕದೊಂದಿಗೆ ಲೆಕ್ಕ ಸಮನ್ವಯಗೊಳಿಸಲಾಗುತ್ತದೆ.

ಹೀಗೆ ತಯಾರಿಸಿದ ಲೆಕ್ಕಪತ್ರಗಳನ್ನು ವಿಶ್ವವಿದ್ಯಾನಿಲಯದ ವಿವಿಧ ಸಮಿತಿಗಳ ಮುಂದೆ ಮಂಡಿಸಿ ಅನುಮೋದನೆ ಪಡೆದ ಬಳಿಕ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂಬ ವಿವರಣೆಯನ್ನು ನೀಡಿರುತ್ತಾರೆ. ಲೆಕ್ಕಪರಿಶೋಧನೆಯಲ್ಲಿ ಗಮನಿಸಿದಂತೆ, ವಿಶ್ವವಿದ್ಯಾಲಯವು ಲೆಕ್ಕ ನಿರ್ವಹಣೆಯನ್ನು ಏಕ-ನಮೂದು ಲೆಕ್ಕಪತ್ರ ಪದ್ಧತಿಯಲ್ಲಿ ನಿರ್ವಹಿಸುತ್ತಿದ್ದು, ಅದನ್ನೂ ಸಹ ಯಾವುದೇ ಅಂಗೀಕೃತ ನಮೂನೆಗಳಲ್ಲಿ ನಿರ್ವಹಿಸುತ್ತಿರುವುದಿಲ್ಲ. ವಾರ್ಷಿಕ ಲೆಕ್ಕಪತ್ರಗಳೊಡನೆ ಆಸ್ತಿ ಮತ್ತು ಹೊಣೆಗಾರಿಕೆಯ ತಖ್ತೆಯನ್ನು ಕೂಡ ತಯಾರಿಸಿರುವುದಿಲ್ಲ. ವಿಶ್ವವಿದ್ಯಾಲಯದಲ್ಲಿ ಜೋಡಿ-ನಮೂದು ಲೆಕ್ಕಪತ್ರ ಪದ್ಧತಿಯನ್ನು ಅಳವಡಿಸಿಕೊಂಡಿಲ್ಲದಿರುವುರಿಂದ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರದಲ್ಲಿ ಸ್ವೀಕೃತಿ ಮತ್ತು ಪಾವತಿಲೆಕ್ಕಗಳು, ಆದಾಯ ಮತ್ತು ವೆಚ್ಚಗಳ ಲೆಕ್ಕಗಳು ಹಾಗೂ ಬ್ಯಾಲೆನ್ಸ್ ಶೀಟ್ ಇರುವುದಿಲ್ಲ. ಹೀಗಾಗಿ ವಿಶ್ವವಿದ್ಯಾಲಯದ ಆಸ್ತಿ, ಹೊಣೆಗಾರಿಕೆಗಳ ವಾಸ್ತವಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಆಗಿರುವುದಿಲ್ಲ. ಆದ್ದರಿಂದ, ಪ್ರಸ್ತುತ ಅನುಸರಿಸುತ್ತಿರುವ ಏಕ-ನಮೂದು ಲೆಕ್ಕಪದ್ಧತಿಗೆ ಬದಲಾಗಿ ಜೋಡಿ-ನಮೂದು ಲೆಕ್ಕಪತ್ರ ಪದ್ಧತಿಯನ್ನು ಅಳವಡಿಸಿಕೊಳ್ಳುವ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳುವಂತೆ ಸೂಚಿಸಿದೆ.

### 6. ಮಾಸಿಕ ಲೆಕ್ಕಪತ್ರಗಳು ಹಾಗೂ ನಗದು ಲೆಕ್ಕಗಳ ಸಲ್ಲಿಕೆ

ಮಂಗಳೂರು ವಿಶ್ವ ವಿದ್ಯಾಲಯವು ಪ್ರಾಂತೀಯ ಕಛೇರಿಗೆ ಮಾಸಿಕ ಲೆಕ್ಕಪತ್ರಗಳು ಹಾಗೂ ನಗದು ಲೆಕ್ಕಗಳನ್ನು ನಿಯಮಿತವಾಗಿ ಸಲ್ಲಿಸುವ ಕ್ರಮವನ್ನು ಅನುಸರಿಸುತ್ತಿರುವುದಿಲ್ಲವಾದ್ದರಿಂದ ಹಾಗೂ ಯಾವುದೇ ಅಂಗೀಕೃತ ನಮೂನೆಗಳಲ್ಲಿ ಲೆಕ್ಕಪತ್ರಗಳನ್ನು ನಿರ್ವಹಿಸುತ್ತಿಲ್ಲವಾದ್ದರಿಂದ ವಿಶ್ವ ವಿದ್ಯಾನಿಲಯದ ಕ್ರೋಢೀಕೃತ ವಾರ್ಷಿಕ ಲೆಕ್ಕಪತ್ರಗಳ ನಿಖರತೆಯನ್ನು ಖಚಿತಪಡಿಸಿಕೊಂಡು ಪ್ರಮಾಣೀಕರಿಸುವುದು ಸಾಧ್ಯವಾಗಿರುವುದಿಲ್ಲ.

ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯಗಳ ಅಧಿನಿಯಮ - 2000ರ ಪ್ರಕರಣ -47(1)ರ ಪ್ರಕಾರ ಸಿಂಡಿಕೇಟ್ ನಿರ್ದೇಶನದ ಮೇರೆಗೆ ವಿಶ್ವ ವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಬೇಕಾಗಿದ್ದು, ಅದರಂತೆ ಮಂಗಳೂರು ವಿಶ್ವ ವಿದ್ಯಾನಿಲಯದ 2019-20ನೇ ಸಾಲಿನ ಲೆಕ್ಕಪತ್ರಗಳನ್ನು ಸಿದ್ಧಪಡಿಸಲಾಗಿದೆ. ಇದರಲ್ಲಿ ಸದರಿ ಸಾಲಿನ ಸ್ವೀಕೃತಿ ಹಾಗೂ ಪಾವತಿಗಳನ್ನು ಮಾತ್ರ ದಾಖಲಿಸಲಾಗಿದೆ. ಮಂಗಳೂರು ವಿಶ್ವ ವಿದ್ಯಾನಿಲಯದ 2019-20ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ದಿನಾಂಕ: 11.01.2021ರಂದು ನಡೆದ ಹಣಕಾಸು ಸಮಿತಿ ಸಭೆಯಲ್ಲಿ (ಕಾರ್ಯ ಸೂಚಿ ಸಂಖ್ಯೆ:ಮವಿ/ಹವಿ/ಹಸಸ/2020-21/ಹ10 ದಿನಾಂಕ:18-01-2021) ಹಾಗೂ ದಿನಾಂಕ: 25-02-2021ರಂದು ನಡೆದ ಶೈಕ್ಷಣಿಕ ಮಂಡಳಿ ಸಭೆಯಲ್ಲಿ (ಕಾರ್ಯ ಸೂಚಿ ಸಂಖ್ಯೆ: ಹವಿ/ಶೈ.ಸಾ.ಸ.3:4(2020-21) ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ವಾರ್ಷಿಕ ಲೆಕ್ಕ ಪತ್ರವನ್ನು ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯಗಳ ಅಧಿನಿಯಮ-2000ರ ಪ್ರಕರಣ-47(2)ರ ಪ್ರಕಾರ ದಿನಾಂಕ: 25.01.2021ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ (ಕಾರ್ಯ ಸೂಚಿ ಸಂಖ್ಯೆ: ಹವಿ/ ಸಾ.ಸ.1:19(2021) ಮಂಡಿಸಿ ಅನುಮೋದನೆ ಪಡೆಯಲಾಗಿದೆ.

### 7. ವಿಚಾರಣಾ ಪತ್ರಗಳ ಮೇಲೆ ಕೈಗೊಂಡ ಕ್ರಮ.

ವಿಶ್ವ ವಿದ್ಯಾನಿಲಯದ ವಿವಿಧ ಘಟಕಗಳ/ ಸಂಸ್ಥೆಗಳ ಲೆಕ್ಕತಪಾಸಣೆಯನ್ನು ಪ್ರತ್ಯೇಕವಾಗಿ ಮಾಡಿ ಸಂಸ್ಥೆವಾರು ವರದಿ ಬಿಡುಗಡೆ ಮಾಡಿ ಅನುಸರಣಾ ವರದಿಯನ್ನು ಪಡೆಯುವ ಬದಲಿಗೆ, ಪ್ರಸ್ತುತ ಕೇಂದ್ರೀಕೃತವಾಗಿ ಲೆಕ್ಕತಪಾಸಣೆ ಮಾಡುವ ಕ್ರಮವನ್ನು ಅನುಸರಿಸಲಾಗಿರುತ್ತದೆ. ಹೀಗೆ ಕೇಂದ್ರೀಕೃತವಾಗಿ ಲೆಕ್ಕತಪಾಸಣೆ ಮಾಡುವಾಗ ವಿಶ್ವ ವಿದ್ಯಾಲಯದ ವಿವಿಧ ಘಟಕ/ ಸಂಸ್ಥೆಗಳಲ್ಲಿ ಕಂಡು ಬಂದ ನಿಯಮ ಬಾಹಿರ ವ್ಯವಹರಣೆಗಳ ಬಗ್ಗೆ ಲೆಕ್ಕಪರಿಶೋಧನಾ ವಿಚಾರಣೆಗಳನ್ನು ನೀಡಿ ಸಂಬಂಧಿಸಿದ ವಿಷಯಗಳ ಬಗ್ಗೆ ಅನುಸರಣಾ ವರದಿಗಳನ್ನು ಪಡೆದು ಕೊಂಡು ವರದಿಯಲ್ಲಿ ಅಳವಡಿಸಲಾಗುತ್ತಿದೆ. 2019-20ನೇ ಸಾಲಿನ ಲೆಕ್ಕ ಪರಿಶೋಧನೆಯ ಸಂದರ್ಭದಲ್ಲಿ ಕಂಡು ಬಂದ ನ್ಯೂನತೆಗಳಿಗೆ ಸಂಬಂಧಿಸಿದಂತೆ ಒಟ್ಟು 236 ಲೆಕ್ಕತಪಾಸಣಾ ವಿಚಾರಣಾ ಪತ್ರಗಳನ್ನು ವಿಶ್ವ ವಿದ್ಯಾನಿಲಯದ ಪ್ರಾಧಿಕಾರಿಗಳಿಗೆ ನೀಡಲಾಗಿದ್ದು, 98 ವಿಚಾರಣಾಪತ್ರಗಳಿಗೆ ವಿಶ್ವ ವಿದ್ಯಾನಿಲಯದವರು ಪ್ರತಿಕ್ರಿಯಿಸಿರುತ್ತಾರೆ.

ವಿಶ್ವ ವಿದ್ಯಾಲಯವು ತನ್ನ ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕ ಪರಿಶೋಧನಾ ವರದಿಯೊಡನೆ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಂಡು ಮುದ್ರಿತ ಪ್ರತಿಗಳನ್ನು ವಿಧಾನಮಂಡಲದ ಮುಂದೆ ಮಂಡಿಸುವ ಸಲುವಾಗಿ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.

## 8. ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳ ಕಂಡಿಕೆಗಳ ತೀರುವಳಿ ಬಗ್ಗೆ

ವಿಶ್ವ ವಿದ್ಯಾನಿಲಯದ 1980-81 ರಿಂದ 2018-19ರ ವರೆಗಿನ ಲೆಕ್ಕ ಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣಾ ಕಂಡಿಕೆಗಳ ಮತ್ತು ವಸೂಲಾತಿ ಕಂಡಿಕೆಗಳ ಮೊತ್ತ, ತೀರುವಳಿಯಾದ ಮೊತ್ತ ಹಾಗೂ ಬಾಕಿ ಉಳಿದಿರುವ ಮೊತ್ತಗಳ ವಿವರಗಳು ಕೆಳಕಂಡಂತಿರುತ್ತದೆ.

| ವಿವರ | ಆಕ್ಷೇಪಣಾ ಕಂಡಿಕೆಗಳ ಸಂಖ್ಯೆ | ಮೊತ್ತ (ರೂ. ಗಳಲ್ಲಿ) | ವಸೂಲಾತಿ ಕಂಡಿಕೆಗಳ ಸಂಖ್ಯೆ | ಮೊತ್ತ (ರೂ. ಗಳಲ್ಲಿ) |
|---|---|---|---|---|
| 1980-81 ರಿಂದ 2017-18ರ ವರೆಗೆ ಬಾಕಿ | 1124 | 256,13,07,189 | 1365 | 16,40,01,629 |
| 2018-19ನೇ ಸಾಲಿನಲ್ಲಿ ಸೇರ್ಪಡೆ | 60 | 85,07,44,121 | 22 | 4,47,62,271 |
| ಒಟ್ಟು | | | | |
| ತೀರುವಳಿ ಯಾಗಿರುವುದು | - | - | - | - |
| 2018-19ರ ಅಂತ್ಯಕ್ಕೆ ಬಾಕಿ | 1184 | 341,20,51,310 | 1387 | 20,87,63,900 |

ಬಾಕಿ ಉಳಿದಿರುವ ಕಂಡಿಕೆಗಳನ್ನು ಸಕಾಲದಲ್ಲಿ ತೀರುವಳಿ ಮಾಡದೆ ಇರುವುದರಿಂದ ನೌಕರರ ವರ್ಗಾವಣೆ, ನಿವೃತ್ತಿ, ಗುತ್ತಿಗೆಗಳ ಮುಕ್ತಾಯ ಇತ್ಯಾದಿ ಕಾರಣಗಳಿಂದ ವಸೂಲಿಸಬೇಕಾದ ಮೊತ್ತಗಳನ್ನು ವಸೂಲಿಸಲಾಗದೇ ವಿಶ್ವ ವಿದ್ಯಾನಿಲಯಕ್ಕೆ ನಷ್ಟ ಉಂಟಾಗುವ ಸಂಭವವಿರುತ್ತದೆ. ಕರ್ನಾಟಕ ಬಜೆಟ್ ಕೈಪಿಡಿಯ ನಿಯಮ - 303ರ ಪ್ರಕಾರ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆಗಳಿಗೆ ಉತ್ತರಿಸುವ ಮತ್ತು ಲೆಕ್ಕ ಪರಿಶೋಧನೆಯಲ್ಲಿ ಎತ್ತಿದ ಇತರೆ ವಿಷಯಗಳನ್ನು ಇತ್ಯರ್ಥ ಗೊಳಿಸುವ ಹೊಣೆಗಾರಿಕೆಯು ಲೆಕ್ಕಪರಿಶೋಧನಾ ಕಂಡಿಕೆಗಳ ಸ್ವರೂಪ ಮತ್ತು ಜವಾಬ್ದಾರಿಗನುಗುಣವಾಗಿ ಬಟವಾಡೆ ಅಧಿಕಾರಿಗಳು, ನಿಯಂತ್ರಣ ಅಧಿಕಾರಿಗಳು ಹಾಗೂ ವಿಶ್ವ ವಿದ್ಯಾನಿಲಯದ ಮುಖ್ಯಸ್ಥರದ್ದಾಗಿರುತ್ತದೆ. ಲೆಕ್ಕಪರಿಶೋಧನಾ ಆಕ್ಷೇಪಣೆಗಳ ಬಗ್ಗೆ ನಿಗಾ ಇಡಲು ವಿಶ್ವ ವಿದ್ಯಾನಿಲಯವು ಬಜೆಟ್ ಕೈಪಿಡಿಯ ನಿಯಮ - 305ರ ಅನುಸಾರ ನಮೂನೆ - 21ರಲ್ಲಿ ಲೆಕ್ಕಪರಿಶೋಧನಾ ಆಕ್ಷೇಪಣೆಗಳ ವಹಿಯನ್ನು ನಿರ್ವಹಿಸಬೇಕಿದ್ದು, ವಿಶ್ವ ವಿದ್ಯಾನಿಲಯವು ಸದರಿ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ. ವರ್ಷದಿಂದ ವರ್ಷಕ್ಕೆ ಲೆಕ್ಕ ಪರಿಶೋಧನಾ ಕಂಡಿಕೆಗಳು ಸಂಚಯವಾಗುತ್ತಾ ಹೋದಲ್ಲಿ ಹಳೆಯ ಕಂಡಿಕೆಗಳ ತೀರುವಳಿಗೆ ದಾಖಲಾತಿಗಳನ್ನು ಒದಗಿಸಿ ತೀರುವಳಿ ಮಾಡಿಸುವುದು ಶ್ರಮದಾಯಕವಾಗುತ್ತದೆ. ಆಕ್ಷೇಪಣೆ ಕಂಡಿಕೆಗಳಿಗೆ ಪೂರಕ ದಾಖಲಾತಿಗಳೊಡನೆ ಸೂಕ್ತ ಅನುಪಾಲನಾ ವರದಿ ನೀಡುವ ಮೂಲಕ ಹಾಗೂ ವಸೂಲಾತಿ ಮೊತ್ತವನ್ನು ಸಂಬಂಧಿಸಿದವರಿಂದ ವಸೂಲಿಸಿ ಕೈಗೊಂಡ ಕ್ರಮಗಳ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸುವ ಮೂಲಕ ಕಂಡಿಕೆಗಳ ತೀರುವಳಿಗೆ ಕ್ರಮವಹಿಸಲು ಸೂಚಿಸಿದೆ. 1980-81 ರಿಂದ 2018-19ನೇ ಸಾಲಿನವರೆಗೆ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ವಿವರವನ್ನು **ಅನುಬಂಧ–1 ರಲ್ಲಿ**, ನೀಡಲಾಗಿದೆ.

## 9. ಆಯವ್ಯಯ ಅಂದಾಜುಗಳು

2019-20ನೇ ಸಾಲಿನ ಆಯವ್ಯಯ, ಪರಿಷ್ಕೃತ ಆಯವ್ಯಯ ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ವಿಶ್ವ ವಿದ್ಯಾನಿಲಯ ಕಾಯ್ದೆಯ ಪ್ರಕರಣ – 32(3)(ii) ರಂತೆ ಈ ಕೆಳಕಂಡ ಸಭೆಗಳಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಆದರೆ ವಿಶ್ವ ವಿದ್ಯಾಲಯದ ಬೋಧಕ/ ಬೋಧಕೇತರ ಸಿಬ್ಬಂದಿಗಳ ವೇತನಕ್ಕೆ ಸಂಬಂಧಿಸಿದಂತೆ ಮಂಜೂರಾದ ಹುದ್ದೆಗಳನ್ನು ಆಧರಿಸಿ ಅನುಬಂಧ–ಬಿ ಯನ್ನು ತಯಾರಿಸಿರುವುದಿಲ್ಲ.

| ಕ್ರ. ಸಂ | ವಿವರ | ಹಣಕಾಸುಸಮಿತಿಸಭೆಯ ಒಪ್ಪಿಗೆದಿನಾಂಕ | ಸಿಂಡಿಕೇಟ್ ಸಭೆಯಒಪ್ಪಿಗೆದಿ ನಾಂಕ | ಮೊತ್ತರೂ.ಗಳಲ್ಲಿ | |
|---|---|---|---|---|---|
| | | | | ಸ್ವೀಕೃತಿ | ವೆಚ್ಚಗಳು |

| | | | | | |
|---|---|---|---|---|---|
| 1 | ಆಯವ್ಯಯ ಅಂದಾಜು | 24.01.2019 | 25.06.2019 | 350,96,19,145 | 356,00,57,415 |
| 2 | ಪರಿಷ್ಕೃತ ಅಂದಾಜು ಆಯವ್ಯಯ | 30.05.2020 | 14.07.2020 | 344,00,28,246 | 390,82,56,923 |

2019-20ನೇ ಸಾಲಿನ ಆಯವ್ಯಯ ಮತ್ತು ಪರಿಷ್ಕೃತ ಆಯವ್ಯಯದಲ್ಲಿ ನಿಗಧಿಪಡಿಸಿಕೊಂಡಿರುವ ಮೊತ್ತಕ್ಕೆ ಅನುಗುಣವಾಗಿ ಸ್ವೀಕೃತಿ ಹಾಗೂ ವೆಚ್ಚವನ್ನು, ವಾರ್ಷಿಕ ಲೆಕ್ಕಪತ್ರದಲ್ಲಿನ ಅಂಕಿ ಅಂಶಗಳೊಡನೆ ತುಲನೆ ಮಾಡಿದಾಗ ಆಯವ್ಯಯದಲ್ಲಿ ನಿಗದಿಪಡಿಸಿಕೊಂಡಿರುವ ಮೊತ್ತವನ್ನು ಬಳಸಿಕೊಳ್ಳದಿರುವುದು ಕಂಡುಬಂದಿರುತ್ತದೆ. ಆಯವ್ಯಯವನ್ನು ಸಿದ್ಧ ಪಡಿಸುವಾಗ ವಾಸ್ತವಿಕ ಅಂಶಗಳನ್ನು ಪರಿಗಣಿಸದೇ ಕೇವಲ ಆರ್ಥಿಕ ಗುರಿಗಳನ್ನು ನಿಗದಿಪಡಿಸಿಕೊಂಡಿರುವುದು ಕಂಡುಬಂದಿರುತ್ತದೆ.

ಕೆಲವು ಲೆಕ್ಕಶೀರ್ಷಿಕೆಗಳಲ್ಲಿ ಹೆಚ್ಚುವರಿ ವೆಚ್ಚ ಭರಿಸಿರುವುದು ಮತ್ತು ಕೆಲವು ಲೆಕ್ಕ ಶೀರ್ಷಿಕೆಗಳಲ್ಲಿ ವೆಚ್ಚ ಭರಿಸದೆ ಉಳಿತಾಯವಾಗಿರುವುದು ಸಹ ಲೆಕ್ಕತಪಾಸಣೆಯಲ್ಲಿ ಕಂಡುಬಂದಿರುತ್ತದೆ. ನಿಗದಿ ಪಡಿಸಿಕೊಂಡಿರುವುದಕ್ಕಿಂತ ಹೆಚ್ಚುವರಿ ವೆಚ್ಚ ಭರಿಸಿರುವುದಕ್ಕೆ ವಿವರಣೆ ನೀಡುವಂತೆ ವಿಚಾರಣಾಪತ್ರ ಸಂಖ್ಯೆ:127/2021-22/25.10.2021ನ್ನು ನೀಡಲಾಗಿ, ವಿಶ್ವ ವಿದ್ಯಾನಿಲಯದವರು ದಿನಾಂಕ: 18-11-2021ರಂದು ನೀಡಿರುವ ಅನುಪಾಲನಾ ವರದಿಯಲ್ಲಿ, 2019-20ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರು ಲೆಕ್ಕಶೀರ್ಷಿಕೆಯಡಿಯಲ್ಲಿ ಅಯವ್ಯಯದಲ್ಲಿ ನಿಗದಿಪಡಿಸಿದ ಅನುದಾನಕ್ಕಿಂತ ಹೆಚ್ಚು ವೆಚ್ಚವಾಗಿದ್ದು ಅತಿಥಿ ಉಪನ್ಯಾಸಕರ ಸೇವೆಯನ್ನು ಸದರಿ ಸಾಲಿನಲ್ಲಿ ಬಳಸಿ ಕೊಂಡಿರುವುದರಿಂದ ಸಂಭಾವನೆಯನ್ನು ಪಾವತಿಸಲಾಗಿರುತ್ತದೆ ಹಾಗೂ ಹೆಚ್ಚುವರಿಯಾಗಿರುವ ವೆಚ್ಚಕ್ಕೆ ಸಿಂಡಿಕೇಟ್ ಸಭೆಯಲ್ಲಿ ಅನುಮೊದನೆಯನ್ನು ಪಡೆಯಲಾಗಿದೆ ಎಂದು ವಿವರಣೆಯನ್ನು ನೀಡಿರುತ್ತಾರೆ.

ಆಯವ್ಯಯದಲ್ಲಿ ನಿಗದಿ ಪಡಿಸಿರುವಷ್ಟು ಸ್ವೀಕೃತಿ ಆಗದಿರುವುದಕ್ಕೆ ವಿವರಣೆ ನೀಡಲು ಕೋರಿ ನೀಡಲಾದ ವಿಚಾರಣಾ ಪತ್ರ ಸಂಖ್ಯೆ:134/25.10.2021ಕ್ಕೆ ವಿಶ್ವ ವಿದ್ಯಾನಿಲಯದಿಂದ ನೀಡಿರುವ ದಿನಾಂಕ: 20-11-2021ರ ಉತ್ತರದಲ್ಲಿ 2019-20ನೇ ಸಾಲಿನ ಆಯವ್ಯಯವನ್ನು ತಯಾರಿಸುವಾಗ ಸರ್ಕಾರ ಮತ್ತು ಇತರೆ ಪ್ರಾಯೋಜಿತ ಸಂಸ್ಥೆಗಳಿಂದ ಅನುದಾನ ಬಿಡುಗಡೆಯಾಗುವ ನಿರೀಕ್ಷೆಯಲ್ಲಿ ಅದಾಯವನ್ನು ಅಂದಾಜಿಸಲಾಗಿರುತ್ತದೆ. ಆದರೆ 2019-20ನೇ ಸಾಲಿನಲ್ಲಿ ಆಯವ್ಯಯದಲ್ಲಿ ನೀರೀಕ್ಷಿಸಿದಂತೆ ಸರ್ಕಾರ ಮತ್ತು ಇತರೆ ಪ್ರಾಯೋಜಿತ ಸಂಸ್ಥೆಗಳಿಂದ ನಿರೀಕ್ಷಿತ ಅನುದಾನ ಬಿಡುಗಡೆಯಾಗದಿರುವುದರಿಂದ ವಾರ್ಷಿಕ ಲೆಕ್ಕಪತ್ರ ಹಾಗೂ ಅಯವ್ಯಯಗಳ ನಡುವೆ ವ್ಯತ್ಯಾಸ ಉಂಟಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಆಯವ್ಯಯ ಅಂದಾಜಿಗಿಂತ ಹೆಚ್ಚುವರಿ ಮೊತ್ತ ವೆಚ್ಚ ಮಾಡಿರುವ ಹಾಗೂ ಆಯವ್ಯಯ ಅಂದಾಜಿನಲ್ಲಿ ನಿಗದಿ ಪಡಿಸಲಾದ ಪ್ರಕಾರ ಆದಾಯ ಸ್ವೀಕೃತಿಯಾಗದಿರುವ ವಿವರಗಳನ್ನು ಕ್ರಮವಾಗಿ **ಅನುಬಂಧ – 2** ಹಾಗೂ **ಅನುಬಂಧ - 2(ಎ)**ರಲ್ಲಿ ನೀಡಲಾಗಿದೆ. ಮೇಲಿನ ವಿವರಗಳನ್ನು ಗಮನಿಸಿದಾಗ ವಿಶ್ವ ವಿದ್ಯಾನಿಲಯದ ಹಣಕಾಸು ವ್ಯವಹರಣೆಯಲ್ಲಿ ಬಜೆಟ್ ನಿಯಂತ್ರಣ ವಿಧಾನಗಳನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳದಿರುವುದು ಕಂಡು ಬಂದಿರುತ್ತದೆ.

ಆಯವ್ಯಯ ಅಂದಾಜು ಪಟ್ಟಿ, ಪರಿಷ್ಕೃತ ಆಯವ್ಯಯ ಅಂದಾಜು ಪಟ್ಟಿ ಹಾಗೂ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿ, ಆಯವ್ಯಯ ಅಂದಾಜಿಗೂ ಹಾಗೂ ವಾರ್ಷಿಕ ಲೆಕ್ಕಗಳ (ವಾಸ್ತವಿಕ) ಆದಾಯ ಮತ್ತು ಖರ್ಚುಗಳಿಗೂ ಒಂದಕ್ಕೊಂದು ತಾಳೆಯಾಗದಿರುವುದನ್ನು ಗಮನಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ.

ಆದಾಯದಲ್ಲಿನ ವ್ಯತ್ಯಾಸ(ರೂ. ಕೋಟಿಗಳಲ್ಲಿ)

| ಕ್ರಸಂ | ಲೆಕ್ಕ ಶೀರ್ಷಿಕೆ ವಿವರ | ಅಂದಾಜು ಆಯವ್ಯಯ | ಪರಿಷ್ಕೃತ ಅಂದಾಜು ಆಯವ್ಯಯ | ವಾರ್ಷಿಕ ಲೆಕ್ಕಪತ್ರದಂತೆ ಆದಾಯ | ವ್ಯತ್ಯಾಸ ಶೇಕಡಾವಾರು |
|---|---|---|---|---|---|
| 1 | ಯೋಜನೇತರ - ಸಾಮಾನ್ಯ (ಸಾಲ ಮತ್ತು ಠೇವಣಿ ಸೇರಿ) | 228.08 | 238.11 | 192.73 | (-) 19.05 |
| 2 | ಯೋಜನೆ – ಅಭಿವೃದ್ಧಿ | 77.50 | 69.20 | 1.00 | (-) 98.55 |
| 3 | ಯು.ಜಿ.ಸಿ | 24.80 | 22.68 | 7.99 | (-) 64.77 |

| | | | | | |
|---|---|---|---|---|---|
| 4 | ದತ್ತಿ ನಿಧಿ ಹಾಗೂ ಪ್ರಾಯೋಜಿತ ಕಾರ್ಯಕ್ರಮಗಳು | 10.57 | 14.01 | 9.19 | (-) 34.40 |
| **ಒಟ್ಟು** | | **340.95** | **344.00** | **210.91** | **(-) 38.70** |

ವೆಚ್ಚದಲ್ಲಿನ ವ್ಯತ್ಯಾಸ(ರೂ. ಕೋಟಿಗಳಲ್ಲಿ)

| ಕ್ರಸಂ | ಲೆಕ್ಕಶೀರ್ಷಿಕೆ ವಿವರ | ಅಂದಾಜು ವೆಚ್ಚಗಳು | ಪರಿಷ್ಕೃತ ಅಂದಾಜು ವೆಚ್ಚಗಳು | ವಾರ್ಷಿಕ ಲೆಕ್ಕಪತ್ರದಂತೆ ವೆಚ್ಚಗಳು | ವ್ಯತ್ಯಾಸ ಶೇಕಡಾವಾರು |
|---|---|---|---|---|---|
| 1 | ಯೋಜನೇತರ - ಸಾಮಾನ್ಯ (ಸಾಲ ಮತ್ತು ಠೇವಣಿ ಸೇರಿ) | 204.34 | 242.76 | 188.16 | (-) 22.49 |
| 2 | ಯೋಜನೆ - ಅಭಿವೃದ್ಧಿ | 121.83 | 116.09 | 2.50 | (-) 97.84 |
| 3 | ಯು.ಜಿ.ಸಿ | 20.22 | 18.93 | 3.21 | (-) 83.04 |
| 4 | ದತ್ತಿ ನಿಧಿ ಹಾಗೂ ಪ್ರಾಯೋಜಿತ ಕಾರ್ಯಕ್ರಮಗಳು | 9.60 | 13.03 | 9.90 | (-) 24.02 |
| **ಒಟ್ಟು** | | **355.99** | **390.81** | **203.77** | **(-) 47.85** |

ಮೇಲಿನ ಕೋಷ್ಟಕದಲ್ಲಿ ವಿವರಿಸಿರುವಂತೆ, ಆಯವ್ಯಯ ಅಂದಾಜು ಪ್ರಕಾರ ನಿರೀಕ್ಷಿತ ಸ್ವೀಕೃತಿಗಳು ರೂ.340.95ಕೋಟಿಗಳಿದ್ದು, ವಾರ್ಷಿಕ ಲೆಕ್ಕಪತ್ರಗಳಂತೆ ರೂ. 210.91ಕೋಟಿಗಳ ಸ್ವೀಕೃತಿ ಇರುತ್ತದೆ. ಹೀಗಾಗಿ ಹಣಕಾಸು ವರ್ಷದಲ್ಲಿ ಆದಾಯವು ಆಯವ್ಯಯ ಅಂದಾಜಿಗಿಂತ ಶೇಕಡಾ 38.14ರಷ್ಟು ಕಡಿಮೆಯಾಗಿರುತ್ತದೆ. ಅಲ್ಲದೆ ಆಯವ್ಯಯ ಅಂದಾಜು ಪತ್ರಗಳಲ್ಲಿ ರೂ.355.99 ಕೋಟಿಗಳ ಖರ್ಚನ್ನು ಅಂದಾಜಿಸಲಾಗಿದ್ದು, ವಾರ್ಷಿಕ ಲೆಕ್ಕಪತ್ರದಂತೆ ವಾಸ್ತವಿಕ ಖರ್ಚು ರೂ.203.77 ಕೋಟಿ ಆಗಿರುವುದು ಕಂಡು ಬಂದಿರುತ್ತದೆ.

ವಾರ್ಷಿಕ ಲೆಕ್ಕಗಳಲ್ಲಿನ ವೆಚ್ಚವು ಆಯವ್ಯಯ ಅಂದಾಜಿನ ವೆಚ್ಚಕ್ಕಿಂತ ಶೇಕಡಾ 47.75 ಕಡಿಮೆಯಾಗಿರುತ್ತದೆ. ಪರಿಷ್ಕೃತ ಆಯವ್ಯಯ ಅಂದಾಜು ಪ್ರಕಾರ ನಿರೀಕ್ಷಿತ ಆದಾಯವು ರೂ.344.00 ಕೋಟಿಗಳಿದ್ದು, ವಾರ್ಷಿಕ ಲೆಕ್ಕಪತ್ರದಂತೆ ರೂ.210.91ಕೋಟಿ ಆದಾಯವಿರುವುದರಿಂದ ವಾರ್ಷಿಕ ಆದಾಯವು ಪರಿಷ್ಕೃತ ಆಯವ್ಯಯ ಆದಾಯಕ್ಕಿಂತ ಶೇಕಡಾ 38.69ರಷ್ಟು ಕಡಿಮೆಯಾಗಿರುತ್ತದೆ. ಹಾಗೆಯೇ ಪರಿಷ್ಕೃತ ಆಯವ್ಯಯ ಅಂದಾಜು ಪ್ರಕಾರ ರೂ. 390.81 ಕೋಟಿ ನಿರೀಕ್ಷಿತ ಖರ್ಚು ಇದ್ದು, ವಾರ್ಷಿಕ ಲೆಕ್ಕಪತ್ರದಂತೆ ವಾಸ್ತವಿಕ ಖರ್ಚು ರೂ.203.77 ಕೋಟಿ ಇದ್ದು, ನೈಜ ವೆಚ್ಚವು ಪರಿಷ್ಕೃತ ಆಯವ್ಯಯವೆಚ್ಚಕ್ಕಿಂತ ಶೇಕಡಾ 47.85 ರಷ್ಟು ಕಡಿಮೆಯಾಗಿರುತ್ತದೆ. ಹೀಗೆ ಆಯವ್ಯಯ ಅಂದಾಜುಗಳು ಹಾಗೂ ವಾರ್ಷಿಕ ಲೆಕ್ಕಗಳ ಆದಾಯ, ವೆಚ್ಚಗಳಿಗೆ ಹೊಂದಾಣಿಕೆ ಇಲ್ಲದಿರುವುದಕ್ಕೆ ಸೂಕ್ತ ವಿವರಣೆ ನೀಡುವಂತೆ ಕೋರಿ ವಿಚಾರಣೆ ಪತ್ರ: 143 ದಿನಾಂಕ:25.10.2021ಕ್ಕೆ ವಿಶ್ವ ವಿದ್ಯಾನಿಲಯದವರು 2019-20ನೇ ಸಾಲಿನ ಮೂಲ ಆಯವ್ಯಯ ಅಂದಾಜುಗಳು ಮತ್ತು ಪರಿಷ್ಕೃತ ಆಯವ್ಯಯ ಅಂದಾಜುಗಳನ್ನು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದ ನಿರೀಕ್ಷೆಯಲ್ಲಿ ತಯಾರಿಸಲಾಗಿದೆ. 2019-20ನೇ ಸಾಲಿನಲ್ಲಿ ಸರ್ಕಾರದಿಂದ ನಿರೀಕ್ಷಿತ ಪ್ರಮಾಣದಲ್ಲಿ ಅನುದಾನ ಬಿಡುಗಡೆ ಯಾಗದಿರುವುದರಿಂದ ವಾರ್ಷಿಕ ಲೆಕ್ಕಪತ್ರದಲ್ಲಿ ಕಾಣಿಸಿದಂತೆ ವಾಸ್ತವಿಕ ಸ್ವೀಕೃತಿ ಹಾಗೂ ವೆಚ್ಚಗಳಲ್ಲಿ ವ್ಯತ್ಯಾಸ ಉಂಟಾಗಿರುತ್ತದೆಂದು ವಿವರಣೆಯನ್ನು ನೀಡಿರುತ್ತಾರೆ.

## 10. ವಿಶ್ವ ವಿದ್ಯಾಲಯದ ಸ್ವೀಕೃತಿಗಳು.

ವಿದ್ಯಾರ್ಥಿಗಳಿಂದ ಸಂಗ್ರಹಿಸುವ ಶುಲ್ಕ, ವಿಶ್ವ ವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಕಾಲೇಜುಗಳಿಂದ ಸಂಗ್ರಹಿಸುವ ಮಾನ್ಯತಾ ಶುಲ್ಕ, ದಂಡ ಶುಲ್ಕಗಳು, ವಿಶ್ವ ವಿದ್ಯಾನಿಲಯದ ಆಸ್ತಿಗಳಿಂದ ಬರುವ ಬಾಡಿಗೆ ಮೊತ್ತಗಳು, ಪ್ರಸಾರಾಂಗದಲ್ಲಿ ಪುಸ್ತಕ ಮಾರಾಟದಿಂದ ಬರುವ ಮೊತ್ತ, ತೋಟಗಾರಿಕೆ ಕ್ಷೇತ್ರಗಳ ಉತ್ಪನ್ನಗಳ ಮಾರಾಟದಿಂದ ಬರುವ ಸ್ವೀಕೃತಿಗಳು, ರಾಜ್ಯ ಸರ್ಕಾರದಿಂದ ಬರುವ ಬ್ಲಾಕ್ ಗ್ರಾಂಟ್, ಕೇಂದ್ರ ಸರ್ಕಾರ, ಯು.ಜಿ.ಸಿ ಮತ್ತು ಅಂತರರಾಷ್ಟ್ರೀಯ ಏಜೆನ್ಸಿಗಳಿಂದ ಬರಬಹುದಾದ ಅನುದಾನಗಳು ಹಾಗೂ ಸಾರ್ವಜನಿಕ ದತ್ತಿಗಳು ಮತ್ತು ಕೊಡುಗೆಗಳು ವಿಶ್ವವಿದ್ಯಾನಿಲಯದ ಪ್ರಮುಖ ಸ್ವೀಕೃತಿಗಳಾಗಿರುತ್ತವೆ.

ವಿಶ್ವ ವಿದ್ಯಾನಿಲಯದಲ್ಲಿ ಅನುಮೋದಿತ ಸಂಚಯನ ಲೆಕ್ಕಪದ್ದತಿಯನ್ನು ಅನುಸರಿಸದಿರುವುದರಿಂದ ಹಾಗೂ ಸ್ವೀಕೃತಿಗೆ ಸಂಬಂಧಿಸಿದಂತೆ ವಹಿಯನ್ನು ನಿರ್ವಹಿಸದಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಹಿಂದಿನವರ್ಷಗಳಿಂದ ಬರಬೇಕಾದ ಬಾಕಿ

ಸ್ವೀಕೃತಿಗಳನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ವಾರ್ಷಿಕ ಲೆಕ್ಕಪತ್ರದ ಪ್ರಕಾರ 2019-20ನೇ ಸಾಲಿನಲ್ಲಿ ವಿಶ್ವ ವಿದ್ಯಾನಿಲಯಕ್ಕೆ ಜಮೆಯಾದಂತಹ ಪ್ರಮುಖ ಆದಾಯಗಳ ಅಂಕಿ ಅಂಶಗಳನ್ನು **ಅನುಬಂಧ-2()** ರಲ್ಲಿ ವಿವರಿಸಲಾಗಿದೆ. ನಗದು ಪುಸ್ತಕಗಳು ಮತ್ತು ಬ್ಯಾಂಕ್ ಪಾಸ್‌ಶೀಟ್‌ಗಳ ಅನುಸಾರ 2019-20ನೇ ಸಾಲಿನಲ್ಲಿ ವಿಶ್ವ ವಿದ್ಯಾಲಯದ ವಿವಿಧ ಲೆಕ್ಕಶೀರ್ಷಿಕೆಗಳಡಿ ಒಟ್ಟು ಆದಾಯ ರೂ. 141,63,32,840/- ಗಳಾಗಿದ್ದು, ವಿವರಗಳು ಕೆಳ ಕಂಡಂತಿರುತ್ತದೆ.

| ಕ್ರ.ಸಂ | ವಿವರಗಳು | ಮೊತ್ತ (ರೂಗಳಲ್ಲಿ) |
|---|---|---|
| 1 | ಅನುದಾನಗಳು | 66,76,64,527 |
| 2 | ಠೇವಣಿ ಮೇಲಿನ ಬಡ್ಡಿ | 2,26,15,800 |
| 3 | ಉಳಿತಾಯ ಖಾತೆಗಳ ಬಡ್ಡಿ | 92,70,324 |
| 4 | ಶುಲ್ಕ ಮತ್ತು ಇತರೆ | 71,67,82,189 |
| | ಒಟ್ಟು | **141,63,32,840** |

ವಿಶ್ವ ವಿದ್ಯಾಲಯವು ಈ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಿಂದ ಒಟ್ಟು ರೂ.226,09,79,057/-ಗಳನ್ನು ಆಂತರಿಕ ವರ್ಗಾವಣೆ ಮಾಡಿಕೊಂಡಿದ್ದು ಈ ಮೊತ್ತವನ್ನು ಹಾಗೂ ಪಕ್ವಗೊಂಡ ನಿಶ್ಚಿತ ಠೇವಣಿಗಳ ಹಿಂಪಾವತಿ ಮೊತ್ತ ರೂ. 67,77,69,848/- ಗಳನ್ನು ಸ್ವೀಕೃತಿ ಭಾಗದ ಲೆಕ್ಕದಲ್ಲಿ ತೋರಿಸಲಾಗಿದೆ.

**10.1 ವಿದ್ಯಾರ್ಥಿಗಳಿಗೆ ಪ್ರವೇಶಾತಿ ಶುಲ್ಕದಲ್ಲಿ ನೀಡಿರುವ ವಿನಾಯಿತಿ ಮೊತ್ತವನ್ನು ಸರ್ಕಾರದಿಂದ ಮರು ಭರಿಕೆ ಮಾಡಿಕೊಳ್ಳದಿರುವುದು.**

ವಿಶ್ವ ವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳು, ಸ್ನಾತಕೋತ್ತರ ಕೇಂದ್ರಗಳು ಮತ್ತು ಅಧೀನ ಕಾಲೇಜುಗಳಿಗೆ 2019-20ನೇ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವ ಸ್ನಾತಕ/ ಸ್ನಾತಕೋತ್ತರ/ ಡಿಪ್ಲೊಮಾ ವಿದ್ಯಾರ್ಥಿಗಳ ಪ್ರವೇಶಾತಿಶುಲ್ಕಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಿದ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಿದಾಗ ಸದರಿ ಸಾಲಿನಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸಬೇಕಾಗಿರುವ ಪ್ರವೇಶಾತಿ ಶುಲ್ಕದ ಬೇಡಿಕೆ, ಸಂಗ್ರಹಣೆಯಾಗಿರುವ ಪ್ರವೇಶಾತಿ ಶುಲ್ಕ ಹಾಗೂ ಸಂಗ್ರಹಿಸದೇ ಬಾಕಿ ಉಳಿದ ಶುಲ್ಕದ ವಿವರಗಳು ಕೆಳಕಂಡಂತಿದೆ.

| **ಘೋಷ್ವಾರೆ (ರೂ.ಗಳಲ್ಲಿ)** | | | |
|---|---|---|---|
| **ವಿವರ** | **ಬೇಡಿಕೆ** | **ವಸೂಲಾತಿ** | **ಬಾಕಿ** |
| **ಸಾಮಾನ್ಯ ಪ್ರವೇಶಾತಿ** | **8,69,05,870** | **7,34,45,483** | **1,34,60,387** |
| **ಸ್ವಯಂ ಹಣಕಾಸು ಯೋಜನೆ ಪ್ರವೇಶಾತಿ** | **4,05,60,505** | **3,61,90,605** | **43,69,900** |
| **ಒಟ್ಟು** | **12,74,66,375** | **10,96,36,088** | **1,78,30,287** |

ಮೇಲಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಸಂಗ್ರಹಿಸದೇ ಉಳಿದ ಬಾಕಿ ಶುಲ್ಕವು ಪ.ಜಾತಿ/ಪ.ವರ್ಗ ಹಾಗೂ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನೀಡಿರುವ ಪ್ರವೇಶಾತಿ ಶುಲ್ಕದ ವಿನಾಯಿತಿ ಮೊತ್ತವಾಗಿರುತ್ತದೆ. ಸದರಿ ಮೊತ್ತವನ್ನು ಸರ್ಕಾರದಿಂದ ಮರುಭರಿಕೆ ಮಾಡಿಕೊಂಡಿರುವ ಅಥವಾ ವಿದ್ಯಾರ್ಥಿಗಳಿಂದ ವಸೂಲಾತಿ ಮಾಡಿರುವುದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸುವಂತೆ ಕೋರಿ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:223/8.11.21ನ್ನು ನೀಡಲಾಗಿದ್ದರೂ ಸಹ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಸರ್ಕಾರದಿಂದ ಹಿಂಭರಿಕೆ ಮಾಡಿ ಕೊಳ್ಳದ ಮೊತ್ತ ರೂ. 1,78,30,287/-ಗಳನ್ನು ಸಂಬಂಧಿಸಿದ ಸರ್ಕಾರದ ಇಲಾಖೆಗಳಿಂದ ಹಿಂಭರಿಕೆ ಮಾಡಿಕೊಂಡು ವಿಶ್ವ ವಿದ್ಯಾನಿಲಯದ ಲೆಕ್ಕಶೀರ್ಷಿಕೆಗೆ ಜಮೆ ಮಾಡಲು ಸೂಚಿಸಿದೆ.

ಮುಂದುವರೆದು ಸದರಿ ಸಾಲಿಗೆ ಒಟ್ಟು ರೂ.10,96,36,088/-ಗಳ ಪ್ರವೇಶಾತಿ ಶುಲ್ಕ ಸ್ವೀಕರಿಸಿರುವುದಕ್ಕೆ ಜಮಾ ಚಲನ್‌ಗಳನ್ನು ಹಾಜರುಪಡಿಸಿದ್ದು, ಚಲನ್‌ಗಳನ್ನು ಲೆಕ್ಕ ಸಮನ್ವಯ ಮಾಡಿರುವ ವಿವರವನ್ನು ಹಾಜರುಪಡಿಸಿರುವಂತೆ ಕೋರಿ ಲೆಕ್ಕ ತಪಾಸಣಾ ವಿಚಾರಣಾ ಪತ್ರ ಸಂಖ್ಯೆ:223/08.11.2021ನ್ನು ನೀಡಿದ್ದರೂ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಹೀಗಾಗಿ ರೂ. 10,96,36,088/-ಗಳ ಜಮೆ ಮೊತ್ತವನ್ನು ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ಕಛೇರಿ ಮುಖ್ಯಸ್ಥರು ಸೂಕ್ತ

ಕ್ರಮ ಕೈಗೊಂಡು ಲೆಕ್ಕ ಸಮನ್ವಯ ವಿವರಗಳನ್ನು ಅನುಪಾಲನಾ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ. 2019-20ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದಿರುವ ಸ್ನಾತಕ/ಸ್ನಾತಕೋತ್ತರ/ಡಿಪ್ಲೋಮ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ.

**10.2 ದೂರಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪ್ರವೇಶ ಶುಲ್ಕದ ವಸೂಲಾತಿ ವಿವರ.**

ದೂರಶಿಕ್ಷಣ ಕೇಂದ್ರದಲ್ಲಿ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಬೋಧನಾ ಶುಲ್ಕದ ಜೊತೆಗೆ ಇನ್ನಿತರೆ ಶುಲ್ಕಗಳ ವಿವರಗಳ ಮೂಲಕ ಚಲನ್‌ಗಳು ಮತ್ತು ಪ್ರವೇಶಾತಿ ವಹಿಯೊಂದಿಗೆ ಪರಿಶೀಲಿಸಲಾಗಿದ್ದು, ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ.

**2019-20ನೇ ಸಾಲಿನಲ್ಲಿ ದೂರಶಿಕ್ಷಣ ಕೇಂದ್ರದಲ್ಲಿ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ವಿವರಃ-**

| ಕ್ರ. ಸಂ | ಕೋರ್ಸ್ | ಸಂಖ್ಯಾಬಲ | | | | ಒಟ್ಟು |
|---|---|---|---|---|---|---|
| | | **CDE, MG** | **UCM** | **FMKMC** | **GFGU** | |
| 1 | I ಬಿಎ | 215 | 285 | 77 | 114 | **691** |
| 2 | II ಬಿಎ | 204 | 200 | 80 | 120 | **604** |
| | **ನೇರ ಪ್ರವೇಶಾತಿ** | 6 | 0 | 0 | 0 | **6** |
| 3 | III ಬಿಎ | 190 | 173 | 94 | 79 | **536** |
| | **ನೇರ ಪ್ರವೇಶಾತಿ** | 4 | 0 | 0 | 0 | **4** |
| 4 | I ಬಿಕಾಂ | 64 | 108 | 6 | 28 | **206** |
| 5 | II ಬಿಕಾಂ | 99 | 83 | 13 | 40 | **235** |
| | **ನೇರ ಪ್ರವೇಶಾತಿ** | 22 | 0 | 0 | 0 | **22** |
| 6 | III ಬಿಕಾಂ | 61 | 55 | 16 | 35 | **167** |
| | **ನೇರ ಪ್ರವೇಶಾತಿ** | 18 | 0 | 1 | 0 | **19** |
| 7 | I ಬಿಬಿಎ | 34 | 30 | 5 | 7 | **76** |
| 8 | II ಬಿಬಿಎ | 0 | 2 | 0 | 0 | **2** |
| | **ನೇರ ಪ್ರವೇಶಾತಿ** | 7 | 0 | 0 | 0 | **7** |
| 9 | III ಬಿಬಿಎಂ | 12 | 16 | 2 | 3 | **33** |
| | **ನೇರ ಪ್ರವೇಶಾತಿ** | 6 | 0 | 0 | 0 | **6** |
| 10 | I ಎಂಎ **ಅರ್ಥಶಾಸ್ತ್ರ** | 30 | 33 | 12 | 12 | **87** |
| 11 | II ಎಂಎ **ಅರ್ಥಶಾಸ್ತ್ರ** | 30 | 37 | 12 | 8 | **87** |
| 12 | I ಎಂಎ ಇಂಗ್ಲೀಷ್ | 36 | 42 | 4 | 24 | **106** |
| 13 | II ಎಂಎ ಇಂಗ್ಲೀಷ್ | 51 | 35 | 4 | 19 | **109** |
| 14 | I ಎಂಎ ಹಿಂದಿ | 5 | 9 | 0 | 9 | **23** |
| 15 | II ಎಂಎ ಹಿಂದಿ | 14 | 13 | 2 | 2 | **31** |
| 16 | I ಎಂಎ ಇತಿಹಾಸ | 14 | 10 | 4 | 3 | **31** |
| 17 | II ಎಂಎ ಇತಿಹಾಸ | 23 | 15 | 5 | 7 | **50** |
| 18 | I ಎಂಎ ಕನ್ನಡ | 38 | 35 | 6 | 18 | **97** |
| 19 | II ಎಂಎ ಕನ್ನಡ | 42 | 32 | 7 | 15 | **96** |
| 20 | I ಎಂಎ ರಾಜ್ಯಶಾಸ್ತ್ರ | 11 | 6 | 7 | 4 | **28** |
| 21 | II ಎಂಎ ರಾಜ್ಯಶಾಸ್ತ್ರ | 15 | 7 | 2 | 9 | **33** |
| 22 | I ಎಂಎ ಸಮಾಜಶಾಸ್ತ್ರ | 16 | 12 | 4 | 6 | **38** |
| 23 | II ಎಂಎ ಸಮಾಜಶಾಸ್ತ್ರ | 18 | 5 | 3 | 1 | **27** |
| 24 | I ಎಂಬಿಎ (ಪ್ರವಾಸೋದ್ಯಮ) | 24 | 33 | 10 | 14 | **81** |
| 25 | II ಎಂಬಿಎ (ಪ್ರವಾಸೋದ್ಯಮ) | 3 | 2 | 0 | 5 | **10** |
| 26 | I ಎಂ.ಕಾಂ | 232 | 296 | 67 | 172 | **767** |

| | | | | | | |
|---|---|---|---|---|---|---|
| 27 | II ಎಂ.ಕಾಂ | 352 | 302 | 65 | 183 | **902** |
| 28 | I ಬಿ.ಎಡ್. (ಓ.ಡಿ.ಎಲ್.) | 500 | 0 | 0 | 0 | **500** |
| 29 | II ಬಿ.ಎಡ್. (ಓ.ಡಿ.ಎಲ್.) | 429 | 0 | 0 | 0 | **429** |
| ಒಟ್ಟು | | **2825** | **1876** | **508** | **937** | **6146** |

ಮೇಲ್ಕಂಡಂತೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಂದ ವಿಶ್ವ ವಿದ್ಯಾನಿಲಯವು ನಿಗದಿಪಡಿಸಿರುವ ಪ್ರವೇಶ ಶುಲ್ಕ ಹಾಗೂ ಇನ್ನಿತರ ಶುಲ್ಕಗಳ ರೂಪದಲ್ಲಿ ವಸೂಲು ಮಾಡಿರುವ ಹಾಗೂ ಬಾಕಿ ಉಳಿದಿರುವ ಪ್ರವೇಶಾತಿ ಶುಲ್ಕದ ವಿವರ (ಡಿ.ಸಿ.ಬಿ) ಈ ಕೆಳಕಂಡಂತಿದೆ.

2019-20ನೇ ಸಾಲಿನ ದೂರಶಿಕ್ಷಣ ಕೇಂದ್ರದಲ್ಲಿ ಪ್ರವೇಶಾತಿ ಶುಲ್ಕದ (DCB Statement)ವಿವರ

| ಕ್ರ. ಸಂ | ಕೋರ್ಸ್ | **ವಿದ್ಯಾರ್ಥಿಗಳ ಸಂಖ್ಯೆ** | **ಮೊತ್ತ ರೂ.ಗಳಲ್ಲಿ** | | |
|---|---|---|---|---|---|
| | | | **ಬೇಡಿಕೆ** | **ಸಂಗ್ರಹಣೆ** | **ಬಾಕಿ** |
| 1 | ಬಿ.ಎ | 1841 | 61,27,000 | 61,27,000 | - |
| 2 | ಬಿ.ಕಾಂ | 648 | 25,27,200 | 25,27,200 | - |
| 3 | ಬಿ.ಬಿ.ಎ | 124 | 6,35,500 | 6,35,500 | - |
| 4 | ಎಂ.ಎ. ಅರ್ಥಶಾಸ್ತ್ರ | 175 | 13,83,300 | 13,83,300 | - |
| 5 | ಎಂ.ಎ. ಇಂಗ್ಲೀಷ್ | 215 | 17,03,100 | 17,03,100 | - |
| 6 | ಎಂ.ಎ. ಇತಿಹಾಸ | 81 | 6,05,000 | 6,05,000 | |
| 7 | ಎಂ.ಎ. ಕನ್ನಡ | 193 | 15,36,400 | 15,36,400 | |
| 8 | ಎಂ.ಎ. ರಾಜ್ಯಶಾಸ್ತ್ರ | 61 | 4,74,700 | 4,74,700 | |
| 9 | ಎಂ.ಎ. ಸಮಾಜಶಾಸ್ತ್ರ | 65 | 5,39,300 | 5,39,300 | - |
| 10 | ಎಂ.ಕಾಂ. | 1669 | 1,29,97,700 | 1,29,97,700 | - |
| 11 | ಎಂಬಿಎ ಪ್ರವಾಸೋದ್ಯಮ | 91 | 8,69,000 | 8,69,000 | |
| 12 | ಎಂಎ ಹಿಂದಿ | 54 | 4,12,900 | 4,12,900 | - |
| 13 | ಬಿ.ಎಡ್. (ಓ.ಡಿ.ಎಲ್.) | 929 | 2,72,93,000 | 2,72,93,000 | |
| **ಒಟ್ಟು ಮೊತ್ತ (ರೂ.)** | | | **5,71,04,100** | **5,71,04,100** | |
| ದಂಡ ಶುಲ್ಕ ಮೊತ್ತ | | | **2,25,900** | **2,25,900** | |
| **ಒಟ್ಟುಮೊತ್ತ** | | | **5,73,30,000** | **5,73,30,000** | |

ಪ್ರವೇಶಾತಿ ಪಡೆದವರು ಚಲನ್ ಮೂಲಕ ವಿಶ್ವ ವಿದ್ಯಾನಿಲಯದ ಸಂಬಂಧಪಟ್ಟ ಖಾತೆಗೆ ಜಮೆ ಮಾಡಿ, ಪ್ರವೇಶಾತಿ ವಹಿಯಲ್ಲಿ ಚಲನ್ ನಂಬರ್, ಸ್ವೀಕೃತಿ ಮೊತ್ತಗಳನ್ನು ದಾಖಲಿಸಿ, ಜಮೆ ಮಾಡಿರುವ ವಿವರಗಳ ಮೊತ್ತಕ್ಕೆ ಹಣಕಾಸು ಅಧಿಕಾರಿಗಳು ದೃಢೀಕರಿಸಬೇಕಿರುತ್ತದೆ. ಹೀಗೆ ದೃಢೀಕರಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆ ಕೋರಿ ನೀಡಿದ ವಿಚಾರಣಾ ಪತ್ರ ಸಂಖ್ಯೆ: 79/2021-22/ 29.09.2021ಕ್ಕೆ ವಿಶ್ವ ವಿದ್ಯಾಲಯದವರು ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ. ಆದ್ದರಿಂದ ಪ್ರವೇಶ ಶುಲ್ಕ, ದಂಡ ಶುಲ್ಕದ ಮೊತ್ತ ಸೇರಿ ಜಿ.ಆರ್.ಎ ಖಾತೆಗೆ ಜಮೆಯಾಗಿರುವ ಬಗ್ಗೆ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಇನ್ನು ಮುಂದೆ ಪ್ರವೇಶಾತಿ ವಹಿಯಲ್ಲಿ ದಾಖಲಿಸಿದ ನಮೂದುಗಳನ್ನು ದೃಢೀಕರಿಸಿ ಲೆಕ್ಕಪರಿಶೋಧನೆಗೆ ಹಾಜರು ಪಡಿಸಲು ಸೂಚಿಸಿದೆ.

**10.3 ವಿಶ್ವ ವಿದ್ಯಾಲಯವು ತನ್ನ ವ್ಯಾಪ್ತಿಗೊಳಪಡುವ ಕಾಲೇಜುಗಳಿಂದ ಸಂಯೋಜನಾ ಶುಲ್ಕವನ್ನು ಕಡಿಮೆ ವಸೂಲಿ ಮಾಡಿರುವುದು.**

ವಿಶ್ವವಿದ್ಯಾನಿಲಯವು ತನ್ನ ಅಧಿಸೂಚನೆ ಸಂಖ್ಯೆ: ಎಂಯು/ಎಸಿಸಿ/ ಎಎಫ್‌ಎಫ್/3/2020-21/ಎ1 ದಿನಾಂಕ: 23.12.2019ರಲ್ಲಿ 2020-21ನೇ ಶೈಕ್ಷಣಿಕ ವರ್ಷಕ್ಕೆ ಸಂಯೋಜನೆ ಶುಲ್ಕವನ್ನು ದಂಡರಹಿತವಾಗಿ ದಿನಾಂಕ:26.12.2019ರವರೆಗೆ, ಶೇ.25ರ ದಂಡ ಶುಲ್ಕದೊಂದಿಗೆ ದಿನಾಂಕ: 02.01.2020ವರೆಗೆ ಹಾಗೂ ಶೇ.50ರ ದಂಡ ಶುಲ್ಕದೊಂದಿಗೆ ದಿನಾಂಕ:13.01.2020 ರವರೆಗೆ ಪಾವತಿಸಲು ಅವಕಾಶ ಕಲ್ಪಿಸಿರುತ್ತದೆ. ಹಾಜರು ಪಡಿಸಲಾದ ಮಾಹಿತಿಯಂತೆ ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಟ್ಟು 211 ಕಾಲೇಜುಗಳು (ವಿಶ್ವ ವಿದ್ಯಾನಿಲಯದ ಘಟಕ ಕಾಲೇಜುಗಳು ಒಳಗೊಂಡಂತೆ) ಸಂಯೋಜನೆಗೆ ಒಳಪಟ್ಟಿದ್ದು, ಸದರಿ ಕಾಲೇಜುಗಳಿಂದ ವಸೂಲಿಸಬೇಕಾದ ಸಂಯೋಜನಾ ಶುಲ್ಕಗಳ ಬೇಡಿಕೆ, ವಸೂಲಿ, ಬಾಕಿ ವಿವರಗಳು ಈ ಕೆಳಗಿನಂತಿದೆ.

| ಕ್ರ. ಸಂ | ಕಾಲೇಜುಗಳು | ಸಂಖ್ಯೆ | ಹಿಂದಿನ ಬಾಕಿ | ಪ್ರಸಕ್ತ ಸಾಲನ ಬೇಡಿಕೆ | ವಸೂಲಿಸ ಬೇಕಾದ ಒಟ್ಟು ಸಂಯೋನಾ ಶುಲ್ಕ | ವಸೂಲಿಸಿದ ಸಂಯೋಜ ನಾ ಶುಲ್ಕ | ವಸೂಲಿಸಲು ಬಾಕಿ ಉಳಿದ ಸಂಯೋಜನಾ ಶುಲ್ಕ |
|---|---|---|---|---|---|---|---|
| 1 | ಸರ್ಕಾರಿಕಾಲೇಜು | 37 | --- | | ವಿನಾಯಿತಿ | ವಿನಾಯಿತಿ | ವಿನಾಯಿತಿ |
| 2 | ಬಿ.ಎಡ್., ಕಾಲೇಜು | 17 | 80000 | 4040000 | 4120000 | 3481000 | 639000 |
| 3 | ಘಟಕ ಕಾಲೇಜು | 05 | ---- | | ವಿನಾಯಿತಿ | ವಿನಾಯಿತಿ | ವಿನಾಯಿತಿ |
| 4 | ಸ್ವಾಯತ್ತ ಕಾಲೇಜು (ವಾರ್ಷಿಕ ಶುಲ್ಕ) | 05 | 275650 | 1080000 | 1355650 | 1287400 | 68250 |
| 5 | ಅನುದಾನಿತ/ ಅನುದಾನ ರಹಿತ ಕಾಲೇಜುಗಳು | 147 | 120000 | 6,26,39,600 | 62759600 | 6,10,62,300 | 16,97,300 |
| ಒಟ್ಟು | | **211** | **4,75,650** | **6,77,59,600** | **6,82,35,250** | **6,58,30,700** | **24,04,550** |

ವಸೂಲಿಗೆ ಬಾಕಿ ಉಳಿದ ಸಂಯೋಜನಾ ಶುಲ್ಕ ರೂ.24,04,550/-ಗಳನ್ನು ದಂಡದೊಂದಿಗೆ ವಸೂಲಿಸಿ ವಿಶ್ವ ವಿದ್ಯಾನಿಲಯದ ನಿಧಿಗೆ ಜಮೆ ಮಾಡಿಕೊಳ್ಳಲು ಸೂಚಿಸಿದೆ. ವಿವರವನ್ನು ಅನುಬಂಧ-3(ಎ)ರಲ್ಲಿ ವಿವರಿಸಲಾಗಿದೆ

**10.4 ಸಂಯೋಜನಾ ಶುಲ್ಕ ವಸೂಲಿಸುವಾಗ ಜಿ.ಎಸ್.ಟಿ. ಸಂಗ್ರಹಿಸದಿರುವುದು.**

ವಿಶ್ವವಿದ್ಯಾಲಯವು ತನ್ನ ವ್ಯಾಪ್ತಿಗೊಳಪಡುವ 18 ಬಿ.ಎಡ್., ಕಾಲೇಜುಗಳಿಂದ ವಸೂಲಿಸುವ ಸಂಯೋಜನಾ ಶುಲ್ಕದಲ್ಲಿ ಸರಕು ಮತ್ತು ಸೇವಾ ತೆರಿಗೆ ಕಾಯಿದೆಯ ಸೆಕ್ಷನ್-2(105), 2(107) ಮತ್ತು ಸೆಕ್ಷನ್-9 (1)ರಂತೆ ಹಾಗೂ ಅಧಿಸೂಚನೆ ಸಂಖ್ಯೆ: ಎಂಯು/ಎಸಿಸಿ/ಎಎಫ್‌ಎಫ್/3/2019-20/ಎ1,ದಿನಾಂಕ:22.10.2018ರಂತೆ 2019-20ನೇ ಶೈಕ್ಷಣಿಕ ವರ್ಷದಲ್ಲಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಕಾಲೇಜುಗಳಿಂದ ವಸೂಲಿಸಿದ ಸಂಯೋಜನೆ ಶುಲ್ಕದೊಂದಿಗೆ ಜಿ.ಎಸ್.ಟಿ. ತೆರಿಗೆಯನ್ನು ವಿಧಿಸಿ ವಸೂಲಿಸಬೇಕಾಗಿರುತ್ತದೆ. ಆದರೆ ಸಂಯೋಜನೆ ಶುಲ್ಕದ ಕಡತಗಳನ್ನು ಪರಿಶೀಲಿಸಿದಾಗ ಸಂಯೋಜನೆ ಶುಲ್ಕದೊಂದಿಗೆ 2ಕಾಲೇಜುಗಳಿಂದ ಮಾತ್ರ ಜಿ.ಎಸ್.ಟಿ. ತೆರಿಗೆಯನ್ನು ವಸೂಲಿಸಲಾಗಿರುತ್ತದೆ. ಈ ಬಗ್ಗೆ ಸೂಕ್ತ ವಿವರಣೆಯನ್ನು ನೀಡುವಂತೆ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣೆ ಸಂಖ್ಯೆ:85/04.10.2021ಕ್ಕೆ ವಿಶ್ವವಿದ್ಯಾನಿಲಯದಿಂದ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಹೀಗಾಗಿ ಸದರಿ ಸಾಲಿನಲ್ಲಿ ವಸೂಲಿಸಿದ ಸಂಯೋಜನೆ ಶುಲ್ಕ ರೂ.6,58,30,700/-ಕ್ಕೆ ಶೇ.18ರಂತೆ ವಸೂಲಿಸಬೇಕಾದ ಜಿ.ಎಸ್.ಟಿ.ಯ ಒಟ್ಟು ಮೊತ್ತ ರೂ.1,18,49,526/- ಗಳಾಗಲಿದ್ದು ಇದರಲ್ಲಿ ರೂ.3,47,780/- ಗಳನ್ನು ವಸೂಲಿಸಿದ್ದು ಬಾಕಿ ಉಳಿದ ಜಿ.ಎಸ್.ಟಿ. ಮೊತ್ತ ರೂ.1,15,01,746/-ಗಳನ್ನು ಸಂಬಂಧಿಸಿದ ಕಾಲೇಜುಗಳಿಂದ ವಸೂಲಿಸಿ ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಲು ಸೂಚಿಸಿದೆ.

| ಕ್ರ.ಸಂ | ಸಂಸ್ಥೆಗಳು | ಸಂಗ್ರಹಿಸಲಾದ ಸಂಯೋಜನಾ ಶುಲ್ಕ | ಅನ್ವಯವಾಗುವ ಸ &ಸೇ.ತೆ | ಸಂಗ್ರಹಿಸಿದ ಸ &ಸೇ.ತೆ | ಬಾಕಿ ಉಳಿದ ಸ &ಸೇ.ತೆ |
|---|---|---|---|---|---|
| ಅನುದಾನಿತ/ ಅನುದಾನ ರಹಿತ ಕಾಲೇಜುಗಳು | 137 | 61062300 | 10991214 | 308180 | 10683034 |
| ಬಿ.ಎಡ್., ಕಾಲೇಜುಗಳು | 17 | 3481000 | 626580 | 39600 | 586980 |
| ಸ್ವಾಯತ್ತ ಕಾಲೇಜುಗಳು | 5 | 1287400 | 231732 | 0 | 231732 |
| | 159 | 65830700 | 11849526 | 347780 | 11501746 |

ವಿವರಗಳನ್ನು ಅನುಬಂಧ-4ರಲ್ಲಿ ನೀಡಲಾಗಿದೆ.

**10.5** ಸ್ವಾಯತ್ತ ಕಾಲೇಜುಗಳ ಸಂಯೋಜನಾ ಶುಲ್ಕವನ್ನು ಕಡಿಮೆ ವಸೂಲಿಸಿರುವುದು.

ವಿಶ್ವ ವಿದ್ಯಾನಿಲಯದ ಕುಲಸಚಿವರು ಅಧಿಸೂಚನೆ ಸಂಖ್ಯೆ:ಎಂಯು/ಎಸಿಸಿ/ಎಫ್‌ಇ/ಸಿಆರ್/-1/2019-20/ಎ7,ದಿನಾಂಕ 06.05.2019ರಲ್ಲಿ 2019-20ನೇ ಸಾಲಿನಲ್ಲಿ ಸ್ವಾಯತ್ತ ಕಾಲೇಜುಗಳಿಗೆ ವಾರ್ಷಿಕ ನವೀಕರಣ ಶುಲ್ಕವಾಗಿ ರೂ. 240000-00ಗಳನ್ನು ನಿಗಧಿ ಪಡಿಸಲಾಗಿದೆ. ಸ್ವಾಯತ್ತಕಾಲೇಜುಗಳಿಗೆ ವಾರ್ಷಿಕ ನವೀಕರಣ ಶುಲ್ಕ ವಸೂಲಾತಿ ವಿವರಗಳು ಈ ಕೆಳಕಂಡಂತಿದೆ.

ರೂ.ಗಳಲ್ಲಿ

| ಕ್ರ.ಸಂ | ಸ್ವಾಯತ್ತ ಕಾಲೇಜಿನ ಹೆಸರು | ವಸೂಲಿಸ ಬೇಕಾದ ವಾರ್ಷಿಕ ಶುಲ್ಕ | ವಸೂಲಿಸಿದ ವಾರ್ಷಿಕ ಶುಲ್ಕ | ವ್ಯತ್ಯಾಸ |
|---|---|---|---|---|
| 1 | ಸೇಂಟ್ ಅಲೋಷಿಯಸ್ ಕಾಲೇಜು, ಮಂಗಳೂರು | 240000 | 220500 | 19500 |
| 2 | ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಮಂಗಳೂರು | 240000 | 220500 | 19500 |
| 3 | ಸೇಂಟ್ ಅಗ್ನೇಷಿಯಸ್ ಕಾಲೇಜು, ಮಂಗಳೂರು | 240000 | 220500 | 19500 |
| 4 | ಸ್ಕೂಲ್ ಆಫ್ ಸೋಷಿಯಲ್ ವರ್ಕ್ಸ್, ರೋಶನಿನಿಲಯ, ಮಂಗಳೂರು | 240000 | 220500 | 19500 |
| 5 | ಸೇಂಟ್ ಆನ್ಸ್ ಕಾಲೇಜ್ ಆಫ್ ಎಜುಕೇಷನ್, ಮಂಗಳೂರು (ಏಕಬೋಧಕ, ಶೇ.50ರಷ್ಟು ಶುಲ್ಕ) ಮಂಗಳೂರು | 120000 | 110250 | 9750 |
| | **ಒಟ್ಟು** | **10,80,000** | **9,92,250** | **87,750** |

ಮೇಲಿನ ಕೊಷ್ಟಕದಲ್ಲಿನ ಸ್ವಾಯತ್ತ ಕಾಲೇಜುಗಳಿಂದ ತಲಾ ರೂ.220500-00 ರಂತೆ ವಾರ್ಷಿಕ ನವೀಕರಣ ಶುಲ್ಕವಾಗಿ ಜಮೆ ಮಾಡಿರುತ್ತಾರೆ. ಕಡಿಮೆ ಜಮೆ ಮಾಡಿರುವ ಬಗ್ಗೆ ವಿವರಣೆ ಕೋರಿ ನೀಡಿದ ವಿಚಾರಣಾ ಪತ್ರಸಂಖ್ಯೆ: 178/29.10.2021ಕ್ಕೆ ವಿಶ್ವ ವಿದ್ಯಾನಿಲಯದವರು ಉತ್ತರಿಸಿ ಸ್ವಾಯತ್ತ ಕಾಲೇಜುಗಳು ವಾರ್ಷಿಕ ಶುಲ್ಕವನ್ನು ಏಪ್ರಿಲ್ ತಿಂಗಳೊಳಗಾಗಿಯೇ ವಿಶ್ವ ವಿದ್ಯಾನಿಲಯದ ನಿಧಿಗೆ ಪಾವತಿಸಬೇಕಾಗಿರುವುದರಿಂದ ಹಾಗೂ ಶುಲ್ಕ ತಃಖ್ತೆಯು ಶೈಕ್ಷಣಿಕ ವರ್ಷ ಆರಂಭದಲ್ಲಿ ಅಧಿಸೂಚಿಸಲ್ಪಡುವುದರಿಂದ ಚಾಲ್ತಿಯಲ್ಲಿರುವ (ಕಳೆದವರ್ಷದ) ಶುಲ್ಕ ತಃಖ್ತೆಯಲ್ಲಿ ನಮೂದಿಸಿರುವ ಶುಲ್ಕವನ್ನು ಪಾವತಿಸಿರುತ್ತಾರೆ ಎಂದುತಿಳಿಸಿರುತ್ತಾರೆ. ಆದರೆ ಸ್ವಾಯತ್ತ ಕಾಲೇಜುಗಳನ್ನು 2019-20ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ನವೀಕರಿಸಿರುವುದರಿಂದ ಏಪ್ರಿಲ್ ತಿಂಗಳೊಳಗಾಗಿಯೇ ಪಾವತಿಸ ಬೇಕಾಗಿದ್ದರೂ ಸಹ ವ್ಯತ್ಯಾಸದ ವಾರ್ಷಿಕ ಶುಲ್ಕವನ್ನು ಸಂಬಂಧಿಸಿದ ಕಾಲೇಜುಗಳು ಪಾವತಿಸಬೇಕಾಗಿರುತ್ತದೆ. ಹೀಗಾಗಿ ನೀಡಿರುವ ಉತ್ತರವು ಸಮಂಜಸವಾಗಿಲ್ಲದ ಕಾರಣ ಸ್ವಾಯತ್ತ ಕಾಲೇಜುಗಳಿಂದ ವಸೂಲಿಸಬೇಕಾದ ವ್ಯತ್ಯಾಸದ ಮೊತ್ತ ರೂ.87750-00 ಗಳನ್ನು ವಸೂಲಿಸಿ ವಿಶ್ವವಿದ್ಯಾನಿಲಯದ ನಿಧಿಗೆ ಜಮೆ ಮಾಡಲು ಸೂಚಿಸಿದೆ.

**10.6 ವಸತಿ ಗೃಹ/ ವಾಣಿಜ್ಯ ಕಟ್ಟಡ ಬಾಡಿಗೆ ಬೇಡಿಕೆ ವಸೂಲಿ ಬಾಕಿ ವಹಿಯನ್ನು ಹಾಜರು ಪಡಿಸದಿರುವುದು.**

ವಿಶ್ವ ವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ವಸತಿ ಗೃಹಗಳು, ವಾಣಿಜ್ಯ ಮಳಿಗೆಗಳು ಮತ್ತು ಕಟ್ಟಡಗಳು ಹಾಗೂ ಖಾಲಿ ನಿವೇಶನಗಳನ್ನು ಬಾಡಿಗೆಗೆ ನೀಡಿರುವ ಲೆಕ್ಕ ಪತ್ರಗಳನ್ನು 2019-20ನೇ ಸಾಲಿನಲ್ಲಿ ಪರಿಶೋಧಿಸಲು ಪೂರಕ ಲೆಕ್ಕ ಪತ್ರಗಳೊಂದಿಗೆ ಬಾಡಿಗೆಗಳ ಬೇಡಿಕೆ, ವಸೂಲಿ ಮತ್ತು ಬಾಕಿ ವಿವರಗಳನ್ನು ಹಾಜರು ಪಡಿಸುವಂತೆ ವಿಚಾರಣಾ ಸಂಖ್ಯೆ: 204/6.11.2021 & 205/ 06.11.2021ರಲ್ಲಿ ಕೋರಲಾಗಿದ್ದರೂ ವಿಶ್ವ ವಿದ್ಯಾಲಯದಿಂದ ಯಾವುದೇ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲವಾದ್ದರಿಂದ ಅವುಗಳನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ದಾಖಲಾತಿಗಳನ್ನು ಹಾಜರು ಪಡಿಸದಿರುವವರ ವಿರುದ್ಧ ವಿಶ್ವ ವಿದ್ಯಾನಿಲಯದಿಂದ ಆಡಳಿತಾತ್ಮಕ ಕ್ರಮ ಕೈ ಗೊಳಲು ಸೂಚಿಸಿದೆ.


**10.7 ಸ್ವೀಕೃತಿಯ ಮೊತ್ತವನ್ನು ವಿಶ್ವ ವಿದ್ಯಾನಿಲಯದ ಲೆಕ್ಕಕ್ಕೆ ತಾರದೆ ನೇರವಾಗಿ ವೆಚ್ಚ ಮಾಡಿರುವುದು.**

ರಶೀದಿ ಪುಸ್ತಕಗಳನ್ನು ಪರಿಶೀಲಿಸಲಾಗಿ, ರಶೀದಿ ಪುಸ್ತಕ ಸಂಖ್ಯೆ: 25ರಲ್ಲಿ ಕ್ರ.ಸಂ. 2401 ರಿಂದ 2484ರ ವರೆಗಿನ ರಶೀದಿಗಳಲ್ಲಿ ದಿನಾಂಕ: 12.03.2020 ರಿಂದ 13.03.2020ರ ವರೆಗೆ ನಡೆದ 02 ದಿನಗಳ ರಾಷ್ಟ್ರೀಯ ಸಮ್ಮೇಳನ ಸಂದರ್ಭದಲ್ಲಿ ಸಮ್ಮೇಳನದ ಸಂಘಟನಾ ಕಾರ್ಯದರ್ಶಿಗಳಾಗಿದ್ದ ಶ್ರೀಪತಿ ಕಲ್ಲೂರಾಯ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗರವರು ದಿನಾಂಕ:12.03.2020ರಂದು ರೂ.38,800/-ಗಳನ್ನು ಸ್ವೀಕರಿಸಿರುತ್ತಾರೆ. ಅಲ್ಲದೆ ದಿನಾಂಕ:27.12.2019ರಿಂದ 28.12.2019ರವರೆಗೆ ನಡೆದ 02 ದಿನಗಳ ಮತ್ತೊಂದು ರಾಷ್ಟ್ರೀಯ ಸಮ್ಮೇಳನ ಸಂದರ್ಭದಲ್ಲಿ ರಶೀದಿ ಪುಸ್ತಕ ಸಂಖ್ಯೆ: 21ರಲ್ಲಿ ಕ್ರ.ಸಂ2001 ರಿಂದ 2099ರ ವರೆಗಿನ ರಶೀದಿಗಳಲ್ಲಿ ಡಾ.ಶೇಖರ್ ನಾಯ್ಕ, ಸಂಯೋಜಕರುರವರು ರೂ.1,09,300/-ಗಳನ್ನು ಸ್ವೀಕರಿಸಿರುತ್ತಾರೆ. ಈ ಸ್ವೀಕೃತಿಗಳಿಗೆ ಸಂಬಂಧಿಸಿದಂತೆ ಮೂಲ ಚಲನ್ ಹಾಗೂ ಸ್ವೀಕರಿಸಿದ ಮೊತ್ತವನ್ನು ಬ್ಯಾಂಕ್‌ಗೆ ಜಮೆ ಮಾಡಿರುವ ವಿವರವನ್ನು ಹಾಜರು ಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 34/ 12.08.2021ರ ಮೂಲಕ ಕೋರಲಾಗಿದ್ದು, ಇದಕ್ಕೆ ವಿಶ್ವ ವಿದ್ಯಾನಿಲಯದವರು ನೀಡಿರುವ ಉತ್ತರದಲ್ಲಿ ಸಮ್ಮೇಳನದಲ್ಲಿ ಭಾಗವಹಿಸಿದ ವ್ಯಕ್ತಿಗಳಿಂದ ನೋಂದಣಿ ಶುಲ್ಕವನ್ನು ಪಡೆದು ಸಮ್ಮೇಳನಕ್ಕೆ ವೆಚ್ಚ ಭರಿಸಲಾಗಿದೆ ಎಂದು ಉತ್ತರಿಸಿರುತ್ತಾರೆ. ಹಾಗೂ ವೆಚ್ಚಕ್ಕೆ ಸಂಬಂಧಿಸಿದಂತೆ ಕಡತಗಳು/ವೋಚರುಗಳನ್ನು ಹಾಜರು ಪಡಿಸಿರುವುದಿಲ್ಲ.

ವಿಶ್ವ ವಿದ್ಯಾನಿಲಯಕ್ಕೆ ಸ್ವೀಕೃತಗೊಂಡ ಯಾವುದೇ ಮೊತ್ತವನ್ನು ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ-4ರ ಅನುಸಾರ ವಿಶ್ವ ವಿದ್ಯಾನಿಲಯದ ಲೆಕ್ಕಕ್ಕೆ ಜಮೆ ಮಾಡಬೇಕಾಗಿರುತ್ತದೆಯೋ ವಿನಹ ಸ್ವೀಕೃತಿಯನ್ನು ನೇರವಾಗಿ ವೆಚ್ಚಭರಿಸಲು ಅವಕಾಶವಿರುವುದಿಲ್ಲ.. ಆದರೆ ಮೇಲೆ ವಿವರಿಸಿದಂತೆ 02 ರಶೀದಿ ಪುಸ್ತಕಗಳಿಂದ ವಸೂಲಿಸಿದ ಮೊತ್ತವನ್ನು ವಿಶ್ವ ವಿದ್ಯಾನಿಲಯದ ಬ್ಯಾಂಕ್ ಖಾತೆಗೆ ಜಮೆ ಮಾಡದೆ ವೆಚ್ಚ ಮಾಡಿರುವುದು ಕರ್ನಾಟಕ ಆರ್ಥಿಕ ಸಂಹಿತೆಯ ನಿಬಂಧನೆಗಳನ್ನು ಉಲ್ಲಂಘನೆ ಮಾಡಿದಂತಾಗಿರುತ್ತದೆ. ಈ ರೀತಿ ನಿಯಮಬಾಹಿರವಾಗಿ ಹಣಕಾಸು ವ್ಯವಹರಣೆ ಮಾಡಿರುವವರ ವಿರುದ್ಧ ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ ಹಾಗೂ ವೋಚರುಗಳನ್ನು ಹಾಜರು ಪಡಿಸುವವರೆಗೆ ಮಾಡಿರುವ ವೆಚ್ಚ ರೂ.1,48,100/-ಗಳನ್ನು ಆಕ್ಷೇಪಣೆಯಲ್ಲಿರಿಸಿದೆ.

## 11. ವಿಶ್ವ ವಿದ್ಯಾನಿಲಯದ ನಿಧಿ

ಕರ್ನಾಟಕ ವಿಶ್ವ ವಿದ್ಯಾ ನಿಲಯಗಳ ಅಧಿ ನಿಯಮ - 2000ದಲ್ಲಿನ ಪ್ರಕರಣ - 46ರ ಅನುಸಾರ ಮಂಗಳೂರು ವಿಶ್ವ ವಿದ್ಯಾನಿಲಯವು ತನ್ನದೇ ಆದ ನಿಧಿಯನ್ನು ಹೊಂದಿದ್ದು, ವಿಶ್ವ ವಿದ್ಯಾನಿಲಯಕ್ಕೆ ಸ್ವೀಕೃತವಾಗುವ ಕೇಂದ್ರ ಸರ್ಕಾರದ ಅನುದಾನ, ರಾಜ್ಯ ಸರ್ಕಾರದ ಅನುದಾನ, ಕೊಡುಗೆಗಳು, ದತ್ತಿಗಳು, ವಿವಿಧ ರೀತಿಯ ಶುಲ್ಕಗಳು, ವಿದೇಶಿ ಸರ್ಕಾರ/ ಸಂಸ್ಥೆಗಳಿಂದ ಸ್ವೀಕೃತವಾದ ಅನುದಾನಗಳು, ದೇಣಿಗೆ ಹಾಗೂ ಇತರೆ ಸಂಪನ್ಮೂಲಗಳ ಮೊಬಲಗುಗಳು ವಿಶ್ವ ವಿದ್ಯಾನಿಲಯದ ನಿಧಿಯಾಗಿದ್ದು, ಈ ನಿಧಿಯನ್ನು ರಾಷ್ಟ್ರೀಕೃತ/ ಅನುಸೂಚಿತ ಬ್ಯಾಂಕಿನಲ್ಲಿ ನಿರ್ವಹಿಸಬೇಕಾಗಿರುತ್ತದೆ.



**ಸಾರ್ವಜನಿಕ ದತ್ತಿಗಳು/ ಕೊಡುಗೆಗಳು**

ಮಂಗಳೂರು ವಿಶ್ವ ವಿದ್ಯಾಲಯದ ನಿಧಿಯ ನಿರ್ವಹಣೆಯನ್ನು ರಾಷ್ಟ್ರೀಕೃತ/ಅನುಸೂಚಿತ ಬ್ಯಾಂಕಿನಲ್ಲಿ ಒಂದೇ ಬ್ಯಾಂಕ್ ಖಾತೆಯಲ್ಲಿ ನಿರ್ವಹಣೆ ಮಾಡುವ ಬದಲಿಗೆ ವ್ಯವಹರಣೆಗಳಿಗನುಸಾರವಾಗಿ 190 ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲಾಗುತ್ತಿದೆ. ಅಲ್ಲದೆ ಒಂದೇ ವ್ಯವಹರಣೆ ಉದ್ದೇಶದ ಸ್ವೀಕೃತಿ ಮತ್ತು ಪಾವತಿಗಳಿಗಾಗಿ ಎರಡು ಪ್ರತ್ಯೇಕ ಬ್ಯಾಂಕ್ ಖಾತೆಗಳನ್ನು ನಿರ್ವಹಿಸುತ್ತಿರುವುದು ಹಾಗೂ ಪಾವತಿ ಖಾತೆಗಳಿಗೆ ಸ್ವೀಕೃತಿ ಖಾತೆಗಳಿಂದ ಹಣ ವರ್ಗಾಯಿಸಿಕೊಂಡು ವೆಚ್ಚ ಮಾಡುತ್ತಿರುವುದು ಸಹ ಸರಿಯಾದ ಕ್ರಮವಾಗಿರುವುದಿಲ್ಲ.

ವಿಶ್ವ ವಿದ್ಯಾನಿಲಯವು ಜೋಡಿ ನಮೂದು ಸಂಚಯನ ಲೆಕ್ಕಪದ್ಧತಿಯನ್ನು (Double Entry Accounting System) ಅಳವಡಿಸಿ ಕೊಳ್ಳದಿರುವುದರಿಂದ ವಿಶ್ವ ವಿದ್ಯಾನಿಲಯಕ್ಕೆ ಹಿಂದಿನ ವರ್ಷಗಳಿಂದ ಬರಬೇಕಾದ ಬಾಕಿ ಹಾಗೂ ವಿಶ್ವ ವಿದ್ಯಾನಿಲಯವು ಪಾವತಿಸಬೇಕಾದ ಹಿಂದಿನ ವರ್ಷಗಳ ಬಾಕಿ ಅಂದರೆ ಹೊಣೆಗಾರಿಕೆಯನ್ನು ಲೆಕ್ಕಪರಿಶೋಧನೆಯಲ್ಲಿ ಖಚಿತ ಪಡಿಸಲು ಸಾಧ್ಯವಾಗಿರುವುದಿಲ್ಲ. ಹೀಗಾಗಿ ಪ.ಜಾತಿ/ ವರ್ಗಗಳ ಹಾಗೂ ಹಿಂದುಳಿದವರ್ಗಗಳ ವಿದ್ಯಾರ್ಥಿಗಳಿಗೆ ವಿಶ್ವ ವಿದ್ಯಾನಿಲಯವು ಸರ್ಕಾರದ ಆದೇಶಾನುಸಾರ ನೀಡಿರುವ ಪ್ರವೇಶ ಶುಲ್ಕ ರಿಯಾಯಿತಿ ಮೊತ್ತ ಸರ್ಕಾರದಿಂದ ಹಿಂಭರ್ತಿಯಾಗದೇ ಹಲವು ವರ್ಷಗಳಿಂದ ಬಾಕಿ ಇದ್ದು, ಇದು ವಾರ್ಷಿಕ ಲೆಕ್ಕಗಳಲ್ಲಿ ಬಿಂಬಿತವಾಗಿರುವುದಿಲ್ಲ. ಇದಲ್ಲದೆ ವಿಶ್ವ ವಿದ್ಯಾನಿಲಯಗಳ ಆಸ್ತಿಗಳಿಂದ ಬರಬೇಕಾದ ರಾಜಸ್ವದ ಬೇಡಿಕೆ, ಸಂಗ್ರಹಣೆ ಮತ್ತು ಬಾಕಿ ತಃಖ್ತೆಯನ್ನು ಕೂಡ ವಿಶ್ವವಿದ್ಯಾನಿಲಯವು ತಯಾರಿಸಿರುವುದಿಲ್ಲ. ಕಾಲ ಕಳೆದಂತೆ ಈ ಬಾಕಿ ಮೊತ್ತಗಳು ವಸೂಲಾತಿಯಾಗದೇ ಬಿಟ್ಟು ಹೋಗಿ ವಿಶ್ವವಿದ್ಯಾನಿಲಯಕ್ಕೆ ನಷ್ಟವಾಗುವ ಸಂಭವವಿರುತ್ತದೆ. ವಿಶ್ವ ವಿದ್ಯಾನಿಯವು ನಿರ್ವಹಿಸುತ್ತಿರುವ ಬ್ಯಾಂಕ್ ಖಾತೆಗಳನ್ನು ನಿಧಿವಾರು ನಿರ್ವಹಿಸಿ, ಲೆಕ್ಕಪತ್ರಗಳ ನಿರ್ವಾಹಣೆ ಮಾಡುವಾಗ ವರ್ಗೀಕರಣ ಮಾಡಿ ದಾಖಲಿಕರಣ ಮಾಡ ಬಹುದಾಗಿರುತ್ತದೆ, ನಿಧಿವಾರು ಬ್ಯಾಂಕ್ ಖಾತೆಯನ್ನು ನಿರ್ವಹಿಸುವುದರಿಂದ ಹಾಲಿ ನಿರ್ವಹಣೆ ಮಾಡುತ್ತಿರುವ ಬ್ಯಾಂಕ್ ಖಾತೆಗಳ ಸಂಖ್ಯೆಗಳನ್ನು ಕಡಿಮೆ ಮಾಡಿಕೊಳ್ಳಬಹುದಾಗಿದೆ ಮತ್ತು ಇದರಿಂದ ಆರ್ಥಿಕ ವ್ಯವಹಾರಗಳ ನಿಖರತೆಯನ್ನು ತಿಳಿಯಲು ಸಹಕಾರಿಯಾಗುತ್ತದೆ. ಈ ಬಗ್ಗೆ ವಿಶ್ವ ವಿದ್ಯಾನಿಯಲವು ಪರಿಶೀಲಿಸಿ ಕ್ರಮ ವಹಿಸ ಬಹುದಾಗಿರುತ್ತದೆ.

**11.1 ವಿಶ್ವ ವಿದ್ಯಾನಿಲಯದ ಆರ್ಥಿಕ ವ್ಯವಹರಣೆಯ ವಿವರ**

**ಲೆಕ್ಕತಪಾಸಣೆ ಪ್ರಕಾರ (ನಗದು ಪುಸ್ತಕಗಳ ಕ್ರೋಢೀಕೃತ ಲೆಕ್ಕ)**

**ವಿಶ್ವ ವಿದ್ಯಾನಿಲಯದ ಬ್ಯಾಂಕ್ ಪುಸ್ತಕಗಳು ಹಾಗೂ ನಗದು ಪುಸ್ತಕಗಳನ್ವಯ 2019-20ನೇ ಸಾಲಿನ ವ್ಯವಹರಣೆಯ ವಿವರಗಳು ಈ ಕೆಳಕಂಡಂತಿರುತ್ತವೆ.**

**ವಿಶ್ವವಿದ್ಯಾನಿಲಯದ 2019-20ನೇ ಸಾಲಿನ ಆರ್ಥಿಕ ಸ್ಥಿತಿಗತಿಯ ವಿವರ**

| ಕ್ರ.ಸಂ | ವಿವರಗಳು | | ಮೊತ್ತ (ರೂ.ಗಳಲ್ಲಿ) | ಮೊತ್ತ (ರೂ.ಗಳಲ್ಲಿ) |
|---|---|---|---|---|
| 1 | **ಪ್ರಾರಂಭಿಕ ಶಿಲ್ಕು** | | | 30,97,84,980 |
| | **ಭಾಗ-1** ಆದಾಯ | ಅನುದಾನಗಳು | 66,76,64,527 | |
| | | ಠೇವಣಿ ಮೇಲಿನ ಬಡ್ಡಿ | 2,26,15,800 | |
| | | ಬ್ಯಾಂಕ್ ಬಡ್ಡಿ | 92,70,324 | |
| | | ಶುಲ್ಕಗಳು ಮತ್ತು ಇತರೆ | 71,67,82189 | |
| 2 | **ಒಟ್ಟು** | | **1,41,63,32,840** | |
| | **ಭಾಗ-2 ಇತರೇ ಸ್ವೀಕೃತಿ (ಹೊಂದಾಣಿಕೆ)** | ನಿಶ್ಚಿತ ಠೇವಣಿ ಹಿಂಪಡೆದಿರುವುದು | 67,77,69,848 | 435,50,81745 |
| | | ಆಂತರಿಕ ನಿಧಿ ಸ್ವೀಕೃತಿ | 226,09,79,057 | |
| 3 | **ಒಟ್ಟು** | | 293,87,48,905 | |

| | | | | |
|---|---|---|---|---|
| | | | **ಒಟ್ಟು** | **466,48,66,725** |
| 4 | **ಭಾಗ-1 ವೆಚ್ಚ** | ಬ್ಯಾಂಕ್ಶುಲ್ಕ | 3,75,027 | **428,03,61,600** |
| | | ವೆಚ್ಚಗಳು | 138,28,48,816 | |
| | | ಒಟ್ಟು | **138,32,23,843** | |
| | **ಭಾಗ-2 ಇತರೆ ಪಾವತಿ (ಹೊಂದಾಣಿಕೆ)** | ನಿಶ್ಚಿತಠೇವಣಿಗಳಲ್ಲಿಹೂಡಿಕೆ | 64,83,60,000 | |
| | | ಆಂತರಿಕವರ್ಗಾವಣೆಗಳು | 224,87,77,757 | |
| 5 | ಅಂತಿಮ ಶಿಲ್ಕು (ಲೆಕ್ಕ ತಪಾಸಣೆಯನ್ವಯ) | | | 38,45,05,125 |
| 6 | ಅಂತಿಮ ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದನ್ವಯ) | | | 39,57,02,345 |
| 7 | ವ್ಯತ್ಯಾಸ | | | 1,11,97,220 |

ಬ್ಯಾಂಕ್ಖಾತೆವಾರು ಆರ್ಥಿಕ ವಿವರಗಳನ್ನು ಹಾಗೂ ನಗದು ಪುಸ್ತಕ ಮತ್ತು ಬ್ಯಾಂಕ್ ಪುಸ್ತಕಗಳ ನಡುವಿನ ವ್ಯತ್ಯಾಸಕ್ಕೆ ಕಾರಣಗಳನ್ನು ಅನುಬಂಧ-5ರಲ್ಲಿ ವಿವರಿಸಲಾಗಿದೆ.

ವಿಶ್ವವಿದ್ಯಾನಿಲಯದ 2019-20ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಪ್ರಕಾರ ಅಂತಿಮಶಿಲ್ಕು ರೂ.38,09,97,055/- ಗಳಿದ್ದು, ಲೆಕ್ಕ ಪರಿಶೋಧನೆಯ ಸಮಯದಲ್ಲಿ ತಯಾರಿಸಿದ ನಗದು ಪುಸ್ತಕಗಳ ಕ್ರೋಢೀಕೃತ ಲೆಕ್ಕಗಳನ್ವಯ ಅಂತಿಮ ಶಿಲ್ಕುರೂ.38,45,05,125/- ಇದ್ದು, ವಾರ್ಷಿಕ ಲೆಕ್ಕಗಳಲ್ಲಿ ತೋರಿಸಿರುವ ಅಂತಿಮ ಶಿಲ್ಕಿಗೂ ನಗದು ಪುಸ್ತಕಗಳ ಕ್ರೋಢೀಕೃತ ಲೆಕ್ಕಗಳ ಅಂತಿಮ ಶಿಲ್ಕಿಗೂ ರೂ.35,08,070/-ಗಳ ವ್ಯತ್ಯಾಸವಿರುತ್ತದೆ. ವ್ಯತ್ಯಾಸಕ್ಕೆ ಕಾರಣಗಳನ್ನು ಈ ಕೆಳಕಂಡಂತೆ ಪಟ್ಟಿಮಾಡಲಾಗಿದೆ.

| **ವಿವರ** | **ಮೊತ್ತ (ರೂ.ಗಳಲ್ಲಿ)** | **ಮೊತ್ತ (ರೂ.ಗಳಲ್ಲಿ)** |
|---|---|---|
| ಸಾಮಾನ್ಯ ನಿಧಿ ಖಾತೆ ಸಂಖ್ಯೆ: 10094965034 ರಲ್ಲಿ ರೂ.35,00,000/-ಗಳನ್ನು ನಗದು ಪುಸ್ತಕದಲ್ಲಿ ಇತರೆ ಸಾಮಾನ್ಯ ಖಾತೆಗೆ ವರ್ಗಾಯಿಸಿದೆ ವೆಚ್ಚವೆಂದು ತೋರಿಸಲಾಗಿದೆ. ಆದರೆ ಸದರಿ ಮೊತ್ತವು ಯಾವುದೇ ಖಾತೆಗೆ ವರ್ಗಾವಣೆಯಾಗದೆ ಸದರಿ ಖಾತೆಯಲ್ಲಿ ಇರುವುದರಿಂದ ಲೆಕ್ಕ ಪರಿಶೋಧನೆಯಲ್ಲಿ ಈ ಖಾತೆಯಲ್ಲಿಯೇ ಅಂತಿಮ ಶಿಲ್ಕನಲ್ಲಿ ತೋರಿಸಿದೆ. | **3500000** | |
| 1. ಯು.ಜಿ.ಸಿ XII ಯೋಜನೆ ಖಾತೆ ಸಂಖ್ಯೆ: 32606105169ರಲ್ಲಿ ರೂ.300/-ಗಳ ಸ್ವೀಕೃತಿಯನ್ನು ಕಡಿಮೆ ತೆಗೆದು ಕೊಂಡಿರುವುದು | **300** | |
| ಇನ್ಸ್ಪೈರ್ ಶಿಷ್ಯವೇತನ ಖಾತೆ ಸಂಖ್ಯೆ: 32203076879ರಲ್ಲಿ ರೂ. 18532/-ಗಳ ಸ್ವೀಕೃತಿಯನ್ನು ಕಡಿಮೆ ತೆಗೆದು ಕೊಂಡಿರುವುದು | **18532** | |
| | | **3518832** |
| **ಕಳೆಯಬೇಕಾಗಿರುವ ಮೊತ್ತ** | | |
| 1. ಬ್ಯಾರಿ ಅಧ್ಯಯನ ಪೀಠ ಖಾತೆ ಸಂಖ್ಯೆ:112401011003766ರಲ್ಲಿ ರೂ.1000/-ಗಳ ಸ್ವೀಕೃತಿಯನ್ನು ಹೆಚ್ಚುವರಿಯಾಗಿ ತೆಗೆದು ಕೊಂಡಿರುವುದು. | **-** | **1000** |
| 2. ಸಾಮಾನ್ಯ ನಿಧಿ ಖಾತೆ ಸಂಖ್ಯೆ: 1122200050706g ರೂ 2187.00ಗಳ ಸ್ವೀಕೃತಿಯನ್ನು ಹೆಚ್ಚುವರಿಯಾಗಿ ತೆಗೆದು ಕೊಂಡಿರುವುದು | **-** | **2187** |
| 3. ಸಾಮಾನ್ಯ ನಿಧಿ ಖಾತೆ ಸಂಖ್ಯೆ: 18622000400005ರ ರೂ 7370.00ಗಳ ಸ್ವೀಕೃತಿಯನ್ನು ಹೆಚ್ಚುವರಿಯಾಗಿ ತೆಗೆದುಕೊಂಡಿರುವುದು | **-** | **7370** |
| 4. ಎಂ. ಗಣೇಶ ಪೈ ಸ್ಮಾರಕ ಪೀಠ ಖಾತೆ ಸಂಖ್ಯೆ: 109801010009015ರ ರೂ130/-ಗಳ | **-** | **130** |

| | | | |
|---|---|---|---|
| | ಸ್ವೀಕೃತಿಯನ್ನು ಹೆಚ್ಚುವರಿಯಾಗಿ ತೆಗೆದುಕೊಂಡಿರುವುದು | | |
| 5. | ಕೆ.ಎಸ್. ಉಮಾಪತಿಯವರ ವಿದ್ಯಾರ್ಥಿ ವೇತನ ಖಾತೆ ಸಂಖ್ಯೆ: 112401010006782 ರ ರೂ 71/-ಗಳ ಸ್ವೀಕೃತಿಯನ್ನು ಹೆಚ್ಚುವರಿಯಾಗಿ ತೆಗೆದುಕೊಂಡಿರುವುದು.. | - | 75 |
| | | ಒಟ್ಟು | 10762.00 |
| | | ಒಟ್ಟುಮೊತ್ತ | 3508070 |

ಮೇಲ್ಕಂಡ ಕೋಷ್ಟಕದಲ್ಲಿ ವಿವರಿಸಿರುವಂತೆ, ನಗದು ಪುಸ್ತಕದಲ್ಲಿ ಬಡ್ಡಿ ಸ್ವೀಕೃತಿ ತೆಗೆದು ಕೊಳ್ಳದಿರುವುದು, ಕೆಲವು ಖಾತೆಯಲ್ಲಿ ಹಿಂದಿನ ಸಾಲಿನ ಆರಂಭಿಕ ಶಿಲ್ಕಿನಲ್ಲಿನ ವ್ಯತ್ಯಾಸ ಹಾಗೂ ನಗದು ಪುಸ್ತಕಕ್ಕಿಂತ ವಾರ್ಷಿಕ ಲೆಕ್ಕ ಪತ್ರದಲ್ಲಿ ಹೆಚ್ಚುವರಿ ವೆಚ್ಚವನ್ನು ತೆಗೆದು ಕೊಂಡಿರುವುದರಿಂದ ವಾರ್ಷಿಕ ಲೆಕ್ಕಪತ್ರ ಹಾಗೂ ಕ್ರೋಢೀಕೃತ ನಗದು ಪುಸ್ತಕಗಳ ಲೆಕ್ಕದ ಅಂತಿಮ ಶಿಲ್ಕುಗೂ ವ್ಯತ್ಯಾಸ ಕಂಡು ಬಂದಿರುತ್ತದೆ. ವ್ಯತ್ಯಾಸವನ್ನು ಸಂಬಂಧಿತ ನಗದು ಪುಸ್ತಕ/ ವಾರ್ಷಿಕ ಲೆಕ್ಕಪತ್ರಗಳಲ್ಲಿ ಪರಿಗಣಿಸಿ ಲೆಕ್ಕ ಸಮನ್ವಯಗೊಳಿಸಿ ಸರಿಪಡಿಸಿ ಕೊಳ್ಳುವಂತೆ ಸೂಚಿಸಿದೆ.

ವಿಶ್ವ ವಿದ್ಯಾನಿಲಯವು ನಿರ್ವಹಿಸುತ್ತಿರುವ ಒಟ್ಟು ನೂರತೊಂಬತ್ತು (190) ಖಾತೆಗಳಲ್ಲಿ ಇರುವ ನಗದಾಗದ ಧನಾದೇಶಗಳ ಮೊತ್ತ ರೂ. 1,11,97,220/- ಗಳಾಗಿದ್ದು, ವಿವರವನ್ನು ಅನುಬಂಧ-5(ಎ)ರಲ್ಲಿ ನೀಡಲಾಗಿದೆ. ನಗದು ಪುಸ್ತಕದ ಅಂತಿಮ ಶಿಲ್ಕನ್ನು ಬ್ಯಾಂಕ್ ಪಾಸ್ ಪುಸ್ತಕದ ಅಂತಿಮ ಶಿಲ್ಕಿನೊಡನೆ ಪ್ರತಿಮಾಹೆ ಲೆಕ್ಕ ಸಮನ್ವಯ ಮಾಡದಿರುವುದು ಈ ರೀತಿ ನಗದಾಗದ ಧನಾದೇಶಗಳ ಶಿಲ್ಕು ಬಾಕಿ ಉಳಿಯಲು ಕಾರಣವಾಗಿರುತ್ತದೆ. ನಗದಾಗದಿರುವ ಧನಾದೇಶಗಳ ಸಿಂಧುತ್ವದ ಅವಧಿ ಮೀರಿರುವ ಧನಾದೇಶಗಳನ್ನು ರದ್ದುಪಡಿಸಿ ನಗದು ಪುಸ್ತಕದಲ್ಲಿ ಸ್ವೀಕೃತಿ ಪಡೆದು ಲೆಕ್ಕಸಮನ್ವಯಗೊಳಿಸಲು ಮತ್ತು ಪ್ರತಿ ಮಾಹೆ ಲೆಕ್ಕಸಮನ್ವಯ ಕಾರ್ಯನಿರ್ವಹಿಸಲು ತಿಳಿಸಿದೆ. ಈ ಕುರಿತು ಕೈಗೊಂಡ ಕ್ರಮದ ವಿವರಗಳನ್ನು ಮುಂದಿನ ಲೆಕ್ಕಪರಿಶೋಧನೆಗೆ ಅನುಪಾಲನಾ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

**ಆ). ವಾರ್ಷಿಕ ಲೆಕ್ಕ ಪತ್ರದ ಪ್ರಕಾರ:**

ವಿಶ್ವ ವಿದ್ಯಾನಿಲಯದಲ್ಲಿ 2019-20ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ವಿವರಿಸಿರುವಂತೆ ಸ್ವೀಕೃತಿ ಮತ್ತು ಪಾವತಿಯನ್ನು ಯೋಜನೇತರ (ಸಾಮಾನ್ಯ), ಯೋಜನೆ(ಅಭಿವೃದ್ಧಿ), ಯು.ಜಿ.ಸಿ ಅನುದಾನ, ದತ್ತಿನಿಧಿ ಹಾಗೂ ಪ್ರಾಯೋಜಿತ ಕಾರ್ಯಕ್ರಮಗಳೆಂದು ಪ್ರತ್ಯೇಕ ಬ್ಯಾಂಕ್ ಖಾತೆಗಳನ್ನು ನಿರ್ವಹಿಸಿ, ಅದರನುಸಾರ ಲೆಕ್ಕಗಳನ್ನು ಲೆಕ್ಕಶೀರ್ಷಿಕೆವಾರು ಸ್ವೀಕೃತಿ ಮತ್ತು ಪಾವತಿ ನಮೂನೆಗಳಲ್ಲಿ ನಿರ್ವಹಿಸಲಾಗಿದೆ. ಈ ನಮೂನೆಗಳಲ್ಲಿನ ನಮೂದುಗಳನ್ನು ಪರಿಶೀಲಿಸಿದಾಗ, ಸ್ವೀಕೃತಿ ಮತ್ತು ಪಾವತಿಗಳನ್ನು ನಾಲ್ಕು ಭಾಗಗಳಾಗಿ ವಿಂಗಡಣೆ ಮಾಡಿ ವಿಶ್ವ ವಿದ್ಯಾನಿಲಯಕ್ಕೆ ಬಂದ ಅನುದಾನ, ವಿಶ್ವ ವಿದ್ಯಾನಿಲಯದ ರಾಜಸ್ವ, ಪರೀಕ್ಷಾ ಚಟುವಟಿಕೆಗಳು, ದೂರಶಿಕ್ಷಣ ವಿಭಾಗ, ಸಾಲ ಮತ್ತು ಠೇವಣಿ ಹಾಗೂ ಇತರೇ ಸ್ವೀಕೃತಿಗಳನ್ನು ಭಾಗ-1ರಲ್ಲಿ, ಅಭಿವೃದ್ಧಿ ಯೋಜನೆಗಳು, ಎಸ್‌ಇಪಿ/ಟಿಎಸ್‌ಪಿ, ಸಂಶೋಧನೆಗೆ ಸಂಬಂಧಿಸಿದ ಸ್ವೀಕೃತಿ ಮತ್ತು ಪಾವತಿಗಳನ್ನು ಭಾಗ-2ರಲ್ಲಿ, ಯು.ಜಿ.ಸಿ. ಕಾರ್ಯಕ್ರಮಗಳಿಗೆ ಸಂಬಂಧಿಸಿದ ಸ್ವೀಕೃತಿ ಮತ್ತು ಪಾವತಿಗಳನ್ನು ಭಾಗ-3ರಲ್ಲಿ ಹಾಗೂ ದತ್ತಿನಿಧಿ ಮತ್ತು ಪ್ರಾಯೋಜಿತ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಸ್ವೀಕೃತಿ ಮತ್ತು ಪಾವತಿಗಳನ್ನು ಭಾಗ-4ರಲ್ಲಿ ತೆಗೆದುಕೊಳ್ಳಲಾಗಿದೆ. ವಾರ್ಷಿಕ ಲೆಕ್ಕಪತ್ರದಲ್ಲಿ ಒಟ್ಟು ಆದಾಯದ ಸ್ವೀಕೃತಿಯನ್ನು ರೂ. 210,90,98,315/- ಗಳೆಂದು ಹಾಗೂ ಒಟ್ಟು ವೆಚ್ಚವನ್ನು ರೂ.203,78,96,106/-ಗಳೆಂದು ತೋರಿಸಲಾಗಿದೆ. ಆದರೆ, ಲೆಕ್ಕ ಪರಿಶೋಧನೆಯಲ್ಲಿ ಗಮನಿಸಿದಂತೆ ಸಾಲ ಮತ್ತು ಠೇವಣಿ (Debt & Deposits) ಮೊತ್ತ ರೂ.58,11,40,547/- ಹಾಗೂ ಪಿಂಚಣಿ ಖಾತೆಯಲ್ಲಿ ಠೇವಣಿ ಹಿಂಪಡೆದ ಮೊತ್ತ ರೂ.7,99,99,999/- ಹಾಗೂ ಯು.ಜಿ.ಸಿ ಮತ್ತು ವಿಶೇಷ ನಿಧಿಯಲ್ಲಿ (UGC & Special Funds) ಠೇವಣಿ ಹಿಂಪಡೆದ ಮೊತ್ತ

ರೂ. 99,00,000/- ಹಾಗೂ ಆಂತರಿಕ ನಿಧಿ ಸ್ವೀಕೃತಿ ಮೊತ್ತ ರೂ. 9,87,916/- ಮತ್ತು ಪ್ರಾಯೋಜಿತ ಕಾರ್ಯಕ್ರಮಗಳು ಮತ್ತು ಯೋಜನೆಗಳಲ್ಲಿ (Sponsored Schemes & Projects) ಠೇವಣಿ ಹಿಂಪಡೆದ ಮೊತ್ತ ರೂ.1,97,12,013/- ಮತ್ತು ದತ್ತಿ ಮತ್ತು ದೇಣಿಗೆ ನಿಧಿಯಲ್ಲಿ (Endowment & Donations) ಠೇವಣಿ ಹಿಂಪಡೆದ ಮೊತ್ತ ರೂ.10,25,000/- ಗಳು ಸೇರಿ ಒಟ್ಟು ರೂ. 69,27,65,475/-ಗಳನ್ನು ಆದಾಯ ಎಂದು ತೋರಿಸಲಾಗಿದೆ. ಆದರೆ, ಇವುಗಳು ವಾಸ್ತವಿಕ ಆದಾಯವಾಗಿರುವುದಿಲ್ಲ. ಆದ್ದರಿಂದ 2019-

20ನೇ ಸಾಲಿನ ವಾಸ್ತವಿಕ ಆದಾಯದ ಸ್ವೀಕೃತಿಯು ಒಟ್ಟು **ರೂ.141,63,32,840/-**ಗಳಾಗಿರುತ್ತದೆ. ಅದೇ ರೀತಿ ಸಾಲ ಮತ್ತು ಠೇವಣಿ ಪಾವತಿ (Debt & Deposits) ಮೊತ್ತ ರೂ.57,04,61,177/-, ದತ್ತಿ ಮತ್ತು ದೇಣಿಗೆ ನಿಧಿಯಿಂದ (Endowment & Donations) ಠೇವಣಿ ಹೂಡಿಕೆ ಮೊತ್ತ ರೂ.4,52,25,000/- ಹಾಗೂ ಯು.ಜಿ.ಸಿ. ಮತ್ತು ವಿಶೇಷ ನಿಧಿಯಿಂದ (UGC & Special Funds) ಠೇವಣಿ ಹೂಡಿಕೆ ಮೊತ್ತ ರೂ.1,10,00,000/- ಹಾಗೂ ಪಿಂಚಣಿ ಖಾತೆಯಿಂದ (Pension) ಠೇವಣಿ ಹೂಡಿಕೆ ಮೊತ್ತ ರೂ.2,10,00,000/- ಹಾಗೂ ಅಂತರಿಕ ವರ್ಗಾವಣೆ ಪಾವತಿ ಮೊತ್ತ ರೂ 69,86,086/- ಗಳು ಸೇರಿ ಒಟ್ಟು ರೂ. 65,46,72,263/-ಗಳನ್ನು ವೆಚ್ಚವೆಂದು ತೋರಿಸಲಾಗಿದೆ. ಆದರೆ, ಇವುಗಳು ವಾಸ್ತವಿಕ ವೆಚ್ಚವಾಗಿರುವುದಿಲ್ಲ. ಆದ್ದರಿಂದ 2019-20ನೇ ಸಾಲಿನ ಒಟ್ಟು ವಾಸ್ತವಿಕ ವೆಚ್ಚವು ಬ್ಯಾಂಕ್ ಶುಲ್ಕವೂ ಸೇರಿದಂತೆ **ರೂ.138,32,23,843/-**ಗಳಾಗಿರುತ್ತದೆ.ಈ ಅಂಕಿ ಅಂಶಗಳನ್ನು ವಿಶ್ವ ವಿದ್ಯಾನಿಲಯದವರು ಪರಿಶೀಲಿಸಿ ವಾರ್ಷಿಕ ಲೆಕ್ಕಗಳಲ್ಲಿ ತಿದ್ದುಪಡಿಗಳನ್ನು ಅಳವಡಿಸಿಕೊಳ್ಳಲು ಸೂಚಿಸಿದೆ.

**ಲೆಕ್ಕಗಳ ಪ್ರಕಾರ ಆರ್ಥಿಕ ಪರಿಸ್ಥಿತಿಯ ವಿವರ ಕೆಳಗಿನಂತಿವೆ.**

(ರೂ. ಗಳಲ್ಲಿ)

| ಕ್ರಸಂ | ವಿವರ | | ಮೊತ್ತ | ಮೊತ್ತ |
|---|---|---|---|---|
| 1 | 2019-20ನೇ ಸಾಲಿನ ಪ್ರಾರಂಭಿಕ ಶಿಲ್ಕು | | | 30,97,94,846 |
| 2 | **ಸ್ವೀಕೃತಿ** | ಭಾಗ–1 (ಯೋಜನೇತರ ಸ್ವೀಕೃತಿ) | 192,73,28,843 | |
| | | ಭಾಗ–2 (ಯೋಜನಾ ಸ್ವೀಕೃತಿ) | 1,00,00,000 | |
| | | ಭಾಗ–3 (ಯು.ಜಿ.ಸಿ. ಸ್ವೀಕೃತಿ) | 7,98,85,135 | |
| | | ಭಾಗ–4 (ದತ್ತಿ ಪೀಠಗಳು ಹಾಗೂ ಪ್ರಾಯೋಜಿತ ಕಾರ್ಯಕ್ರಮಗಳ ಸ್ವೀಕೃತಿ) | 9,18,84,337 | 210,90,98,315 |
| 3 | **ಒಟ್ಟು ಮೊತ್ತ**(1+2) | | | **241,88,93,161** |
| 4 | **ಪಾವತಿ** | ಭಾಗ–1 (ಯೋಜನೇತರ ವೆಚ್ಚ) | 188,16,28,208 | |
| | | ಭಾಗ–2 (ಯೋಜನಾ ವೆಚ್ಚ) | 2,50,55,498 | |
| | | ಭಾಗ–3 (ಯು.ಜಿ.ಸಿ ವೆಚ್ಚ) | 3,21,63,973 | |
| | | ಭಾಗ–4 (ದತ್ತಿ ಪೀಠಗಳು ಹಾಗೂ ಪ್ರಾಯೋಜಿತ ಕಾರ್ಯಕ್ರಮಗಳ ವೆಚ್ಚ) | 9,90,48,427 | 203,78,96,106 |
| 5 | 2019-20ನೇ ಸಾಲಿನ ಅಂತಿಮ ಶಿಲ್ಕು (3-4) | | | **38,09,97,055** |

ವಿಶ್ವ ವಿದ್ಯಾನಿಲಯದ ಪ್ರಸ್ತುತ ಸಾಲಿನ ಸ್ವೀಕೃತಿ ಮತ್ತು ವೆಚ್ಚಗಳನ್ನು ಹಿಂದಿನ ಎರಡು ವರ್ಷಗಳ ಸ್ವೀಕೃತಿ ಮತ್ತು ವೆಚ್ಚಗಳ ಅಂಕಿ ಅಂಶಗಳೊಡನೆ ತುಲನೆ ಮಾಡಿ ನೋಡಿದಾಗ, ಯೋಜನೆ ಕಾರ್ಯಕ್ರಮಗಳ ಸ್ವೀಕೃತಿಗೆ ಸಂಬಂಧಿಸಿದಂತೆ, 2017-18ನೇ ಸಾಲಿನಲ್ಲಿ ಸ್ವೀಕೃತಿಯಾದ ಮೊತ್ತಕ್ಕಿಂತ 2018-19 ಹಾಗೂ 2019-20 ಸಾಲುಗಳಲ್ಲಿ ವಿಶ್ವ ವಿದ್ಯಾನಿಲಯದ ಆದಾಯದ ಮೊತ್ತದಲ್ಲಿ ಇಳಿಮುಖವಾಗಿರುವುದ ಹಾಗೂ ಆದಾಯಕ್ಕಿಂತ ವೆಚ್ಚದಲ್ಲಿ ಏರಿಕೆಯಾಗಿರುವುದನ್ನು ಗಮನಿಸಬಹುದಾಗಿದ. ಯೋಜನೇತರ ಅಡಿ ಆದಾಯವು 2017-18ಕ್ಕಿಂತ 2018-19 ಹಾಗೂ 2019-20ನೇ ಸಾಲುಗಳಲ್ಲಿ ಇಳಿಮುಖವಾಗಿರುವುದನ್ನು ಹಾಗೂ 2019-20ನೇ ಸಾಲಿನ ವೆಚ್ಚವು ಆದಾಯಕ್ಕಿಂತ ಅಲ್ಪ ಪ್ರಮಾಣದಲ್ಲಿ ಹೆಚ್ಚಳವಾಗಿರುವುದನ್ನು ಕಾಣಬಹುದಾಗಿದೆ. ವಿಶ್ವ ವಿದ್ಯಾನಿಲಯದ ಸುಸ್ಥಿರ ಬೆಳವಣಿಗೆಯ ದೃಷ್ಠಿಯಿಂದ ನಿರ್ವಹಣಾ ವೆಚ್ಚದಲ್ಲಿ ಮಿತವ್ಯಯ ಸಾಧಿಸುವ ಹಾಗೂ ಯೋಜನಾ ಅನುದಾನಗಳನ್ನು ಹೆಚ್ಚಳ ಮಾಡಿಕೊಳ್ಳುವ ಕ್ರಮಗಳ ಬಗ್ಗೆ ಗಮನ ಹರಿಸುವ ಬಗ್ಗೆ ಪರಿಶೀಲಿಸಬೇಕಾಗಿದೆ.

ಯು.ಜಿ.ಸಿ ಲೆಕ್ಕಗಳ ಅಡಿ ಆದಾಯವು 2017-18 ಸ್ವೀಕೃತಿಯಾದುದಕ್ಕಿಂತ 2018-19 ದಿಢೀರ್ ಕುಸಿತ ಕಂಡು, ಇದು 2019-20 ಅಲ್ಪಪ್ರಮಾಣದಲ್ಲಿ ಏರಿಕೆಯಾಗಿರುತ್ತದೆ. ದತ್ತಿಪೀಠಗಳು ಹಾಗೂ ಪ್ರಾಯೋಜಿತ ಕಾರ್ಯಕ್ರಮಗಳ ಸ್ವೀಕೃತಿಗೆ ಸಂಬಂಧಿಸಿದಂತೆ, ಸ್ವೀಕೃತಿಯು ವರ್ಷದಿಂದ ವರ್ಷಕ್ಕೆ ಏರಿಕೆಯಾಗಿರುತ್ತದೆ. ಆದರೆ ವೆಚ್ಚವು 2016-17ನೇ ಸಾಲಿಗಿಂತ 2017-18ನೇ ಸಾಲಿನಲ್ಲಿ ಏರಿಕೆ

ಕಂಡಿದ್ದು, 2018-19ನೇ ಸಾಲಿನಲ್ಲಿ ಇಳಿಕೆಯಾಗಿರುತ್ತದೆ. ಹೀಗಾಗಿ ದತ್ತಿ ನೀಡಿದುದರ ಹಾಗೂ ಪ್ರಾಯೋಜಕರ ಆಶಯ ಮತ್ತು ಉದ್ದೇಶಗಳು ಈಡೇರಿದಂತಾಗಿರುವುದಿಲ್ಲ. ವಿಶ್ವ ವಿದ್ಯಾಲಯವು ಈ ಬಗ್ಗೆ ಗಮನಹರಿಸಲು ಸೂಚಿಸಿದೆ.

ಯು.ಜಿ.ಸಿ., ಪ್ರಾಯೋಜಿತ ಕಾರ್ಯಕ್ರಮ ಹಾಗೂ ಯೋಜನೆಗಳ ಅನುದಾನವು ಸಂಶೋಧನಾ ಚಟುವಟಿಕೆಗಳಿಗೆ ಸಂಬಂಧಿಸಿದ್ದಾಗಿದ್ದು, ವಿಶ್ವ ವಿದ್ಯಾನಿಲಯವು ಅನುದಾನವನ್ನು ಪ್ರತಿ ಸಾಲಿನಲ್ಲಿ ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವುದರಿಂದ ಹಾಗೂ ನಿಗದಿತ ಕಾಲಾವಧಿಯೊಳಗೆ ಯೋಜನೆಗಳನ್ನು ಪೂರ್ಣಗೊಳಿಸಿ ಲೆಕ್ಕಪತ್ರಗಳು ಹಾಗೂ ಸಂಶೋಧನಾ ವರದಿಗಳನ್ನು ಪ್ರಾಯೋಜಕ ಸಂಸ್ಥೆ ಗಳಿಗೆ ಸಲ್ಲಿಸುವುದರಿಂದ ಹೆಚ್ಚಿನ ಅನುದಾನ ಪಡೆಯಲು ಅನುಕೂಲವಾಗುವುದರ ಜೊತೆಗೆ ಮತ್ತಷ್ಟು ಸಂಶೋಧನಾ ಯೋಜನೆಗಳನ್ನು ತಯಾರಿಸಿ ಸಂಬಂಧಿತ ಪ್ರಾಯೋಜಕ ಸಂಸ್ಥೆಗಳಿಂದ ಇನ್ನೂ ಹೆಚ್ಚಿನ ಅನುದಾನ ಪಡೆದು ಕೊಳ್ಳಲು ಅನುಕೂಲವಾಗುತ್ತದೆ. ಈ ಬಗ್ಗೆ ವಿಶ್ವ ವಿದ್ಯಾನಿಲಯದ ಯೋಜನೆಗಳ ನಿರ್ವಹಣೆ ಮತ್ತು ಮೌಲ್ಯಮಾಪನ ಮಂಡಳಿಯಿಂದ ಕಾಲಿಕವಾಗಿ ಪ್ರಗತಿ ಪರಿಶೀಲನೆ ಮಾಡಿಸಿ ಕಾರ್ಯಕ್ಷಮತೆ ಹೆಚ್ಚಿಸುವ ಬಗ್ಗೆ ಕ್ರಮ ವಹಿಸಲು ಸೂಚಿಸಿದೆ. ಹಿಂದಿನ ಎರಡು ವರ್ಷಗಳ ಸ್ವೀಕೃತಿ ಹಾಗೂ ವೆಚ್ಚವನ್ನು 2019-20ನೇ ಸಾಲಿನ ವಾಸ್ತವಿಕ ಸ್ವೀಕೃತಿ ಮತ್ತು ವೆಚ್ಚದೊಂದಿಗೆ ಹೋಲಿಕೆ ಮಾಡಿರುವ ರೇಖಾ ನಕ್ಷೆಯನ್ನು ಈ ಕೆಳಗೆ ನೀಡಲಾಗಿದೆ.


**ವಿಶ್ವ ವಿದ್ಯಾನಿಲಯದ ಕೆಲವು ವಹಿವಾಟು ಶೀರ್ಷಿಕೆಗಳಡಿ ಕಳೆದ ಎರಡು ಸಾಲುಗಳ ವಾಸ್ತವಿಕ ಸ್ವೀಕೃತಿಗಳಲ್ಲಿನ ಹೋಲಿಕೆ**
(ರೂ. ಕೋಟಿಗಳಲ್ಲಿ)

| ಕ್ರ. ಸಂ. | ಸ್ವೀಕೃತಿ ವಿವರ | 2017-18 | 2018-19 | 2019-20 |
|---|---|---|---|---|
| 1 | ಭಾಗ-1 ಯೋಜನೇತರ ಸ್ವೀಕೃತಿ | 142.31 | 134.71 | 127.52 |
| 2 | ಭಾಗ-2 ಯೋಜನಾ ಸ್ವೀಕೃತಿ | 22.08 | 18.72 | 1.00 |
| 3 | ಭಾಗ-3 ಯು.ಜಿ.ಸಿ. ಸ್ವೀಕೃತಿ | 17.26 | 5.17 | 7.08 |
| 4 | ಭಾಗ-4 ದತ್ತಿ ಪೀಠಗಳು ಹಾಗೂ ಪ್ರಾಯೋಜಿತ ಕಾರ್ಯಕ್ರಮಗಳ ಸ್ವೀಕೃತಿ | 6.80 | 7.46 | 6.03 |
| **ಒಟ್ಟು** | | **188.45** | **166.06** | **141.63** |

| ಕ್ರ. ಸಂ. | ವೆಚ್ಚಗಳ ವಿವರ | 2017-18 | 2018-19 | 2019-20 |
|---|---|---|---|---|
| 1 | ಭಾಗ-1 ಯೋಜನೇತರ ವೆಚ್ಚ | 131.19 | 135.16 | 128.39 |
| 2 | ಭಾಗ-2 ಯೋಜನಾ ವೆಚ್ಚ | 27.25 | 22.84 | 2.51 |
| 3 | ಭಾಗ-3 ಯು.ಜಿ.ಸಿ. ವೆಚ್ಚ | 6.49 | 7.41 | 2.12 |
| 4 | ಭಾಗ-4 ದತ್ತಿ ಪೀಠಗಳು ಹಾಗೂ ಪ್ರಾಯೋಜಿತ ಕಾರ್ಯಕ್ರಮಗಳ ವೆಚ್ಚ | 13.40 | 6.51 | 5.30 |
| **ಒಟ್ಟು** | | **178.33** | **171.92** | **138.32** |

**ವಿಶ್ವ ವಿದ್ಯಾನಿಲಯದ ಕೆಲವು ವಹಿವಾಟು ಶೀರ್ಷಿಕೆಗಳಡಿ ಕಳೆದ ಎರಡು ಸಾಲುಗಳ ವಾಸ್ತವಿಕ ವೆಚ್ಚಗಳಲ್ಲಿನ ಹೋಲಿಕೆ**

(ರೂ. ಕೋಟಿಗಳಲ್ಲಿ)




**11.2 ವ್ಯವಹರಣೆಯಿಲ್ಲದ ಬ್ಯಾಂಕ್ ಖಾತೆಗಳು.**

ವಿಶ್ವ ವಿದ್ಯಾನಿಲಯದ ನಗದು ಪುಸ್ತಕ, ಬ್ಯಾಂಕ್ ತಃಖ್ತೆ (Bank Statement)ಗಳನ್ನು ಪರಿಶೀಲಿಸಲಾಗಿ, ನೂರ ತೊಂಬತ್ತು (೧೯೦) ಬ್ಯಾಂಕ್ ಖಾತೆಗಳನ್ನು ಹಣಕಾಸು ವಿಭಾಗದಲ್ಲಿ ನಿರ್ವಹಿಸಲಾಗುತ್ತಿದ್ದು, ಅವುಗಳಲ್ಲಿ ಸಾಮಾನ್ಯ ಖಾತೆಯ ಮೂರು (೩), ಯು.ಜಿ.ಸಿ. ಖಾತೆಯ ಹನ್ನೊಂದು (11), ದತ್ತಿ ಮತ್ತು ದೇಣಿಗೆ ಖಾತೆಯ ಹದಿನೆಂಟು (18) ಹಾಗೂ ಪ್ರಾಯೋಜಿತ ಕಾರ್ಯಕ್ರಮಗಳು ಹಾಗೂ ಪ್ರಾಜೆಕ್ಟ್ ಖಾತೆಯ ಹದಿನೇಳು (17), ಒಟ್ಟು ನಲವತ್ತೊಂಬತ್ತು (49) ಬ್ಯಾಂಕ್ ಖಾತೆಗಳಲ್ಲಿ 2019-20ನೇ ಸಾಲಿನಲ್ಲಿ ಯಾವುದೇ ಆರ್ಥಿಕ ವಹಿವಾಟು ಇಲ್ಲದೇ ಕೇವಲ ಬ್ಯಾಂಕ್ ಬಡ್ಡಿ ಮಾತ್ರ ಖಾತೆಗೆ ಜಮೆಯಾಗಿರುವುದನ್ನು ಗಮನಿಸಲಾಗಿದೆ. ವಿವರವನ್ನು ಅನುಬಂಧ-6ರಲ್ಲಿ ಲಗತ್ತಿಸಿದೆ. ಹೀಗೆ ಆರ್ಥಿಕ ವಹಿವಾಟು ನಡೆಸದಿರುವ ಬ್ಯಾಂಕ್ ಖಾತೆಗಳನ್ನು ನಿರ್ವಹಿಸುತ್ತಿರುವುದಕ್ಕೆ ಸೂಕ್ತ ವಿವರಣೆ ನೀಡಲು ಕೋರಿ ನೀಡಲಾದ ವಿಚಾರಣೆ ಪತ್ರ ಸಂಖ್ಯೆ: ಸಂ. 90/11.10.2021ಕ್ಕೆ ವಿಶ್ವ ವಿದ್ಯಾಲಯವು ನೀಡಿರುವ ಅನುಪಾಲನಾ ವರದಿಯಲ್ಲಿ, ಹಲವು ಯೋಜನೆ (ಪ್ರಾಜೆಕ್ಟ್)ಗಳಿಗೆ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾಗದ ಹಿನ್ನೆಲೆಯಲ್ಲಿ ಆರ್ಥಿಕ ವಹಿವಾಟು ನಡೆಸಿರುವುದಿಲ್ಲವೆಂದೂ ಹಾಗೂ ದತ್ತಿ ಉಪನ್ಯಾಸ ನಿಧಿಗೆ ದಾನಿಗಳು ನೀಡಿರುವ ಮೊತ್ತವನ್ನು ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿರುವುದರಿಂದ, ಠೇವಣಿಯಿಂದ ಬರುವ ಬಡ್ಡಿ ಮೊತ್ತದಿಂದ ವಿದ್ಯಾರ್ಥಿವೇತನ ಹಾಗೂ ವಿಶೇಷ ಉಪನ್ಯಾಸ ಮಾತ್ರ ನಡೆಸಲು ಅವಕಾಶ ಕಲ್ಪಿಸಿರುವುದರಿಂದ ಆರ್ಥಿಕ ವಹಿವಾಟು ನಡೆದಿರುವುದಿಲ್ಲ ಎಂಬುದಾಗಿ ವಿವರಣೆಯನ್ನು ನೀಡಿರುತ್ತಾರೆ. ಸಾಮಾನ್ಯ ಖಾತೆಗೆ ಸಂಬಂಧಿಸಿದಂತೆ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಆದ್ದರಿಂದ, ಆರ್ಥಿಕ ವಹಿವಾಟು ನಡೆಸದಿರುವ ಹಾಗೂ ಅವಶ್ಯಕತೆಯಿಲ್ಲದಿರುವ ಬ್ಯಾಂಕ್ ಖಾತೆಗಳನ್ನು ಮುಕ್ತಾಯಗೊಳಿಸುವ ಬಗ್ಗೆ ವಿಶ್ವ ವಿದ್ಯಾನಿಲಯವು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

**11.3 ಅವಧಿ ಮೀರಿದ ನಗದಾಗದ ಧನಾದೇಶಗಳನ್ನು ನಗದು ಪುಸ್ತಕದಲ್ಲಿ ಸ್ವೀಕೃತಿ ತೆಗೆದುಕೊಂಡು ಲೆಕ್ಕ ಸಮನ್ವಯ ಗೊಳಿಸದಿರುವುದು.**

ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಲಾದ ವಿವಿಧ ಬ್ಯಾಂಕ್ ಖಾತೆಗಳ ನಗದು ಪುಸ್ತಕಗಳನ್ನು ಸಂಬಂಧಪಟ್ಟ ಬ್ಯಾಂಕ್ ತಖ್ತೆಗಳೊಂದಿಗೆ ಪರಿಶೀಲಿಸಲಾಗಿ, ವಿಭಾಗದ ಕೆಲವು ನಗದು ಪುಸ್ತಕಗಳಲ್ಲಿ ಒಟ್ಟು ರೂ. 97,84,754/- ಗಳಷ್ಟು ಮೊತ್ತದ ಅವಧಿ ಮೀರಿದ ನಗದಾಗದ ಧನಾದೇಶಗಳನ್ನು ಲೆಕ್ಕ ಸಮನ್ವಯಗೊಳಿಸದೇ (Reconciliation) ಮುಂದುವರಿಸಿಕೊಂಡು ಬಂದಿರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಗಿದೆ. ಈ ಬಗ್ಗೆ ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆಗಳಿಗೆ ನೀಡಿರುವ ಅನುಪಾಲನಾ ವರದಿಯಲ್ಲಿ, ಅವಧಿ ಮೀರಿದ ನಗದಾಗದ ಧನಾದೇಶಗಳನ್ನು ಸಂಬಂಧಪಟ್ಟ ನಗದು ಪುಸ್ತಕಗಳಲ್ಲಿ 2019-20ನೇ ಸಾಲಿನಲ್ಲಿ ಸ್ವೀಕೃತಿ ತೆಗೆದು ಕೊಂಡು ಮುಂದಿನ ಸಾಲಿನ ಲೆಕ್ಕ ಪರಿಶೋಧನೆಗೆ ವಿವರಗಳನ್ನು ಹಾಜರು ಪಡಿಸಲಾಗುವುದೆಂದು ತಿಳಿಸಲಾಗಿತ್ತು. ಆದರೆ ಪ್ರಸಕ್ತ ಸಾಲಿನಲ್ಲಿಯೂ ಸಹಾ ಅವಧಿ ಮೀರಿದ ನಗದಾಗದ ಧನಾದೇಶಗಳನ್ನು ಲೆಕ್ಕ ಸಮನ್ವಯ ಗೊಳಿಸದೇ

(Reconciliation) ಹಾಗೆಯೇ ಮುಂದುವರಿಸಿಕೊಂಡು ಬಂದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಅವಧಿ ಮೀರಿದ ನಗದಾಗದ ಧನಾದೇಶಗಳನ್ನು ನಗದು ಪುಸ್ತಕದಲ್ಲಿ ಸ್ವೀಕೃತಿ ತೆಗೆದುಕೊಂಡು ಲೆಕ್ಕ ಸಮನ್ವಯಗೊಳಿಸದಿರುವುದರಿಂದ ಸಂಬಂಧಿಸಿದ ಬ್ಯಾಂಕ್ ಖಾತೆಗಳಲ್ಲಿ ಋಣ ಶಿಲ್ಕು ಬರುವ ಸಾಧ್ಯತೆಯಿರುವುದರಿಂದ ವಿತ್ತಾಧಿಕಾರಿಗಳು ಈ ಬಗ್ಗೆ ವೈಯಕ್ತಿಕ ಗಮನ ಹರಿಸಿ ಸರಿಪಡಿಸಲು ತಿಳಿಸಿದೆ. ವಿವರವನ್ನು ಅನುಬಂಧ-7ರಲ್ಲಿ ನೀಡಲಾಗಿದೆ.

**11.4 ನಗದು ಪುಸ್ತಕ ಹಾಗೂ ಬ್ಯಾಂಕ್ ತಖ್ತೆಯನ್ನು ಹಾಜರು ಪಡಿಸದಿರುವುದು.**

ವಿಶ್ವ ವಿದ್ಯಾನಿಲಯದ ಹಣಕಾಸು ವಿಭಾಗದಿಂದ ನಿರ್ವಹಿಸಲ್ಪಟ್ಟಿರುವ / ಆರ್ಥಿಕ ವಹಿವಾಟು ನಡೆಸಿರುವ ಎಲ್ಲಾ ಬ್ಯಾಂಕ್ ಖಾತೆಗಳ ಬ್ಯಾಂಕ್ ತಖ್ತೆಗಳು ಹಾಗೂ ನಗದು ಪುಸ್ತಕಗಳನ್ನು ಹಾಜರು ಪಡಿಸುವಂತೆ ವಿಚಾರಣೆ ಪತ್ರ ಸಂಖ್ಯೆ: 01/02-08-2021 ಮತ್ತು ವಿಚಾರಣೆ ಪತ್ರಸಂಖ್ಯೆ:20/06-08-2021ರಲ್ಲಿ ಕೋರಲಾಗಿತ್ತು. ಆದರೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಉಡುಪಿ ಶಾಖೆ ಇಲ್ಲಿ ನಿರ್ವಹಿಸಲಾಗುತ್ತಿರುವ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಬ್ಯಾಂಕ್ ಖಾತೆಯ ನಗದು ಪುಸ್ತಕ ಹಾಗೂ ಬ್ಯಾಂಕ್ ತಖ್ತೆಗಳನ್ನು ಹಾಜರು ಪಡಿಸಿರುವುದಿಲ್ಲ. ಈ ಸಂಬಂಧ ಹಿಂದಿನ ಸಾಲಿನ ಲೆಕ್ಕ ಪರಿಶೋಧನೆಗೆ ನೀಡಿರುವ ಉತ್ತರದನುಸಾರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಉಡುಪಿ ಶಾಖೆಯಲ್ಲಿ ನಿರ್ವಹಿಸುತ್ತಿದ್ದ ಪರೀಕ್ಷಾಂಗ ವಿಭಾಗದ ನಗದು ಪುಸ್ತಕ ಖಾತೆ ಸಂಖ್ಯೆ: 10443992122ನ್ನು ಮುಕ್ತಾಯ ಗೊಳಿಸಿ ಖಾತೆಯಲ್ಲಿರುವ ಮೊತ್ತವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಂಗಳಗಂಗೋತ್ರಿ ಖಾತೆಗೆ ವರ್ಗಾವಣೆ ಮಾಡುವಂತೆ ಕೋರಿ ದಿನಾಂಕ: 28-02-2017 ರಂದು ವಿಶ್ವ ವಿದ್ಯಾಲಯದಿಂದ ಬ್ಯಾಂಕಿಗೆ ಪತ್ರ ಬರೆಯಲಾಗಿರುತ್ತದೆ. ಮಾರ್ಚ್-2017ರ ನಂತರ ಸದರಿ ಖಾತೆಯಲ್ಲಿ ಯಾವುದೇ ಆರ್ಥಿಕ ವಹಿವಾಟನ್ನು ನಡೆಸಿರುವುದಿಲ್ಲವೆಂದು ವಿವರಣೆ ನೀಡಿರುತ್ತಾರೆ.

| Sl No | Name of the Bank | Account No. | Opening Balance as on 01.04.2018 | Dept / Account Type |
|---|---|---|---|---|
| 1 | State Bank of India, Udupi | 10443992122 | 4,31,770 | Examination Section |

ಆದರೆ ಇದುವರೆವಿಗೂ ಸದರಿ ಬ್ಯಾಂಕ್ ಖಾತೆಯನ್ನು ಮುಕ್ತಾಯಗೊಳಿಸಿದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಆದ್ದರಿಂದ ಈ ಸಂಬಂಧದ ದಾಖಲೆಗಳನ್ನು ಅನುಪಾಲನಾ ವರದಿಯೊಡನೆ ಸಲ್ಲಿಸಲು ಸೂಚಿಸಿದೆ.

**11.5 ವಿಶ್ವ ವಿದ್ಯಾಲಯದ ಹೂಡಿಕೆಗಳು**

ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿದ ಠೇವಣಿ ವಹಿಗಳನ್ನು ಪರಿಶೀಲಿಸಲಾಗಿದ್ದು, ವಿಶ್ವ ವಿದ್ಯಾನಿಲಯದ ನಿಧಿಯಲ್ಲಿ ಲಭ್ಯವಿದ್ದ ಹೆಚ್ಚುವರಿ ಮೊತ್ತವನ್ನು ವಿವಿಧ ಬ್ಯಾಂಕುಗಳಲ್ಲಿ ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಲಾಗಿರುತ್ತದೆ. ಆಡಿಟ್ ವರ್ಷದಲ್ಲಿ ವಿಶ್ವ ವಿದ್ಯಾನಿಲಯದಿಂದ ಹಾಗೂ ವಸತಿ ನಿಲಯಗಳಿಂದ ಹೂಡಿಕೆ/ಮರುಹೂಡಿಕೆ ಮಾಡಿರುವ ವಿವರಗಳನ್ನು ಅನುಬಂಧ-8 ಮತ್ತು ಅನುಬಂಧ-8(ಅ)ನಲ್ಲಿ ನೀಡಲಾಗಿದೆ. ಇವೆರಡರ ಒಟ್ಟು ಮೊತ್ತ ರೂ.99,72,51,673/-ಗಳಾಗಿರುತ್ತದೆ.

**11.6 ಸರ್ಕಾರದ ಸುತ್ತೋಲೆಗಳ ಮಾರ್ಗ ಸೂಚಿಗಳನ್ನು ಉಲ್ಲಂಘಿಸಿ ವಿಶ್ವ ವಿದ್ಯಾನಿಲಯದ ಪತ್ತಿನ ಸಹಕಾರ ಸಂಘದಲ್ಲಿ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿರುವುದು.**

ವಿಶ್ವ ವಿದ್ಯಾನಿಲಯದ ಪುರುಷರ, ಮಹಿಳಾ, ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳ ಖಾತೆಗಳಲ್ಲಿನ ಹೆಚ್ಚುವರಿ ಹಣವನ್ನು ಮಂಗಳೂರು ವಿಶ್ವ ವಿದ್ಯಾನಿಲಯ ಪತ್ತಿನ ಸಹಕಾರ ಸಂಘದಲ್ಲಿ ಹೂಡಿಕೆ ಮಾಡಿದ್ದು, ಆಡಿಟ್ ವರ್ಷದಲ್ಲಿ ರೂ.1,11,46,636/-ಗಳ ಮೊತ್ತದ ನಿಶ್ಚಿತ ಠೇವಣಿಯನ್ನು ನವೀಕರಣ ಮಾಡಿದ್ದು, ರೂ.10,03,201/-ಗಳ ಬಡ್ಡಿ ಜಮೆ ಆಗಿರುತ್ತದೆ. ವಿವರಗಳನ್ನು ಅನುಬಂಧ-9 ರಲ್ಲಿ ನೀಡಿದೆ. ಸರ್ಕಾರದ ಹಣಕಾಸು ಇಲಾಖೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಇಲಾಖೆಗಳು ಹಣ ಹೂಡಿಕೆಗೆ ಸಂಬಂಧಿಸಿದಂತೆ ಹೊರಡಿಸಿರುವ ಸುತ್ತೋಲೆ ಸಂಖ್ಯೆ:ಎಫ್‌ಡಿ 38 ಟಿಎಆರ್ 2018, ದಿನಾಂಕ: 27-08-2018, ತಿದ್ದುಪಡಿ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಆರ್ 2019, ದಿನಾಂಕ: 23-08-2019, ಸುತ್ತೋಲೆ ಸಂಖ್ಯೆ: ಡಿಪಿಇ 12 ಎಂಎಸ್‌ಐ 2018 ದಿನಾಂಕ:19-01-2018 ಹಾಗೂ ಸುತ್ತೋಲೆ ಸಂಖ್ಯೆ: ಎಫ್‌ಡಿ 8 ಟಿಎಆರ್ 2020ರ ಅನ್ವಯ ಠೇವಣಿಗಳನ್ನು ರಾಷ್ಟ್ರೀಕೃತ, ಅನುಸೂಚಿತ ವಾಣಿಜ್ಯ ಬ್ಯಾಂಕುಗಳು ಹಾಗೂ ಗ್ರಾಮೀಣ ಬ್ಯಾಂಕುಗಳಲ್ಲಿ ಮಾತ್ರ ಹೂಡಿಕೆ ಮಾಡಬೇಕಿರುತ್ತದೆ. ಆದರೆ ಈ ನಿಯಮಗಳನ್ನು ಪಾಲಿಸದೆ ಮಂಗಳೂರು ವಿಶ್ವ ವಿದ್ಯಾನಿಲಯದ ಉದ್ಯೋಗಿಗಳ ಪತ್ತಿನ ಸಹಕಾರ ಸಂಘದಲ್ಲಿ ಹೂಡಿಕೆ ಮಾಡಿರುವುದರ ಬಗ್ಗೆ ವಿಶ್ವ ವಿದ್ಯಾನಿಲಯದ ವಿವರಣೆ ಕೋರಲಾಗಿತ್ತು. ಸದರಿ ಸಹಕಾರ ಸಂಘದ ಬಡ್ಡಿ ದರವು ರಾಷ್ಟ್ರೀಕೃತ ಬ್ಯಾಂಕುಗಳ ದರಗಳಿಗಿಂತ ಅಧಿಕವಿದ್ದುದರಿಂದ ಹೂಡಿಕೆ ಮಾಡಿರುವುದಾಗಿ ವಿಶ್ವ ವಿದ್ಯಾನಿಲಯದವರು ತಿಳಿಸಿರುತ್ತಾರೆ. ಆದರೆ, ಸದರಿ ಸಹಕಾರ ಸಂಘವು ನೀಡುತ್ತಿರುವ ಬಡ್ಡಿಯು ಸರಳ ಬಡ್ಡಿಯಾಗಿದ್ದು, ರಾಷ್ಟ್ರೀಕೃತ

ಬ್ಯಾಂಕುಗಳು ನೀಡುವ QCI (Quarterly Compounding Interest) ದರಗಳೊಂದಿಗೆ ತುಲನೆ ಮಾಡಿದಾಗ ಕಡಿಮೆ ಬಡ್ಡಿ ಜಮೆಯಾಗುತ್ತಿರುವುದು ಕಂಡು ಬಂದಿರುತ್ತದೆ. ಅಲ್ಲದೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಠೇವಣಿ ಹೂಡಿದ್ದರೆ ಅಧಿಕ ಬಡ್ಡಿಯ ಜೊತೆಗೆ ಹೂಡಿದ ಮೊತ್ತಕ್ಕೆ ಭದ್ರತೆ ಕೂಡ ಸಿಗುತ್ತಿತ್ತು. ಈ ಬಗ್ಗೆ ಈ ಹಿಂದಿನ ಸಾಲುಗಳ ಲೆಕ್ಕ ಪರಿಶೋಧನೆಯಲ್ಲಿ ಆಕ್ಷೇಪಿಸಲಾಗಿದೆಯಾದರೂ ಕೂಡ ಅದೇ ಹಳೆಯ ಕ್ರಮವನ್ನು ಮುಂದುವರೆಸಲಾಗಿದೆ. ಆದ್ದರಿಂದ ಚಾಲ್ತಿ ದರದಲ್ಲಿ ನವೀಕರಿಸಿ ಹೂಡಿಕೆ ಮಾಡಿರುವ ಒಟ್ಟು ಮೊತ್ತ ರೂ.1,11,46,636/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು ಅನುಬಂಧ-9 ರಲ್ಲಿ ವಿವರಿಸಲಾಗಿದೆ.

### 11.7 ರಾಷ್ಟ್ರೀಯ ಉಚ್ಛತಮ ಶಿಕ್ಷಣ ಅಭಿಯಾನ ಯೋಜನೆಯ ಅನುದಾನವನ್ನು ತಾತ್ಕಾಲಿಕವಾಗಿ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿರುವುದು.

ರಾಷ್ಟ್ರೀಯ ಉಚ್ಛತಮ ಶಿಕ್ಷಣ ಅಭಿಯಾನ ಯೋಜನೆಗೆ ಬಿಡುಗಡೆಯಾದ ಅನುದಾನವನ್ನು ಯೋಜನೆಯ ಮಾರ್ಗಸೂಚಿ ಕ್ರಮ ಸಂಖ್ಯೆ 16(1)ರ ಅನುಸಾರ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಲು ಅವಕಾಶವಿರುವುದಿಲ್ಲ. ಆದರೆ ನಗದು ಪುಸ್ತಕವನ್ನು ಪರಿಶೀಲಿಸಲಾಗಿ, ಈ ಕೆಳಗೆ ವಿವರಿಸಿದ ಧನಾದೇಶಗಳ ಮೂಲಕ ಡ್ರಾಮಾಡಿ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಲಾಗಿರುತ್ತದೆ.

| ಕ್ರಮ ಸಂಖ್ಯೆ | ಧನಾದೇಶ ಸಂಖ್ಯೆ | ದಿನಾಂಕ | ಮೊತ್ತ |
|---|---|---|---|
| 01 | 251488 | 24.10.2019 | 2,00,00,000-00 |
| 02 | 251489 | 24.10.2019 | 2,00,00,000-00 |
| 03 | 251490 | 24.10.2019 | 1,00,00,000-00 |
| 04 | 251493 | 20.11.2019 | 2,00,00,000-00 |
| 05 | 251495 | 20.11.2019 | 1,00,00,000-00 |
| 06 | 251496 | 20.11.2019 | 2,00,00,000-00 |
| 07 | 251499 | 05.12.2019 | 1,00,00,000-00 |
| 08 | 251500 | 05.12.2019 | 1,00,00,000-00 |
| 09 | 251501 | 05.12.2019 | 1,00,00,000-00 |
| 10 | 251502 | 05.12.2019 | 1,00,00,000-00 |
| 11 | 251503 | 05.12.2019 | 1,00,00,000-00 |
| | | **ಒಟ್ಟುರೂ.** | **15,00,00,000-00** |

ಕ್ರ.ಸಂ.01 ರಿಂದ 03ರ ವರೆಗಿನ ಮೊತ್ತಗಳನ್ನು ಜಿ.ಆರ್.ಎ. ಖಾತೆಗೆ ವರ್ಗಾವಣೆ ಮಾಡಿಕೊಂಡು ಹೂಡಿಕೆ ಮಾಡಲಾಗಿದ್ದು, ಕ್ರ.ಸಂ. 04 ರಿಂದ 11ರ ವರೆಗಿನ ಮೊತ್ತಗಳನ್ನು ರೂಸಾ ಯೋಜನೆಯಿಂದ ನೇರವಾಗಿ ಹೂಡಿಕೆ ಮಾಡಿರುತ್ತಾರೆ. ಹೀಗೆ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿರುವ ಮೊತ್ತವನ್ನು ನವೆಂಬರ್-2019ರಲ್ಲಿ ರೂ. 5.00 ಕೋಟಿ ಮತ್ತು ಹಾಗೂ ಡಿಸೆಂಬರ್-2019 ರಲ್ಲಿ ರೂ.10.00 ಕೋಟಿ ಮತ್ತು ಬಡ್ಡಿ ಮೊತ್ತ ರೂ,1,78,355/-ಗಳನ್ನು ಹಿಂಪಡೆಯಲಾಗಿದೆ. ಒಟ್ಟು ರೂ.15.00 ಕೋಟಿ ಮೊತ್ತವನ್ನು ನಿಗಧಿತ ಯೋಜನೆಗೆ ಬಳಸದೇ ಮಾರ್ಗಸೂಚಿಯನ್ನು ಉಲ್ಲಂಘಿಸಿ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿರುವ ಬಗ್ಗೆ ವಿಚಾರಣಾ ಸಂಖ್ಯೆ 199/2021-22/02.11.2021ರ ಮೂಲಕ ಸ್ಪಷ್ಟೀಕರಣವನ್ನು ನೀಡಲು ಕೋರಲಾಗಿತ್ತು. ಇದಕ್ಕೆ ಹಣಕಾಸು ಅಧಿಕಾರಿಗಳು ಉತ್ತರಿಸಿ, ಬಿಡುಗಡೆಯಾದ ಅನುದಾನದ ಮೊತ್ತವನ್ನು ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಲಾಗಿದ್ದು, ನಂತರ ಸದರಿ ಮೊತ್ತವನ್ನು ನಗಧೀಕರಿಸಿ ರಾಷ್ಟ್ರೀಯ ಉಚ್ಛತಮ ಶಿಕ್ಷಣ ಅಭಿಯಾನ ಖಾತೆಗೆ ಮರು ಜಮೆ ಮಾಡಲಾಗಿದೆ ಹಾಗೂ ರಾಷ್ಟ್ರೀಯ ಉಚ್ಛತಮ ಶಿಕ್ಷಣ ಅಭಿಯಾನ ಖಾತೆಯಲ್ಲಿ ಸಂಗ್ರಹವಾದ ಬಡ್ಡಿ ಮೊತ್ತವನ್ನು ಕೆ.ಎಸ್.ಹೆಚ್.ಇ.ಸಿ. ಗೆ ಡಿಡಿ ಮೂಲಕ ಕಳುಹಿಸಿ ಕೊಡಲಾಗಿದೆ ಎಂದು ಉತ್ತರಿಸಿರುತ್ತಾರೆ. ಆದರೆ ಬಡ್ಡಿ ಮೊತ್ತವನ್ನು ಕೆ.ಎಸ್.ಹೆಚ್.ಇ.ಸಿ.ಗೆ ಡಿ.ಡಿ. ಮೂಲಕ ಜಮೆ ಮಾಡಿದ ಬಗ್ಗೆ ಯಾವುದೇ ಮಾಹಿತಿಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಸರ್ಕಾರದ ಮಾರ್ಗಸೂಚಿಯನ್ನು ಉಲ್ಲಂಘಿಸಿ ಅನುದಾನವನ್ನು ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿರುವ ಅಧಿಕಾರಿಗಳ ವಿರುದ್ಧ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ.

### 11.8 ವಿಶ್ವ ವಿದ್ಯಾನಿಲಯವು ಅನುದಾನದ ಹೂಡಿಕೆ ಸಂದರ್ಭದಲ್ಲಿ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸದಿರುವುದು.

ವಿಶ್ವ ವಿದ್ಯಾನಿಲಯವು ವಿವಿಧ ಯೋಜನೆಗಳ ಬ್ಯಾಂಕ್ ಖಾತೆಗಳಲ್ಲಿ ಲಭ್ಯವಿದ್ದ ಹೆಚ್ಚುವರಿ ಹಣವನ್ನು ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆಮಾಡಿದ್ದು, ಹೂಡಿಕೆ ಸಂಬಂಧ ಹಾಜರು ಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ;

1. ರಾಷ್ಟ್ರೀಕೃತ ಮತ್ತು ಅನುಸೂಚಿತ ಬ್ಯಾಂಕುಗಳಿಂದ ಸರ್ಕಾರದ ಇ-ಸಂಗ್ರಹಣೆ ಪೋರ್ಟಲ್‌ನಲ್ಲಿ ಬಡ್ಡಿಯ ದರಪಟ್ಟಿ ಆಹ್ವಾನಿಸದೆಯೇ ಹಿಂದಿನ ಸಾಲುಗಳಲ್ಲಿ ಠೇವಣಿ ಇಟ್ಟಿದ್ದ ಬ್ಯಾಂಕುಗಳಲ್ಲಿಯೇ ಹೂಡಿಕೆ/ಮರುಹೂಡಿಕೆ ಮಾಡಲಾಗಿದೆ. ಸರ್ಕಾರದ ಸ್ಥಾಯಿ ಆದೇಶಗಳ ಮಾರ್ಗಸೂಚಿಗಳನ್ವಯ ಒಂದು ವರ್ಷದ ಅವಧಿಗೆ ಮಾತ್ರವೇ ನಿಶ್ಚಿತ ಠೇವಣಿಯಲ್ಲಿಡಬೇಕು ಹಾಗೂ ಅವಧಿ ಮುಗಿದ ನಂತರ ಅದನ್ನು ಬಡ್ಡಿ ಯೊಡನೆ ವಿಶ್ವ ವಿದ್ಯಾಲಯದ ಖಾತೆಗೆ ಹಿಂಪಡೆಯಬೇಕು. ನಿಶ್ಚಿತ ಠೇವಣಿಯನ್ನು ನವೀಕರಿಸಲು ಅವಕಾಶವಿರುವುದಿಲ್ಲ.
2. ಮೂಲ ನಿಶ್ಚಿತ ಠೇವಣಿ ರಶೀದಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.
3. ನಿಶ್ಚಿತ ಠೇವಣಿ ನವೀಕರಣದ ಸಂದರ್ಭ ಮೂಲ ಎಫ್.ಡಿ.ಆರ್‌ಗಳ ನಕಲು ಪ್ರತಿಗಳ ನಿರ್ವಹಣೆ ಮಾಡಿರುವುದಿಲ್ಲ.
4. ನಿಶ್ಚಿತ ಠೇವಣಿ ವಹಿಗಳನ್ನು ವಿವಿಧ ವಿಷಯ ನಿರ್ವಾಹಕರು ನಿರ್ವಹಿಸುತ್ತಿದ್ದು, 2019-20 ನೇ ಸಾಲಿನಲ್ಲಿ ವಾಸ್ತವವಾಗಿ ಸ್ವೀಕೃತವಾದ/ ಜಮೆಯಾದ ಬಡ್ಡಿ ಮೊತ್ತವನ್ನು ವಹಿಯಲ್ಲಿ ದಾಖಲಿಸದ ಕಾರಣ ಮೊತ್ತಗಳ ನೈಜತೆಯನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.
5. ವಿಶ್ವ ವಿದ್ಯಾನಿಲಯದ ಒಟ್ಟಾರೆ ನಿಶ್ಚಿತ ಠೇವಣಿಗಳ ಸಂಬಂಧ ನಿಗಾ ವಹಿ (Watch Register) ನಿರ್ವಹಿಸಿರುವುದಿಲ್ಲ
6. ನಿಶ್ಚಿತ ಠೇವಣಿಗಳ ಪಕ್ವತೆಯ ದಿನಾಂಕಗಳನುಸಾರ ಪಕ್ವತೆಯ ಮೊತ್ತವನ್ನು ಹಿಂಪಡೆಯಲು ಬ್ಯಾಂಕುಗಳೊಡನೆ ಕಾಲಿಕವಾಗಿ ಪತ್ರ ವ್ಯವಹಾರ ನಡೆಸಿರುವುದಿಲ್ಲ. ಹಾಗೂ ಹೂಡಿಕೆ ಮಾಡಿರುವ ಬ್ಯಾಂಕುಗಳಿಂದ ತ್ರೈಮಾಸಿಕ/ ಅರ್ಧವಾರ್ಷಿಕ/ ವಾರ್ಷಿಕವಾಗಿ ಶಿಲ್ಕು ದೃಢೀಕರಣಪತ್ರಗಳನ್ನು(Confirmation of Balance) ಪಡೆದಿರುವುದಿಲ್ಲ

## 12. ವೆಚ್ಚಗಳ ಮೇಲೆ ನಿಯಂತ್ರಣ

ನಗದು ಪುಸ್ತಕಗಳು ಮತ್ತು ಬ್ಯಾಂಕ್ ಪಾಸ್ ಶೀಟ್‌ಗಳ ಅನುಸಾರ 2019-20ನೇ ಸಾಲಿನಲ್ಲಿ ವಿಶ್ವ ವಿದ್ಯಾಲಯದ ವಿವಿಧ ಲೆಕ್ಕಶೀರ್ಷಿಕೆಗಳಡಿ ಒಟ್ಟು ವೆಚ್ಚ ರೂ.138,32,23,843/-ಗಳಾಗಿರುತ್ತದೆ.

ವಿಶ್ವ ವಿದ್ಯಾಲಯವು ಈ ಸಾಲಿನಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಿಂದ ಒಟ್ಟು ರೂ. 224,87,77,757/- ಗಳನ್ನು ಆಂತರಿಕ ವರ್ಗಾವಣೆ ಮಾಡಿಕೊಂಡಿದ್ದು ಹಾಗೂ ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಿದ ಮೊತ್ತ ರೂ. 64,83,60,000/-ಗಳನ್ನು ಪಾವತಿ ಭಾಗದ ಲೆಕ್ಕದಲ್ಲಿ ತೋರಿಸಲಾಗಿದೆ. ಈ ಸಾಲಿನ ಒಟ್ಟು ವೆಚ್ಚವೇ ರೂ. 138,32,23,843/- ಗಳಾಗಿರುವಾಗ ರೂ. 224,87,77,757/-ಗಳಷ್ಟು ಮೊತ್ತವನ್ನು ಆಂತರಿಕ ವರ್ಗಾವಣೆ ಮಾಡಿ ಕೊಂಡಿರುವುದು ವಿಶ್ವವಿದ್ಯಾಲಯದಲ್ಲಿ ವೆಚ್ಚಗಳ ಮೇಲೆ ಯಾವುದೇ ನಿಯಂತ್ರಣ ವಿಲ್ಲದಿರುವುದನ್ನು ತೋರಿಸುತ್ತದೆ.

ವಿಶ್ವ ವಿದ್ಯಾನಿಲಯವು ಸ್ವೀಕೃತಿ ಮತ್ತು ವೆಚ್ಚಗಳಿಗೆ ಸಂಬಂಧಿಸಿದಂತೆ ನಿಗಾ ವಹಿಯನ್ನು ನಿರ್ವಹಣೆ ಮಾಡುವುದರಿಂದ ವೆಚ್ಚಗಳ ನಿಯಂತ್ರಣ ಮಾಡಲು ಸಾಧ್ಯವಾಗುತ್ತದೆ. (ನಿಗದಿತ ಅನುದಾನಕ್ಕಿಂತ ಹೆಚ್ಚುವರಿ ವೆಚ್ಚವಾಗದಂತೆ ತಡೆಯಬಹುದಾಗಿರುತ್ತದೆ.) ನಿಗಾ ವಹಿಯನ್ನು ನಿರ್ವಹಣೆ ಮಾಡುವುದರಿಂದ ಕೆಲವು ಲೆಕ್ಕ ಶೀರ್ಷಿಕೆಗಳಲ್ಲಿ ನಿಗದಿತ ಅನುದಾನಕ್ಕಿಂತ ಹೆಚ್ಚುವರಿ ವೆಚ್ಚವಾಗುವುದು ಮತ್ತು ಕೆಲವು ಲೆಕ್ಕಶೀರ್ಷಿಕೆಗಳಲ್ಲಿ ನಿಗದಿತ ಅನುದಾನಕ್ಕಿಂತ ಕಡಿಮೆ ವೆಚ್ಚವಾಗುವುದನ್ನು ಗಮನಿಸಿ ನಿಗದಿತ ಅವಧಿಯಲ್ಲಿ ವೆಚ್ಚ ಮಾಡದೇ ಇರುವ ಬಗ್ಗೆ ಮತ್ತು ಆಯವ್ಯಯದಲ್ಲಿ ಅಂದಾಜಿಸಿರುವಂತೆ ಸ್ವೀಕೃತಿಯನ್ನು ಮಾಡದಿರುವ ಬಗ್ಗೆ ವಿಶ್ವ ವಿದ್ಯಾನಿಲಯವು ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳಲು ಸಹಕಾರಿಯಾಗುತ್ತದೆ.

### 12.1 ಆರ್ಥಿಕ ಅಧಿಕಾರ ಪ್ರತ್ಯಾ ಯೋಜನೆಯ (Delegation of Financial Powers)ವಿವರಗಳನ್ನು ಹಾಜರು ಪಡಿಸದಿರುವುದು.

ವಿಶ್ವ ವಿದ್ಯಾನಿಲಯದ ವೇತನಬಿಲ್ಲು, ಸಾದಿಲ್ವಾರು ಬಿಲ್ಲು, ವಿದ್ಯುತ್ ಕಾಮಗಾರಿ ಬಿಲ್ಲು, ಸಿವಿಲ್ ಕಾಮಗಾರಿ ಬಿಲ್ಲುಗಳು, ಎ.ಸಿ/ಎನ್.ಡಿ.ಸಿ. ಬಿಲ್ಲುಗಳು ಹಾಗೂ ಇತರೇ ಪಾವತಿ ಬಿಲ್ಲುಗಳನ್ನು ಪರಿಶೀಲಿಸಲಾಗಿ, ಸದರಿ ಬಿಲ್ಲುಗಳ ಮೇಲು ಸಹಿಗಾಗಿ ವಿಶ್ವ ವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳಾದ ಕುಲಸಚಿವರು, ಹಣಕಾಸು ಅಧಿಕಾರಿಗಳು, ಕಾರ್ಯಪಾಲಕ ಅಭಿಯಂತರರು ಹೊಂದಿರುವ ಆರ್ಥಿಕ/ ತಾಂತ್ರಿಕ ಆಡಳಿತಾತ್ಮಕ ಅಧಿಕಾರಗಳ ಪ್ರತ್ಯಾಯೋಜನೆಯ (Delegation of Financial Powers) ಆದೇಶದ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸುವಂತೆ ಹಿಂದಿನ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಉಲ್ಲೇಖಿಸಿದ್ದರು ಹಾಗೂ ಚಾಲ್ತಿ ವರ್ಷದಲ್ಲಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 01/02-08-2021ರ ಮೂಲಕ ಕೋರಲಾಗಿದ್ದರೂ ಸಹ ಲೆಕ್ಕಪರಿಶೋಧನೆಗೆ ವಿಶ್ವ ವಿದ್ಯಾನಿಲಯದವರು ಯಾವುದೇ ದಾಖಲೆಗಳನ್ನು ಹಾಜುರು ಪಡಿಸಿರುವುದಿಲ್ಲ. ಆದ್ದರಿಂದ, ಈ ಬಗ್ಗೆ ಕುಲಸಚಿವರು (ಆಡಳಿತ) ಹಾಗೂ ವಿತ್ತಾಧಿಕಾರಿಗಳು ಅಗತ್ಯ ಕ್ರಮ ವಹಿಸಲು ಸೂಚಿಸಿದೆ.

## 13. ಹಣ ದುರುಪಯೋಗದ ಪ್ರಕರಣಗಳು

### 13.1 ಕಡಿಮೆ ಇರಸಾಲು ಮಾಡಿರುವುದು:

ವಿಶ್ವ ವಿದ್ಯಾನಿಲಯದ ಅತಿಥಿ ಗೃಹಗಳಲ್ಲಿ ರಶೀದಿಗಳ ಮೂಲಕ ಸ್ವೀಕೃತವಾಗಿರುವ ಹಾಗೂ ಸಂಬಂಧಪಟ್ಟ ವಿಶ್ವ ವಿದ್ಯಾನಿಲಯದ ಖಾತೆಗೆ ಜಮೆ ಮಾಡಿರುವ ಮೊತ್ತಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ಅತಿಥಿ ಗೃಹ | ಸ್ವೀಕರಿಸಿರುವ ಮೊತ್ತ | ಇರಸಾಲು ಮಾಡಿದ ಮೊತ್ತ | ವ್ಯತ್ಯಾಸ |
|---|---|---|---|---|
| 1 | ಕಾವೇರಿ | 1,98,100 | 1,84,800 | 13,300 |
| **ಒಟ್ಟು** | | **1,98,100** | **1,84,800** | **13,300** |

ಮೇಲಿನ ಕೋಷ್ಟಕದಲ್ಲಿ ವಿವರಿಸಿರುವಂತೆ ವಿಶ್ವ ವಿದ್ಯಾನಿಲಯದ ಕಾವೇರಿ ಅತಿಥಿ ಗೃಹದಲ್ಲಿ ರಶೀದಿಗಳ ಮೂಲಕ ಸ್ವೀಕರಿಸಲಾದ ಒಟ್ಟು ಮೊತ್ತ ರೂ. 1,98,100/-ಗಳಲ್ಲಿ ಬ್ಯಾಂಕ್ ಖಾತೆಗೆ ಒಟ್ಟು ರೂ. 1,84,800/-ಗಳು ಮಾತ್ರ ಜಮೆಯಾಗಿರುತ್ತದೆ. ಉಳಿದ ಮೊತ್ತ ರೂ.13,300/-ಗಳು ಜಮೆಯಾಗಿರುವ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:84/01-10-2021ರ ಮೂಲಕ ಕೋರಲಾಗಿತ್ತು. ದಿನಾಂಕ: 23-12-2021 ರಂದು ವಿಶ್ವ ವಿದ್ಯಾನಿಲಯವು ನೀಡಿರುವ ಅನುಪಾಲನಾ ವರದಿಯಲ್ಲಿ ದಿನಾಂಕ: 2-5-2020ರಲ್ಲಿ ರೂ.5,500 ಹಾಗೂ ದಿನಾಂಕ:23-12-2021ರಲ್ಲಿ ರೂ.7,800ಗಳನ್ನುಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಶ್ವ ವಿದ್ಯಾನಿಲಯ ಶಾಖೆಯ ಖಾತೆ ಸಂ-37707232335ಗೆ ಜಮೆ ಮಾಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಇನ್ನು ಮುಂದೆ ಸ್ವೀಕೃತಿಗಳನ್ನು ವಿಳಂಬ ಮಾಡದೆ ನಿಗದಿತ ಅವಧಿಯೊಳಗೆ ವಿಶ್ವವಿದ್ಯಾನಿಲಯದ ನಿಧಿಗೆ ಜಮೆ ಮಾಡಲು ಸೂಚಿಸಿದೆ.

### 13.2 ಹಣಕಾಸು ವಿಭಾಗದಿಂದ ವಸೂಲಿಸಿದ ಮೊತ್ತದಿಂದ ಕಡಿಮೆ ಇರಸಾಲು ಮಾಡಿರುವುದು.

ವಿಶ್ವ ವಿದ್ಯಾನಿಲಯದ ಹಣಕಾಸು ವಿಭಾಗದಿಂದ ರಶೀದಿಗಳ ಮೂಲಕ ಸ್ವೀಕೃತವಾಗಿರುವ ಹಾಗೂ ಸಂಬಂಧಪಟ್ಟ ವಿಶ್ವ ವಿದ್ಯಾನಿಲಯದ ಖಾತೆಗೆ ಜಮೆ ಮಾಡಿರುವ ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ವಿಭಾಗ | ಸ್ವೀಕರಿಸಿರುವ ಮೊತ್ತ | ಇರಸಾಲು ಮಾಡಿದ ಮೊತ್ತ | ವ್ಯತ್ಯಾಸ |
|---|---|---|---|---|
| 1 | ಹಣಕಾಸು | 1,43,87,494 | 1,27,34,688 | 16,52,806 |
| **ಒಟ್ಟು** | | **1,43,87,494** | **1,27,34,688** | **16,52,806** |

ಮೇಲಿನ ಕೋಷ್ಟಕದಲ್ಲಿ ವಿವರಿಸಿರುವಂತೆ ವಿಶ್ವ ವಿದ್ಯಾನಿಲಯದ ಹಣಕಾಸು ವಿಭಾದದಿಂದ ರಶೀದಿಗಳ ಮೂಲಕ ಸ್ವೀಕರಿಸಲಾದ ಒಟ್ಟು ಮೊತ್ತ ರೂ. 1,43,87,494/-ಗಳಲ್ಲಿ (ಕಂಡಿಕೆ ಸಂಖ್ಯೆ 26.1ರಲ್ಲಿ ವಿವರಿಸಿರುವಂತೆ) ಬ್ಯಾಂಕ್ ಖಾತೆಗೆ ಒಟ್ಟು ರೂ.1,27,34,688/-ಗಳು ಮಾತ್ರ ಜಮೆಯಾಗಿರುತ್ತದೆ. ಉಳಿದ ಮೊತ್ತ ರೂ.16,52,806/-ಗಳು ಜಮೆಯಾಗಿರುವ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸುವಂತೆ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 37 ದಿನಾಂಕ:16-08-2021ರಲ್ಲಿ ಕೋರಲಾಗಿತ್ತು. ವಿಶ್ವ ವಿದ್ಯಾನಿಯದ ವಿತ್ತಾಧಿಕಾರಿಗಳು 2014-15, 2016-17 ಮತ್ತು 2018-19ರಲ್ಲಿ ಬ್ಯಾಂಕಿಗೆ ಜಮೆ ಗೊಂಡಿದ್ದ ಮೊತ್ತಕ್ಕೆ 2019-20ನೇ ಸಾಲಿನಲ್ಲಿ ರಶೀದಿ ನೀಡಲಾಗಿದೆ ಎಂದು ಉತ್ತರಿಸಿರುತ್ತಾರೆ. ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ - 06 ನಮೂನೆ-1 ರಲ್ಲಿ ಹಣ/ ಧನಾದೇಶ/ ಡಿಡಿಸ್ವೀಕರಿಸದ ನಂತರ ಅದೇ ದಿನ ಸಂಬಂಧಿಸಿದವರಿಗೆ ರಶೀದಿ ನೀಡಬೇಕಾಗಿರುತ್ತದೆ. ಆದರೆ 2014-15, 2016-17 ಮತ್ತು 2017-18ನೇ ಸಾಲಿನಲ್ಲಿ ಸ್ವೀಕರಿಸಿದ ಮೊತ್ತವೆಂದು 2019-20ನೇ ಸಾಲಿನಲ್ಲಿ ರಶೀದಿ ನೀಡಿರುವುದು ಸಮಂಜಸವಾಗಿರುವುದಿಲ್ಲ.

### 14. ಫಲಧಾಯಕವಲ್ಲದ/ ಅಳತೆ ಮೀರಿದ ವೆಚ್ಚಗಳು.

**14.1 ಸರ್ಕಾರವು ಒದಗಿಸುವ ತಂತ್ರಾಂಶವನ್ನು ಬಳಸಿ ಕೊಳ್ಳದೇ ಖಾಸಗಿ ಸಂಸ್ಥೆಯಿಂದ ತಂತ್ರಾಂಶವನ್ನು ಖರೀದಿಸಿರುವುದು.**

ಸ್ವಯಂ-ಆರ್ಥಿಕ ಯೋಜನೆ ಖಾತೆಯ ವೋಚರ್ಸ್‌ಗಳನ್ನು ಪರಿಶೀಲಿಸಲಾಗಿ ವಿಶ್ವ ವಿದ್ಯಾನಿಲಯದ ಕ್ಯಾಂಪಸ್ ನಿರ್ವಹಣಾ ವ್ಯವಸ್ಥೆಗಾಗಿ ತಂತ್ರಾಂಶವೊಂದನ್ನು ಪಡೆಯಲು ಮೆ.ಕಿಯೋನಿಕ್ಸ್ ಸಂಸ್ಥೆಯ ಜೊತೆ **ರೂ.** 3,50,06,400-00 ಗಳಿಗೆ ಒಡಂಬಡಿಕೆಯನ್ನು ಮಾಡಿಕೊಂಡು, ಮುಂಗಡವಾಗಿ ರೂ. 1,50,68,600-00ಗಳನ್ನು ಕುಲಸಚಿವರ ಆದೇಶ ಸಂಖ್ಯೆ ಮಂವಿ/ಡಿಇವಿ/08/2019-20/ಡಿ4, ದಿನಾಂಕ:24.12.2019ರ ಅನುಸಾರ ವೋಚರ್ ನಂ.13, ದಿನಾಂಕ 30.12.2019 ರ ಮೇಲೆ ಧನಾದೇಶ ಸಂಖ್ಯೆ: 249819/ ದಿನಾಂಕ 30.12.2019 ರ ಮೂಲಕ ಪಾವತಿಸಲಾಗಿದೆ. ಇದು ಪರೀಕ್ಷಾಂಗ ವಿಭಾಗದಲ್ಲಿ ಸ್ವಯಂಚಾಲಿತ ತಂತ್ರಾಂಶದ ಅಳವಡಿಕೆ (AUTOMATION OF EXAMINATATION DEPARTMENT SOFTWARE), ಪ್ರವೇಶಾತಿ ವಿಭಾಗದಲ್ಲಿ ದಾಖಲಿಕೆಯ ಸ್ವಯಂಚಾಲಿತ ತಂತ್ರಾಂಶದ ಅಳವಡಿಕೆ (AUTOMATION OF ADMISSION & ENROLLMENT DEPARTMENT SOFTWARE)ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಯೋಜನೆಯ ಸ್ವಯಂಚಾಲಿತ ತಂತ್ರಾಂಶದ ಅಳವಡಿಕೆ(AUTOMATION OF HUMAN RESOURCE DEVELOPMENT SOFTWARE)ನ್ನು ಒಳಗೊಂಡಿರುತ್ತದೆ.

ಸರ್ಕಾರದ ಆಧಿಸೂಚನೆ ಸಂಖ್ಯೆ ಅಇ/945/ವೆಚ್ಚ-12/18 ದಿನಾಂಕ 11.10.2018 ಮತ್ತು ಅಇ/1033/ವೆಚ್ಚ/12/19, ದಿನಾಂಕ 06.12.2019ರ ಅನುಸಾರ ಕಿಯೋನಿಕ್ಸ್ ಸಂಸ್ಥೆಯಿಂದ ರೂಪಾಯಿ **ಒಂದು ಕೋಟಿಯ**ವರೆಗೆ ಮಾತ್ರ ಸೇವೆ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ಅಧಿನಿಯಮ-1999ರ ಕಲಂ-4(ಜಿ)ರಡಿ ವಿನಾಯಿತಿ ನೀಡಲಾಗಿರುತ್ತದೆ. ಆದರೆ ಕ್ಯಾಂಪಸ್ ನಿರ್ವಹಣಾ ವ್ಯವಸ್ಥೆಗಾಗಿ ತಂತ್ರಾಂಶವನ್ನು ಪಡೆಯಲು ಒಟ್ಟು ರೂ.3,50,06,400-00ಗಳಿಗೆ ಕಿಯೋನಿಕ್ಸ್‌ಸಂಸ್ಥೆಯೊಡನೆ ಒಪ್ಪಂದ ಮಾಡಿಕೊಂಡಿರುವುದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಅಧಿನಿಯಮ, 1999 ಹಾಗೂ ಕೆ.ಟಿ.ಪಿ.ಪಿ(ತಿದ್ದುಪಡಿ) ನಿಯಮಗಳು-2001ರ ಉಪನಿಯಮ-4(ಇ) ಹಾಗೂ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಅಸು/ ಇಇ/ ಇಸಂಗ್ರ/2009/ದಿನಾಂಕ: 09.10.2012ರ ಪ್ರಕಾರ ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ಟೆಂಡರ್ ಕರೆದು ಕ್ರಮ ವಹಿಸ ಬೇಕಾಗಿರುತ್ತದೆ. ಆದರೆ ಟೆಂಡರ್ ಕರೆಯದೇ ಮೇಲಿನ ನಿಯಮಗಳನ್ನು ಉಲ್ಲಂಘಿಸಿ ವೆಚ್ಚ ಭರಿಸಲಾಗಿದೆ.

ಕ್ಯಾಂಪಸ್ ನಿರ್ವಹಣಾ ವ್ಯವಸ್ಥೆಯಡಿ ಪರೀಕ್ಷಾಂಗ ವಿಭಾಗದಲ್ಲಿ ಸ್ವಯಂಚಾಲಿತ ತಂತ್ರಾಂಶದ ಅಳವಡಿಕೆ(AUTOMATION OF EXAMINATATION DEPARTMENT SOFTWARE), ಪ್ರವೇಶಾತಿ ವಿಭಾಗದಲ್ಲಿ ದಾಖಲಿಕೆಯ ಸ್ವಯಂಚಾಲಿತ ತಂತ್ರಾಂಶದ ಅಳವಡಿಕೆ(AUTOMATION OF ADMISSION & ENROLLMENT DEPARTMENT SOFTWARE) ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಯೋಜನೆಯ ಸ್ವಯಂಚಾಲಿತ ತಂತ್ರಾಂಶದ ಅಳವಡಿಕೆ(AUTOMATION OF HUMAN RESOURCE DEVELOPMENT SOFTWARE) ತಂತ್ರಾಂಶಗಳನ್ನು ಸರ್ಕಾರವು ಉಚಿತವಾಗಿ ಈ ಕೆಳಕಂಡ ಆದೇಶಗಳಲ್ಲಿ ಅನುಷ್ಠಾನ ಗೊಳಿಸಲು ತಿಳಿಸಿರುತ್ತಾರೆ.

1. **ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ (HRMS).**
   ಸರ್ಕಾರದ ವತಿಯಿಂದ ಎಲ್ಲಾ ವಿಶ್ವ ವಿದ್ಯಾನಿಲಯಗಳ ನೌಕರರ ವೇತನ ಮತ್ತು ಭತ್ಯೆಗಳನ್ನು, ಸೇವಾ ವಿವರಗಳನ್ನು ಹೆಚ್ .ಆರ್.ಎಂ.ಎಸ್‌ನಲ್ಲಿ ಅಳವಡಿಸಲು ಸಮನ್ವಯ ಅಧಿಕಾರಿ, ಇ-ಆಡಳಿತ ವಿಭಾಗ, ಉನ್ನತಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಆದೇಶ ಸಂಖ್ಯೆ: ಇಡಿ30 ಮಾಹಿತಿ 2015, ದಿನಾಂಕ: 19.10.2015 & 05.02.2016ರಲ್ಲಿ ಮಂಗಳೂರು ವಿಶ್ವ ವಿದ್ಯಾನಿಲಯದ ಅಧಿಕಾರಿ ಮತ್ತು ನೌಕರರುಗಳಿಗೆ ತರಭೇತಿಗಳನ್ನು ನೀಡಲಾಗಿರುತ್ತದೆ ಹಾಗೂ ಹೆಚ್.ಆರ್.ಎಂ.ಎಸ್‌ನಲ್ಲಿ ಸೇವಾ ವಿವರಗಳನ್ನು ಅಳವಡಿಸುವ ಬಗೆಗಿನ ವಿಶ್ವ ವಿದ್ಯಾನಿಲಯದ ಮಟ್ಟದ ಪೂರ್ವಭಾವಿ ಸಭೆಗೂ ಸಹ ದಿನಾಂಕ: 18.05.2019ರಂದು ಮಂಗಳೂರು ವಿಶ್ವ ವಿದ್ಯಾನಿಲಯದ ಹಣಕಾಸು ಅಧಿಕಾರಿಗಳು ಹಾಜರಾಗಿರುತ್ತಾರೆ. ಸರ್ಕಾರದ ಅದೇಶ ಸಂಖ್ಯೆ ED 7 UKV 2017 ಬೆಂಗಳೂರು, ದಿನಾಂಕ: 30.12.2019 ಮತ್ತು ಶಿಇ 8 ಹೆಚ್.ಪಿ.ಸಿ. 2019 ಬೆಂಗಳೂರು, ದಿನಾಂಕ: 13.01.2020 ರಲ್ಲಿ ಹಾಗೂ ಇನ್ನೂ ಕೆಲವು ಆದೇಶಗಳಲ್ಲಿ ವಿಶ್ವ ವಿದ್ಯಾನಿಲಯ ವ್ಯಾಪ್ತಿಯ ಬೋಧಕ & ಬೋಧಕೇತರರ ಸಿಬ್ಬಂದಿಗಳ ಮಾಹಿತಿಯನ್ನು ಹೆಚ್.ಆರ್.ಎಂ.ಎಸ್‌ನಲ್ಲಿ ಅಳವಡಿಸಿ ವೇತನಾನುದಾನವನ್ನು K2-ಮೂಲಕ ಬಿಡುಗಡೆಗೊಳಿಸುವುದಾಗಿ ನಿರ್ಣಯಿಸಿ ಆದೇಶಿಸಲಾಗಿದ್ದರೂ ಸಹ ವಿಶ್ವ ವಿದ್ಯಾನಿಲಯದ ವತಿಯಿಂದ ಸ್ವಯಂಚಾಲಿತ ಮಾನವ ಸಂಪನ್ಮೂಲ ಅಭಿವೃದ್ಧಿ ತಂತ್ರಾಂಶ ಅಳವಡಿಸಿಕೊಳ್ಳಲು ಕಿಯೋನಿಕ್ಸ್ ಸಂಸ್ಥೆಗೆ ಪರವನಾಗಿ ಶುಲ್ಕವಾಗಿ ರೂ. 57,23,000-00 ಗಳನ್ನು ಪಾವತಿಸುವ ಮೂಲಕ ಸರ್ಕಾರವು ಆಭಿವೃದ್ಧಿ ಪಡಿಸಿರುವ ಮತ್ತು ಉಚಿತವಾಗಿ ಲಭ್ಯವಿರುವ ಹೆಚ್. ಆರ್.ಎಂ.ಎಸ್. ತಂತ್ರಾಂಶವನ್ನು ಉಪಯೋಗಿಸಿಕೊಂಡು ವಿಶ್ವ ವಿದ್ಯಾನಿಲಯದ ನೌಕರರ ಸೇವಾ ವಿವರಗಳನ್ನು

ದಾಖಲಿಸುವಂತೆ ನೀಡಿರುವ ನಿರ್ದೇಶನಗಳನ್ನು ಉಲ್ಲಂಘಿಸಿ ವಿಶ್ವ ವಿದ್ಯಾನಿಲಯಕ್ಕೆ ಆರ್ಥಿಕ ನಷ್ಠ ಉಂಟು ಮಾಡಲಾಗಿರುತ್ತದೆ.

**2. ಪರಿಕ್ಷಾಂಗ ವಿಭಾಗದ ಸ್ವಯಂ ಚಾಲಿತ ತಂತ್ರಾಂಶ ಅಳವಡಿಕೆ.**

ಕ್ಯಾಂಪಸ್ ಮ್ಯಾನೇಜ್ ಮೆಂಟ್ ವ್ಯವಸ್ಥೆಯಡಿ ಪರಿಕ್ಷಾಂಗ ವಿಭಾಗದ ಸ್ವಯಂಚಾಲಿತ ತಂತ್ರಾಂಶ ಅಳವಡಿಸಿಕೊಳ್ಳುವ ಪರವನಾಗಿ ಶುಲ್ಕವಾಗಿ **ರೂ.**58,41,000-00ಗಳನ್ನು ಕಿಯೋನಿಕ್ಸ್ ಸಂಸ್ಥೆಗೆ ಪಾವತಿಸಲಾಗಿರುತ್ತದೆ. ಆದರೆ ವಿಶ್ವ ವಿದ್ಯಾನಿಲಯದಿಂದ ಆಟ್ರೇಸ್ ಟೆಕ್ನಾಲಜೀಸ್ ಬೆಂಗಳೂರು ಇವರಿಗೆ ಪರೀಕ್ಷಾ ಕಾರ್ಯ ನಿರ್ವಹಣೆ ಮಾಡಲು(ಎಂಡ್ ಟು ಎಂಡ್ ಎಗ್ಸಾಮಿನೇಷನ್ ಪ್ರೋಸಸ್) ಸೇವೆಯನ್ನು ಪಡೆಯಲಾಗಿದ್ದು ಈಗಾಗಲೇ **ರೂ.**2,21,83,848-00ಗಳನ್ನು ಪಾವತಿಸುವ (ಸಾಮಾನ್ಯ ನಿಧಿಯಿಂದ) ಮೂಲಕ ಪರೀಕ್ಷಾ ಕಾರ್ಯಗಳ ಸಂಪೂರ್ಣ ಕೆಲಸಗಳನ್ನು ( ಎಂಡ್ ಟು ಎಂಡ್) ನಿರ್ವಹಿಸಲಾಗಿರುತ್ತದೆ. ಆದರೂ ಸಹ ಕಿಯೋನಿಕ್ಸ್ ಸಂಸ್ಥೆಯ ವತಿಯಿಂದ ಪರಿಕ್ಷಾಂಗ ವಿಭಾಗದ ಸ್ವಯಂಚಾಲಿತ ತಂತ್ರಾಂಶ ಅಳವಡಿಸಿಕೊಂಡು ಪರೀಕ್ಷಾ ಕಾರ್ಯಗಳನ್ನು ನಡೆಸಲು ಒಡಂಬಡಿಕೆ ಮಾಡಿಕೊಂಡು ತಂತ್ರಾಂಶ ಪರವನಾಗಿ ಶುಲ್ಕವಾಗಿ **ರೂ.**58,41,000-00ಗಳನ್ನು ಪಾವತಿಸುವ ಮೂಲಕ ವಿಶ್ವ ವಿದ್ಯಾನಿಲಯಕ್ಕೆ ಅನಗತ್ಯ ಆರ್ಥಿಕ ನಷ್ಠ ಉಂಟು ಮಾಡಲಾಗಿರುತ್ತದೆ.

3. **ವಿದ್ಯಾರ್ಥಿಗಳ ಪ್ರವೇಶಾತಿ ವಿವರಗಳನ್ನು ದಾಖಲಿಸುವಿಕೆಯ ಸ್ವಯಂಚಾಲಿತ ತಂತ್ರಾಂಶವನ್ನು ಹೊಂದುವುದು. (AUTOMATION OF ADMISSION & ENROLLMENT DEPARTMENT SOFTWARE )**

ಕ್ಯಾಂಪಸ್ ಮ್ಯಾನೇಜ್ ಮೆಂಟ್ ವ್ಯವಸ್ಥೆಯಡಿ ವಿದ್ಯಾರ್ಥಿಗಳ ಪ್ರವೇಶಾತಿ & ದಾಖಲಾತಿಗಳ ವಿಭಾಗದಲ್ಲಿ ದಾಖಲಿಸುವಿಕೆಯ ಸ್ವಯಂಚಾಲಿತ ತಂತ್ರಾಂಶವನ್ನು ಅಳವಡಿಸಿಕೊಳ್ಳುವ ಪರವನಾಗಿ ಶುಲ್ಕವಾಗಿ ರೂ.35,04,600.00ಗಳನ್ನು ಕಿಯೋನಿಕ್ಸ್ ಸಂಸ್ಥೆಗೆ ಪಾವತಿಸಲಾಗಿರುತ್ತದೆ. ಆದರೆ ವಿಶ್ವ ವಿದ್ಯಾನಿಲಯದ ಶೈಕ್ಷಣಿಕ ವಿಭಾಗದ ವತಿಯಿಂದ ಪ್ರವೇಶಾತಿ ಪ್ರಕ್ರಿಯೆಯನ್ನು ಕೈಗೊಳ್ಳುತ್ತಿದ್ದು ಪ್ರವೇಶಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಪ್ರವೇಶಾತಿ & ದಾಖಲಾತಿಗಳ ವಿಭಾಗದಲ್ಲಿ ದಾಖಲಿಸುವಿಕೆಯ ಸ್ವಯಂಚಾಲಿತ ತಂತ್ರಾಂಶವನ್ನು ಅಳವಡಿಸಿಕೊಳ್ಳಲು ಸರ್ಕಾರದ ವತಿಯಿಂದ ಸಮಗ್ರ ವಿಶ್ವ ವಿದ್ಯಾನಿಲಯ ಮತ್ತು ಕಾಲೇಜು ನಿರ್ವಾಹಣೆ ವ್ಯವಸ್ಥೆಯನ್ನು ಜಾರಿಗೆ ತರಲು ಸರ್ಕಾರದ ಆದೇಶ ಸಂಖ್ಯೆ ಇಆ 35 ಇಜಿಒವಿ2020 ಬೆಂಗಳೂರು, ದಿನಾಂಕ 04-08-2020 ಮತ್ತು 23-11-2020ರಲ್ಲಿ ಆದೇಶ ಹೊರಡಿಸಿ ವಿಶ್ವ ವಿದ್ಯಾನಿಲಯಗಳಲ್ಲಿ ಇ-ಆಡಳಿತ ಘಟಕಗಳನ್ನು ಸ್ಥಾಪಿಸಿ ಪ್ರವೇಶಾತಿ & ದಾಖಲಾತಿ ತಂತ್ರಾಂಶವನ್ನು ಅಳವಡಿಸಿ ಕೊಳ್ಳುವ ಪ್ರಕ್ರಿಯೆಯು ಜಾರಿಯಲ್ಲಿದ್ದರೂ ಕಿಯೋನಿಕ್ಸ್ ಸಂಸ್ಥೆಯ ವತಿಯಿಂದ ಹೊಸದಾಗಿ ಪ್ರವೇಶಾತಿ & ದಾಖಲಾತಿಗಳ ವಿಭಾಗದಲ್ಲಿ ದಾಖಲಿಸುವಿಕೆಯ ಸ್ವಯಂಚಾಲಿತ ತಂತ್ರಾಂಶವನ್ನು ಅಳವಡಿಸಿಕೊಳ್ಳುವ ಮೂಲಕ ವಿಶ್ವ ವಿದ್ಯಾನಿಲಯಕ್ಕೆ ಅನಗತ್ಯ ಆರ್ಥಿಕ ನಷ್ಟ ಉಂಟು ಮಾಡಲಾಗಿರುತ್ತದೆ.

ಮೇಲೆ ವಿವರಿಸಿದ ಮೂರು ಬಾಬ್ತುಗಳ **ಒಟ್ಟು ಪಾವತಿ ರೂ.**1,50,68,600-00 (ರೂ.5723000+ರೂ.5841000+ ರೂ.3504600)**ಗಳ ಮೂಲಕ** ವಿಶ್ವ ವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಆಗಿರುವ ಬಗ್ಗೆ ಸೂಕ್ತ ವಿವರಣೆಯನ್ನು ಲೆಕ್ಕಪರಿಶೋಧನೆಗೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ: 175/29.10.2021 ಮತ್ತು 189/ 02.11.2021 ಗಳಲ್ಲಿ ಕೋರಲಾಗಿತ್ತು, ವಿಶ್ವ ವಿದ್ಯಾನಿಲಯದವರು ದಿನಾಂಕ: 23-12-2021ರಂದು ನೀಡಿರುವ ಅನುಪಾಲನಾ ವರದಿಯಲ್ಲಿ;

1. ಮಾನವ ಸಂಪನ್ಮೂಲ ಮತ್ತು ವೇತನ ಪಟ್ಟಿ ವಿಭಾಗಕ್ಕೆ ಮಾದರಿ ತಂತ್ರಾಂಶ ಅಳವಡಿಕೆಗೆ ಲೈಸನ್ಸ್ ಪಡೆಯುವ ಪ್ರಕ್ರಿಯೆಗಾಗಿ ಮಾತ್ರ ರೂ. 57.23 ಲಕ್ಷಗಳನ್ನು ಪಾವತಿಸಿದ್ದು, ಹೆಚ್.ಆರ್.ಎಂ.ಎಸ್ ಕಾರ್ಯಗಳಿಗೆ ಸಂಬಂಧಿಸಿದಂತೆ ಈ ವರೆವಿಗೆ ಯಾವುದೇ ಸೇವೆಯನ್ನು ಪಡೆದಿರುವುದಿಲ್ಲ.
2. ವಿಶ್ವ ವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಮೆ.ಆರ್ಟ್ರೆಚ್ ಟೆಕ್ನಾಲಜೀಸ್ ರವರ ಸೇವೆಯನ್ನು 2015 ರಿಂದ 2020ರ ವರೆಗೆ ಪಡೆಯಲಾಗಿರುತ್ತದೆ. ಸದರಿ ಸಂಸ್ಥೆಯೊಡಗಿನ ಕರಾರು ಮುಕ್ತಾಯವಾಗುವ ಪೂರ್ವದಲ್ಲಿ ಪರೀಕ್ಷಾ ಕಾರ್ಯಗಳನ್ನು ಮುಂದುವರೆಸುವ ಉದ್ದೇಶದಿಂದ ಮೆ. ಕಿಯೋನಿಕ್ಸ್ ಸಂಸ್ಥೆಗೆ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದ ಮಾದರಿ ತಂತ್ರಾಂಶ ಅಳವಡಿಕೆಗೆ ಲೈಸನ್ಸ್ ಪಡೆಯುವ ಪ್ರಕ್ರಿಯೆಗಾಗಿ ಮಾತ್ರ ರೂ. 58.41 ಲಕ್ಷಗಳನ್ನು ಪಾವತಿಸಿದ್ದು, ಈ ಕಾರ್ಯಗಳಿಗೆ ಸಂಬಂಧಿಸಿದಂತೆ ಈ ವರೆವಿಗೆ ಯಾವುದೇ ಸೇವೆಯನ್ನು ಪಡೆದಿರುವುದಿಲ್ಲ.

3. ದಿನಾಂಕ: 17-12-2020ರಂದು ನಡೆದ ವಿಶ್ವ ವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ಕ್ಯಾಂಪಸ್ ನಿರ್ವಹಣಾ ವ್ಯವಸ್ಥೆಯಿಂದ ಹೆಚ್.ಆರ್.ಎಂ.ಎಸ್. ಮತ್ತು ಪರೀಕ್ಷಾ ವ್ಯವಸ್ಥೆಗಳ ಆಟೋಮೇಷನ್ ನಿರ್ಣಯಗಳನ್ನು ಕೈಬಿಡಲು ಹಾಗೂ ಪ್ರವೇಶಾತಿ ಪ್ರಕ್ರಿಯೆಯನ್ನು ಮಾತ್ರ ಈ ಯೋಜನೆಯಡಿ ಕೈ ಗೊಳ್ಳಲು ತೀರ್ಮಾನವಾಗಿರುವುದಾಗಿ ಮತ್ತು ದಿನಾಂಕ:12-01-2021ರಂದು ನಡೆದ ಇ-ಆಡಳಿತ ಸಮಿತಿ ಸಭೆಯಲ್ಲಿ ಇದನ್ನೇ ಶಿಫಾರಸ್ಸು ಮಾಡಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು 2020-21ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪ್ರವೇಶಾತಿ ಮಾಹಿತಿಯನ್ನು ಕಾಲೇಜು/ ವಿಶ್ವ ವಿದ್ಯಾನಿಲಯದ ವಿಭಾಗಗಳಿಂದ ಪಡೆದು ವಿಶ್ವ ವಿದ್ಯಾನಿಲಯದ ಲಭ್ಯ ಸರ್ವರ್‌ನ್ನು ಬಳಸಿಕೊಂಡು ಅಪ್‌ಲೋಡ್ ಮಾಡಿ ವರದಿ ನೀಡಲು ಮೆ.ಕ್ಯಾಂಪಸ್ ಮ್ಯಾನೇಜ್‌ಮೆಂಟ್ ಸಂಸ್ಥೆಗೆ ದಿನಾಂಕ: 06-02-2021ರ ವಿಶ್ವ ವಿದ್ಯಾನಿಲಯದ ಪತ್ರದಲ್ಲಿ ತಿಳಿಸಲಾಗಿರುತ್ತದೆ. ಪ್ರವೇಶಾತಿ ಹಾಗೂ ದಾಖಲಾತಿ ವಿಭಾಗದ ತಂತ್ರಾಂಶವನ್ನು ಅಳವಡಿಸಿಕೊಳ್ಳಲು ಸರ್ಕಾರದಿಂದ ದಿನಾಂಕ: 04-08-2020 ಮತ್ತು ದಿನಾಂಕ: 23-11-2020ರಂದು ಆದೇಶ ಬಂದಿರುವುದಾಗಿಯೂ, ಆದರೆ ವಿಶ್ವ ವಿದ್ಯಾನಿಲಯದಲ್ಲಿ ಮೇಲಿನ ಮೂರು ಯೋಜನೆಗಳ ಅನುಷ್ಠಾನಕ್ಕಾಗಿ ಸದರಿ ದಿನಾಂಕಗಳಿಗಿಂತ ಮುಂಚಿತವಾಗಿಯೇ ಮೆ. ಕಿಯೋನಿಕ್ಸ್ ಸಂಸ್ಥೆಗೆ ಆದೇಶ ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ ವಿಶ್ವ ವಿದ್ಯಾನಿಲಯದವರೇ ನೀಡಿರುವ ಉತ್ತರದನ್ವಯ 2020-21ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪ್ರವೇಶಾತಿ ಮಾಹಿತಿಯನ್ನು ಕಾಲೇಜು/ ವಿಶ್ವ ವಿದ್ಯಾನಿಲಯದ ವಿಭಾಗಗಳಿಂದ ಪಡೆದು ವಿಶ್ವ ವಿದ್ಯಾನಿಲಯದ ಲಭ್ಯ ಸರ್ವರ್‌ನ್ನು ಬಳಸಿಕೊಂಡು ಅಪ್‌ಲೋಡ್ ಮಾಡಿ ವರದಿ ನೀಡಲು ಮೆ.ಕ್ಯಾಂಪಸ್ ಮ್ಯಾನೇಜ್‌ಮೆಂಟ್ ಸಂಸ್ಥೆಗೆ ದಿನಾಂಕ:06-02-2021ರಂದು ತಿಳಿಸಿದ್ದು, ಸರ್ಕಾರದ ನಿರ್ದೇಶನ ಸ್ವೀಕರಿಸಿದ ನಂತರ ಕ್ರಮ ವಹಿಸಿರುವುದು ಕಂಡು ಬಂದಿರುತ್ತದೆ. ಅಲ್ಲದೆ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಮೆ.ಆರ್ಟ್ರಿಚ್ ಟೆಕ್ನಾಲಜೀಸ್‌ರವರ ಸೇವೆಯನ್ನು 2015 ರಿಂದ 2020ರವರೆಗೆ ಪಡೆಯಲಾಗಿದ್ದು, ಸದರಿ ಸಂಸ್ಥೆಯವರೊಡನೆಯ ಕರಾರು ಅವಧಿ ಮುಗಿಯುವ ಮೊದಲೇ ಮೆ.ಕಿಯೋಜಿಕ್ಸ್ ಸಂಸ್ಥೆಯೊಡನೆ ಹೊಸ ಕರಾರು ಮಾಡಿಕೊಂಡು ಮುಂಗಡ ಪಾವತಿಸಿರುವ ಔಚಿತ್ಯತೆ ಸ್ಪಷ್ಟವಾಗುವುದಿಲ್ಲ. ಹೆಚ್. ಆರ್. ಎಂ. ಎಸ್ ಹಾಗೂ ಪರೀಕ್ಷಾ ಪ್ರಕ್ರಿಯೆಗಳಿಗಾಗಿ ಹೊಸ ತಂತ್ರಾಂಶ ಒದಗಿಸುವ ಬಗ್ಗೆ ಸರ್ಕಾರದಿಂದ ಹಿಂದೆಯೇ ತಿಳಿಸಿ ತರಬೇತಿ ನೀಡಿದ್ದಾಗ್ಯೂ ಈ ವಿಷಯಗಳಿಗೆ ಸಂಬಂಧಿಸಿದ ತಂತ್ರಾಂಶಗಳ ಲೈಸೆನ್ಸ್ ಶುಲ್ಕಕ್ಕಾಗಿ ಮೆ.ಕಿಯೋನಿಕ್ಸ್ ಸಂಸ್ಥೆಗೆ ಮುಂಗಡ ಪಾವತಿಸಿರುವ ವಿಶ್ವ ವಿದ್ಯಾನಿಲಯದ ನಡೆಯು ಸಂಶಯಾಸ್ಪಧ ವಾದವಾಗಿರುತ್ತದೆ.

ಹೀಗೆ ಸರ್ಕಾರದಿಂದ ನೀಡುವ ಉಚಿತ ತಂತ್ರಾಂಶಗಳನ್ನು ವಿಶ್ವ ವಿದ್ಯಾನಿಲಯಗಳಲ್ಲಿ ಅಳವಡಿಸಿಕೊಳ್ಳುವಂತೆ ಸೂಚಿಸಿದ್ದರೂ ಸಹ ಪಾರದರ್ಶಕತೆಯ ನಿಯಮಗಳನ್ನು ಉಲ್ಲಂಘಿಸಿ ವಿಶ್ವ ವಿದ್ಯಾನಿಲಯವು ಮೆ.ಕಿಯೋನಿಕ್ಸ್ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಪಾವತಿಸಲಾಗಿರುವ ಒಟ್ಟು ಮೊತ್ತ ರೂ.1,50,68,600-00 ಗಳನ್ನು ಈ ನಷ್ಟಕ್ಕೆ ಕಾರಣರಾದ ಅಧಿಕಾರಿಗಳಿಂದ ವಸೂಲಿಸಿ ವಿಶ್ವ ವಿದ್ಯಾನಿಲಯದ ನಿಧಿಗೆ ಜಮೆ ಮಾಡಲು ಹಾಗೂ ಸಂಬಂಧಿಸಿದ ಅಧಿಕಾರಿ ಮತ್ತು ನೌಕರರ ವಿರುದ್ಧ ಆಡಳಿತಾತ್ಮಕ ಕ್ರಮ ವಹಿಸಲು ಸೂಚಿಸಿದೆ.

## 15. ಅನುದಾನಗಳ ಮಾರ್ಗ ಪಲ್ಲಟ

### 15.1 ಪ್ರಾಯೋಜಿತ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಅನುದಾನವನ್ನು ಸಾಮಾನ್ಯ ನಿಧಿಗೆ ವರ್ಗಾವಣೆ ಮಾಡಿರುವ ಕುರಿತು:

ವಿಶ್ವ ವಿದ್ಯಾನಿಲಯದ ಪ್ರಾಯೋಜಿತ ಕಾರ್ಯಕ್ರಮದ ನಗದು ಪುಸ್ತಕಗಳನ್ನು ಮತ್ತು ಬ್ಯಾಂಕ್ ಪಾಸ್ ಪುಸ್ತಕ (ಖಾತೆ ಸಂಖ್ಯೆ: 10094966504)ವನ್ನು ಪರಿಶೀಲಿಸಲಾಗಿ ಸದರಿ ಬ್ಯಾಂಕ್ ಖಾತೆಯಿಂದ ವಿವಿಧ ದಿನಾಂಕಗಳಂದು ಈ ಕೆಳಗಿನ ವಿವರಗಳಂತೆ ಒಟ್ಟು ರೂ.57,00,000/-ಗಳ ಅನುದಾನವನ್ನು ವಿಶ್ವ ವಿದ್ಯಾನಿಲಯದ ಸಾಮಾನ್ಯ ಖಾತೆಗೆ ವರ್ಗಾವಣೆ ಮಾಡಲಾಗಿರುತ್ತದೆ.

| ಕ್ರ.ಸಂ | ವರ್ಗಾವಣೆಯಾಗಿರುವ ಖಾತೆ ವಿವರ | ಖಾತೆ ಸಂಖ್ಯೆ | ದಿನಾಂಕ | ಮೊತ್ತ |
|---|---|---|---|---|
| 1 | General Cash Book(Vijaya Bank) | 112401010000284 | 29.08.2019 | 50,00,000 |
| 2 | General Cash Book(SBI Bank) | 10094965034 | 30.04.2019 | 7,00,000 |
| | | | ಒಟ್ಟು | 57,00,000 |

ಯೋಜನೆಯ ಮಾರ್ಗ ಸೂಚಿಯಂತೆ ಬಿಡುಗಡೆಯಾದ ಅನುದಾನವನ್ನು ಯಾವ ಕಾರ್ಯಕ್ರಮಕ್ಕೆ ಬಿಡುಗಡೆಯಾಗಿತ್ತೋ ಆದೇ ಕಾರ್ಯಕ್ರಮಕ್ಕೆ ವೆಚ್ಚ ಮಾಡಬೇಕಾಗಿರುತ್ತದೆ. ಇತರೆ ಯೋಜನೆಗಳ ಲೆಕ್ಕ ಶೀರ್ಷಿಕೆಗಳಿಗೆ ಅಥವಾ ಬ್ಯಾಂಕ್ ಖಾತೆಗಳಿಗೆ ಅನುದಾನವನ್ನು ಮಾರ್ಗ ಪಲ್ಲಟ ಮಾಡಿಕೊಂಡು ಬಳಸಲು ಅವಕಾಶವಿರುವುದಿಲ್ಲ. ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯಗಳ ಕಾಯ್ದೆ-2000ರ ಪ್ರಕರಣ-48(4)ರ ಪ್ರಕಾರ, ವಿಶ್ವ ವಿದ್ಯಾಲಯವು ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಣವನ್ನು ಇತರ ಉದ್ದೇಶಗಳಿಗಾಗಿ ಮಾರ್ಗ ಪಲ್ಲಟ

ಮಾಡತಕ್ಕದಲ್ಲ ಎಂದು ತಿಳಿಸಿದ್ದರೂ ಅನುದಾನವನ್ನು ವರ್ಗಾವಣೆ ಮಾಡಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ಸೂಕ್ತ ವಿವರಣೆ ನೀಡುವಂತೆ ಲೆಕ್ಕ ತಪಾಸಣಾ ವಿಚಾರಣಾ ಪತ್ರ ಸಂಖ್ಯೆ: 208/2021-22 ದಿ: 06.11.2021ರಲ್ಲಿ ಕೋರಲಾಗಿ ರೂ.50.00ಲಕ್ಷಗಳು ಕಣ್ತಪ್ಪಿನಿಂದ ವಿಜಯಬ್ಯಾಂಕ್ ಸಾಮಾನ್ಯನಿಧಿ ಖಾತೆಗೆ ವರ್ಗಾವಣೆಯಾಗಿರುವುದಾಗಿ ಹಾಗೂ ರೂ.7.00 ಲಕ್ಷಗಳನ್ನು ಡಾ. ಪ್ರಕಾಶ್ ಕಂಪ್ಯೂಟರ್ ಸೈನ್ಸ್ ಭಾಗ, ಇವರಿಗೆ ಡಿ.ವಿ.ಎಸ್ ಕಾರ್ಯಾಗಾರ ಆಯೋಜಿಸಲು ಮಂಜೂರು ಮಾಡಿ ವರ್ಗಾಯಿಸಿರುವುದಾಗಿ ತಿಳಿಸಿರುತ್ತಾರೆ. ಈ ಮೊತ್ತವು ಸಂಬಂಧಿತ ಖಾತೆಗಳಿಗೆ ಹಿಂಭರಿಕೆಯಾಗಿರುತ್ತದೆ. ಕೇಂದ್ರ/ ರಾಜ್ಯ/ ಇತರೆ ಅಂಗ ಸಂಸ್ಥೆಗಳಿಂದ ಮಂಜೂರಾದ ಅನುದಾನವನ್ನು ಯೋಜನೆಗಳ ಮಾರ್ಗಸೂಚಿಯನ್ನು ಉಲ್ಲಂಘಿಸದೇ ಉದ್ದೇಶಿತ ಕಾರ್ಯಗಳಿಗೆ ಮಾತ್ರವೇ ಉಪಯೋಗಿಸಲು ಸೂಚಿಸಿದೆ.

**15.2 ನಿಯಂತ್ರಣವಿಲ್ಲದ ಆಂತರಿಕ ವರ್ಗಾವಣೆಗಳು**(Uncontrolled Internal Fund Transfers)

ವಿಶ್ವ ವಿದ್ಯಾನಿಲಯದಲ್ಲಿ 2019-20ನೇ ಸಾಲಿನಲ್ಲಿ 190 ಬ್ಯಾಂಕ್ ಖಾತೆಗಳನ್ನು ಕಾರ್ಯಕ್ರಮಗಳಿಗನುಗುಣವಾಗಿ ನಿರ್ವಹಿಸಲಾಗುತ್ತಿದೆ. ಪದೇ ಪದೇ ಒಂದು ಖಾತೆಯಿಂದ ಮತ್ತೊಂದು ಖಾತೆಗೆ ನಿಧಿಯನ್ನು ಆಗಾಗ್ಗೆ ಹಣವನ್ನು ಈ ಖಾತೆಗಳ ನಡುವೆ ವರ್ಗಾಯಿಸಿರುವುದು ಕಂಡು ಬಂದಿರುತ್ತದೆ. ಹೀಗೆ ವರ್ಗಾವಣೆ ಮಾಡಿರುವ ಮೊತ್ತ 2019-20ನೇ ಸಾಲಿನಲ್ಲಿ ರೂ.224,87,77,757/-ಗಳಾಗಿರುತ್ತದೆ. ವಿವರಗಳನ್ನು ಅನುಬಂಧ-10ರಲ್ಲಿ ನೀಡಲಾಗಿದೆ. ಆದರೆ ಈ ಬಗೆಯ ವರ್ಗಾವಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಅಧಿಕೃತ ವಹಿ /ದಾಖಲೆಯನ್ನು ವಿಶ್ವ ವಿದ್ಯಾನಿಲಯದಲ್ಲಿ ನಿರ್ವಹಿಸಿರುವುದಿಲ್ಲ. ಹೀಗೆ ವಿಶ್ವ ವಿದ್ಯಾಲಯದ ವಿವಿಧ ನಿಧಿಗಳ ಆಂತರಿಕ ವರ್ಗಾವಣೆಗಳಿಗೆ ಸಂಬಂಧಿಸಿದಂತೆ ಯಾವುದೇ ವಹಿಯನ್ನು ನಿರ್ವಹಿಸದಿರುವುದರಿಂದ, ಈ ಸಾಲಿನಲ್ಲಿ ಆಂತರಿಕವಾಗಿ ವರ್ಗಾವಣೆಗೊಂಡ ಮೊತ್ತಗಳ ನಿಖರ ವಿವರಗಳನ್ನು ತಿಳಿಯಲು ಸಾಧ್ಯವಾಗಿರುವುದಿಲ್ಲ. ಹೀಗಾಗಿ ಲೆಕ್ಕ ಪತ್ರ ನಿರ್ವಹಣೆಯಲ್ಲಿ ಕೂಡ ಲೋಪ ಉಂಟಾಗಿ ವಿಶ್ವ ವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಅನಿವಾರ್ಯವಾಗಿ ಆಂತರಿಕ ನಿಧಿ ವರ್ಗಾವಣೆ ಮಾಡಬೇಕಾದ ಸಂದರ್ಭದಲ್ಲಿ ಸಕ್ಷಮ ಪ್ರಾಧಿಕಾರ ಹಾಗೂ ಅನುದಾನ ನೀಡಿದ ಸಂಸ್ಥೆಗಳಿಂದ ಅನುಮೋದನೆ ಪಡೆದು ಕೊಂಡು ವಹಿಯಲ್ಲಿ ದಾಖಲಿಸಿ, ನಂತರ ಆ ಬಗ್ಗೆ ಕ್ರಮ ವಹಿಸುವುದು ಸೂಕ್ತವಾಗಿರುತ್ತದೆ. ನಿರ್ದಿಷ್ಟ ಕಾರ್ಯಕ್ರಮ/ ಉದ್ದೇಶಕ್ಕಾಗಿ ತೆರೆದ ಬ್ಯಾಂಕ್ ಖಾತೆಯಲ್ಲಿನ ಹಣವನ್ನು ಸದರಿ ಕಾರ್ಯಕ್ರಮದ ಉದ್ದೇಶಕ್ಕೆ ಮಾತ್ರವೇ ಬಳಸಬೇಕಾಗಿರುತ್ತದೆ. ಆದರೆ ವಿಶ್ವ ವಿದ್ಯಾನಿಲಯವು ಯಾವುದಾದರೂ ಕಾರ್ಯಕ್ರಮದ ಬ್ಯಾಂಕ್ ಖಾತೆಯಲ್ಲಿ ಅನುದಾನ ಲಭ್ಯವಿಲ್ಲದಿದ್ದಾಗ ಮತ್ತೊಂದು ಕಾರ್ಯಕ್ರಮದ ಬ್ಯಾಂಕ್ ಖಾತೆಯಿಂದ ಅನುದಾನವನ್ನು ಯಾವುದೇ ನಿಯಂತ್ರಣವಿಲ್ಲದೆ ವರ್ಗಾಯಿಸುತ್ತಿರುವುದು ಸಮರ್ಥನೀಯವಾದ ಕ್ರಮವಾಗಿರುವುದಿಲ್ಲ.

15.3 **ಕೆನರಾ ಬ್ಯಾಂಕ್ (ಸಾಮಾನ್ಯ) ಖಾತೆಯಿಂದ ಎಸ್.ಬಿ.ಐ ಮಂಗಳಗಂಗೋತ್ರಿ ಖಾತೆಗೆ ಹಣ ವರ್ಗಾವಣೆ ಯಾಗದಿರುವುದು.**

2019-20ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಗೋಣಿಕೊಪ್ಪದಲ್ಲಿರುವ ಕೆನರಾ ಬ್ಯಾಂಕ್**ನ**ಲ್ಲಿ ನಿರ್ವಹಿಸಲಾಗಿರುವ ಜಿ.ಆರ್.ಐ ಖಾತೆ ಸಂಖ್ಯೆ: 06861010180001ರ ನಗದು ಪುಸ್ತಕವನ್ನು ಪರಿಶೀಲಿಸಿದಾಗ ರೂ.12,98,700/-ಗಳನ್ನು ಎಸ್.ಬಿ.ಐ ಮಂಗಳಗಂಗೋತ್ರಿಯಲ್ಲಿರುವ ವಿಶ್ವವಿದ್ಯಾನಿಯಲಯದ ಜಿ.ಆರ್.ಐ ಖಾತೆ ಸಂಖ್ಯೆ:10094966480ಕ್ಕೆ ವರ್ಗಾವಣೆ ಮಾಡಿರುವುದಾಗಿ ವೆಚ್ಚ ತೋರಿಸಲಾಗಿದೆ.

ಮಂಗಳಗಂಗೋತ್ರಿಯಲ್ಲಿರುವ ವಿಶ್ವವಿದ್ಯಾನಿಲಯದ ವೆಚ್ಚದ ಖಾತೆ ಸಂಖ್ಯೆ:10094966480ರ ನಗದು ಪುಸ್ತಕ ಮತ್ತು ಬ್ಯಾಂಕ್ ಪಾಸ್ ಪುಸ್ತಕವನ್ನು ಪರಿಶೋಧಿಸಲಾಗಿ ಸದರಿ ಮೊತ್ತವು ಈ ಬ್ಯಾಂಕ್ ಖಾತೆಗೆ ಜಮೆಯಾಗದಿರುವುದು ಕಂಡು ಬಂದಿರುತ್ತದೆ. ಹೀಗೆ ವರ್ಗಾವಣೆಗೊಂಡ ಹಣ ಜಮೆಯಾಗದಿರುವುದಕ್ಕೆ ಸ್ಪಷ್ಟೀಕರಣ ನೀಡುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರಸಂಖ್ಯೆ: 149/2021-22 ದಿನಾಂಕ:26-10-2021ರಲ್ಲಿ ಕೋರಲಾಗಿತ್ತು.

ವಿಶ್ವ ವಿದ್ಯಾನಿಲಯದ ವಿತ್ತಾಧಿಕಾರಿಗಳು ತಮ್ಮ ಪತ್ರ ಸಂಖ್ಯೆ: ಮಂವಿ.ಹವಿ.2021-22,ದಿ:20-11-2021ರಲ್ಲಿ ಗೋಣಿಕೊಪ್ಪದಲ್ಲಿರುವ ಕೆನರಾ ಬ್ಯಾಂಕ್**ನ**ವರು ನೀಡಿರುವ ಡಿ.ಡಿ ಕಳೆದು ಹೋಗಿರುವುದರಿಂದ ಸದರಿ ಬ್ಯಾಂಕ್‌ನವರೊಂದಿಗೆ ಪತ್ರ ವ್ಯವಹಾರ ಮಾಡಿ ದಿನಾಂಕ: 16.11.2021ರಂದು ರೂ.12,98,700ಗಳಿಗೆ ಡಿಡಿಯನ್ನು ಪಡೆದು ವಿಶ್ವವಿದ್ಯಾನಿಲಯದ ಬ್ಯಾಂಕ್ ಖಾತೆ ಸಂಖ್ಯೆ:10094966480ಕ್ಕೆ ಜಮೆ ಮಾಡಲಾಗಿದೆ ಎಂದು ಉತ್ತರಿಸಿ ಜಮೆ ಮಾಡಿರುವುದಕ್ಕೆ ಚಲನ್‌ನ ಪ್ರತಿ ಹಾಗೂ ಹಣ ಜಮೆಯಾಗಿರುವುದಕ್ಕೆ ಬ್ಯಾಂಕ್ ಪಾಸ್ ಶೀಟ್‌ನ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ. ಲೆಕ್ಕಪರಿಶೋಧನೆಯಲ್ಲಿ ಗಮನಿಸಿ ವಿಚಾರಣಾ ಪತ್ರ ನೀಡಿದ ನಂತರ ಈ ಬಗ್ಗೆ ಕ್ರಮಕೈಗೊಂಡು ಒಂದು ವರ್ಷ, ಐದು ತಿಂಗಳು, 15 ದಿನ ವಿಳಂಬವಾಗಿ ಜಮೆ ಮಾಡುವುದರ ಮೂಲಕ

ವಿಶ್ವ ವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವುದರಿಂದ ಈ ಮೊತ್ತ ರೂ.12,98,700ಗಳಿಗೆ ಆ ಸಮಯದಲ್ಲಿ ಎಸ್.ಬಿ.ಐನಲ್ಲಿ ನಿಶ್ಚಿತ ಠೇವಣಿಗಳಿಗೆ ನೀಡುತ್ತಿದ್ದ ಬಡ್ಡಿಯ ದರ ವಾರ್ಷಿಕ ಶೇ. 7ರಂತೆ ಬಡ್ಡಿಯ ಮೊತ್ತ ರೂ. 1,51,515/-ಗಳನ್ನು ವಿಶ್ವ ವಿದ್ಯಾನಿಲಯದ ವಿತ್ತಾಧಿಕಾರಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಿಸಿ ವಿಶ್ವ ವಿದ್ಯಾನಿಲಯದ ಬ್ಯಾಂಕ್ ಖಾತೆಗೆ ಜಮೆ ಮಾಡಲು ಸೂಚಿಸಿದೆ.

**15.4 ರಾಷ್ಟ್ರೀಯ ಉಚ್ಛತಮ ಶಿಕ್ಷಣ ಅಭಿಯಾನ ಯೋಜನೆಗೆ ಬಿಡುಗಡೆಯಾದ ಅನುದಾನವನ್ನು ಸಾಮಾನ್ಯನಿಧಿಗೆ ವರ್ಗಾವಣೆ ಮಾಡಿರುವುದು.**

2019-20ನೇ ಸಾಲಿನಲ್ಲಿ ರಾಷ್ಟ್ರೀಯ ಉಚ್ಛತಮ ಶಿಕ್ಷಣ ಅಭಿಯಾನ ಯೋಜನೆಗೆ ಬಿಡುಗಡೆಯಾದ ಅನುದಾನದ ಮೊತ್ತದಲ್ಲಿ ರೂ. 5.00 ಕೋಟಿಗಳನ್ನು ದಿನಾಂಕ:30.12.2019ರಲ್ಲಿ ಸಾಮಾನ್ಯ ನಿಧಿ ಖಾತೆ ಸಂಖ್ಯೆ 10094965034ಕ್ಕೆ ವರ್ಗಾಯಿಸಲಾಗಿದೆ. ಯೋಜನೆಯ ಮಾರ್ಗಸೂಚಿ ಸಂ: 16.1(4) ರಂತೆ ಯೋಜನೆಗೆ ಬಿಡುಗಡೆಯಾದ ಅನುದಾನವನ್ನು ಬೇರೆ ಉದ್ದೇಶಕ್ಕೆ ವರ್ಗಾವಣೆ ಮಾಡಲು ಅವಕಾಶವಿರುವುದಿಲ್ಲ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-**2000ರ** ಪ್ರಕರಣ-48(4)ರ ಪ್ರಕಾರ, ವಿಶ್ವ ವಿದ್ಯಾಲಯವು ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಣವನ್ನು ಇತರ ಉದ್ದೇಶಗಳಿಗಾಗಿ **ಮಾರ್ಗ ಪಲ್ಲಟ ಮಾಡುವಂತಿಲ್ಲ. ಹೀಗಿದ್ದರೂ** ಮಾರ್ಗಸೂಚಿಗಳು ಹಾಗೂ ಕಾಯ್ದೆ ಉಲ್ಲಂಘಿಸಿ ಅನುದಾನವನ್ನು ವರ್ಗಾವಣೆ ಮಾಡಿರುವುದಕ್ಕೆ ಸ್ಪಷ್ಟೀಕರಣ ನೀಡುವಂತೆ ಕೋರಿ ವಿಚಾರಣಾ ಸಂಖ್ಯೆ: 200/2021-22/02.11.2021ನ್ನು ನೀಡಲಾಗಿತ್ತು. ಇದಕ್ಕೆ ಹಣಕಾಸು ಅಧಿಕಾರಿಗಳು ದಿನಾಂಕ 16.11.2021ರ ಪತ್ರ ಸಂಖ್ಯೆ ಮಂವಿ/ಹವಿ/2021-22/ಹ21ರಲ್ಲಿ ಸಾಮಾನ್ಯನಿಧಿಗೆ ವರ್ಗಾವಣೆ ಮಾಡಲಾದ ರೂ.5.00ಕೋಟಿ ಮೊತ್ತವನ್ನು ರಾಷ್ಟ್ರೀಯ ಉಚ್ಛತಮ ಶಿಕ್ಷಣ ಅಭಿಯಾನ ಯೋಜನೆಯ ಖಾತೆಗೆ ಮರುವರ್ಗಾಯಿಸಲುಕ್ರಮಕೈಗೊಳ್ಳಲಾಗಿದೆ ಹೇಳಿರುತ್ತಾರೆ. ಆದರೆ ದಿನಾಂಕ 10.01.2020ರಲ್ಲಿ ರೂ.3.00 ಕೋಟಿಗಳು ಮಾತ್ರ ರೂಸಾ ಖಾತೆಸಂಖ್ಯೆ 30013822333ಗೆ ಜಮೆ ಆಗಿರುತ್ತದೆ. ಬಾಕಿ ಉಳಿದ ರೂ.2.00ಕೋಟಿಗಳು ರಾಷ್ಟ್ರೀಯ ಉಚ್ಛತಮ ಶಿಕ್ಷಣ ಅಭಿಯಾನ ಯೋಜನೆಯ ಖಾತೆಗೆ ಜಮೆಆಗಿರುವ ವಿವರಗಳನ್ನು ಲೆಕ್ಕಪರಿಶೋಧನಗೆ ಹಾಜರು ಪಡಿಸಿರುವುದಿಲ್ಲ. ಆದ್ದರಿಂದ ಇನ್ನು ಮುಂದೆ ಯೋಜನೆ ಕಾರ್ಯಕ್ರಮಗಳ ಮಾರ್ಗಸೂಚಿಯನ್ನು ಉಲ್ಲಂಘಿಸಿ ಯಾವುದೇ ಅನುದಾನ ವರ್ಗಾವಣೆಮಾಡದೇ ಇರಲು ಹಾಗೂ ಬಾಕಿ ಉಳಿದಿರುವ ರೂ 2.00ಕೋಟಿ ಅನುದಾನವನ್ನು ರೂಸಾ ಖಾತೆಗೆ ವರ್ಗಾವಣೆ ಮಾಡಿದ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು. ಹೀಗಾಗಿ ಮಾರ್ಗಸೂಚಿಯನ್ನು ಉಲ್ಲಂಘಿಸಿ ಹಣ ವರ್ಗಾವಣೆ ಮಾಡಿರುವ ಅಧಿಕಾರಿಗಳು ಮತ್ತು ಸಿಬ್ಬಂಧಿಗಳ ವಿರುದ್ದ ಆಡಳಿತಾತ್ಮಕ ಕ್ರಮ ವಹಿಸಲು ಸೂಚಿಸಿದೆ.

**16. ಬ್ಲಾಕ್ ಗ್ರಾಂಟ್**

ವಾರ್ಷಿಕ ಲೆಕ್ಕ ಪತ್ರದ ಪ್ರಕಾರ 2019-20ನೇ ಸಾಲಿನಲ್ಲಿ ವಿಶ್ವ ವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೇತನ ಭತ್ಯೆಗಳನ್ನು ಪಾವತಿಸಲು ರಾಜ್ಯ ಸರ್ಕಾರದಿಂದ ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗಿ ಬಿಡುಗಡೆಯಾಗಿರುವ ಬ್ಲಾಕ್ ಗ್ರಾಂಟ್ ಅನುದಾನ ಹಾಗೂ ಅದರ ವೆಚ್ಚಗಳ ಅಂಕಿ ಅಂಶಗಳು ಈ ಕೆಳಕಂಡಂತಿವೆ.

| **ಕ್ರ.ಸಂ** | **ಅನುದಾನ** | | **ವೆಚ್ಚ** | |
|---|---|---|---|---|
| | **ವಿವರಗಳು** | **ಮೊತ್ತ** | **ವಿವರಗಳು** | **ಮೊತ್ತ** |
| 01 | ಬ್ಲಾಕ್ ಗ್ರಾಂಟ್ | 52,25,00,000 | ವೇತನ & ಭತ್ಯೆಗಳ ಪಾವತಿ | 58,34,72,572 |

ಮೇಲಿನ ಕೋಷ್ಠಕದ ಅನುಸಾರ ಸರ್ಕಾರದಿಂದ ಸ್ವೀಕೃತವಾದ ಅನುದಾನ ರೂ.52,25,00,000ಗಳಲ್ಲಿ ರೂ.58,34,72,572ವೆಚ್ಚಗಳಾಗಿದ್ದು, ರೂ.6,09,72,572ಗಳು ಹೆಚ್ಚುವರಿ ವೆಚ್ಚವಾಗಿರುತ್ತದೆ. ಈ ಹೆಚ್ಚುವರಿ ವೆಚ್ಚವನ್ನು ವಿಶ್ವ ವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಭರಿಸಿರುತ್ತಾರೆ.

**17. ಕೇಂದ್ರ ಸರ್ಕಾರ ಮತ್ತು ವಿಶ್ವ ವಿದ್ಯಾನಿಲಯ ಧನ ಸಹಾಯ ಆಯೋಗದ ಅನುದಾನಗಳು.**

17.1 ರಾಷ್ಟ್ರೀಯ ಉಚ್ಚತರ್ ಶಿಕ್ಷಣ ಅಭಿಯಾನದಡಿ ಬಿಡುಗಡೆಯಾದ ಅನುದಾನವನ್ನು **ಯೋಜನಾ ಮಾರ್ಗಸೂಚಿಗಳಿಗೆ ವಿರುದ್ಧವಾಗಿ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿರುವುದು.**

ವಾರ್ಷಿಕ ಲೆಕ್ಕಪತ್ರದ ಪ್ರಕಾರ 2019-20ನೇ ಸಾಲಿನ ಆರಂಭದಲ್ಲಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಉನ್ನತ ಶಿಕ್ಷಣ ಇಲಾಖೆಯ ರಾಷ್ಟ್ರೀಯ ಉಚ್ಚತರ್ ಶಿಕ್ಷಣ ಅಭಿಯಾನದಡಿ ರೂ.17,22,292ಗಳ ಆರಂಭಿಕ ಶಿಲ್ಕು ರೂ.

5,00,00,000ಗಳ ಅನುದಾನ ಮಂಗಳೂರು ವಿಶ್ವವಿದ್ಯಾಲಯಕ್ಕೆ ಬಿಡುಗಡೆಯಾಗಿರುತ್ತದೆ. ಇದಲ್ಲದೆ ಠೇವಣಿಗಳ ಮೇಲಿನ ಬಡ್ಡಿ ರೂ. 2,10,779ಗಳು ಹಾಗೂ ಉಳಿತಾಯ ಖಾತೆಯಲ್ಲಿ ಪ್ರಾಪ್ತವಾದ ಬಡ್ಡಿ ರೂ.3,55,429ಗಳು, ಇತರೆ ಮೊತ್ತ ರೂ.21,523ಗಳು ಸ್ವೀಕೃತಿಯಾಗಿರುತ್ತದೆ. ಈ ಅವಧಿಯಲ್ಲಿ ಠೇವಣಿಗಳನ್ನು ಹಿಂಪಡೆದ ಮೊತ್ತ ರೂ.15,09,60,000ಗಳಿದ್ದು, ಒಟ್ಟು ಲಭ್ಯತೆ ರೂ. 20,32,70,020ಗಳಾಗಿರುತ್ತದೆ.

ಈ ಮೊತ್ತದಿಂದ ರೂ.500.00ಲಕ್ಷಗಳನ್ನು ಜಿ.ಆರ್.ಎ ಖಾತೆಗೆ ತಾತ್ಕಾಲಿಕವಾಗಿ ವರ್ಗಾವಣೆ ಮಾಡಿಕೊಂಡು ರೂ. 300.00ಲಕ್ಷಗಳನ್ನು ಮಾತ್ರ ಹಿಂಭರಿಕೆ ಮಾಡಿದ್ದು, ಆಡಿಟ್ ಸಂಧರ್ಭದಲ್ಲಿ ಬಾಕಿ ಮೊತ್ತ ರೂ.200.00ಲಕ್ಷಗಳು ಇನ್ನೂ ಹಿಂಭರಿಕೆಯಾಗಿರುವುದಿಲ್ಲ. ಹೀಗಾಗಿ ಹಿಂಭರಿಕೆಯಾಗದ ಮೊತ್ತ ರೂ.200.00ಲಕ್ಷಗಳನ್ನು ಹೊರತುಪಡಿಸಿ ಯೋಜನೆಯ ಖಾತೆಯಲ್ಲಿ ರೂ.18,32,70,020ಗಳು ಮಾತ್ರ ಲಭ್ಯವಿದ್ದು, ಸದರಿ ಸಾಲಿನಲ್ಲಿ ರೂ.20,15,353ಗಳನ್ನು ಮಾತ್ರ ವೆಚ್ಚ ಮಾಡಲಾಗಿರುತ್ತದೆ. ಹೀಗೆ ಕೇಂದ್ರ ಸರ್ಕಾರದ ಮಹತ್ವದ ಯೋಜನೆ ರೂಸಾದ ಅಡಿ ಬಿಡುಗಡೆ ಮಾಡಿರುವ ಅನುದಾನವನ್ನು ನಿಗದಿತ ಅವಧಿಯೊಳಗೆ ಯೋಜನೆ ಉದ್ದೇಶಗಳಿಗೆ ಬಳಕೆ ಮಾಡಿ ಕೊಳ್ಳದೇ ಇರುವುದನ್ನು ಗಮನಿಸಲಾಗಿದ್ದು, ಲಭ್ಯ ಅನುದಾನವನ್ನು ಉದ್ದೇಶಿತ ಕಾರ್ಯಕ್ರಮಗಳಿಗೆ ಬಳಸಿ ಕೊಳ್ಳಲು ಸೂಚಿಸಿದೆ.

### 17.2 ರಾಷ್ಟ್ರೀಯ ಉಚ್ಚತರ್ ಶಿಕ್ಷಣ ಅಭಿಯಾನ ಯೋಜನೆಯಡಿ ಸಾಕ್ಷ್ಯ ಚಿತ್ರನಿರ್ಮಿಸಿರುವುದು.

2019-20 ನೇ ಸಾಲಿನಲ್ಲಿ **ರೂಸಾ ಅನುದಾನ ಬಳಸಿಕೊಂಡು** ಮಂಗಳೂರು ವಿಶ್ವವಿದ್ಯಾಲಯದಬಗ್ಗೆ ಸಾಕ್ಷ್ಯ ಚಿತ್ರ ತಯಾರಿಸಲು **ಒಟ್ಟು ರೂ.**2,90,200-00ಗಳನ್ನು ವಿವಿಧ ಏಜೆನ್ಸಿಗಳಿಗೆ ಪಾವತಿ ಮಾಡಲಾಗಿರುತ್ತದೆ.

1. ಸಾಕ್ಷಚಿತ್ರದ ವಿಡಿಯೋ ಶೂಟಿಂಗ್ ಮಾಡಿರುವ ವೆಚ್ಚ - ರೂ.97000-00, ಧನಾದೇಶ ಸಂಖ್ಯೆ 251483 ದಿನಾಂಕ 03.10.2019 ,ಕೃಷ್ಣಪ್ರಸಾದ್ ಬಿ,ಫಿಲಂ ಮೇಕರ್, ಬೆಂಗಳೂರು
2. ಸಾಕ್ಷ್ಯಚಿತ್ರದ ಸ್ಕ್ರಿಪ್ಟ್ ಮತ್ತು ವಾಯ್ಸ್ ಓವರ್ ಮಾಡಿರುವವೆಚ್ಚ- ರೂ .96000-00, ಧನಾದೇಶ ಸಂಖ್ಯೆ 251484 ದಿನಾಂಕ 03.10.2019, ರೋಹಿತ್ ಬಿ.ಆರ್. ಫಿಲಂ ಮೇಕರ್ ಬೆಂಗಳೂರು
3. ಸಾಕ್ಷ್ಯ ಚಿತ್ರದ ವಿಡಿಯೋ ಶೂಟಿಂಗ್, ಗ್ರಾಫಿಕ್ಸ್ ಜೊತೆಗೆ ಎಡಿಟಿಂಗ್ ಮಾಡಿದ ವೆಚ್ಚ- ರೂ.97200-00, ಧನಾ ದೇಶ ಸಂಖ್ಯೆ 251486 ದಿನಾಂಕ 03.10.2019, ಶ್ರೀ ಮಧುರಾ ಹೆಗಡೆ, ಅನಾವರಣ, ಪುತ್ತೂರು ತಾಲ್ಲೂಕು,

ಸದರಿ ಸಾಕ್ಷ ಚಿತ್ರ ನಿರ್ಮಿಸುವುದಕ್ಕಾಗಿ ಟೆಂಡರ್ ಕರೆದಿರುವ ಬಗ್ಗೆ ದಾಖಲಾತಿಗಳನ್ನು ಒದಗಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ 73/2021-22/27.09.2021ನ್ನು ನೀಡಲಾಗಿತ್ತು.ಇದಕ್ಕೆ ರೂಸಾ ಸಂಯೋಜಕರು, ಮಂ.ವಿ.ವಿ. ಇವರು ದಿನಾಂಕ 16.11.2021ರ ತಮ್ಮ ಪತ್ರ ಸಂಖ್ಯೆ MU/PMEB/RUSA/2020-21/151ರಲ್ಲಿ ಸಾಕ್ಷ ಚಿತ್ರ ನಿರ್ಮಿಸುವ ಸಂದರ್ಭದಲ್ಲಿ ಚಿತ್ರೀಕರಣ, ಸ್ಕ್ರಿಫ್ಟ್ ಮತ್ತು ವಾಯ್ಸ್ ಓವರ್ ಮತ್ತು ಗ್ರಾಫಿಕ್ಸ್‌ಗೆ ಸಂಬಂಧಿಸಿದಂತೆ ಸಮಯ ಕಡಿಮೆ ಇದ್ದುದ್ದರಿಂದ ಸಾಕ್ಷ ಚಿತ್ರದಲ್ಲಿ ಪರಿಣಿತಿ ಹೊಂದಿದ್ದ ಬೇರೆಬೇರೆ ಸಂಸ್ಥೆಯವರಿಂದ ದರ ಪಟ್ಟಿ ಗಳನ್ನು ಪಡೆದು ಕೊಂಡು, ಕಡಿಮೆ ದರ ನಮೂದಿಸಿದವರಿಗೆ ಕಾರ್ಯಾದೇಶ ನೀಡಲಾಗಿದೆ ಎಂದು ಉತ್ತರಿಸಿರುತ್ತಾರೆ.ಆದರೆ ರೂಸ ಯೋಜನೆಯಡಿ ಈ ರೀತಿ ಸಾಕ್ಷ್ಯ ಚಿತ್ರ ನಿರ್ಮಿಸಲು ಅವಕಾಶವಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲವಾದ್ದರಿಂದ ಈ ಬಾಬ್ತು ವೆಚ್ಚ ಮಾಡಿರುವ ಒಟ್ಟು ಮೊತ್ತ ರೂ.2,90,200ಗಳನ್ನು ಆಕ್ಷೇಪಣೆಯಲ್ಲಿರಿಸಿದೆ.

### 17.3 ಯು.ಜಿ.ಸಿ 12ನೇ ಯೋಜನೆಯಡಿ ಬಿಡುಗಡೆಯಾದ ಅನುದಾನವನ್ನು ಬಳಸಿ ಕೊಳ್ಳದೆ ಬಡ್ಡಿ ಸಹಿತ ಹಿಂದಿರುಗಿಸಿರುವುದು.

ಯು.ಜಿ.ಸಿ **12ನೇ ಯೋಜನೆ** ಖಾತೆ (ಖಾತೆ ಸಂಖ್ಯೆ: 32606105169)ಯ ನಗದು ಪುಸ್ತಕ, ಬ್ಯಾಂಕ್ ಪಾಸ್ ಪುಸ್ತಕ ಮತ್ತು ಓಚರ್‌ಗಳ ಪರಿಶೀಲನೆಯಲ್ಲಿ ಯು.ಜಿ.ಸಿ. 12ನೇ ವಿಶೇಷ ಯೋಜನೆಯಡಿಯಲ್ಲಿ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿ ಮಹಿಳಾ ವಸತಿ ಗೃಹ ನಿರ್ಮಾಣಕ್ಕೆ ಒಟ್ಟು ರೂ.40,00,000/-ಗಳು ಮಂಜೂರಾಗಿದ್ದು, ಈ ಬಾಬ್ತು ಮೊದಲ ಕಂತಿನ ಮೊತ್ತ ರೂ.20,00,000/-ಗಳು ಧನಾದೇಶ ಸಂಖ್ಯೆ: 018030 ದಿ:19.05.2015ರಲ್ಲಿ ಬಿಡುಗಡೆಯಾಗಿರುತ್ತದೆ.

ಯು.ಜಿ.ಸಿ. ಪತ್ರಸಂಖ್ಯೆ: ಡಬ್ಲ್ಯೂ ಹೆಚ್ 438/2014-15 ಕೆಎಎಂಎ 004/ಯುಜಿಸಿ-ಎಸ್‌ಡಬ್ಲ್ಯೂ ಆರ್‌ಓ ದಿನಾಂಕ:09.03.2015ರ ಕ್ರಮ ಸಂಖ್ಯೆ: 10ರಲ್ಲಿನ ಷರತ್ತಿನಂತೆ ಅನುದಾನವನ್ನು ಬಳಕೆ ಮಾಡಿ ಕೊಳ್ಳದಿದ್ದರೆ ಶೇ.10ರ (ವಾರ್ಷಿಕ) ಬಡ್ಡಿಯೊಡನೆ ಅನುದಾನವನ್ನು ಹಿಂದಿರುಗಿಸಬೇಕಾಗಿರುತ್ತದೆ.

ಮಂಗಳೂರು ವಿಶ್ವ ವಿದ್ಯಾನಿಲಯವು 2015 ರಿಂದ 2019 ರ ವರೆಗೆ ಉದ್ದೇಶಿತ ಕಾರ್ಯಕ್ಕೆ ಬಿಡುಗಡೆಯಾದ ಅನುದಾನವನ್ನು ಬಳಕೆ ಮಾಡಿಕೊಳ್ಳಲು ವಿಫಲವಾದದ್ದರಿಂದ, ವಿ.ವಿಯ ಪತ್ರ ಸಂಖ್ಯೆ: ಮವಿ/ಹನಿ/ ಯು.ಜಿ.ಸಿ. 12ನೇ ಯೋಜನೆ/2019-20/ಹ2/396 ದಿನಾಂಕ:29.05.2019 ಮತ್ತು ಮವಿ/ಡಿಇವಿ/34/2014-15/ಡಿ1 ದಿ:23.03.2019ರನ್ವಯ ಬಡ್ಡಿ ಸಹಿತ ರೂ.23,21,664/- ಗಳನ್ನು (ಅಸಲು 20,00,000+ಬಡ್ಡಿ3,21,664)) ವಿಶ್ವ ವಿದ್ಯಾನಿಲಯ ಧನ ಸಹಾಯ ಆಯೋಗಕ್ಕೆ ಹಿಂದಿರುಗಿಸಲಾಗಿರುತ್ತದೆ. ಈ ಕುರಿತು ಸೂಕ್ತ ವಿವರಣೆಯನ್ನು ನೀಡುವಂತೆ ಲೆಕ್ಕ ತಪಾಸಣಾ ವಿಚಾರಣಾ ಪತ್ರ ಸಂಖ್ಯೆ:130/2021-22 ದಿ: 25.10.2021 ರಲ್ಲಿ ಕೋರಲಾಗಿ ಯಾವುದೇ ಉತ್ತರವನ್ನು ನೀಡಿರುವುದಿಲ್ಲ.

ಮೂಲ ಭೂತ ಸೌಕರ್ಯದ ಅಭಿವೃದ್ಧಿಗಾಗಿ ಮಂಜೂರಾದ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳದೇ ಹಿಂತಿರುಗಿಸಿರುವುದರಿಂದ ಮಹಿಳಾ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಒದಗಿಸುವ ಸರ್ಕಾರದ ಆಶಯಗಳು ಈಡೇರಿದಂತಾಗಿರುವುದಿಲ್ಲ. ವಿಶ್ವವಿದ್ಯಾನಿಲಯದಆಡಳಿತವರ್ಗವುವಸತಿಗೃಹನಿರ್ಮಾಣಕಾರ್ಯವನ್ನುಯೋಜಿತವಾಗಿಕೈಗೊಳ್ಳದೆ,ಹಣವನ್ನು 2015 ರಿಂದ 2019 ರ ವರೆಗೂ ಬ್ಯಾಂಕ್‌ನ ಉಳಿತಾಯ ಖಾತೆಯಲ್ಲಿ ಉಳಿಸಿ ಕೊಂಡಿದ್ದು, ಅನವಶ್ಯಕವಾಗಿ ಬ್ಯಾಂಕಿನಲ್ಲಿ ಈ ಅನುದಾನದ ಮೇಲೆ ಬ್ಯಾಂಕಿನಲ್ಲಿ ಪ್ರಾಪ್ತವಾದ ಬಡ್ಡಿಗಿಂತ ಹೆಚ್ಚು ಬಡ್ಡಿಯನ್ನು ಯು.ಜಿ.ಸಿಗೆ ಪಾವತಿಸಿದಂತಾಗಿರುತ್ತದೆ. ಆದ್ದರಿಂದ ಈ ಲೋಪಕ್ಕೆ ಕಾರಣರಾದವರಿಂದ ಬಡ್ಡಿಯ ಮೊತ್ತವನ್ನು ವಸೂಲಿಸಲು ಪರಿಶೀಲಿಸಬಹುದಾಗಿದೆ.

**17.4 ವಿಶ್ವ ವಿದ್ಯಾನಿಲಯದ ಸಂಶೋಧನಾ ಯೋಜನೆಗಳ ಅನುಷ್ಠಾನದಲ್ಲಿ ಕಂಡುಬಂದ ನ್ಯೂನತೆಗಳು.**

ಕೇಂದ್ರ ಸರ್ಕಾರದ ವಿವಿಧ ಸಂಸ್ಥೆಗಳಿಂದ ವಿಶ್ವ ವಿದ್ಯಾನಿಲಯಕ್ಕೆ ಹಲವು ಸಂಶೋಧನಾ ಯೋಜನೆಗಳಿಗೆ ಅನುದಾನ ಬಿಡುಗಡೆಯಾಗಿದ್ದು, ಈ ಯೋಜನೆಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲಿಸಲಾಗಿ, ಕಂಡುಬಂದ ನ್ಯೂನತೆಗಳನ್ನು ಕೆಳಕಂಡ ಕೋಷ್ಠಕದಲ್ಲಿ ನೀಡಲಾಗಿದೆ. ವಿವಿಧ ಯೋಜನೆಗಳಲ್ಲಿ ಅನುದಾನವನ್ನು ಬಳಸಿಕೊಳ್ಳದಿರುವುದು, ಯೋಜನೆ ಮುಕ್ತಾಯಗೊಂಡಿದ್ದರೂ ಅಂತಿಮ ಬಳಕೆ ಪ್ರಮಾಣ ಪತ್ರವನ್ನು ಪ್ರಾಯೋಜಿತ ಸಂಸ್ಥೆಗಳಿಗೆ ಸಲ್ಲಿಸದಿರುವುದು, ಯೋಜನೆ ಅವಧಿ ಮುಕ್ತಾಯಗೊಂಡಿದ್ದರೂ ಮುಕ್ತಾಯ ವರದಿ ನೀಡಿ ಬ್ಯಾಂಕ್ ಖಾತೆಯನ್ನು ಮುಕ್ತಾಯಗೊಳಿಸಿರುವುದಿಲ್ಲ. ಹೀಗೆ ಮಂಜೂರು ಮಾಡಿಸಿಕೊಂಡ ಯೋಜನೆಗಳ ಸಂಶೋಧನಾ ಚಟುವಟಿಕೆಗಳನ್ನು ಮುಂದುವರೆಸದೆ ಮಧ್ಯದಲ್ಲಿ ನಿಲ್ಲಿಸಿರುವುದು ಹಾಗೂ ನಿಗಧಿತ ಕಾಲಾವಧಿಯೊಳಗೆ ಲೆಕ್ಕಪತ್ರಗಳನ್ನು ಅನುದಾನ ಬಿಡುಗಡೆ ಮಾಡಿದ ಪ್ರಾಧಿಕಾರಗಳಿಗೆ ಸಲ್ಲಿಸದೇ ಇರುವುದರಿಂದ ಈ ಯೋಜನೆಗಳಲ್ಲಿ ತೊಡಗಿಸಿದ ಮೊತ್ತಗಳು ಅನುತ್ಪಾದಕ ವೆಚ್ಚವಾಗುವುದರ ಜೊತೆಗೆ ವಿಶ್ವವಿದ್ಯಾಲಯದ ಶೈಕ್ಷಣಿಕ ಹಾಗೂ ಸಂಶೋಧನಾ ಚಟುವಟಿಕೆಗಳು ಕುಂಠಿತ ಗೊಂಡಂತಾಗುತ್ತದೆ. ಇದರಿಂದಾಗಿ ಎನ್.ಐ.ಆರ್.ಎಫ್ ಮತ್ತು ನ್ಯಾಕ್ ನಂತಹ ವಿಶ್ವ ವಿದ್ಯಾನಿಲಯದ ಗುಣಮಟ್ಟ ಮೌಲ್ಯಮಾಪನ ಮಾಡುವ ಸಂಸ್ಥೆಗಳು ಮಾಪನ ಮಾಡುವ ಸಂದರ್ಭಗಳಲ್ಲಿ ವಿಶ್ವವಿದ್ಯಾಲಯಕ್ಕೆ ಹಿನ್ನಡೆಯಾಗಿ, ಶೈಕ್ಷಣಿಕ ಮತ್ತು ಸಂಶೋಧನೆಗಳಿಗೆ ದೊರೆಯಬಹುದಾದ ಆರ್ಥಿಕ ನೆರವು ಕೈ ತಪ್ಪಿಹೋಗುವ ಸಂಭವವಿರುತ್ತದೆ. ಸದರಿ ನ್ಯೂನತೆಗಳಿಗೆ ಸಂಬಂಧಿಸಿದಂತೆ ಪ್ರಾಯೋಜಿತ ಕಾರ್ಯಕ್ರಮಗಳ ಮುಖ್ಯಸ್ಥರು/ಸಂಯೋಜಕರು ಸೂಕ್ತ ಕ್ರಮಕೈಗೊಳ್ಳಲು ಹಾಗೂ ವಿಶ್ವವಿದ್ಯಾನಿಲಯದ ಸಂಬಂಧಿತ ಸಮಿತಿಯಿಂದ ನಿಯಮಿತವಾಗಿ ಕಾರ್ಯಕ್ರಮಗಳ ಮೌಲ್ಯಮಾಪನ ಮಾಡಲು ಸೂಚಿಸಿದೆ.

| .ಸಂ | ಪ್ರಾಯೋಜಿತ ಸಂಸ್ಥೆ | ಯೋಜನೆಯ ವಿವರ | ಅಧ್ಯಯನ ವಿಭಾಗ | ಮಂ. ವರ್ಷ | ಯೋ. ಅವಧಿ | ಮಂ. ಯೋ ಮೊತ್ತ | ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ನ್ಯೂನತೆಗಳು |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | SERB, New Delhi | "Water Quality Status of Lookapavani Microw watershed Mandya District, Karnataka, India" | Dr. Yamuna S M, Dept. Of Marine Geology | 2013 | 3years | 15,13,000/- | ದಿನಾಂಕ: 10.12.2013 ರಂದು ಯೋಜನೆಯ ಮೊದಲ ಕಂತಿನ ಅನುದಾನ ಬಿಡುಗಡೆಯಾಗಿದ್ದರೂ ಇದುವರೆವಿಗೂ ಯೋಜನೆಯನ್ನು ಪ್ರಾರಂಭಿಸಿರುವುದಿಲ್ಲ ಹಾಗೂ ಅನುದಾನವನ್ನು ಬಳಕೆ ಮಾಡಿರು ವುದಿಲ್ಲ. |

| | | | | | | | |
|---|---|---|---|---|---|---|---|
| 2 | DST-SERB, New Delhi | "On the Distance parameter of a graph and its application" | Dr.Kishori P Narayankar, Dept. Of Mathematics | 2013 | 3years | 11,82,000/- | 2016ರಲ್ಲಿ ಯೋಜನೆ ಮುಕ್ತಾಯ ಗೊಂಡಿದ್ದರೂ, ಖಾತೆ ಯನ್ನು ಮುಕ್ತಾಯಗೊಳಿಸಿರುವುದಿಲ್ಲ. ಈ ಬಗ್ಗೆ ಕ್ರಮ ವಹಿಸಲು ಸೂಚಿಸಿದೆ. |
| 3 | BRNS, Mumbai | "Isolation and Characterization of novel radio protective flavonoids from tragiaInvolucrata" | Dr.Chandra shekar G Joshi, Dept. Of Biochemistry, ChikkaAluvara | 2013 | 3years | 20,31,078/- | 2016ರಲ್ಲಿ ಯೋಜನೆ ಮುಕ್ತಾಯ ಗೊಂಡಿದ್ದರೂ, ಖಾತೆಯನ್ನು ಮುಕ್ತಾಯ ಗೊಳಿಸಿರುವುದಿಲ್ಲ. ಈ ಬಗ್ಗೆ ಕ್ರಮ ವಹಿಸಲು ಸೂಚಿಸಿದೆ. |
| 4 | BRNS, Mumbai | "The effect of electron beam irradiation on Expression of ER stress genes and its modulatory role in oligodendrocytes and axon-glial cells interactions: Possible implications for demyelinating disorders" | Dr. Mohammed Shafiul Mustak B, Dept. Of Applied Zoology | 2013 | 3 years | 17,54,000/- | 2017ರಲ್ಲಿ ಯೋಜನೆ ಮುಕ್ತಾಯ ಗೊಂಡಿದ್ದರೂ, ಖಾತೆಯನ್ನು ಮುಕ್ತಾಯಗೊಳಿಸಿರುವುದಿಲ್ಲ. ಈ ಬಗ್ಗೆ ಕ್ರಮ ವಹಿಸಲು ಸೂಚಿಸಿದೆ. |
| 5 | ICSSR-New Delhi | "Agribusiness and Women: A Stride en Route for Rural Amplification – A Study of Selected Districts in the State of Karnataka" | Dr.PreethiD souzaDept of Commerce | 2018 | 3 years | 8,00,000/- | Grant in Aid bill ಮಾತ್ರ ಸಲ್ಲಿಸಿರುತ್ತಾರೆ. ಪ್ರಾಜೆಕ್ಟ್ ಮುಗಿದಿದ್ದು ಅಂತಿಮ ಬಳಕೆ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ. ಯೋಜನೆಯ ಸಂಯೋಜಕರು ಅಂತಿಮ ಬಳಕೆ ಪ್ರಮಾಣಪತ್ರ ಸಲ್ಲಿಸಲು ಕ್ರಮಕ್ಕೈ ಗೊಳ್ಳಲು ಸೂಚಿಸಿದೆ. |
| 6 | SERB-New Delhi | "Antinutrients free Tamarindus indica seeds based composite food formulation" | Dr. B S Gunashree, PGC-ChikkaAluvara-Microbiology | 2019 | 3 years | 43,23,409/- | ದಿ. 23.08.2019ರಂದು ಅನುದಾನ ಸ್ವೀಕೃತಿಸಿದ್ದರೂ ಸಹ ಯಾವುದೇ ಕಾರ್ಯ ಚಟುವಟಿಕೆಗಳನ್ನು ಆರಂಭಿಸಿರುವುದಿಲ್ಲ. ಈ ಬಗ್ಗೆ ಕ್ರಮ ವಹಿಸಲು ಸೂಚಿಸಿದೆ. |
| 7 | ICSSR-New Delhi | "A Study to Assess the Socio-Cultural and Political Dimensions and the Underlying | Dr.Yashaswini B, Dept of Social Work | 2016 | 3years | 10,00,000/- | 2019-20ನೇ ಸಾಲಿನ ಅಂತ್ಯಕ್ಕೆ ಅಂತಿಮ ಬಳಕೆ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ. ಯೋಜನೆಯ ಸಂಯೋಜಕರು ಅಂತಿಮ ಬಳಕೆ ಪ್ರಮಾಣಪತ್ರ ಸಲ್ಲಿಸಲು ಕ್ರಮ ಕೈ |

| | | | | | | | |
|---|---|---|---|---|---|---|---|
| | | Vulnerability, Discrimination and Social Exclusion of Transgender in Karnataka" | | | | | ಗೊಳ್ಳಲು ಸೂಚಿಸಿದೆ. |
| 8 | ICSSR-New Delhi | "Women Workers and Wage Disparity in Urban Informal Sector: A Case Study of Construction Industry in Karnataka" | Dr. V Ramakrishnappa, CSEIP | 2017 | 3years | 2,00,000/- | 2019-20ನೇ ಸಾಲಿನ ಅಂತ್ಯಕ್ಕೆ ಅಂತಿಮ ಬಳಕೆ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ. ಯೋಜನೆಯ ಸಂಯೋಜಕರು ಅಂತಿಮ ಬಳಕೆ ಪ್ರಮಾಣಪತ್ರ ಸಲ್ಲಿಸಲು ಕ್ರಮ ಕೈಗೊಳ್ಳಲು ಸೂಚಿಸಿದೆ. |
| 9 | BRNS – DAE | "Synthesis and development of novel polymer with enhanced opto-electronic property by gamma irradiation of meso-ionic compounds" | Prof. Balakrishna Kalluraya, Dept of chemistry | 2016 | 3years | 31,35,400/- | 2019-20ನೇ ಸಾಲಿನ ಅಂತ್ಯಕ್ಕೆ ಅಂತಿಮ ಬಳಕೆ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ. ಯೋಜನೆಯ ಸಂಯೋಜಕರು ಅಂತಿಮ ಬಳಕೆ ಪ್ರಮಾಣ ಪತ್ರ ಸಲ್ಲಿಸಲು ಕ್ರಮ ಕೈ ಗೊಳ್ಳಲು ಸೂಚಿಸಿದೆ. |
| 10 | BRNS -DAE | "Electron Beam irradiated polymeric materials for optp-electronics devices Applications" | Dr.Devendrappa H, Dept of Physics | 2014 | 3years | 12,47,000/- | ಯೋಜನೆಯುಮುಕ್ತಾಯಗೊಂಡಿದೆ. ಕಂಪ್ಲೀಷನ್ ರಿಪೋರ್ಟ ಬಂದಿರುವುದಿಲ್ಲ. ಹಾಗಾಗಿ ರಿಪೋರ್ಟ ಪಡೆದು ಖಾತೆ ಮುಕ್ತಾಯಗೊಳಿಸಲು ಸೂಚಿಸಿದೆ. |
| 11 | SERB-New Delhi | "Evaluation of Antioxidant Properties of Medicinal Plants Against Phytophthora Blight Disease of Papaya (Caricapapaya L.) From Western Ghats of Karnataka" | Dr. Chandra M, Dept of Bioscience | 2016 | 4 years | 29,13,240/- | 2019-20ನೇ ಸಾಲಿನ ಅಂತ್ಯಕ್ಕೆ ಅಂತಿಮ ಬಳಕೆ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ. ಯೋಜನೆಯ ಸಂಯೋಜಕರು ಅಂತಿಮ ಬಳಕೆ ಪ್ರಮಾಣ ಪತ್ರ ಸಲ್ಲಿಸಲು ಕ್ರಮ ಕೈ ಗೊಳ್ಳಲು ಸೂಚಿಸಿದೆ. |

## 18. ಇತರೆ ಪ್ರಾಧಿಕಾರಗಳಿಂದ ಅನುದಾನಗಳು

### 18.1 ಅಧ್ಯಯನ ಪೀಠಗಳಲ್ಲಿ ಲಭ್ಯವಿರುವ ಅನುದಾನವನ್ನು ನಿಗದಿತ ಕಾರ್ಯಚಟುವಟಿಕೆಗಳಿಗೆ/ ಉಪನ್ಯಾಸಗಳಿಗೆ ಬಳಕೆ ಮಾಡಿಕೊಳ್ಳದಿರುವುದು.

ದತ್ತಿ ನಿಧಿ ಖಾತೆಗಳಿಗೆ ಸಂಬಂಧಿಸಿದಂತೆ ಹಾಜರು ಪಡಿಸಲಾದ ನಗದು ಪುಸ್ತಕ, ಬ್ಯಾಂಕ್ ಪಾಸ್ ಪುಸ್ತಕಗಳು, ಮಾರ್ಗ ಸೂಚಿಗಳು ಮತ್ತು ಇತರೆ ದಾಖಲೆಗಳನ್ನು ಪರಿಶೀಲಿಸಲಾಗಿ ವಿವಿಧ ಅಧ್ಯಯನ ಪೀಠಗಳಲ್ಲಿ ಲಭ್ಯವಿರುವ ಅನುದಾನವನ್ನು ನಿಗದಿತ ಕಾರ್ಯಚಟುವಟಿಕೆಗಳಿಗೆ ಬಳಸಿಕೊಳ್ಳದಿರುವುದು ಕಂಡು ಬಂದಿರುತ್ತದೆ. ದತ್ತಿ ನಿಧಿ ಪೀಠಗಳ ಸ್ಥಾಪನೆಯ ವೇಳೆ ರೂಪಿಸಿರುವ ಮಾರ್ಗ

ಸೂಚಿಯಲ್ಲಿ ಪ್ರತಿ ವರ್ಷ ಆಯಾ ವಿಭಾಗ/ ವಿಷಯಕ್ಕೆ ಸಂಬಂಧಪಟ್ಟ ಉಪನ್ಯಾಸವನ್ನು ಏರ್ಪಡಿಸಬೇಕು ಎಂಬ ಷರತ್ತುಗಳಿದ್ದರೂ, ಹಲವು ಪೀಠಗಳಲ್ಲಿ 2019-20ನೇ ಸಾಲಿನಲ್ಲಿ ಯಾವುದೇ ಉಪನ್ಯಾಸವನ್ನು ಏರ್ಪಡಿಸದಿರುವುದು ಕಂಡುಬಂದಿರುತ್ತದೆ. ಈ ಬಾಬ್ತು ವಿವಿಧ ಪೀಠಗಳ ಬ್ಯಾಂಕ್ ಖಾತೆಗಳಲ್ಲಿ ಲಭ್ಯವಿರುವ ಒಟ್ಟುಮೊತ್ತ ರೂ.38,83,311ಗಳಿದ್ದು, ಲಭ್ಯ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಪೀಠಗಳ ಕಾರ್ಯಚಟುವಟಿಕೆಗಳಿಗೆ ಬಳಸಿಕೊಂಡಿರುವುದಿಲ್ಲ. ವಿವರಗಳನ್ನು ಅನುಬಂಧ-11 ರಲ್ಲಿ ನೀಡಲಾಗಿದೆ. ಹೀಗೆ ಲಭ್ಯವಿರುವ ಅನುದಾನವನ್ನು ಬಳಸಿಕೊಳ್ಳದೆ ಬ್ಯಾಂಕ್ ಖಾತೆಯಲ್ಲಿ ಉಳಿಸಿಕೊಂಡಿರುವುದರಿಂದ ಅಧ್ಯಯನ ಪೀಠಗಳ ಉದ್ದೇಶಗಳು/ ಆಶಯಗಳು ಈಡೇರಿದಂತಾಗಿರುವುದಿಲ್ಲ. ಈ ಬಗ್ಗೆ ಸೂಕ್ತವಿವರಣೆ ನೀಡುವಂತೆ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ: 169/2021-22 ದಿ:29.10.2021ರಲ್ಲಿ ಕೋರಲಾಗಿ ದತ್ತಿನಿಧಿಗಳಲ್ಲಿ ಸಂಗ್ರಹವಾಗುವ ಬಡ್ಡಿ ಮೊತ್ತವೂ ಕಡಿಮೆಯಿದ್ದು, ಮುಂದಿನ ದಿನಗಳಲ್ಲಿ ನಿಗದಿತ ಕಾರ್ಯ ಚಟುವಟಿಕೆಗಳನ್ನು ನಡೆಸಲು ಕ್ರಮ ಕೈ ಗೊಳ್ಳುವುದಾಗಿ ತಿಳಿಸಿರುತ್ತಾರೆ. ವಿಶ್ವ ವಿದ್ಯಾನಿಲಯದ ಆಡಳಿತ ವರ್ಗದವರು ಮಾರ್ಗಸೂಚಿಯನ್ವಯ ನಿಗದಿತ ಉದ್ದೇಶಿತ ಕಾರ್ಯಚಟುವಟಿಕೆಗಳನ್ನು ನಡೆಸಲು ಅಗತ್ಯ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ.

**18.2 ಎಂ.ಸಿ.ಶಾಸ್ತ್ರಿ ದತ್ತಿ ಪೀಠದ ಆರ್ಥಿಕ ವಹಿವಾಟನ್ನು "ಚಾಲ್ತಿ ಖಾತೆ"(Current Account)ಯಲ್ಲಿ ನಿರ್ವಹಣೆ ಮಾಡುತ್ತಿರುವುದು.**

ವಿಶ್ವ ವಿದ್ಯಾನಿಲಯದ ವಿವಿಧ ದತ್ತಿಪೀಠಗಳು/ ಸಂಶೋಧನಾ ಕೇಂದ್ರಗಳಿಗೆ ಸಂಬಂಧಿಸಿದಂತೆ ಹಾಜರು ಪಡಿಸಲಾದ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಲಾಗಿ ಎಂ.ಸಿ.ಶಾಸ್ತ್ರಿ ದತ್ತಿ ಪೀಠದ ಆರ್ಥಿಕ ವಹಿವಾಟನ್ನು ಚಾಲ್ತಿ ಖಾತೆ ಸಂಖ್ಯೆ-510101000455392 (Current Account)ರಲ್ಲಿ ನಿರ್ವಹಿಸಲಾಗುತ್ತಿದೆ. ಬ್ಯಾಂಕ್ ಖಾತೆಯನ್ನು ತೆರೆಯುವಾಗ ಸರ್ಕಾರದ ಆದೇಶ ಸಂಖ್ಯೆ FDSTAR 2017 ರ Part-A guidelines, I-Opening of new Bank Accountನ ಕ್ರಮ ಸಂಖ್ಯೆ: 05ರಂತೆ ಕ್ರಮ ವಹಿಸ ಬೇಕಾಗಿರುತ್ತದೆ. ಚಾಲ್ತಿಖಾತೆಯನ್ನು ವಾಣಿಜ್ಯ ವ್ಯವಹಾರ ನಿರ್ವಹಣೆಯ ಉದ್ದೇಶಕ್ಕೆ ತೆರೆಯಲಾಗುತ್ತದೆ ಹಾಗೂ ಚಾಲ್ತಿ ಖಾತೆಯಲ್ಲಿರುವ ಹಣಕ್ಕೆಬ್ಯಾಂಕ್ ಯಾವುದೇ ರೀತಿಯ ಬಡ್ಡಿಯನ್ನುನೀಡುವುದಿಲ್ಲ. ವಿಶ್ವ ವಿದ್ಯಾನಿಲಯ/ ಶಿಕ್ಷಣ ಸಂಸ್ಥೆಗಳಿಗೆ ವಾಣಿಜ್ಯ ವ್ಯವಹಾರ ಅಥವಾ ಲಾಭೋದ್ದೇಶವಿಲ್ಲದಿರುವುದರಿಂದ, ಇಲ್ಲಿನ ಕಾರ್ಯ ಚಟುವಟಿಕೆಗಳ ಆರ್ಥಿಕ ವಹಿವಾಟನ್ನು ಉಳಿತಾಯ ಖಾತೆಯಲ್ಲಿ ನಿರ್ವಹಿಸಬೇಕಾಗಿರುತ್ತದೆ. ಆದರೆ ಸದರಿ ಪೀಠಕ್ಕೆ ಚಾಲ್ತಿಖಾತೆ ತೆರೆದು ಆರ್ಥಿಕ ವಹಿವಾಟು ನಿರ್ವಹಿಸುತ್ತಿರುವುದರಿಂದ ಖಾತೆಯಲ್ಲಿರುವ ಮೊತ್ತಕ್ಕೆ ಬರಬೇಕಾದ ಬಡ್ಡಿ ನಷ್ಟವಾಗಿರುವುದರ ಕುರಿತು ಸ್ಪಷ್ಟೀಕರಣ ನೀಡುವಂತೆ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ: 72/2021-22 ದಿ:22.09.2021ರ ಮೂಲಕ ಕೋರಲಾಗಿ "ವಿಶ್ವ ವಿದ್ಯಾನಿಲಯದ ವಿತ್ತಾಧಿಕಾರಿಗಳು ಈ ಬಗ್ಗೆ ಬ್ಯಾಂಕ್‌ನ ವ್ಯವಸ್ಥಾಪಕರಿಗೆ ಪತ್ರ ಬರೆದು ಚಾಲ್ತಿ ಖಾತೆಯನ್ನು ಉಳಿತಾಯ ಖಾತೆಯಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದು" ಎಂದು ಉತ್ತರ ನೀಡಿರುತ್ತಾರೆ. ಚಾಲ್ತಿಖಾತೆಯನ್ನು ಉಳಿತಾಯಖಾತೆಗೆ ಪರಿವರ್ತಿಸುವ ಕಾರ್ಯವನ್ನು ಜರೂರಾಗಿ ಕೈಗೊಂಡು ಅಗತ್ಯ ದಾಖಲೆಗಳೊಂದಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.

**18.3 ಹೈ ಎಂಡ್ ಕಾನ್ಫೋಕಲ್ ಸೂಕ್ಷ್ಮದರ್ಶಕ ಯಂತ್ರದ ಖರೀದಿಯಲ್ಲಿ ಅಬಕಾರಿ ಸುಂಕಕ್ಕೆ ವಿನಾಯಿತಿ ಪಡೆಯಲು ಅವಕಾಶವಿದ್ದರೂ ಕೂಡ ದಂಡ ಶುಲ್ಕದೊಂದಿಗೆ ಅಬಕಾರಿಸುಂಕ ಪಾವತಿಸಿರುವುದು.**

"

ಹೈ ಎಂಡ್ ಕಾನ್ಫೋಕಲ್ ಸೂಕ್ಷ್ಮ ದರ್ಶಕವನ್ನು ವಿದೇಶದಿಂದ ಆಮದು ಮಾಡಿಕೊಂಡಿರುವ ಸಂಬಂಧ ಅಬಕಾರಿ ಸುಂಕ ಮತ್ತು ಒಪ್ಪಿಗೆ ಶುಲ್ಕ ಬಾಬ್ತು ರೂ.11,62,000/-ಗಳನ್ನು (ಧನಾದೇಶ ಸಂಖ್ಯೆ:650700, ದಿ:19.09.2019) ಮೆ. ಸಿದ್ಧಾರ್ಥ ಲಾಜಿಸ್ಟಿಕ್ಸ್ ಪ್ರೈ ಲಿ., ಬೆಂಗಳೂರುರವರಿಗೆ ಪಾವತಿಸಿರುವುದು ಕಂಡುಬಂದಿರುತ್ತದೆ. ಆದರೆ ಸರ್ಕಾರದ ಅಧಿಸೂಚನೆ ಸಂ:51/96, ಕಸ್ಟಮ್ಸ್, ದಿನಾಂಕ:23.07.1995 ಮತ್ತು 10/9 ಕೇಂದ್ರ ಅಬಕಾರಿ, ದಿನಾಂಕ: 01.03.1997 ರನ್ವಯ ವಿಶ್ವ ವಿದ್ಯಾನಿಲಯಗಳಲ್ಲಿ ಸಂಶೋಧನೆ ನಡೆಸುವ ಉದ್ದೇಶಕ್ಕಾಗಿ ಪರಿಕರಗಳನ್ನು ಆಮದು ಮಾಡಿ ಕೊಳ್ಳುವಂತಹ ಸಂದರ್ಭಗಳಲ್ಲಿ ಅಬಕಾರಿ ಸುಂಕದಿಂದ ವಿನಾಯಿತಿ ಇರುತ್ತದೆ. ಆದರೆ ವಿಶ್ವ ವಿದ್ಯಾನಿಲಯವು ಸದರಿ ಅಧಿಸೂಚನೆಯನ್ವಯ ಅಬಕಾರಿ ಸುಂಕದಿಂದ ವಿನಾಯಿತಿಯನ್ನು ಪಡೆದು ಕೊಂಡಿರುವುದಿಲ್ಲ.

ಸದರಿ ಬಿಲ್‌ನಲ್ಲಿ ಅಬಕಾರಿ ಸುಂಕ ಬಡ್ಡಿ ಮತ್ತು ಅಬಕಾರಿ ದಂಡ ಶುಲ್ಕವೆಂದು ಒಟ್ಟು ರೂ.17,813/-ಗಳನ್ನು (ರೂ.2813+ರೂ.15000) ಪಾವತಿಸಲಾಗಿರುತ್ತದೆ. ಈ ಕುರಿತು ವಿವರಣೆ ನೀಡುವಂತೆ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:95, ದಿನಾಂಕ: 21.10.2021ರಲ್ಲಿ ಕೋರಲಾಗಿ ಅಬಕಾರಿ ಸುಂಕಕ್ಕೆ ವಿನಾಯಿತಿ ಪಡೆದಿರುವುದಾಗಿ ಹಾಗೂ ಅಬಕಾರಿ ಸುಂಕ ಬಡ್ಡಿ ಮತ್ತು ಅಬಕಾರಿ ದಂಡ ಶುಲ್ಕಕ್ಕೆ ಸಂಬಂಧಿಸಿದಂತೆ ಖರೀದಿಸಿದ ಉಪಕರಣವು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತಲುಪಿದ ಮೇಲೆ ವಿಶ್ವ ವಿದ್ಯಾನಿಲಕ್ಕೆ ಮಾಹಿತಿ ನೀಡಲಾಗುತ್ತದೆ. ತದ ನಂತರ ಕಾಗದ ಪತ್ರಗಳ ವಿನಿಮಯ ಹಾಗೂ ವಿಶ್ವ

ವಿದ್ಯಾನಿಲಯದಿಂದ ಉಪಕರಣದ ಬಿಡುಗಡೆಗೆ ಅನುಮತಿ ಹಾಗೂ ಅಬಕಾರಿ ಸುಂಕ ಬಿಡುಗಡೆಗೆ ಅಗತ್ಯವಿರುವ ಮೊತ್ತದ ಅನುದಾನ ಪಡೆದು ಕೊಳ್ಳಲು ಕಾಲಾವಕಾಶ ಬೇಕಾಗಿರುತ್ತದೆ. ಹೀಗಾಗಿ ಅಬಕಾರಿ ಸುಂಕ ಬಡ್ಡಿ ಮತ್ತು ಅಬಕಾರಿ ದಂಡ ಶುಲ್ಕ ಬಾಬ್ತು ಒಟ್ಟು ರೂ.17,813/- ಗಳನ್ನು (ರೂ.2813+ರೂ.15000) ಪಾವತಿಸಲಾಗಿರುತ್ತದೆ ಎಂದು ಉತ್ತರ ನೀಡಿರುತ್ತಾರೆ, ಆದರೆ ಮೇಲಿನ ಸರ್ಕಾರದ ಆಧಿಸೂಚನೆಯನ್ವಯ ಅಬಕಾರಿ ಸುಂಕ ಮತ್ತು ಅನುಮತಿ ಶುಲ್ಕಗಳಲ್ಲಿ ವಿನಾಯಿತಿ ಪಡೆಯುವಲ್ಲಿನ ವೈಫಲ್ಯತೆ ಯಿಂದಾಗಿ ವಿಶ್ವ ವಿದ್ಯಾನಿಲಯಕ್ಕೆರೂ.17,813/-ಗಳ ಆರ್ಥಿಕ ನಷ್ಟ ಉಂಟಾಗಿದ್ದು, ಸದರಿ ಮೊತ್ತವನ್ನು ಇದಕ್ಕೆ ಕಾರಣರಾದವರಿಂದ ವಸೂಲಿಸಲು ಹಾಗೂ ಸದರಿ ಅಧಿಕಾರಿ/ನೌಕರರ ಮೇಲೆ ಆಡಳಿತಾತ್ಮಾಕ ಕ್ರಮ ಕೈಗೊಳ್ಳಲು ಸೂಚಿಸಿದೆ.

### 18.4 ಏಕ ಬಿಡ್ ಟೆಂಡರ್ ಅನ್ನು ಅಂಗೀಕರಿಸಿ ವೆಚ್ಚ ಭರಿಸಿರುವುದು.

ಮಂಗಳೂರು ವಿಶ್ವ ವಿದ್ಯಾನಿಲಯದಲ್ಲಿ 2019-20ನೇ ಸಾಲಿನಲ್ಲಿ ಪ್ರಾಯೋಜಿತ ಕಾರ್ಯಕ್ರಮಗಳಡಿ ವಿವಿಧ ಸಂಶೋಧನಾ ಕಾರ್ಯಗಳಿಗೆ ಅಗತ್ಯವಿರುವ ಉಪಕರಣಗಳನ್ನು ಈ ಕೆಳಕಂಡಂತೆ ಖರೀದಿಸಲಾಗಿದೆ.

| ಕ್ರ. ಸಂ | ವಿಭಾಗ | ಸರಬರಾಜುದಾರರ ವಿವರ | ಖರೀದಿಸಲಾದ ಸಾಮಾಗ್ರಿಗಳ ವಿವರ | ಧನಾದೇಶ ಸಂಖ್ಯೆ/ದಿನಾಂಕ | ಮೊತ್ತ |
|---|---|---|---|---|---|
| 01 | ಡಿ.ಎಸ್.ಟಿ-ಫಿಸ್ಟಾ ಕಾರ್ಯಕ್ರಮ, ಬಯೋಸೈನ್ಸ್ ವಿಭಾಗ | ಮೆ. ಕ್ರಿಸ್ಟಲ್ ಬಯೋಎಕ್ವಿಪ್ ಮೆಂಟ್ಸ್ , ಬೆಂಗಳೂರು-03 | ಫ್ಲೋರಿ ಮೀಟರ್ | 379191/ 26.08.2019 | 16,80,000/- |
| 02 | | ಮೆ.ಜೀನ್‌ಪಲ್ಸ್ ಸೈಂಟಿಫಿಕ್, ಬೆಂಗಳೂರು-24 | ರೋಟರಿ ಎವಪೊರೇಟರ್ ವಿತ್ ವ್ಯಾಕ್ಯೂಮ್ ಪಂಪ್ ಅಂಡ್ ಚಿಲ್ಲರ್ | 379189/ 06.05.2019 | 6,60,000/- |
| 03 | ಎಸ್.ಎ.ಪಿ- ಅನ್ವಯಿಕಪ್ರಾಣಿಶಾಸ್ತ್ರ | ಮೆ.ಕ್ರಿಸ್ಟಲ್ ಬಯೋಎಕ್ವಿಪ್ ಮೆಂಟ್ಸ್ , ಬೆಂಗಳೂರು-03 | ರಿಯಲ್ ಟೈಮ್ ಪಿಸಿಆರ್ | 578744/20-9-2019 | 14,30,000/- |
| 04 | | | ಒಲಿಂಪಸ್ ಟ್ರಯೊಕಲರ್ ಬ್ರೈಟ್ ಕಾಂಟ್ರಾಕ್ಟ್ ಇನ್ವರ್ಟೆಡ್ ಸೂಕ್ಷ್ಮದರ್ಶಕ ಯಂತ್ರ | 578746/21-9-2019 | 3,80,100/- |
| 05 | | | ಫ್ರೀಜರ್ ಮತ್ತು ಸೆಂಟ್ರಿಫ್ಯೂಜ್ [illegible] | 578747/21-9-2019 | 10,75,000/- |
| 06 | | | ಆಟೊಮಿಕ್ ಆಬ್ಸಾರ್ಪ್ಷನ್ ಸ್ಪೆಕ್ಟ್ರೋಮೀಟರ್ | ಆನ್‌ಲೈನ್ ಪಾವತಿ ಯು.ಟಿ.ಆರ್.ಸಂ- 00401000000016/ ದಿ.20-05-2019 | 13,47,672/- |
| 7 | ಡಿ.ಎಸ್.ಟಿಪರ್ಸ್ | ಮೆ.ಕಾರ್ಲ್‌ಜೆಯಿಸ್ ಮೈಕ್ರೋಪ್, ಜೆಮೆನ್, ಜರ್ಮನಿ | ಹೈಎಂಡ್ ಸ್ಪೆಕ್ಟ್ರಲ್ ಕಾನ್ ಫೋಕಲ್ ಸೂಕ್ಷ್ಮದರ್ಶಕ ಮಾದರಿ | ಆನ್‌ಲೈನ್ ಪಾವತಿ ಯು.ಟಿ.ಆರ್.ಸಂ- 0097695011114/ ದಿ.01-10-2019 | 1,71,47,413/- |
| | | | | **ಒಟ್ಟುರೂ.** | **2,37,20,185/-** |

ಸರ್ಕಾರದ ಸುತ್ತೋಲೆ ಸಂ:ಆಇ/1066/ವೆಚ್ಚ-12/2016,ದಿ:20.03.2017ರ ಮಾರ್ಗಸೂಚಿಯ ಕ್ರ.ಸಂ-(iiರಲ್ಲಿ ತಿಳಿಸಿರುವಂತೆ, ಆರಂಭಿಕ ಹಂತದಲ್ಲಿ ಹಲವು ಬಿಡ್‌ಗಳು ಸ್ವೀಕೃತಗೊಂಡು, ಅದರಲ್ಲಿ ಒಬ್ಬ ಬಿಡ್‌ದಾರರು ಮಾತ್ರ ತಾಂತ್ರಿಕ ಬಿಡ್‌ಗೆ ಅರ್ಹತೆ ಪಡೆದರೆ, ಅದನ್ನು ಒಬ್ಬರೇ ಬಿಡ್‌ದಾರದರು ಎಂದು ಪರಿಗಣಿಸಿ ಟೆಂಡರ್‌ನ್ನು ತಿರಸ್ಕರಿಸಿ ಮರು ಟೆಂಡರ್ ಕರೆಯಬೇಕಾಗಿರುತ್ತದೆ. ಏಕ ಬಿಡ್ ದಾರರಿಗೆ ಟೆಂಡರ್ ನ್ನು ಅಂತಿಮಗೊಳಿಸಿ ಸರಬರಾಜು ಆದೇಶ ನೀಡುವಂತಿಲ್ಲ. ಈ ರೀತಿ ಏಕ ಬಿಡ್ ಟೆಂಡರ್ ಬಂದಾಗ ವಿಶ್ವ ವಿದ್ಯಾನಿಲಯವು ಸ್ಪರ್ಧಾತ್ಮಕ ದರದಲ್ಲಿ ಸಂಗ್ರಹಣೆ ಪಡೆಯುವ ದೃಷ್ಠಿಯಿಂದ ಮರು ಟೆಂಡರ್ ಕರೆಯಬಹುದಾಗಿತ್ತು. ಮೇಲಿನ ಸರ್ಕಾರಿ ಆದೇಶದನ್ವಯ ಕ್ರಮ ಕೈಗೊಂಡ ಬಗ್ಗೆ ದಾಖಲೆಗಳನ್ನು ಹಾಗೂ ಯಶಸ್ವಿ ಟೆಂಡರ್‌ದಾರರೊಂದಿಗೆ ಮಾಡಿ ಕೊಂಡಿರುವ ಕರಾರು ಒಪ್ಪಂದದ ಪ್ರತಿ ಹಾಗೂ ಭದ್ರತಾ ಠೇವಣಿಯ ವಿವರಗಳು/ ದಾಖಲೆಗಳನ್ನು ಹಾಜರುಪಡಿಸುವಂತೆ ಲೆಕ್ಕಪತ್ರ ವಿಚಾರಣೆ ಸಂ:125/2021-22,ದಿನಾಂಕ:25-10-2021, 137/2021-22, ದಿನಾಂಕ:25.10.2021, 139/2021-22, ದಿನಾಂಕ:25.10.2021ಗಳಲ್ಲಿ ಕೋರಲಾಗಿತ್ತು.

ಇದಕ್ಕೆ ವಿಶ್ವ ವಿದ್ಯಾಲಯದವರು ದಿನಾಂಕ:07-01-2022ರಂದು ನೀಡಿರುವ ಉತ್ತರದಲ್ಲಿ ಹೈ ಎಂಡ್ ಸ್ಪೆಕ್ಟ್ರಲ್ ಕಾನ್‌ಫೋಕಲ್ ಸೂಕ್ಷ್ಮದರ್ಶಕ ಯಂತ್ರವನ್ನು ಖರೀದಿಸುವುದಕ್ಕೆ ಟೆಂಡರ್ ಕರೆಯಲಾಗಿದ್ದು, ಆರಂಭಿಕ ಹಂತದಲ್ಲಿ ಇಬ್ಬರು ಟೆಂಡರ್‌ದಾರರು ಬಿಡ್‌ಗಳನ್ನು ಹಾಕಿದ್ದಾಗ್ಯೂ ತಾಂತ್ರಿಕ ಬಿಡ್‌ನಲ್ಲಿ ಒಬ್ಬರು ಅನರ್ಹರಾದ ಪ್ರಯುಕ್ತ, ಹಣಕಾಸು ಬಿಡ್‌ನಲ್ಲಿ ಒಬ್ಬರು ಟೆಂಡರ್‌ದಾರರು ಮಾತ್ರ ಉಳಿದಿರುತ್ತಾರೆ. ಸದರಿ ಬಿಡ್‌ದಾರರು ನಮೂದಿಸಿದ್ದ ದರವು ಮಾರುಕಟ್ಟೆ ದರಕ್ಕಿಂತ ಕಡಿಮೆ ಇದ್ದುದರಿಂದ ಹಾಗೂ ಉಪಕರಣದ ತುರ್ತು ಅವಶ್ಯಕತೆಯ ಕಾರಣದಿಂದ ಖರೀದಿಯನ್ನು ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ ಖರೀದಿಸಿದ ಉಪಕರಣಕ್ಕೆ ಏಕಬಿಡ್ ಟೆಂಡರ್‌ದಾರರು ನಮೂದಿಸಿದ ದರವು ಮಾರುಕಟ್ಟೆ ದರಕ್ಕಿಂತ ಕಡಿಮೆಯಿದ್ದುದಕ್ಕೆ ಹಾಗೂ ಉಪಕರಣದ ತುರ್ತಿನ ಸಮರ್ಥನೆಗೆ ಸಂಬಂಧಿಸಿದ ಯಾವುದೇ ದಾಖಲಾತಿಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಅಲ್ಲದೆ ಮೇಲಿನ ಕೋಷ್ಠಕದ ಇತರೆ ಆರು ಉಪಕರಣಗಳ ಖರೀದಿಗೆ ಸಂಬಂಧಿಸಿದ ವಿಚಾರಣಾ ಪತ್ರಗಳಿಗೆ ವಿಶ್ವ ವಿದ್ಯಾನಿಲಯದವರು ಯಾವುದೇ ಉತ್ತರವನ್ನು ಸಲ್ಲಿಸಿರುವುದಿಲ್ಲ. ಹೀಗಾಗಿ ಮೇಲಿನ ಕೋಷ್ಠಕದ ವಿವರಗಳಂತೆ ಪಾವತಿಸಿರುವ ಒಟ್ಟು ಮೊತ್ತ ರೂ.2,37,20,185/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.


### 18.5 ಟೆಂಡರ್ ಕಡತಗಳನ್ನು ಹಾಜರು ಪಡಿಸದಿರುವುದು.

2019-20ನೇ ಸಾಲಿನ ಲೆಕ್ಕತಪಾಸಣೆಯಲ್ಲಿ ಬಯೋಸೈನ್ಸ್ ವಿಭಾಗದಡಿ ಎಸ್‌ಟಿ-ಫಿಸ್ಟ್ ಕಾರ್ಯಕ್ರಮದ ಬ್ಯಾಂಕ್ಖಾತೆ ಸಂಖ್ಯೆ:10094967610ರ ಪಾವತಿ ಓಚರ್‌ಗಳನ್ನು ಪರಿಶೀಲಿಸಲಾಗಿ ಧನಾದೇಶ ಸಂಖ್ಯೆ: 379190 ದಿ:16.05.2019ರ ಮೂಲಕ ರೂ.1,43,488/-ಗಳನ್ನು ಮೆ. ನೇಹಾ ಸೈನ್ಟಿಫಿಕ್ಸ್ ಇಂಟರ್ನ್ಯಾಷನಲ್, ಬೆಂಗಳೂರುರವರಿಗೆ ಡಿಜಿಟಲ್ ಆಟೋಕ್ಲೇವ್ ಸರಬರಾಜು ಮಾಡಿದ ಸಂಬಂಧ ಪಾವತಿಸಲಾಗಿದ್ದು, ಈ ಪಾವತಿಗೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ಅಧಿನಿಯಮ, 1999 ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (ತಿದ್ದುಪಡಿ) ನಿಯಮಗಳು-2001 ರ ಉಪನಿಯಮ 4(ಇ) ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸು/ಇಇ/ಇಸಂಗ್ರ/2009/ದಿನಾಂಕ 09.10.2012ರ ಪ್ರಕಾರ ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ಟೆಂಡರ್ ಕರೆದು ಕ್ರಮ ವಹಿಸಿರುವ ಬಗ್ಗೆ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸುವಂತೆ ಲೆಕ್ಕ ತಪಾಸಣಾ ವಿಚಾರಣಾ ಪತ್ರ ಸಂಖ್ಯೆ:140/2021-22 ದಿ:25.10.2021ರಲ್ಲಿ ಕೋರಲಾಗಿ, ಯಾವುದೇ ಉತ್ತರವನ್ನು ಹಾಗೂ ದಾಖಲೆ/ಕಡತಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಟೆಂಡರ್ ಕಡತಗಳನ್ನು ಹಾಜರು ಪಡಿಸದಿರುವುದರಿಂದ ರೂ.1,43,488/-ಗಳನ್ನುಆಕ್ಷೇಪಣೆಯಲ್ಲಿಡಲಾಗಿದೆ.

### 18.6 ಪ್ರಾಯೋಜಿತ ಕಾರ್ಯಕ್ರಮಗಳಡಿ ಅನುದಾನವನ್ನು ಬಳಕೆ ಮಾಡಿಕೊಳ್ಳದಿರುವುದು.


ವಿಶ್ವ ವಿದ್ಯಾನಿಲಯದಲ್ಲಿ 2019-20ನೇ ಸಾಲಿನಲ್ಲಿ 35 ವಿವಿಧ ಪ್ರಾಯೋಜಿತ ಕಾರ್ಯಕ್ರಮಗಳು ಚಾಲ್ತಿಯಲ್ಲಿದ್ದು, ವಿವರಗಳನ್ನು ಅನುಬಂಧ-12ರಲ್ಲಿ ನೀಡಲಾಗಿದೆ. ಈ ಪ್ರಾಯೋಜಿತ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಹಾಜರುಪಡಿಸಲಾದ ಲೆಕ್ಕಪತ್ರ ದಾಖಲೆಗಳ ಪರಿಶೀಲನೆಯಲ್ಲಿ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಿಸಲಾಗಿದೆ.

ಅ) ಅನುಬಂಧದಲ್ಲಿನ ಪ್ರಾಯೋಜಿತ ಕಾರ್ಯಕ್ರಮಗಳ ಪಟ್ಟಿಯಲ್ಲಿನ ಕ್ರ.ಸಂ.01ರಿಂದ 09 ರವರೆಗಿನ ಕಾರ್ಯಕ್ರಮಗಳಡಿ 2017-18ನೇ ಸಾಲಿನಿಂದ 2019-20ನೇ ಸಾಲಿನವರೆಗೆ, ಅಂದರೆ ಕಳೆದ 03 ವರ್ಷಗಳ ಸ್ವೀಕೃತಿ ಮತ್ತು ವೆಚ್ಚವನ್ನು ವಿಶ್ಲೇಷಣೆ ಮಾಡಿದಾಗ ಲಭ್ಯವಿರುವ ಅನುದಾನವನ್ನು ಕ್ಲಪ್ತಕಾಲದಲ್ಲಿ ಸಮರ್ಪಕವಾಗಿ ಬಳಸಿಕೊಂಡಿಲ್ಲದಿರುವುದು ಕಂಡುಬಂದಿರುತ್ತದೆ..




ಆ) ಕ್ರಮಸಂಖ್ಯೆ:10 ರಿಂದ 20ರವರೆಗೆ ವಿವರಿಸಿರುವ ಕಾರ್ಯಕ್ರಮಗಳಲ್ಲಿ 2019-20ನೇ ಸಾಲಿನಲ್ಲಿ ಯಾವುದೇ ಅನುದಾನವನ್ನು ಬಳಸಿಕೊಂಡಿರುವುದಿಲ್ಲ.

ಇ) ಕ್ರ.ಸಂ.21 ರಿಂದ 35 ರವರೆಗೆ ವಿವರಿಸಿರುವ ಕಾರ್ಯಕ್ರಮಗಳಲ್ಲಿ 2019-20ನೇ ಸಾಲಿನಲ್ಲಿ ಶೇ. 50ಕ್ಕಿಂತಲೂ ಕಡಿಮೆ ಹಣ ಬಳಕೆಯಾಗಿದ್ದು, ಇದರಿಂದ ಮುಂದೆ ಬರಬಹುದಾದ ಅನುದಾನದಲ್ಲಿ ಕಡಿತವಾಗಿ ವಿಶ್ವ ವಿದ್ಯಾನಿಲಯದ ಸಂಶೋಧನಾ ಕಾರ್ಯಗಳಿಗೆ ಹಿನ್ನಡೆ ಉಂಟಾಗುವ ಸಂಭವವಿರುತ್ತದೆ.




ಈ ಬಗ್ಗೆ ಸೂಕ್ತ ವಿವರಣೆ ನೀಡುವಂತೆ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ: 193/2021-22 ದಿ:02.11.2021ರಲ್ಲಿ ಕೋರಲಾಗಿ ವಿಶ್ವ ವಿದ್ಯಾನಿಲಯದಿಂದ ಯಾವುದೇ ಉತ್ತರವನ್ನು ಪೂರಕ ಲೆಕ್ಕಪತ್ರ ದೊಂದಿಗೆ ಹಾಜರು ಪಡಿಸಿರುವುದಿಲ್ಲ. ಮೇಲೆ ತಿಳಿಸಿರುವಂತೆ ಪ್ರಾಯೋಜಿತ ಕಾರ್ಯಕ್ರಮಗಳಡಿ ಲಭ್ಯವಿರುವ ಅನುದಾನಗಳನ್ನು ಉದ್ದೇಶಿತ/ಸಂಶೋಧನಾ ಚಟುವಟಿಕೆಗಳಿಗೆ ಬಳಸಿಕೊಳ್ಳದೇ

ಬ್ಯಾಂಕ್ ಖಾತೆಯಲ್ಲಿ ಉಳಿಸಿಕೊಂಡಿರುವುದರಿಂದ ಈ ಯೋಜನೆಗಳಡಿ ಈಗಾಗಲೇ ಖರ್ಚು ಮಾಡಿರುವ ಮೊತ್ತಗಳು ಅನುತ್ಪಾದಕ ವೆಚ್ಚವಾಗುವುದರ ಜೊತೆಗೆ ವಿಶ್ವ ವಿದ್ಯಾಲಯದ ಶೈಕ್ಷಣಿಕ ಹಾಗೂ ಸಂಶೋಧನಾ ಚಟುವಟಿಕೆಗಳು ಕುಂಠಿತ ಗೊಂ**ಡಂತಾ**ಗುತ್ತದೆ. ಇದ**ರಿಂದ** ಎನ್ ಐ ಆರ್ ಎಫ್ ಮತ್ತು ನ್ಯಾಕ್ ನಂತಹ ವಿಶ್ವವಿದ್ಯಾನಿಲಯದ ಗುಣಮಟ್ಟ ಮೌಲ್ಯಮಾಪನ ಮಾಡುವ ಸಂಸ್ಥೆಗಳು ಮಾಪನ ಮಾಡುವ ಸಂದರ್ಭಗಳಲ್ಲಿ ವಿಶ್ವ ವಿದ್ಯಾಲಯಕ್ಕೆ ಹಿನ್ನಡೆಯಾಗಿ, ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳಿಗೆ ಬರಬಹುದಾದ ಆರ್ಥಿಕ ನೆರವು ಕೈ ತಪ್ಪಿಹೋಗುವ ಸಂಭವವಿರುತ್ತದೆ.

### 18.7 ಮುಕ್ತಾಯ ಗೊಂಡ ಪ್ರಾಯೋಜಿತ ಯೋಜನೆಗಳ ಬಾಕಿ ಮೊತ್ತವನ್ನು ಅನುದಾನ ನೀಡಿರುವ ಸಂಸ್ಥೆಗಳಿಗೆ ಹಿಂದಿರುಗಿಸಿರುವ ಬಗ್ಗೆ ವಿವರಗಳನ್ನು ಲೆಕ್ಕಪರಿಶೋದನೆಗೆ ಹಾಜರು ಪಡಿಸದಿರುವುದು.

ಲೆಕ್ಕಪರಿಶೋಧನೆಗೆ ಹಾಜರು ಪಡಿಸಲಾದ **ಪ್ರಾಯೋಜಿತ ಯೋಜನೆಗಳ** ನಗದು ಪುಸ್ತಕ, ಬ್ಯಾಂಕ್ ಪುಸ್ತಕ ಹಾಗೂ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಪರಿಶೋಧಿಸಲಾಗಿ 2019-20ನೇ ಸಾಲಿನ ಅಂತ್ಯಕ್ಕೆ ಅನುಬಂಧ-13ರಲ್ಲಿ ವಿವರಿಸಿರುವ ಖಾತೆಗಳು ಮುಕ್ತಾಯಗೊಂಡಿದ್ದು, ಸದರಿ ಖಾತೆಗಳಲ್ಲಿನ ಬಾಕಿ ಮೊತ್ತ ರೂ. 4,70,410ಗಳನ್ನು ವಿಶ್ವ ವಿದ್ಯಾನಿಲಯದ ಸಂಶೋಧನಾ ನಿಧಿಖಾತೆ/ ಇತರೆ ಖಾತೆಗಳಿಗೆ ವರ್ಗಾಯಿಸಲಾಗಿದೆ. ಆದರೆ, ಸದರಿ ಕಾರ್ಯಕ್ರಮಗಳ ಮಾರ್ಗ ಸೂಚಿಯನ್ವಯ ಮುಕ್ತಾಯ ಗೊಂಡ ಕಾರ್ಯಕ್ರಮಗಳ ಬ್ಯಾಂಕ್ ಖಾತೆಗಳಲ್ಲಿನ ಬಾಕಿ ಮೊತ್ತವನ್ನು ಅನುದಾನ ನೀಡಿರುವ ಸಂಬಂಧಪಟ್ಟ ಸಂಸ್ಥೆಗಳಿಗೆ ಹಿಂದಿರುಗಿಸ ಬೇಕಾಗಿರುತ್ತದೆ. ಈ ಬಗ್ಗೆ ಸಂಬಂಧಿಸಿದ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸುವಂತೆ ಲೆಕ್ಕ ತನಿಖಾ ವಿಚಾರಣಾ ಪತ್ರ ಸಂಖ್ಯೆ 221/2021/8/11/2021ರಲ್ಲಿ ಕೋರಲಾಗಿ, ವಿಶ್ವ ವಿದ್ಯಾನಿಲಯದಿಂದ ಯಾವುದೇ ಲೆಕ್ಕಪತ್ರ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಈ ಬಗ್ಗೆ ಕ್ರಮವಹಿಸಿ ಅಗತ್ಯ ದಾಖಲೆಗಳನ್ನು ಹಾಜರು ಪಡಿಸಲು ಸೂಚಿಸಿದೆ.

### 18.8 ಡಿಎಸ್‌ಟಿ ಪರ್ಸ್ ಯೋಜನೆಯಡಿ ಪ್ರಯೋಗಾಲಯ ಅಭಿವೃದ್ಧಿಗಾಗಿ ಬಿಡುಗಡೆಯಾದ ಅನುದಾನವನ್ನು ಸಮರ್ಪಕವಾಗಿ ಉಪಯೋಗಿಸದಿರುವುದು.

ಡಿ.ಎಸ್.ಟಿಪರ್ಸ್ ಪ್ರಯೋಗಾಲಯ ಅಭಿವೃದ್ಧಿಗಾಗಿ ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಮಂಗಳೂರು ವಿಶ್ವ ವಿದ್ಯಾನಿಲಯಕ್ಕೆ ದಿನಾಂಕ:22-08-2017ರಲ್ಲಿ ರೂ.760.00 ಲಕ್ಷಗಳ ಯೋಜನೆ ಮಂಜೂರಾಗಿದ್ದು, ಮೊದಲ ಕಂತಿನ ಅನುದಾನ ರೂ. 284.48ಲಕ್ಷಗಳು ದಿನಾಂಕ:22-09-2017ರಲ್ಲಿ ವಿಶ್ವ ವಿದ್ಯಾನಿಲಯದ ಖಾತೆಗೆ ಜಮೆ ಆಗಿರುತ್ತದೆ. ಈ ಪ್ರಾಜೆಕ್ಟ್‌ನ ಅವಧಿ ಮೂರು ವರ್ಷಗಳಾಗಿದ್ದು, ಆಗಸ್ಟ್ 2020ಕ್ಕೆ ಮುಕ್ತಾಯ ಗೊಳ್ಳ ಬೇಕಾಗಿರುತ್ತದೆ. ಈ ಯೋಜನೆಯಡಿ 2017-18ನೇ ಸಾಲಿನಲ್ಲಿ ರೂ. 5,36,488, 2018-19ನೇ ಸಾಲಿನಲ್ಲಿ ರೂ.43,74,265 ಹಾಗೂ 2019-20ನೇ ಸಾಲಿನಲ್ಲಿ ರೂ.1,98,97,197ಗಳು, ಒಟ್ಟು ರೂ. 2,48,07,950ಗಳು ವೆಚ್ಚವಾಗಿರುತ್ತದೆ. ಜೂನ್ 2020ರ ಮಾಹೆಯಲ್ಲಿ ಈ ಖಾತೆಯಲ್ಲಿ ಪ್ರಾಪ್ತವಾದ ಬಡ್ಡಿ ಮೊತ್ತವೂ ಸೇರಿ ಒಟ್ಟು ರೂ. 63,50,170 ಗಳ ಮೊತ್ತ ಲಭ್ಯವಿದ್ದು, 2020-21ನೇ ಸಾಲಿನಲ್ಲಿ ಡಿ.ಎಸ್.ಟಿ. ಪರ್ಸ್ ಯೋಜನೆಯ ಬಾಕಿ ಹಣದ ಖಾತೆಗೆ ವಿಶ್ವ ವಿದ್ಯಾನಿಲಯದ ಸಾಮಾನ್ಯ ಖಾತೆಯಿಂದ ರೂ.15.00 ಲಕ್ಷಗಳನ್ನು ವರ್ಗಾಯಿಸಿಕೊಂಡು, ರೂ.64,09,811ಗಳಿಗೆ ಉಪಕರಣವನ್ನು ಖರೀದಿಸಲಾಗಿರುತ್ತದೆ. ಮಾರ್ಚ್ 2021ರ ಅಂತ್ಯಕ್ಕೆ ಬಡ್ಡಿ ಸೇರಿ ಈ ಖಾತೆಯಲ್ಲಿ ರೂ.14,81,007ಗಳು ಬಾಕಿ ಇರುತ್ತದೆ. ಈ ಉಪಕರಣಕ್ಕೆ ಕೊರತೆಯಿದ್ದ ಅನುದಾನ ರೂ.54,000ಗಳು ಮಾತ್ರವಾಗಿದ್ದು, ವಿಶ್ವ ವಿದ್ಯಾನಿಲಯವು ರೂ.15.00 ಲಕ್ಷಗಳನ್ನು ಈ ಖಾತೆಗೆ ವರ್ಗಾಯಿಸಿ ಕೊಂಡಿರುವ ಔಚಿತ್ಯತೆ ಸ್ಪಷ್ಟವಾಗುತ್ತಿಲ್ಲ.

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಈ ಯೋಜನೆಯಡಿ ಬಾಕಿ ಮೊತ್ತ ರೂ. 475.52 ಲಕ್ಷಗಳ ಅನುದಾನ ಈ ವೇಳೆಗಾಗಲೇ ಬಿಡುಗಡೆಯಾಗಿ ವೆಚ್ಚವಾಗಬೇಕಿತ್ತು. ಆದರೆ 2017-18, 2018-19, 2019-20 ಹಾಗೂ 2020-21ನೇ ಸಾಲಿನ ಹಣ ಬಳಕೆ ಪತ್ರಗಳು ಮತ್ತು ವೆಚ್ಚ ತಃಖ್ತೆಗಳನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಸಲ್ಲಿಸದೇ ಇರುವುದರಿಂದ ವಿಶ್ವ ವಿದ್ಯಾನಿಲಯಕ್ಕೆ ನಂತರದ ಕಂತುಗಳ ಅನುದಾನ ಬಿಡಗಡೆಯಾಗಿರುವುದಿಲ್ಲ. ಹೀಗಾಗಿ ಡಿ.ಎಸ್.ಟಿ. ಪರ್ಸ್ ಯೋಜನೆಯ ಮೂಲ ಉದ್ದೇಶಗಳು ಪೂರ್ಣವಾಗಿ ಈಡೇರಿದಂತಾಗಿರುವುದಿಲ್ಲ. ಅಲ್ಲದೆ ಪ್ರಾಯೋಜಿತ ಕಾರ್ಯಕ್ರಮಗಳ ಅನುದಾನದ ಮೇಲೆ ಬ್ಯಾಂಕಿನಲ್ಲಿ ಪ್ರಾಪ್ತವಾದ ಬಡ್ಡಿಯನ್ನು ಅನುದಾನ ನೀಡುವ ಸಂಸ್ಥೆಗೆ ಹಿಂದಿರುಗಸಬೇಕಾಗಿರುತ್ತದೆ. ಈ ಬಾಬ್ತು ರೂ. 19,58,516ಗಳನ್ನು ಹಿಂದಿರುಗಿಸುವಂತೆ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕೋರಿರುವುದು ಲೆಕ್ಕಪರಿಶೋಧನೆ ಸಂದರ್ಭದಲ್ಲಿ ಕಡತಗಳ ಪರಿಶೀಲನೆಯಿಂದ ಕಂಡು ಬಂದಿರುತ್ತದೆ. ಡಿ.ಎಸ್.ಟಿ.ಯಿಂದ ನಂತರದ ಅನುದಾನವನ್ನು ತರಿಸಿಕೊಳ್ಳಲು ವಿಶ್ವ ವಿದ್ಯಾನಿಲಯವು

ಗಂಭೀರವಾದ ಕ್ರಮ ವಹಿಸದಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಈ ಲೋಪಕ್ಕೆ ಕಾರಣರಾದ ಪ್ರಧಾನ ಸಂಶೋಧಕರು ಹಾಗೂ ವಿಶ್ವ ವಿದ್ಯಾನಿಲಯದ ಇತರೆ ಅಧಿಕಾರಿ, ಸಿಬ್ಬಂದಿಯವರಮೇಲೆ ಆಡಳಿತಾತ್ಮಕ ಕ್ರಮ ವಹಿಸಲು ಸೂಚಿಸಿದೆ.

### 19. ರಾಜ್ಯ ಸರ್ಕಾರದ ಅನುದಾನಗಳು

ವಾರ್ಷಿಕ ಲೆಕ್ಕ ಪತ್ರದ ಪ್ರಕಾರ 2019-20ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ವಿಶ್ವ ವಿದ್ಯಾನಿಲಯಕ್ಕೆ/ ವಿಶ್ವ ವಿದ್ಯಾನಿಲಯದ ಯೋಜನೆಗಳಿಗೆ ಬಿಡುಗಡೆಯಾಗಿರುವ ಅನುದಾನ ಹಾಗೂ ಭರಿಸಿರುವ ವೆಚ್ಚದ ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ಅನುದಾನ | | ವೆಚ್ಚ | |
|---|---|---|---|---|
| | ವಿವರಗಳು | ಮೊತ್ತ | ವಿವರಗಳು | ಮೊತ್ತ |
| 1 | ಯೋಜನಾ ಅನುದಾನ | 94,00,000 | ಯೋಜನಾನುದಾನ | |
| 2 | ಉನ್ನತ ಸಂಶೋಧನಾ ಕೇಂದ್ರದ ಸ್ಥಾಪನೆ-ಬೆಳಪು | - | ಎಸ್.ಸಿ.ಪಿ/ಟಿ.ಎಸ್.ಪಿ. ವಿಶೇಷಾನುದಾನ | 96,44,111 |
| 3 | ಎಸ್.ಸಿ.ಪಿ/ಟಿ.ಎಸ್.ಪಿ..ವಿಶೇಷಾನುದಾನ | 6,00,000 | ಚಿಕ್ಕಳುವಾರ ಸ್ನಾತಕೋತ್ತರ ಕೇಂದ್ರ ಕ್ಯಾಂಪಸ್ ಅಭಿವೃದ್ಧಿ | 10,35,858 |
| 4 | ಚಿಕ್ಕಳುವಾರ ಸ್ನಾತಕೋತ್ತರ ಕೇಂದ್ರ ಕ್ಯಾಂಪಸ್ ಅಭಿವೃದ್ಧಿ | – | ಅಂತರಾಷ್ಟ್ರೀಯ ಕೇಂದ್ರದ ನಿರ್ಮಾಣ | - |
| 5 | ಅಂತರಾಷ್ಟ್ರೀಯ ಕೇಂದ್ರದ ನಿರ್ಮಾಣ | – | ವಿಶ್ವವಿದ್ಯಾನಿಲಯದ ಆವರಣದಲ್ಲಿ ರಸ್ತೆ ಅಭಿವೃದ್ದಿ | 31,82,974 |
| 6 | ಒ.ಬಿ.ಸಿ. ಘಟಕ ಅನುದಾನ | | ಮಡೀಕೆರಿ ಎಫ್ ಎಂ ಕೆ ಎಂ ಸಿ ಕಾಲೇಜಿನ ಮೂಲಭೂತ ಅಭಿವೃದ್ದಿ | 19,82,452 |
| 7 | ಮಹಿಳಾ ವಿದ್ಯಾರ್ಥಿ ನಿಲಯ ನಿರ್ಮಾಣ (ವಿಶೇಷ ಯೋಜನೆ) | – | ವಿವಿ ಕಾಲೇಜ್ ಮಂಗಳೂರಿನ ಮ್ಯಾನೇಜ್ ಮೆಂಟ್ ಬ್ಲಾಕ್‌ನ ವಿಸ್ತರಣೆ | 59,09,860 |
| 8 | ಜೈವಿಕ ವಿಜ್ಞಾನ ವಿಭಾಗದಲ್ಲಿ ಸ್ಟೋರ್ ರೂಂ ನಿರ್ಮಾಣ | – | ಮಂಗಳೂರು ಕಾಲೇಜ್ ಕಟ್ಟಡದ ತರಗತಿ ಕೊಠಡಿ ನಿರ್ಮಾಣ | 11,11,363 |
| 9 | ಇಂಟಿಗ್ರೇಟೆಡ್ ಲಾ ಕೋರ್ಸ್ ಕಟ್ಟಡ | – | ಕಾರ್ಟ್ ಯೋಜನೆಯಡಿ ಪ್ರಾಣಿಗಳ ಮನೆ ನಿರ್ಮಾಣ | 5,77,022 |
| 10 | ಪ್ರಸಾರಾಂಗ | – | ವಿಶ್ವ ವಿದ್ಯಾನಿಲಯದ ಆವರಣದಲ್ಲಿ ವಾಹನ ನಿಲ್ದಾಣ ನಿರ್ಮಾಣ | 3,69,941 |
| **ಒಟ್ಟು** | | **1,00,00,000** | **ಒಟ್ಟು** | **2,38,13,581** |

ಯೋಜನೆವಾರು ಅನುದಾನ ಸ್ವೀಕೃತಿಯಾಗಿರುವುದಕ್ಕೆ ಎದುರಾಗಿ ವೆಚ್ಚಗಳನ್ನು ವರ್ಗೀಕರಿಸಿರುವುದಿಲ್ಲವಾದ್ದರಿಂದ ಅನುದಾನಕ್ಕೆ ಎದುರಾಗಿ ಭರಿಸಿರುವ ವೆಚ್ಚಗಳ ನಿಖರತೆಯನ್ನು ತಿಳಿಯಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ವಾರ್ಷಿಕ ಲೆಕ್ಕಗಳಲ್ಲಿ ಅನುದಾನವಾರು/ಯೋಜನೆವಾರು/ಕಾರ್ಯಕ್ರಮವಾರು ಸ್ವೀಕೃತಿ ಹಾಗೂ ವೆಚ್ಚಗಳನ್ನು ಸಮರ್ಪಕವಾಗಿವರ್ಗೀಕರಿಸಲುಸೂಚಿಸಿದೆ.

## 20. ಅಧಿಕಾರಿ ಮತ್ತು ಬೋಧಕ ವರ್ಗದವರ ವೇತನ ಮತ್ತು ಭತ್ಯೆಗಳು

### 20.1 ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ತಜ್ಞರ ಸಮಿತಿ ವಿಷಯವಾರು ಬೋಧನಾ ಅವಧಿಗಳನ್ನು ನಿಗದಿಪಡಿಸಿರುವ ಕಡತಗಳನ್ನು ಹಾಜರು ಪಡಿಸದಿರುವುದು.

ವಿಶ್ವ ವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳು, ಕಾಲೇಜುಗಳು, ಸ್ನಾತಕೋತ್ತರ ಕೇಂದ್ರಗಳು ಹಾಗೂ ಅಂಗ ಸಂಸ್ಥೆಗಳಿಗೆ ಅತಿಥಿ ಉಪನ್ಯಾಸಕರುಗಳನ್ನು ಹಿಂದಿನ ಸಾಲಿನಿಂದ ನೇಮಕ ಮಾಡಿಕೊಂಡು 2019-20ನೇ ಸಾಲಿನಲ್ಲಿ ಮುಂದುವರೆಸಿಕೊಂಡು ಸಂಭಾವನೆಯನ್ನು ಪಾವತಿ ಮಾಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳುವಾಗ ವಿಷಯವಾರು/ತರಗತಿವಾರು/ ಸೆಮಿಸ್ಟರ್‌ವಾರು ಪಠ್ಯ ಕ್ರಮದನ್ವಯ ಪಠ್ಯಕ್ರಮ ರಚನಾ ತಜ್ಞರ ಸಮಿತಿ ನಿಗದಿ ಪಡಿಸಿರುವ ಬೋಧನಾ ಅವಧಿಗೆ ಅನುಗುಣವಾಗಿ ಖಾಯಂ ಬೋಧಕ ವರ್ಗದಿಂದ ಲಭ್ಯವಿರುವ ಬೋಧನಾ ಅವಧಿಯನ್ನು ಹೊರತುಪಡಿಸಿ, ಕೊರತೆ ಇರುವ ಬೋಧನಾ ಅವಧಿಗೆ ಎದುರಾಗಿ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳಲು ಕರ್ನಾಟಕ ರಾಜ್ಯ ವಿಶ್ವ ವಿದ್ಯಾಲಯಗಳ ಅಧಿನಿಯಮ 2000ದಲ್ಲಿನ ಪ್ರಕರಣ-55 ರನ್ವಯ ನೇಮಕಾತಿ ಪ್ರಕ್ರಿಯೆ ಕೈಗೊಂಡಿರುವ ಕಡತಗಳನ್ನು ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:01/2021-22/ದಿ:02.08-2021 ಹಾಗೂ 209/2021-22 ದಿನಾಂಕ:06-11-2021ರಲ್ಲಿ ಕೋರಲಾಗಿ ವಿಶ್ವ ವಿದ್ಯಾನಿಲಯವು ಯಾವುದೇ ಉತ್ತರವನ್ನಾಗಲೀ ಅಥವಾ ದಾಖಲೆಗಳನ್ನಾಗಲೀ ಹಾಜರು ಪಡಿಸಿರುವುದಿಲ್ಲ. ಆದ್ದರಿಂದ ವಿಚಾರಣಾ ಪತ್ರದಲ್ಲಿ ಕೋರಿರುವ ಕಡತಗಳನ್ನು ಲೆಕ್ಕತಪಾಸಣೆಗೆ ಹಾಜರು ಪಡಿಸುವವರೆಗೆ ಅತಿಥಿಉಪನ್ಯಾಸಕರುಗಳಿಗೆ 2019-20ನೇ ಸಾಲಿನಲ್ಲಿ ಪಾವತಿಸಲಾಗಿರುವ ಸಂಭಾವನೆ ಮೊಬಲಗು ರೂ. 7,72,42,437/- ಗಳನ್ನುಆಕ್ಷೇಪಣೆಯಲ್ಲಿಡಲಾಗಿದೆ. ಅತಿಥಿ ಉಪನ್ಯಾಸಕರಿಗೆ ಪಾವತಿಸಲಾದ ಮೊಬಲಗಿನ ವಿವರಗಳನ್ನು ಅನುಬಂಧ-14 ರಲ್ಲಿ ನೀಡಲಾಗಿದೆ.

**20.2 ಡಾ. ಐರಾನಿ ಮೊಹಮದ್ ಖಾನ್, ಪ್ರಾಧ್ಯಾಪಕರು ಇವರಿಗೆ ಹೆಚ್ಚುವರಿ ತುಟ್ಟಿಭತ್ಯೆ ಪಾವತಿಸಿರುವುದು.**ಡಾ. ಐರಾನಿ ಮೊಹಮದ್ ಖಾನ್, ಪ್ರಾಧ್ಯಾಪಕರು ರವರಿಗೆ ಪಾವತಿಸಿರುವ ವೇತನ ಭತ್ಯಯ ವಿವರಗಳನ್ನು ಪರಿಶೋಧಿಸಲಾಗಿ ನವೆಂಬರ್-2019ರ ಮಾಹೆಯಿಂದ ಫೆಬ್ರವರಿ-2020 ರ ಮಾಹೆ ಯವರೆಗೆ ರೂ. 1440.00ಗಳ ತುಟ್ಟಿಭತ್ಯೆಯನ್ನು ಹೆಚ್ಚುವರಿಯಾಗಿ ಪಾವತಿಸಿರುವ ಬಗ್ಗೆ ಸೂಕ್ತ ವಿವರಣೆ ನೀಡುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರಸಂಖ್ಯೆ: 222/2021-22 ದಿನಾಂಕ: 08-11-2021ರಲ್ಲಿ ಕೋರಲಾಗಿ, ತುಟ್ಟಿಭತ್ಯೆ ಯನ್ನು ಹೆಚ್ಚುವರಿಯಾಗಿ ಪಾವತಿಸಿರುವುದಕ್ಕೆ ಯಾವುದೇ ಉತ್ತರವನ್ನು ವಿಶ್ವ ವಿದ್ಯಾನಿಲಯದಿಂದ ನೀಡಿರುವುದಿಲ್ಲ. ಹೆಚ್ಚುವರಿಯಾಗಿ ಪಾವತಿಸಿರುವ ತುಟ್ಟಿಭತ್ಯೆಯ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ | ಅಧಿಕಾರಿಯ ಹೆಸರು | ಮಾಹೆ | ಮೂಲ ವೇತನ | ಪಾವತಿಸ ಬೇಕಾಗಿರುವ ತುಟ್ಟಿಭತ್ಯೆ (ಶೇ17%) | ಪಾವತಿಸಿರುವ ತುಟ್ಟಿ ಭತ್ಯೆ | ಹೆಚ್ಚುವರಿಯಾಗಿ ಪಾವತಿಸಿರುದಿನ ಭತ್ಯೆ | ವೋಚರ್ ಸಂಖ್ಯೆ ಮತ್ತು ದಿನಾಂಕ |
|---|---|---|---|---|---|---|---|
| 1 | ಡಾ.ಐರಾನಿ ಮೊಹಮದ್ ಖಾನ್ | ನವೆಂಬರ್-2019 | 162300 | 27591 | 27951 | 360.00 | 4094/ 29-11-19 |
| 2 | | ಡಿಸೆಂಬರ್-2019 | 162300 | 27591 | 27951 | 360.00 | 4740/ 30-12-19 |
| 3 | | ಜನವರಿ-2020 | 162300 | 27591 | 27951 | 360.00 | 5369/ 30-01-20 |
| 4 | | ಫೆಬ್ರವರಿ-2020 | 162300 | 27591 | 27951 | 360.00 | 6020/ 27-02-20 |

| | | | |
|---|---|---|---|
| | **ಹೆಚ್ಚುವರಿಯಾಗಿ ಪಾವತಿಸಿರುವ ತುಟ್ಟಿಭತ್ಯೆಯ ಮೊತ್ತ** | **1440.00** | |

ವಿಶ್ವ ವಿದ್ಯಾನಿಲಯವು ದಿನಾಂಕ: 9-12-2021ರಂದು ನೀಡಿರುವ ಅನುಪಾಲನಾ ವರದಿಯಲ್ಲಿ ಪ್ರಸ್ತಾವಿತ ಮೊತ್ತವನ್ನು ಸದರಿಯವರ ನವೆಂಬರ್ 2021ರ ಮಾಹೆಯ ವೇತನದಿಂದ ಈ ಹೆಚ್ಚುವರಿಯಾಗಿ ಪಾವತಿಯಾಗಿದ್ದ ಮೊತ್ತವನ್ನು ಕಟಾಯಿಸಿರುವುದಕ್ಕೆ ವೇತನ ಪತ್ರದ ಪ್ರತಿಯನ್ನು ದೃಢೀಕರಿಸಿ ನೀಡಿರುತ್ತದೆ.

## 20.3 ಆಡಳಿತಾತ್ಮಕ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳು ಬೋಧನೆಮಾಡಿರುವ ಬೋಧನಾ ಅವಧಿಗಳ ಮಾಹಿತಿಯನ್ನು ಹಾಜರು ಪಡಿಸದಿರುವುದು.

ಸರ್ಕಾರಿ ಆದೇಶ ಸಂಖ್ಯೆ:ಇಡಿ/333/ಯು.ಎನ್.ಇ/2016/ಬೆಂಗಳೂರು/ ದಿನಾಂಕ:18.01.2017ರಲ್ಲಿ ರಾಜ್ಯದ ಎಲ್ಲಾ ವಿಶ್ವ ವಿದ್ಯಾನಿಲಯಗಳ ಕುಲಪತಿಗಳು ಒಂದು ತಿಂಗಳಲ್ಲಿ ಕನಿಷ್ಠ 8 ಗಂಟೆಗಳ ಕಾಲಾವಧಿಯನ್ನು ಹಾಗೂ ಕುಲಸಚಿವರು (ಆಡಳಿತ & ಮೌಲ್ಯಮಾಪನ)ಗಳು ಒಂದು ತಿಂಗಳಲ್ಲಿ ಕನಿಷ್ಠ 16 ಗಂಟೆಗಳ ಕಾಲಾವಧಿಯನ್ನು ಬೊಧನೆಗಾಗಿ ಮೀಸಲಿರಿಸಲು ಆದೇಶಿಸಿರುವುದರಿಂದ ಮಂಗಳೂರು ವಿಶ್ವ ವಿದ್ಯಾನಿಲಯದ ಕುಲಪತಿಗಳು & ಕುಲಸಚಿವರು (ಆಡಳಿತ & ಪರೀಕ್ಷಾಂಗ)ಗಳುಬೋಧನೆ ಮಾಡಿರುವ ವಿವರಗಳನ್ನು ಹಾಜರುಪಡಿಸುವಂತೆ ಲೆಕ್ಕ ಪರಿಶೋಧನಾ ವಿಚಾರಣಾ ಸಂಖ್ಯೆ:142, ದಿನಾಂಕ: 25.10.2021ರಲ್ಲಿ ಕೋರಲಾಗಿತ್ತು. ವಿಶ್ವ ವಿದ್ಯಾನಿಲಯದವರು ದಿನಾಂಕ: 07-01-2022ರಂದು ನೀಡಿರುವ ಉತ್ತರದಲ್ಲಿ ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳನ್ನು ಹೊರತುಪಡಿಸಿ ಕುಲಪತಿಗಳಾಗಲೀ ಆಥವಾ ಕುಲಸಚಿವರಾಗಲೀ ತರಗತಿಗಳನ್ನು ತೆಗೆದು ಕೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಇದು ಮೇಲ್ಕಂಡ ಸರ್ಕಾರದ ಆದೇಶದ ನಿರ್ದೇಶನಗಳ ಉಲ್ಲಂಘನೆಯಾಗಿದ್ದು, ವಿಶ್ವ ವಿದ್ಯಾನಿಲಯವು ಈ ಬಗ್ಗೆ ಆಡಳಿತಾತ್ಮಕ ಕ್ರಮವಹಿಸಲು ಸೂಚಿಸಿದೆ.

## 20.4 ಯು.ಜಿ.ಸಿ. 6ನೇ ವೇತನ ಪರಿಷ್ಕರಣೆಯ ಹಿಂಬಾಕಿ ಮೊತ್ತವನ್ನು ದಿನಾಂಕ:01.01.2006ರ ನಂತರ ನೇಮಕವಾದ ಬೋಧಕರುಗಳಿಗೆ ಪಾವತಿಸಿರುವುದು.

2019-20ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಬೋಧಕರುಗಳ ಸೇವಾವಹಿಗಳನ್ನು ಪರಿಶೋಧಿಸಲಾಗಿ ಯು.ಜಿ.ಸಿ. 6ನೇ ವೇತನ ಪರಿಷ್ಕರಣೆಯ ಹಿಂಬಾಕಿ ಮೊತ್ತ ರೂ.18,84,477/-ಗಳನ್ನು ದಿನಾಂಕ:01.01.2006ರ ನಂತರ ನೇಮಕವಾದ ಬೋಧಕರುಗಳಿಗೆ ಪಾವತಿಸಲಾಗಿರುತ್ತದೆ. ವಿವರಗಳನ್ನು ಅನುಬಂಧ-15ರಲ್ಲಿ ನೀಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ:ಇ.ಡಿ.37/ಯು.ಎನ್ .ಇ/2009/ದಿ:24.12.2009, ಇ.ಡಿ.480/ಯು.ಎನ್.ಇ/2014/ದಿ:07.06.2016, ಇ.ಡಿ.499/ಯು.ಎನ್.ಇ/2017/ದಿ:21.03.2019, ಇ.ಡಿ.483/ ಯು.ಎನ್.ಇ/2017/ದಿ:11.08.2020ಗಳಲ್ಲಿ ದಿನಾಂಕ: 01.01.2006ರ ನಂತರ ಹೊಸದಾಗಿ ನೇಮಕವಾದ ಬೋಧಕರುಗಳಿಗೆ ದಿನಾಂಕ:01.01.2006 ರಿಂದ 24.12.2009ರ ರವರೆಗೆ ವೇತನ ಪರಿಷ್ಕರಣೆಯ ಹಿಂಬಾಕಿ ಮೊತ್ತವನ್ನು ಪಾವತಿಸಲು ಅವಕಾಶವಿರುವುದಿಲ್ಲ. ಹೀಗಾಗಿ ಸರ್ಕಾರದ ಸ್ಥಾಯಿ ಆದೇಶಗಳಿಗೆ ವಿರುದ್ಧವಾಗಿ ಪಾವತಿಸಿರುವ ವೇತನ ಹಿಂಬಾಕಿ ಮೊತ್ತ ರೂ.18,84,477/-ಗಳನ್ನು ಸಂಬಂಧಿಸಿದ ಬೋಧಕರುಗಳಿಂದ ವಸೂಲಿಸಿರುವ ವಿವರಗಳನ್ನು ಹಾಜರು ಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 235/ದಿನಾಂಕ: 08.11.2021ರಲ್ಲಿ ಕೋರಲಾಗಿ, ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಆದುದರಿಂದ ಸದರಿ ಮೊತ್ತ ರೂ.18,84,477/-ಗಳನ್ನುವಿಶ್ವ ವಿದ್ಯಾನಿಲಯದ ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳಿಂದ ವಸೂಲಿಸಿ ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆಮಾಡುವಂತೆ ಸೂಚಿಸಿದೆ.

## 20.5 ಕರ್ನಾಟಕ ನಾಗರಿಕ ಸೇವಾ ನಿಯಮಗಳನ್ನು ಉಲ್ಲಂಘಿಸಿ ಗಳಿಕೆ ರಜೆಯನ್ನು ರಜೆ ಲೆಕ್ಕಕ್ಕೆ ಜಮೆ ಮಾಡಿರುವುದು.

ವಿಶ್ವ ವಿದ್ಯಾನಿಲಯದ ಬೋಧಕರುಗಳ ಸೇವಾ ವಹಿಗಳನ್ನು ಪರಿಶೋಧಿಸಲಾಗಿ ಬೋಧಕರುಗಳನ್ನು ವಿವಿಧ ಆಡಳಿತಾತ್ಮಕ ಹುದ್ದೆಗಳಾದ ಪ್ರಾಂಶುಪಾಲರು, ವಿಭಾಗದ ಮುಖ್ಯಸ್ಥರು, ಕೋರ್ಸ್‌ಗಳ ಸಂಯೋಜಕರು, ವಿಶೇಷ ಅಧಿಕಾರಿಗಳಾಗಿ ನೇಮಕ ಮಾಡಿ ವರ್ಷಕ್ಕೆ 40ದಿನಗಳ ಗಳಿಕೆ ರಜೆಯನ್ನುಅವರ ರಜೆಲೆಕ್ಕಕ್ಕೆ ಜಮೆಮಾಡಲಾಗಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

ಆಡಳಿತಾತ್ಮಕ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರುಗಳು ಬಿಡುವು ರಹಿತ ಸರ್ಕಾರಿ ನೌಕರರಾಗಿರುವುದರಿಂದ ಕರ್ನಾಟಕ ನಾಗರೀಕ ಸೇವಾನಿಯಮಗಳ ನಿಯಮ-112ರಂತೆ ವರ್ಷಕ್ಕೆ 30ದಿನಗಳ ಗಳಿಕೆ ರಜೆಯನ್ನು ಹಾಗೂ

ನಿಯಮ-114ರಂತೆ ವರ್ಷಕ್ಕೆ 20 ಅರ್ಧವೇತನ ರಜೆಯನ್ನು ಅವರ ರಜಾಲೆಕ್ಕಕ್ಕೆ ಜಮೆ ಮಾಡಬೇಕಾಗಿರುತ್ತದೆ. ಆದರೆ ಬೋಧಕರುಗಳನ್ನು ಬಿಡುವು ರಹಿತ ಹುದ್ದೆಗಳಿಗೆ ನೇಮಕ ಮಾಡಿ ಕೆ.ಸಿ.ಎಸ್. ನಿಯಮ,112 ಮತ್ತು 114 ರಂತೆ ಗಳಿಕೆ ರಜೆ ಮತ್ತು ಅರ್ಧವೇತನ ರಜೆಗಳನ್ನು ಜಮೆ ಮಾಡದೇ ಕೆ.ಸಿ.ಎಸ್.ನಿಯಮ -113ರಂತೆ ಪ್ರತಿವರ್ಷಕ್ಕೆ 40 ಗಳಿಕೆ ರಜೆಯನ್ನು ನೀಡಿರುವುದಕ್ಕೆ ಸೂಕ್ತ ದಾಖಲಾತಿಗಳನ್ನು ಒದಗಿಸುವಂತೆ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 168/29.10.2021ರಲ್ಲಿ ಕೋರಲಾಗಿ ವಿಶ್ವ ವಿದ್ಯಾನಿಲಯದ ವತಿಯಿಂದ ಯಾವುದೇ ದಾಖಲಾತಿಗಳನ್ನು/ ಮಾಹಿತಿಯನ್ನು ನೀಡಿರುವುದಿಲ್ಲ. ಕೆ.ಸಿ.ಎಸ್. ನಿಯಮ ಉಲ್ಲಂಘಿಸಿ ಎಲ್ಲಾಬೋಧಕರುಗಳಿಗೆ ರಜೆಲೆಕ್ಕಕ್ಕೆ ಹೆಚ್ಚುವರಿ ಗಳಿಕೆ ರಜೆಯನ್ನು ಜಮೆಮಾಡಿರುವುದನ್ನು ಹಿಂಪಡೆದು ಕೆ.ಸಿ.ಎಸ್.ನಿಯಮ-112 & 114ರಂತೆ ರಜೆಯ ಲೆಕ್ಕವನ್ನು ಪರಿಷ್ಕರಿಸುವಂತೆ ಸೂಚಿಸಿದೆ.

**20.6 ಕರ್ನಾಟಕ ನಾಗರಿಕ ಸೇವಾನಿಯಮಗಳನ್ನು ಉಲ್ಲಂಘಿಸಿ ಗಳಿಕೆ ರಜೆ ಲೆಕ್ಕಕ್ಕೆ ಹೆಚ್ಚುವರಿ ಗಳಿಕೆ ರಜೆಯನ್ನು ಜಮೆ ಮಾಡಿ ನಿವೃತ್ತಿ ನಂತರ ಗಳಿಕೆ ರಜಾ ನಗಧೀಕರಣ ಸೌಲಭ್ಯ ನೀಡಿರುವುದು.**

ನಿವೃತ ಬೋಧಕ ವೃಂದದ ಸೇವಾ ವಹಿಗಳನ್ನು ಹಾಗೂ ನಿವೃತ್ತ ಪಿಂಚಣಿ ಸೌಲಭ್ಯಗಳ ಪಾವತಿ ಕಡತಗಳನ್ನು ಪರಿಶೋಧಿಸಲಾಗಿ ಬೋಧಕ ವೃಂದದವರಿಗೆ ವಾರ್ಷಿಕ 40 ಗಳಿಕೆ ರಜೆಗಳನ್ನು ರಜಾಲೆಕ್ಕಕ್ಕೆ ಜಮೆ ಮಾಡಿರುವುದನ್ನು ಲೆಕ್ಕ ಪರಿಶೋದನೆಯಲ್ಲಿ ಗಮನಿಸಲಾಗಿದೆ. ಬೋಧಕರುಗಳು ವಿಶ್ವ ವಿದ್ಯಾನಿಲಯದ ಆಡಳಿತಾತ್ಮಕ ಹುದ್ದೆಗಳು, ವಿವಿಧ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು, ಕೋರ್ಸ್ ಸಂಯೋಜಕರುಗಳಾಗಿ ಕಾರ್ಯನಿರ್ವಹಿಸುತ್ತಿರುವ ಬೋಧಕರುಗಳು ಬಿಡುವು ರಹಿತ ಸರ್ಕಾರಿ ನೌಕರರಾಗಿರುವುದರಿಂದ ಕೆ.ಸಿ.ಎಸ್. ನಿಯಮ-112 ರಂತೆ ವರ್ಷಕ್ಕೆ 30 ದಿನಗಳ ಗಳಿಕೆರಜೆಯನ್ನು ಹಾಗೂ ನಿಯಮ-114 ರಂತೆ 20 ದಿನಗಳ ಅರ್ಧ ವೇತನ ರಜೆಯನ್ನು ಅವರುಗಳ ರಜಾ ಲೆಕ್ಕಕ್ಕೆ ಜಮೆ ಮಾಡಬೇಕಿರುತ್ತದೆ. ಆದರೆ ನಿವೃತ್ತ ಬೋಧಕರುಗಳಿಗೆ ನಿವೃತ್ತಿ ನಂತರದ ಗಳಿಕೆ ರಜೆ ನಗದೀಕರಣ ಸೌಲಭ್ಯ ನೀಡುವಾಗ ಕೆ,ಸಿ.ಎಸ್. ನಿಯಮ ಉಲ್ಲಂಘಿಸಿ ವಾರ್ಷಿಕ 40 ದಿನಗಳ ಗಳಿಕೆ ರಜೆಯನ್ನು ಅವರುಗಳ ರಜಾಲೆಕ್ಕಕ್ಕೆ ಜಮಾ ಮಾಡಿರುವುದನ್ನು ಹಾಗೂ ನಗಧೀಕರಣಕ್ಕೆ ಪರಿಗಣಿಸಿರುವ ಬಗ್ಗೆ ವಿವರಣೆಯನ್ನು ನೀಡಲು ವಿಚಾರಣಾ ಪತ್ರ ಸಂಖ್ಯೆ 215/2021-22/06.11.2021ರಲ್ಲಿ ಕೋರಿದ್ದು ವಿಶ್ವ ವಿದ್ಯಾನಿಲಯದಿಂದ ಯಾವುದೇ ಉತ್ತರವನ್ನು ಹಾಗೂ ಪೂರಕ ಲೆಕ್ಕ ಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ನೀಡಿರುವುದಿಲ್ಲ. ಸದರಿ ಭೋಧಕರು ವಿವಿಧ ವಿಭಾಗಗಳಿಗೆ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಲ್ಲಿ ಬಿಡುವು ಇಲ್ಲದ ಇಲಾಖೆ ನೌಕರರಂತೆ ಪರಿಗಣಿತವಾಗುವುದರಿಂದ ಕೆ.ಸಿ.ಎಸ್. ನಿಯಮ-112ರಂತೆ ವಾರ್ಷಿಕ 30 ದಿನಗಳ ಗಳಿಕೆ ರಜೆ ಹಾಗೂ ನಿಯಮ-114ರಂತೆ 20 ದಿನಗಳ ಅರ್ಧವೇತನ ರಜೆಯನ್ನು ಜಮೆ ಮಾಡುವ ಬದಲು ಕೆ.ಸಿ.ಎಸ್.ನಿಯಮ-113 ರಂತೆ ಬಿಡುವು ರಹಿತ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರುಗಳಿಗೆ 40 ದಿನಗಳ ಗಳಿಕೆ ರಜೆಯನ್ನು ರಜಾ ಲೆಕ್ಕಕ್ಕೆ ಜಮೆ ಮಾಡುತ್ತಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರುತ್ತದೆ. ಹೀಗೆ ವಿಶ್ವವಿದ್ಯಾನಿಲಯಕ್ಕೆ ನಷ್ಟವಾಗಿರುವ ಮೊತ್ತ ರೂ.21,53,895-00ಗಳಾಗಿದ್ದು, ವಿವರಗಳನ್ನು ಅನುಬಂಧ-16ರಲ್ಲಿ ನೀಡಲಾಗಿದೆ. ಆದ್ದರಿಂದ ಹೀಗೆ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಈ ಲೋಪಕ್ಕೆ ಕಾರಣರಾದ ವಿಶ್ವವಿದ್ಯಾನಿಲಯದ ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳಿಂದ ವಸೂಲಿಸಿ ವಿಶ್ವ ವಿದ್ಯಾನಿಲಯದ ನಿಧಿಗೆ ಜಮೆ ಮಾಡಲು ಸೂಚಿಸಿದೆ.

## 21. ಬೋಧಕೇತರ ಸಿಬ್ಬಂದಿಗಳ ವೇತನ ಮತ್ತು ಭತ್ಯೆಗಳು

**21.1 ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ತಾತ್ಕಾಲಿಕ ಹಾಗೂ ಸಂಚಿತ ವೇತನದಡಿಯಲ್ಲಿ ಬೋಧಕೇತರ ನೌಕರರನ್ನು ನೇಮಕಮಾಡಿಕೊಂಡು ವೇತನ ಪಾವತಿಸಿರುವುದು:-**

ವಿಶ್ವ ವಿದ್ಯಾನಿಲಯದಲ್ಲಿ ತಾತ್ಕಾಲಿಕ ಹಾಗೂ ಸಂಚಿತ ವೇತನ ಆಧಾರದಲ್ಲಿ ನೌಕರರನ್ನು ನೇಮಕ ಮಾಡಿಕೊಂಡು 2019-20ನೇ ಸಾಲಿನಲ್ಲಿ ರೂ.5,02,53,107/-ಗಳಷ್ಟುಮೊತ್ತದ ವೇತನವನ್ನು ಪಾವತಿಸಲಾಗಿರುತ್ತದೆ. ವಿವರಗಳನ್ನು ಅನುಬಂಧ-17ರಲ್ಲಿ ನೀಡಲಾಗಿದೆ.

ಮಂಗಳೂರು ವಿಶ್ವ ವಿದ್ಯಾನಿಲಯದ ಎಲ್ಲಾ ಅಂಗ ಸಂಸ್ಥೆಗಳು, ಅಧ್ಯಯನ ಕೇಂದ್ರಗಳಿಗೆ ಸರ್ಕಾರದಿಂದ ಮಂಜೂರಾಗಿರುವ ವಿವಿಧ ವೇತನ ಶ್ರೇಣಿಯ ಹುದ್ದೆಗಳು, ಮಂಜೂರಾಗಿರುವ ಹುದ್ದೆಗಳಿಗೆ ಎದುರಾಗಿ ಕೆಲಸ ನಿರ್ವಹಿಸುತ್ತಿರುವ ಖಾಯಂ ನೌಕರರ ವಿವರಗಳು, ಖಾಲಿ ಇರುವ ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಸರ್ಕಾರದ ಮಾರ್ಗ ಸೂಚಿಗಳನ್ವಯ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯುತ್ತಿರುವ ಬಗ್ಗೆ ಕಡತಗಳನ್ನು ಹಾಜರುಪಡಿಸುವಂತೆ ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:01/ದಿನಾಂಕ:02.08.2021, ಸಂಖ್ಯೆ:108/ದಿನಾಂಕ:25.10.2021, ಸಂಖ್ಯೆ:132/ದಿನಾಂಕ:25.10.2021ಗಳಲ್ಲಿ ಕೊರಲಾಗಿದ್ದರೂ, ವಿಶ್ವ ವಿದ್ಯಾನಿಲಯದಿಂದ ಯಾವುದೇ ಮಾಹಿತಿಗಳನ್ನಾಗಲೀ ಅಥವಾ ಕಡತಗಳನ್ನಾಗಲೀ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಸರ್ಕಾರದ ಆದೇಶ ಸಂಖ್ಯೆ: ಆಇ3/ಟಿಎಫ್‌ಸಿ/2018/ದಿನಾಂಕ:14.05.2018ರ ಪ್ರಕಾರ ಖಾಲಿ ಇರುವ ಹುದ್ದೆಗಳಿಗೆ ನಿಯಮಾನುಸಾರ ಹೊರ ಗುತ್ತಿಗೆ ಆಧಾರದ ಮೇಲೆ ಮಾತ್ರ ನೇಮಿಸಿಕೊಳ್ಳಲು ಅವಕಾಶವಿದ್ದು, ಸರ್ಕಾರದ ಆದೇಶ ಸಂಖ್ಯೆ: ಆಇ3/6/ ಟಿಎಫ್‌ಸಿ/ 2018/ದಿನಾಂಕ:29.12.2018 ಹಾಗೂ ಆಇ6/ಟಿಎಫ್‌ಸಿ/2018/ದಿ:22.03.2019ರ ಆದೇಶಗಳನ್ವಯ ಆರ್ಥಿಕ ಇಲಾಖೆಯ

ಅನುಮತಿ ಪಡೆಯ ಬೇಕಾಗಿರುತ್ತದೆ. ಹಾಗೂ ಸದರಿ ಆದೇಶವು ನಿಗಮ ಮಂಡಳಿ ಪ್ರಾಧಿಕಾರ ಹಾಗೂ ವಿಶ್ವ ವಿದ್ಯಾನಿಲಯಗಳು ಹಾಗೂ ಇನ್ನಿತರೆ ಅನುದಾನಿತ ಸಂಸ್ಥೆಗಳಿಗೂ ಸಹ ಅನ್ವಯವಾಗುತ್ತದೆ. ಈ ಕ್ರಮ ಅನುಸರಿಸದೆಯೇ ತಾತ್ಕಾಲಿಕ/ ಸಂಚಿತ ವೇತನ ಆಧಾರದ ಮೇಲೆ ನೇರವಾಗಿ ವಿಶ್ವ ವಿದ್ಯಾನಿಲಯವು ನೇಮಕ ಮಾಡಿ ಕೊಂಡು ಪಾವತಿಸಿರುವ ವೇತನದ ಮೊತ್ತ ರೂ.5,02,53,107/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**21.2 ಸರ್ಕಾರದ ಆದೇಶ ಉಲ್ಲಂಘಿಸಿ ನಿವೃತ್ತ ನೌಕರರನ್ನು ನೇಮಕ ಮಾಡಿಕೊಂಡಿರುವುದು.**

ಸಾಮಾನ್ಯ ಖಾತೆಯ ವೋಚರ್‌ಗಳನ್ನು ಪರಿಶೀಲಿಸಲಾಗಿ 2019-20ನೇ ಸಾಲಿನಲ್ಲಿ ವಿಶ್ವ ವಿದ್ಯಾನಿಲಯದ ನಿವೃತ್ತ ನೌಕರರನ್ನು ಪುನರ್ ನೇಮಕ ಮಾಡಿಕೊಂಡು ಈ ಕೆಳ ಕಂಡಂತೆ ವೇತನ ಪಾವತಿಸಿರುವುದನ್ನುಗಮನಿಸಲಾಗಿದೆ.

| ಕ್ರ.ಸಂ | ಹೆಸರು | ಹುದ್ದೆ | ವೇತನಪಾವತಿ |
|---|---|---|---|
| 1 | ಶ್ರೀ ಪಾಂಡುರಂಗ ಪ್ರಭು | ಸಹಾಯಕ ಹಣಕಾಸು ಅಧಿಕಾರಿ | 2,20,000-00 |
| 2 | ಶ್ರೀ ರಮಾನಂದ.ಕೆ | ನಿವೃತ್ತ ಪ್ರ.ದ.ಸ | 1,81,548-00 |
| | | **ಒಟ್ಟುರೂ.** | **4,01,548-00** |

ಸರ್ಕಾರದ ಸುತ್ತೋಲೆ ಸಂಖ್ಯೆ: ಸಿ.ಆ.ಸು.ಇ/ 588/ಸೇ.ನೆ.ನಿ/2015/ದಿನಾಂಕ:29.02.2016ರ ಆದೇಶದಂತೆ ನಿವೃತ್ತ ಹೊಂದಿರುವ ನೌಕರರ ಪುನರ್ ನೇಮಕ ಮಾಡಲು ಮತ್ತು ಸರ್ಕಾರಿ ನೌಕರರಿಗೆ ನಿವೃತ್ತಿ ನಂತರ ಸೇವಾವಧಿಯನ್ನು ವಿಸ್ತರಿಸುವ ಅವಕಾಶವಿರುವುದಿಲ್ಲ. ಸರ್ಕಾರದ ಉಪಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ (ವಿಶ್ವ ವಿದ್ಯಾನಿಲಯಗಳು) ಬೆಂಗಳೂರುರವರ ಕಛೇರಿ ಪತ್ರಸಂಖ್ಯೆ:ಇ.ಡಿ.461/ಯು.ಎನ್.ಎ/2015/ದಿ:29.05.2017 ಮತ್ತು ಅದೇ ಸಮ ಸಂಖ್ಯೆಯ ದಿನಾಂಕ; 13.06.2019ರ ಪತ್ರಗಳ ಅನುಸಾರ ವಿಶ್ವವಿದ್ಯಾನಿಲಯಗಳ ನಿವೃತ್ತ ನೌಕರರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ವಿಶ್ವ ವಿದ್ಯಾನಿಲಯದವರು ದಿನಾಂಕ: 07-01-2022ರಂದು ನೀಡಿರುವ ಅನುಪಾಲನಾ ವರದಿಯಲ್ಲಿ ಸದರಿಯವರ ಸೇವೆ ಪಡೆಯುವುದನ್ನು ಈಗ ನಿಲ್ಲಿಸಲಾಗಿದೆ ಎಂದು ಉತ್ತರಿಸಿರುತ್ತಾರೆ. ಆದರೆ ಇದಕ್ಕೆ ಸಮರ್ಥನೆಯಾಗಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ವಿಶ್ವ ವಿದ್ಯಾನಿಲಯದ ನಿವೃತ್ತ ನೌಕರರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದಕ್ಕೆ ಕಾರಣರಾದ ವಿಶ್ವ ವಿದ್ಯಾನಿಲಯದ ಸಂಬಂಧಪಟ್ಟ ಅಧಿಕಾರಿಗಳಿಂದ ರೂ.4,01,548/-ಗಳನ್ನು ವಸೂಲಿಸಿ ವಿಶ್ವವಿದ್ಯಾನಿಲಯದ ಸಾಮಾನ್ಯ ಖಾತೆಗೆ ಜಮೆ ಮಾಡುವಂತೆ ಸೂಚಿಸಿದೆ..

**21.3 ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲ ಸೇವೆಯನ್ನು ಮಾಡಿ ಕೊಂಡಿರುವುದು.**

ಸಾಮಾನ್ಯ ಖಾತೆಯ ವೋಚರುಗಳನ್ನು ಪರಿಶೀಲಿಸಲಾಗಿ ಹೊರಗುತ್ತಿಗೆ ಆಧಾರದಲ್ಲಿ ಮೆ|| ಕೆನಾನ್ ಡಿಟೆಕ್ಟಿವ್ & ಸೆಕ್ಯೂರಿಟಿ ಸರ್ವಿಸಸ್ ರವರಿಂದ ಹೊರ ಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆದು ಕೊಂಡು ಹೊರಗುತ್ತಿಗೆ ಸಂಸ್ಥೆಯವರಿಗೆ ರೂ.1,32,70,103/-ಗಳ ಬಿಲ್ಲನ್ನು ಪಾವತಿಸಲಾಗಿರುತ್ತದೆ. ವಿವರಗಳನ್ನು ಅನುಬಂಧ-18ರಲ್ಲಿ ನೀಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಆಇ6/ಟಿಎಫ್‌ಸಿ/2018, ದಿನಾಂಕ:29.12.2018ರ ಆದೇಶದಲ್ಲಿ ಹೊರಗುತ್ತಿಗೆ ಮೇಲೆ ಮಾನವ ಸಂಪನ್ಮೂಲವನ್ನು ತೆಗೆದುಕೊಳ್ಳಲು ಮಂಗಳೂರು ವಿಶ್ವ ವಿದ್ಯಾನಿಲಯಕ್ಕೆ ಮಂಜೂರಾಗಿರುವ ಹುದ್ದೆಗಳಿಗೆ ಎದುರಾಗಿ ಖಾಲಿ ಹುದ್ದೆಗಳಿಗೆ ಹೊರ ಗುತ್ತಿಗೆ ಮೇರೆ ನೇಮಿಸಿಕೊಳ್ಳಲು ಆರ್ಥಿಕ ಇಲಾಖೆಯಿಂದ ಕಡ್ಡಾಯವಾಗಿ ಅನುಮತಿ ಪಡೆದು ಪಾರದರ್ಶಕ ನಿಯಮಗಳನ್ನು ಪಾಲಿಸಿ ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ ಹೊರಗುತ್ತಿಗೆ ಮೇಲೆ ಮಾನವ ಸಂಪನ್ಮೂಲವನ್ನು ನೇಮಕ ಮಾಡಿಕೊಂಡಿರುವ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:01/ದಿನಾಂಕ:02.08.2021, 190/02.11.2021ರಲ್ಲಿ ಕೋರಲಾಗಿ ವಿಶ್ವ ವಿದ್ಯಾನಿಲಯದಿಂದ ಯಾವುದೇ ಕಡತಗಳನ್ನು/ ಉತ್ತರವನ್ನು ನೀಡದಿರುವುದರಿಂದ ಹೊರಗುತ್ತಿಗೆ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಮೆ|| ಕೆನಾನ್ ಡಿಟೆಕ್ಟಿವ್ & ಸೆಕ್ಯೂರಿಟಿ ಸರ್ವಿಸಸ್ ಪ್ರೈ. ಲಿಮಿಟೆಡ್ ರವರಿಂದ ಪಡೆದು ಪಾವತಿಸಿರುವ ಬಿಲ್ಲಿನ ಮೊತ್ತ ರೂ.1,32,70,103/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**21.4 ಗ್ರಂಥಾಲಯ ಶಿಕ್ಷಾರ್ಥಿಗಳನ್ನು ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದು:-**

ಸಾಮಾನ್ಯ ಖಾತೆಯ ವೋಚರ್ಸ್‌ಗಳನ್ನು ಪರಿಶೋಧಿಸಲಾಗಿ ಮಂಗಳೂರು ವಿಶ್ವವಿದ್ಯಾನಿಲಯ ಗ್ರಂಥಾಲಯಕ್ಕೆ 2019-20ನೇ ಸಾಲಿನಲ್ಲಿ ಗ್ರಂಥಾಲಯ ಶಿಕ್ಷಾರ್ಥಿಗಳನ್ನು ನೇಮಕ ಮಾಡಿಕೊಂಡು ರೂ5,59,021/ಗಳನ್ನು ಪಾವತಿಸಲಾಗಿದೆ. ವಿವರಗಳನ್ನು ಅನುಬಂಧ-19ರಲ್ಲಿ ನೀಡಲಾಗಿದೆ.

ಗ್ರಂಥಾಲಯ ಶಿಕ್ಷಾರ್ಥಿಗಳನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ವೃಂದ ಮತ್ತು ನೇಮಕಾತಿ ನಿಯಮಗಳು ಅಥವಾ ಪರಿನಿಯಮಗಳಲ್ಲಿ ಸರ್ಕಾರದಿಂದ ಮಂಜೂರಾಗಿರುವ ಹುದ್ದೆಗಳ ವಿವರಗಳು, ಮಂಜೂರಾಗಿರುವ ಗ್ರಂಥಾಲಯ ಶಿಕ್ಷಾರ್ಥಿಗಳ ಹುದ್ದೆಗಳಿಗೆ ಪರಿನಿಯಮಗಳನ್ವಯ ಸರ್ಕಾರದ ಆದೇಶ ಸಂಖ್ಯೆ: ಆಇ6/ಟಿಎಫ್‌ಸಿ/2018/ ದಿ:22.03.2019ರನ್ವಯ ಖಾಲಿ ಇರುವ ಹುದ್ದೆಗಳಿಗೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಆರ್ಥಿಕ ಇಲಾಖೆಯ ಅನುಮತಿ ಪಡೆಯ ಬೇಕಾಗಿರುವುದರಿಂದ ಆರ್ಥಿಕ ಇಲಾಖೆಯಿಂದ ಅನುಮತಿ ಪಡೆದು ನಿಯಮಾನುಸಾರ ತಾತ್ಕಾಲಿಕವಾಗಿ ಗ್ರಂಥಾಲಯ ಶಿಕ್ಷಾರ್ಥಿಗಳನ್ನು ನೇಮಕ ಮಾಡಿಕೊಂಡಿರುವ ಕಡತಗಳನ್ನು ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:117/ದಿನಾಂಕ:25.10.2021ರಲ್ಲಿ ಕೋರಲಾಗಿ ವಿಶ್ವ ವಿದ್ಯಾನಿಲಯದಿಂದ ನೀಡಿರುವ ಉತ್ತರದಲ್ಲಿ ವಿದ್ಯಾರ್ಥಿಗಳ ಹೆಚ್ಚಳ ಹಾಗೂ ನೌಕರರ ನಿವೃತ್ತಿಯಿಂದ ತೆರವಾದ ಹುದ್ದೆಗಳಿಗೆ ಆಡಳಿತಾತ್ಮಕ ಹಿತದೃಷ್ಟಿಯಿಂದ ಗ್ರಂಥಾಲಯ ಶಿಕ್ಷಾರ್ಥಿಗಳನ್ನು ಮಾಸಿಕ ಸಂಭಾವನೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿತ್ತು. ಆದರೆ ಈಗ ಅವರುಗಳ ಸೇವೆಯನ್ನು ಬಳಸಿಕೊಳ್ಳುತ್ತಿಲ್ಲ ಎಂದು ತಿಳಿಸಿರುತ್ತಾರೆ. ಆದರೆ ಇದಕ್ಕೆ ಸಮರ್ಥನೆಯಾಗಿ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಆದರೆ ಸರ್ಕಾರದಿಂದ ಪೂರ್ವಾನುಮ ತಿಪಡೆಯದೆ ನೇಮಕಾತಿ ಮಾಡಿಕೊಂಡಿರುವ ಗ್ರಂಥಾಲಯ ಶಿಕ್ಷಾರ್ಥಿಗಳಿಗೆ ಪಾವತಿಸಿರುವ ವೇತನದ ಒಟ್ಟು ಮೊತ್ತರೂ. 5,59,021/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ..

**21.5 ಶ್ರೀಮತಿ ಪಿ. ನಾಗವೇಣಿ ಹಿರಿಯ ಸಹಾಯಕರು ಇವರಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಉಲ್ಲಂಘಿಸಿ ನೇರವಾಗಿ ಸಹಾಯಕ ಕುಲಸಚಿವರ ಹುದ್ದೆಗೆ ಪದೋನ್ನತಿ ನೀಡಿರುವುದು.**

ಶ್ರೀಮತಿ ಪಿ. ನಾಗವೇಣಿ ಹಿರಿಯ ಸಹಾಯಕರು ಇವರ ಸೇವಾವಹಿಯನ್ನು ಪರಿಶೀಲಿಸಲಾಗಿ ವಿಶ್ವ ವಿದ್ಯಾನಿಲಯದ ಕುಲಸಚಿವರ ಆದೇಶ ಸಂಖ್ಯೆ: ಮವಿವಿ/18/Vol-III/ಸಿಬ್ಬಂದಿ(2)/1997-98 ದಿನಾಂಕ : 02.12.2013 ರನ್ವಯ ಇವರು ಹಿರಿಯ ಸಹಾಯಕರಾಗಿ ಪದೋನ್ನತಿ ಹೊಂದಿ ದಿನಾಂಕ:02.12.2013ರ ಪೂರ್ವಾಹ್ನ ಕರ್ತವ್ಯಕ್ಕೆ ವರದಿ ಮಾಡಿಕೊಂಡು ದಿನಾಂಕ:30.092019ರ ವರೆಗೆ ಹಿರಿಯ ಸಹಾಯಕ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರುವುದು ಕಂಡು ಬಂದಿರುತ್ತದೆ. ಆದರ ಕುಲಸಚಿವರ ಆದೇಶ ಸಂಖ್ಯೆ:ಮವಿ/12/ಸಿಬ್ಬಂದಿ(2)/2019-20 ದಿನಾಂಕ:23.03.2020ರಲ್ಲಿ ಇವರಿಗೆ ಅಧೀಕ್ಷಕರ ಹುದ್ದೆಗೆ ಬಡ್ತಿ ನೀಡದೆ ನೇರವಾಗಿ ಸಹಾಯಕ ಕುಲಸಚಿವರ ಹುದ್ದೆಗೆ ಪದೋನ್ನತಿಯನ್ನು ದಿನಾಂಕ: 01.10.2019ರಿಂದ ಪೂರ್ವಾನ್ವಯವಾಗುವಂತೆ ಪದೋನ್ನತಿಯನ್ನು ನೀಡಿ ಆರ್ಥಿಕ ಸೌಲಭ್ಯವನ್ನು ದಿನಾಂಕ: 01.01.2020 ರಿಂದ ಅನ್ವಯವಾಗುವಂತೆ ನೀಡಿ ಆದೇಶಿಸಲಾಗಿರುತ್ತದೆ.

ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯಗಳ ಅಧಿ ನಿಯಮ-2000 ದ ಪ್ರಕರಣ 41(7)ರಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಮಾನ್ಯ ಕುಲಾಧಿಪತಿಗಳು ದಿನಾಂಕ 24.05.1996ರಲ್ಲಿ ವಿಶ್ವ ವಿದ್ಯಾನಿಲಯದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅನುಮೋದಿಸಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ:ಎಂಯು/ಇಎಸ್‌ಟಿ(2)ಸಿಆರ್6/91-92 ,ದಿನಾಂಕ:20.06.1996 ರಲ್ಲಿ ಅಧಿಸೂಚಿಸಲಾಗಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಧೀಕ್ಷಕರ ಹುದ್ದೆಯಲ್ಲಿ ಉತ್ತಮ ಕಾರ್ಯ ನಿರ್ವಹಣೆಯೊಂದಿಗೆ 05 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳು ಮಾತ್ರವೇ ಸಹಾಯಕ ಕುಲಸಚಿವರ ಹುದ್ದೆಯ ಪದೋನ್ನತಿಗೆ ಅರ್ಹರಾಗುತ್ತಾರೆ. ಆದರೆ ಹಿರಿಯ ಸಹಾಯಕರ ಹುದ್ದೆಯಿಂದ ಸಹಾಯಕ ಕುಲಸಚಿವರ ಹುದ್ದೆಗೆ ನೇರವಾಗಿ ಪದೋನ್ನತಿ ನೀಡಲು ವಿಶ್ವ ವಿದ್ಯಾನಿಲಯದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿಲ್ಲದಿದ್ದರೂ ಪದೋನ್ನತಿ ನೀಡಿರುವುದಕ್ಕೆ ವಿವರಣೆಯನ್ನು ನೀಡುವಂತೆ ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:184/29.10.2021ನ್ನು ನೀಡಲಾಗಿತ್ತು. ಈ ಸಂಬಂಧ ವಿಶ್ವ ವಿದ್ಯಾನಿಲಯದವರು ದಿನಾಂಕ: 07-01-2022 ರಂದು ನೀಡಿರುವ ಉತ್ತರದಲ್ಲಿ ಶ್ರೀಮತಿ ನಾಗವೇಣಿಯವರಿಗಿಂತ ಮುಂಚೆ ಪದೋನ್ನತಿ ನೀಡಲಾಗಿದ್ದ ಶ್ರೀ ಸ್ವಾಮಿನಾಥನ್ ಮತ್ತು ಶ್ರೀಮತಿ ಲಲಿತಾ ಇವರುಗಳ ಪೈಕಿ ಶ್ರೀಸ್ವಾಮಿನಾಥನ್‌ರವರಿಗೆ ಹಿರಿಯ ಸಹಾಯಕ ಹುದ್ದೆಗೆ ಬಡ್ತಿ ನೀಡುವಾಗ ಸುಳ್ಳು ಜಾತಿ ಪ್ರಮಾಣಪತ್ರ ಸಲ್ಲಿಕೆ ಸಂಬಂಧ ಅವರ ಮುಂಬಡ್ತಿಯನ್ನು ತಡೆಹಿಡಿದಿರುವುದಾಗಿ ಹಾಗೂ ಪ್ರಸ್ತುತ ಈ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುವುದಾಗಿ ತಿಳಿಸಿ, ಶ್ರೀಮತಿ ಲಲಿತಾರವರ ನಂತರ ತಮಗೆ ಬಡ್ತಿ ನೀಡಬೇಕೆನ್ನುವ ಶ್ರೀಮತಿ ನಾಗವೇಣಿಯವರ ದೂರು ಅರ್ಜಿಯನ್ನು ಪರಿಗಣಿಸಿ ಬಡ್ತಿ ನೀಡಿರುವುದಾಗಿ ಮತ್ತು ಬಿ.ಕೆ. ಪವಿತ್ರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿರುವ ತೀರ್ಪಿನನ್ವಯ ಈ ಕ್ರಮ ವಹಿಸಿರುವುದಾಗಿ ಅಸಮರ್ಪಕವಾದ ವಿವರಣೆ ನೀಡಿರುತ್ತಾರೆ.

ವಿಶ್ವ ವಿದ್ಯಾನಿಲಯದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಹಿರಿಯ ಸಹಾಯಕರ ಹುದ್ದೆಯಿಂದ ಅಧೀಕ್ಷಕರ ಹುದ್ದೆಗೆ ಬಡ್ತಿ ನೀಡದೆಯೇ ನೇರವಾಗಿ ಸಹಾಯಕ ಕುಲಸಚಿವರ ಹುದ್ದೆಗೆ ಬಡ್ತಿ ನೀಡಲು ಅವಕಾಶವಿರುವುದಿಲ್ಲವಾದ ಕಾರಣ ವಿಶ್ವ ವಿದ್ಯಾನಿಲಯದ ವಿವರಣೆಯನ್ನು ಒಪ್ಪಲು ಸಾಧ್ಯವಿಲ್ಲ. ಹೀಗಾಗಿ ನಿಯಮಗಳನ್ನು ಉಲ್ಲಂಘಿಸಿ ಶ್ರೀಮತಿ ಪಿ.ನಾಗವೇಣಿರವರಿಗೆ ಪದೋನ್ನತಿ ನೀಡಿರುವುದನ್ನು ಹಿಂಪಡೆದು ಹಿಂದಿನ ಹುದ್ದೆಗೆ ನಿಯೋಜಿಸುವುದರೊಂದಿಗೆ, ಸಹಾಯಕ ಕುಲಸಚಿವರ ಹುದ್ದೆಯಲ್ಲಿ ಹೆಚ್ಚುವರಿಯಾಗಿ ನೀಡಿರುವ ವೇತನಭತ್ಯೆಗಳನ್ನು ಇದಕ್ಕೆ ಕಾರಣರಾಗಿರುವ ವಿಶ್ವ ವಿದ್ಯಾನಿಲಯದ ಕುಲಸಚಿವರು ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಿಸಿ ವಿಶ್ವ ವಿದ್ಯಾನಿಲಯದ ನಿಧಿಗೆ ಜಮೆ ಮಾಡಲು ಸೂಚಿಸಿದೆ.

**21.6 ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿದ್ದ ವಾಹನ ಚಾಲಕರನ್ನು ಖಾಯಂಗೊಳಿಸಿರುವುದು.**

ವಿಶ್ವ ವಿದ್ಯಾನಿಲಯದ ಪರಿನಿಯಮ ಸಂಃ ಎಂಯು/12/ಇಎಸ್‌ಟಿ(2)/204/04-05,ದಿನಾಂಕಃ11-03-2011ರ ವೃಂದ ಮತ್ತು ನೇಮಕಾತಿ ನಿಯಮಗಳ ಕ್ರಮ ಸಂಖ್ಯೆ- 64ರಲ್ಲಿ ಮಂಗಳೂರು ವಿವಿಯ ವಾಹನ ಚಾಲಕರ ಹುದ್ದೆಗೆ ಕನಿಷ್ಠ ಅರ್ಹತೆಗಳು; viiನೇ ತರಗತಿಯಲ್ಲಿ ತೇರ್ಗಡೆ, ಮಾನ್ಯತೆಯುಳ್ಳ ಭಾರೀ ವಾಹನಗಳ ಚಾಲನಾ ಪರವಾನಗಿ, ಕನಿಷ್ಠ ಎರಡು ವರ್ಷಗಳ ಚಾಲನಾ ಅನುಭವ, ಮಾನ್ಯತೆ ಪಡೆದ ಸಂಸ್ಥೆಯಿಂದ ಪ್ರಥಮ ಚಿಕಿತ್ಸಾ ತರಬೇತಿ ಪ್ರಮಾಣ ಪತ್ರವನ್ನು ಪಡೆದು ಕೊಂಡಿರಬೇಕು. ವಾಹನ ಚಾಲಕರ ಹುದ್ದೆಗಳಿಗೆ ಶೇ. 50ರಷ್ಟು ನೇರ ನೇಮಕಾತಿ ಹಾಗೂ ಶೇ 50 ರಷ್ಟನ್ನು ವಿಶ್ವ ವಿದ್ಯಾಲಯದಲ್ಲಿ ಕನಿಷ್ಠ 5 ವರ್ಷಗಳ ನಿರಂತರ ಸೇವೆ ಸಲ್ಲಿಸಿರುವ ಗ್ರೂಪ್-ಡಿ ವೃಂದದಿಂದ ಬಡ್ತಿ ಮೂಲಕ ನೇಮಕಾತಿ ಮಾಡ ಬೇಕಾಗಿರುತ್ತದೆ. ಅರ್ಹರಾದ ಅಭ್ಯರ್ಥಿಗಳು ವೃಂದ ಬದಲಾವಣೆಗೆ ಇಚ್ಛಿಸದಿದ್ದಲ್ಲಿ, ಅಂತಹ ಸಂದರ್ಭಗಳಲ್ಲಿ ಆ ಹುದ್ದೆಗಳನ್ನು ಸಹ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾಗುತ್ತದೆ. ಆದರೆ 2019-19ನೇ ಸಾಲಿನಲ್ಲಿ ವಿಶ್ವ ವಿದ್ಯಾನಿಲಯದ ಅಧಿಕೃತ ಜ್ಞಾಪನಾ ಸಂಖ್ಯೆಃ ಮವಿ/23/ಇ.ಎಸ್.ಟಿ.2/ 2017-18 ದಿನಾಂಕ 04.06.2018ರ ಮೂಲಕ ವಿಶ್ವ ವಿದ್ಯಾನಿಲಯದಲ್ಲಿ ತಾತ್ಕಾಲಿಕ ವ್ಯವಸ್ಥೆಯಡಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ಅವಿನಾಶ್ ಕುಮಾರ್, ಶ್ರೀ. ಪ್ರವೀಣ್ ಕುಮಾರ್ಟ್, ಶ್ರೀ ಲೊಕೇಶ್ ಹಾಗೂ ಶ್ರೀ. ಚೇತನ್ ಕುಮಾರ್ ಇವರುಗಳನ್ನು ಖಾಯಂ ಗೊಳಿಸಲಾಗಿರುತ್ತದೆ. ಈ ಬಗ್ಗೆ ಕಡತವನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳನ್ನು ಗಮನಿಸಲಾಗಿದೆ.

ವಿಶ್ವ ವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂಗ್ರೂಪ್ ಡಿ ವೃಂದದ ಸಿಬ್ಬಂದಿಯವರು ವಾಹನ ಚಾಲಕರ ಹುದ್ದೆಗೆ ನಿಗಧಿತ ವಿದ್ಯಾರ್ಹತೆ ಮತ್ತು ಚಾಲನಾ ಪರವಾನಗಿಯನ್ನು ಹೊಂದಿದ್ದು ವೃಂದ ಬದಲಾವಣೆ ಮಾಡಿಕೊಳ್ಳುವ ಬಗ್ಗೆ ಅವರಿಂದ ಸಮ್ಮತಿ ಪತ್ರ ಪಡೆದ ನಂತರ ನಿಯಮಾನುಸಾರ ವಾಹನ ಚಾಲಕರ ಹುದ್ದೆಗೆ ಮುಂಬಡ್ತಿ ನೀಡಬಹುದಾಗಿದ್ದು, ಈ ಬಗ್ಗೆ ಕ್ರಮ ವಹಿಸಿರುವುದಕ್ಕೆ ದಾಖಲೆಗಳು ಕಡತದಲ್ಲಿ ಲಭ್ಯವಿರುವುದಿಲ್ಲ.

ತಾತ್ಕಾಲಿಕ ವ್ಯವಸ್ಥೆಯಡಿ ೧೬ ವಾಹನ ಚಾಲಕರು ಕಾರ್ಯ ನಿರ್ವಹಿಸುತ್ತಿದ್ದು, ಅವರುಗಳಲ್ಲಿ ಮೇಲಿನ 04 ಸಿಬ್ಬಂದಿಗಳನ್ನು ಖಾಯಂ ಹುದ್ದೆಗೆ ಭರ್ತಿ ಗೊಳಿಸಲು ರೋಸ್ಟರ್ ಪದ್ಧತಿಯನ್ನು ಅನುಸರಿಸಿರುವ ಬಗ್ಗೆ ಹಾಗೂ ಇವರುಗಳನ್ನು ಆಯ್ಕೆಮಾಡಿದ ಮಾನದಂಡದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ.

1. ಸರ್ಕಾರದ ಪತ್ರ ಸಂಖ್ಯೆಇಡಿ/97/ಯುಡಿವಿ/2017, ದಿನಾಂಕಃ 30.05.2018 ರಲ್ಲಿ ವಯೋನಿವೃತ್ತಿಯಿಂದ ತೆರವಾದ ಮೂರು ವಾಹನ ಚಾಲಕ ಹುದ್ದೆಗಳನ್ನು ಮಂಜೂರಾದ ಹುದ್ದೆಗಳಿಗೆದುರಾಗಿ ಹೊರಗುತ್ತಿಗೆ ಆಧಾರದ ಮೇಲೆ ಭರ್ತಿಮಾಡಿಕೊಳ್ಳಲು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ನಿರ್ದೇಶಿಸಲಾಗಿದೆ. ಆದರೆ ದಿನಾಂಕ 04.06.2018ರಂದು ನಡೆದ ಮಂಗಳೂರು ವಿಶ್ವ ವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ಮೇಲಿನ ಸರ್ಕಾರದ ನಿರ್ದೇಶನವನ್ನು ಉಲ್ಲಂಘಿಸಿ ನಾಲ್ಕು ವಾಹನ ಚಾಲಕರನ್ನು ಸರ್ಕಾರದ ಅನುಮೋದನೆ ನಿರೀಕ್ಷಿಸಿ ಖಾಯಂ ಗೊಳಿಸಲು ತೀರ್ಮಾನ ಕೈ ಗೊಳ್ಳಲಾಗಿರುತ್ತದೆ.
   ಮೇಲೆ ಪ್ರಸ್ತಾಪಿಸಿರುವ ಕ್ರಮ ಸಂಖ್ಯೆ-(1) ರಿಂದ (3) ರ ವಿಷಯಗಳ ಕಡತಗಳನ್ನು ಹಾಜರು ಪಡಿಸುವಂತೆ ಕೋರಿ ಲೆಕ್ಕ ಪರಿಶೋದನಾ ವಿಚಾರಣಾ ಪತ್ರ ಸಂಖ್ಯೆ: 230 ದಿನಾಂಕಃ 08-11-2021ನ್ನು ನೀಡಲಾಗಿತ್ತು. ವಿಶ್ವ ವಿದ್ಯಾನಿಲಯವು ದಿನಾಂಕ 07-01-2022ರಲ್ಲಿ ನೀಡಿರುವ ಉತ್ತರದಲ್ಲಿ ಶಾಸನಬದ್ದ ಅಧಿಕಾರಿಗಳಿಗೆ ಖಾಯಂ ವಾಹನ ಚಾಲಕರನ್ನು ಒದಗಿಸುವುದು ಗೌಪ್ಯತೆಯ ದೃಷ್ಟಿಯಿಂದ ಅವಶ್ಯಕವಾಗಿರುವುದರಿಂದ ಖಾಲಿ ಇರುವ ವಾಹನ ಚಾಲಕರ ಹುದ್ದೆಗಳಿಗೆ ಸರ್ಕಾರದ

ಅನುಮೋದನೆಯನ್ನು ನಿರೀಕ್ಷಿಸಿ ನೇಮಕ ಮಾಡಿಕೊಳ್ಳಲಾಗಿದೆ ಎಂದು ಉತ್ತರಿಸಿರುತ್ತಾರೆ .ಆದರೆ ಈ ನೇಮಕಾತಿಗೆ ಸರ್ಕಾರದ ಅನುಮೋದನೆ ಪಡೆದ ಬಗ್ಗೆ ಯಾವುದೇ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ. ಹೀಗಾಗಿ ಸರ್ಕಾರದಿಂದ ಅನುಮೋದನೆಯನ್ನು ಪಡೆಯದೆ ತಾತ್ಕಾಲಿಕ ವಾಹನ ಚಾಲಕರನ್ನು ಖಾಯಂ ಮಾಡಿಕೊಂಡು ಪಾವತಿಸಿರುವ ಒಟ್ಟು ವೇತನ ರೂ. 12,91,922-00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ-20 ರಲ್ಲಿ ನೀಡಲಾಗಿದೆ.

### 21.7 ವಿಶ್ವ ವಿದ್ಯಾನಿಲಯದ ಪರಿನಿಯಮವನ್ನು ಉಲ್ಲಂಘಿಸಿ ಶ್ರೀಮತಿ ಭಾಗ್ಯಲಕ್ಷ್ಮಿ ರವರಿಗೆ ಅಧೀಕ್ಷಕರಾಗಿ ಪದೋನ್ನತಿ ನೀಡಿರುವುದು.

ಶ್ರೀಮತಿ ಭಾಗ್ಯಲಕ್ಷ್ಮಿ, ಅಧೀಕ್ಷಕರು ಇವರ ಸೇವಾ ವಹಿಯನ್ನು ಪರಿಶೀಲಿಸಲಾಗಿ ಇವರಿಗೆ ವಿಶ್ವ ವಿದ್ಯಾನಿಲಯದ ಕುಲಸಚಿವರ ಆದೇಶ ಸಂಖ್ಯೆ: ಮವಿ/28/ಸಿಬ್ಬಂದಿ/(2)/2017-18, ದಿನಾಂಕ: 07-04-2018ರಲ್ಲಿ ಹಿರಿಯ ಸಹಾಯಕರಾಗಿ ಮುಂಬಡ್ತಿ ನೀಡಲಾಗಿದೆ. ನಂತರ ಕುಲಸಚಿವರ ಆದೇಶ ಸಂಖ್ಯೆ: ಮವಿ/ಸಿಬ್ಬಂದಿ/ಪವೇನಿ/ಸಿ.ಆರ್ 100/2019-20/ಇ8,ದಿನಾಂಕ;18-05-2020ರಲ್ಲಿ ದಿನಾಂಕ: 07-04-2018ರಿಂದ ಪೂರ್ವಾನ್ವಯವಾಗುವಂತೆ ಇವರಿಗೆ ಅಧೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡಲಾಗಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ/28/ಯುಡಿಎಸ್ 87, ದಿನಾಂಕ: 18-09-1987 ರಲ್ಲಿ ಅನುಮೋದನೆಯಾಗಿರುವ ವಿಶ್ವ ವಿದ್ಯಾನಿಲಯದ ಪರಿನಿಯಮದನ್ವಯ ಹಿರಿಯ ಸಹಾಯಕರ ಹುದ್ದೆಯಲ್ಲಿ 2 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ನಂತರವಷ್ಟೇ ಅಧೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡ ಬೇಕಾಗಿರುತ್ತದೆ. ಆದರೆ ಹಿರಿಯ ಸಹಾಯಕರ ಹುದ್ದೆಗೆ ಮುಂಬಡ್ತಿಯನ್ನು ನೀಡಿದ ದಿನಾಂಕದಿಂದಲೇ ಅಧೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ಮೂಲಕ ಪರಿನಿಯಮದ ಉಲ್ಲಂಘನೆ ಮಾಡಲಾಗಿದೆ. ಹೀಗೆ ಪರಿನಿಯಮದ ನಿಬಂಧನೆಗಳನ್ನು ಉಲ್ಲಂಘಿಸಿ ಮುಂಬಡ್ತಿ ನೀಡಿರುವುದಕ್ಕೆ ಸೂಕ್ತ ವಿವರಣೆ ನೀಡಲು ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:232/ ದಿನಾಂಕ: 08-11-2021ನ್ನು ನೀಡಲಾಗಿತ್ತು. ಇದಕ್ಕೆ ವಿಶ್ವ ವಿದ್ಯಾನಿಲಯವು ನೀಡಿರುವ ಉತ್ತರದಲ್ಲಿ ಪವಿತ್ರ ಪ್ರಕರಣದಿಂದ ಮುಂಬಡ್ತಿ ಪ್ರಕ್ರಿಯೆ ಕೈಗೊಳ್ಳಲು ಸಾದ್ಯವಾಗದೇ ಇರುವುದರಿಂದ ನೀಡಲಾಗಿದೆ ಎಂದುತಿಳಿಸಿದ್ದು, ಇದು ಸಮರ್ಪಕ ಉತ್ತರವಾಗಿರುವುದಿಲ್ಲ. ಹೀಗೆ ಪರಿನಿಯಮವನ್ನು ಉಲ್ಲಂಘಿಸಿ ಹಿರಿಯ ಸಹಾಯಕರ ಹುದ್ದೆಯಿಂದ ಅಧೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡಿರುವುದನ್ನು ಹಿಂಪಡೆಯಲು ಹಾಗೂ ಸದರಿಯವರಿಗೆ ಮುಂಬಡ್ತಿಯಿಂದ ನೀಡಿರುವ ಹೆಚ್ಚುವರಿ ಆರ್ಥಿಕ ಸೌಲಭ್ಯವನ್ನು ಮುಂಬಡ್ತಿ ಹಿಂಪಡೆದ ದಿನಾಂಕದವರೆಗೆ ಲೆಕ್ಕಚಾರ ಮಾಡಿ, ಅದನ್ನು ಈ ಲೋಪಕ್ಕೆ ಕಾರಣರಾದ ವಿಶ್ವ ವಿದ್ಯಾನಿಲಯದ ಕುಲಸಚಿವರು ಮತ್ತು ಸಂಬಂಧಿಸಿದ ಅಧಿಕಾರಿಗಳಿಂದ ವಸೂಲಿಸಿ ವಿಶ್ವ ವಿದ್ಯಾನಿಲಯದ ಸಂಬಂಧಪಟ್ಟ ಖಾತೆಗೆ ಜಮೆ ಮಾಡುವಂತೆ ಸೂಚಿಸಿದೆ.

### 21.8 ಎನ್ಎಂ.ಆರ್/ ವರ್ಕ್ ಚಾರ್ಜ್ ನೆಲೆಯಲ್ಲಿ ಕರ್ತವ್ಯ ನಿರ್ವಹಿಸಿರುವ ಬೋಧಕೇತರ ಸಿಬ್ಬಂದಿಗಳಿಗೆ ವೇತನವನ್ನು ಸೇವಾ ಸಕ್ರಮಾತಿ ಗೊಳಿಸಿದ ದಿನಾಂಕದಿಂದ ನಿಗಧಿಪಡಿಸುವ ಕುರಿತು.

2019-20ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಶ್ರೀದೇಜು ಗೌಡ, ವಾಚ್‌ಮನ್ ಇವರ ಸೇವಾ ವಹಿಯನ್ನು ಪರಿಶೀಲಿಸಲಾಗಿ ಸದರಿಯವರು ದಿನಾಂಕ: 01-03-1984ರಂದು ಎನ್.ಎಂ.ಆರ್‌ನಲ್ಲಿ ನೇಮಕಾತಿ ಹೊಂದಿ ವಿಶ್ವವಿದ್ಯಾನಿಲಯದ. ಆದೇಶ ಸಂಖ್ಯೆ: ಮವಿವಿ/ 37/ಸಿಬ್ಬಂದಿ(2)/2009-10,ದಿನಾಂಕ:15-05-2019ರಲ್ಲಿ ದಿನಾಂಕ 13-11-1992ರಿಂದ ಪೂರ್ವಾನ್ವಯವಾಗುವಂತೆ ವೇತನ ಶ್ರೇಣಿ ರೂ.390-1040ರಲ್ಲಿ ಖಾಯಂ ಗೊಳಿಸಲಾಗಿರುತ್ತದೆ. ದಿನಗೂಲಿ ನೌಕರರ ಖಾಯಮಾತಿಗೆ ಸಂಬಂಧಿಸಿದ ಕಡತವನ್ನು ಪರಿಶೀಲಿಸಲಾಗಿ ಸದರಿ ನೌಕರರೂ ಸೇರಿದಂತೆ ಇತರೆ 19 ನೌಕರರು ತಮಗೆ ಖಾಯಂ ಪೂರ್ವ ಸೇವಾವಧಿಯನ್ನು ಪರಿಗಣಿಸಿ ವೇತನವನ್ನು ನಿಗಧಿಪಡಿಸುವಂತೆ ಕೋರಿ ಉಚ್ಚ ನ್ಯಾಯಾಲಯದಲ್ಲಿ ರಿಟ್ ನಂ. 7267/2000 (ಎಸ್-ಪಿಆರ್‌ಓ) ರಲ್ಲಿ ಮನವಿ ಸಲ್ಲಿಸಿರುತ್ತಾರೆ. ಘನ ನ್ಯಾಯಾಲಯವು ದಿನಾಂಕ: 11-7-2005ರ ಆದೇಶದಲ್ಲಿ ಸದರಿ ನೌಕರರುಗಳಿಗೆ ಖಾಯಂ ಪೂರ್ವ ಸೇವಾವಧಿಯನ್ನು ರಜೆ, ಪಿಂಚಣಿ ಸೌಲಭ್ಯಗಳು ಹಾಗೂ ಕಾಲಬದ್ದ ವೇತನ ಮುಂಬಡ್ತಿಗೆ ಪರಿಗಣಿಸಲು ನಿರ್ದೇಶನ ನೀಡಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 2 ಎಸ್.ಎಲ್.ಸಿ. 90 ದಿನಾಂಕ: 6-8-1999ರ ಕಂಡಿಕೆ-10(ಎ) ರಲ್ಲಿ ಸೇವಾ ಸಕ್ರಮಾತಿ ಹೊಂದಿದ ದಿನಗೂಲಿ ನೌಕರರಿಗೆ ಕಾಲಿಕ ವೇತನ ಶ್ರೇಣಿಯಲ್ಲಿ ಕನಿಷ್ಠ ಹಂತಕ್ಕೆ ಮೂಲ ವೇತನ ನಿಗಧಿಪಡಿಸಲು ತಿಳಿಸಲಾಗಿರುತ್ತದೆ. ಆದ್ದರಿಂದ ಮಾನ್ಯ ನ್ಯಾಯಾಲಯದ ಆದೇಶದ ಬಗ್ಗೆ ಸರ್ಕಾರದೊಡನೆ ವ್ಯವಹರಿಸಿ, ಸರ್ಕಾರದ ನಿರ್ದೇಶನ ಪಡೆದು ಕೊಂಡು, ಅದರಂತೆ ಕ್ರಮ ವಹಿಸಲು ಸೂಚಿಸಿದೆ.

## 22. ಪ್ರಯಾಣಭತ್ಯೆಗಳು

2019-20ನೇ ಸಾಲಿನಲ್ಲಿ ಪ್ರಯಾಣ ಭತ್ಯೆ ನ್ಯೂನತೆಗೆ ಸಂಬಂಧಿಸಿದ ಕಂಡಿಕೆಗಳು ಇರುವುದಿಲ್ಲ.

## 23. ಸಾದಿಲ್ವಾರುವೆಚ್ಚಗಳು

**23.1 ಕೆ.ಟಿ.ಪಿ.ಪಿ. ನಿಯಮ ಪಾಲಿಸದೆ ಮೆ|| ಬೇಸ್ ಕಂಪ್ಯೂಟರ್ ರವರಿಂದ ಗಣಕ ಯಂತ್ರಗಳ ವಾರ್ಷಿಕ ನಿರ್ವಹಣೆ ಮಾಡಿರುವುದು.**

2019-20ನೇ ಸಾಲಿನಲ್ಲಿ ವಿಶ್ವ ವಿದ್ಯಾನಿಲಯದ ಗಣಕ ಯಂತ್ರಗಳ ವಾರ್ಷಿಕ ನಿರ್ವಹಣೆಯನ್ನು ಮೆ|| ಬೇಸ್ ಕಂಪ್ಯೂಟರ್ಸ್ ರವರಿಂದ ಮಾಡಿಸಿ ಕೊಂಡು ರೂ.15,47,317/-ಗಳ ಬಿಲ್ಲನ್ನು ಪಾವತಿಸಿರುವುದು ಸಾಮಾನ್ಯ ಖಾತೆಯ ವೋಚರುಗಳ ಪರಿಶೀಲನೆಯಿಂದ ಕಂಡುಬಂದಿರುತ್ತದೆ. ವಿವರಗಳನ್ನು ಅನುಬಂಧ-22ರಲ್ಲಿ ನೀಡಲಾಗಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999 ಹಾಗೂ ಕೆ.ಟಿ.ಪಿ.ಪಿ. (ತಿದ್ದುಪಡಿ) ನಿಯಮಗಳು - 2001ರ ಉಪನಿಯಮ-4(ಇ) ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿ.ಆ.ಸು.ಇ.ಇ/ ಇ.ಸಂ.ಗ್ರ/2009 ದಿನಾಂಕಃ 09.10.2012, ಆ.ಇ. 876 (ಪಿ-2) ವೆಚ್ಚ-12/2015/, ದಿನಾಂಕಃ 05.02.2018ರ ಅನುಸಾರ ರೂ.1.00 ಲಕ್ಷ ಮೀರಿದ ಮೌಲ್ಯವನ್ನು ಹೊಂದಿರುವ ಪ್ರತಿಯೊಂದು ಸಂಗ್ರಹಣೆಯ ಸಂಬಂಧದಲ್ಲಿ ಎಲ್ಲಾ ಸಂಗ್ರಹಣಾ ಸಂಸ್ಥೆಗಳು ವಿದ್ಯುನ್ಮಾನ ಸಂಗ್ರಹಣಾ ವೇದಿಕೆಯ ಮೂಲಕವೇ ಟೆಂಡರ್‌ನ್ನು ಆಹ್ವಾನಿಸಿ ಪಡೆಯ ಬೇಕಾಗಿರುತ್ತದೆ. ಈ ಸಂಬಂಧ ಟೆಂಡರ್ ಪ್ರಕ್ರಿಯೆ ಕೈಗೊಂಡ ಸಂಪೂರ್ಣ ಮೂಲ ಕಡತವನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಲು ಕೋರಿ ವಿಚಾರಣೆ ಪತ್ರ ಸಂಖ್ಯೆ:01/02.08.2021 ಮತ್ತು 187/29.10.2021ನ್ನು ನೀಡಲಾಗಿತ್ತು. ಆದರೆ ವಿಶ್ವ ವಿದ್ಯಾನಿಲಯದಿಂದ ಯಾವುದೇ ಉತ್ತರವನ್ನಾಗಲೀ ಅಥವಾ ದಾಖಲೆಗಳನ್ನಾಗಲೀ ಹಾಜರು ಪಡಿಸಿರುವುದಿಲ್ಲ. ಆದ್ದರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳನ್ನು ಉಲ್ಲಂಘಿಸಿ ಮೆ|| ಬೇಸ್ ಕಂಪ್ಯೂಟರ್ಸ್ ಮಂಗಳೂರು ರವರಿಂದ ಗಣಕ ಯಂತ್ರಗಳ ವಾರ್ಷಿಕ ನಿರ್ವಹಣೆಯನ್ನು ಮಾಡಿಸಿರುವುದಕ್ಕೆ ಭರಿಸಿರುವ ವೆಚ್ಚ ರೂ.15,47,317/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

.

### 23.2 ಸರಕು ಮತ್ತು ಸೇವೆ ಒದಗಿಸಿದ ಸಂಸ್ಥೆಗಳಿಗೆ ಪಾವತಿಸಿದ ಬಿಲ್ಲುಗಳಿಂದ ಜಿ.ಎಸ್.ಟಿಟಿ.ಡಿ.ಎಸ್ ಕಟಾಯಿಸದಿರುವುದು.

ವಿಶ್ವ ವಿದ್ಯಾನಿಲಯದ ವಿವಿಧ ಲೆಕ್ಕ ಶೀರ್ಷಿಕೆಗಳಡಿ ವೆಚ್ಚ ಭರಿಸಲಾಗಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ಅನುಬಂಧ - 23ರಲ್ಲಿ ವಿವರಿಸಿರುವ ಬಿಲ್ಲುಗಳಲ್ಲಿ ಜಿ.ಎಸ್.ಟಿ–ಟಿ.ಡಿ.ಎಸ್ ಕಟಾಯಿಸದೇ ಬಿಲ್ಲು ಪಾವತಿಸಿರುವುದು ಕಂಡು ಬಂದಿರುತ್ತದೆ.

ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ - 2017ರ ನಿಯಮ - 51ರಂತೆ ದಿಃ 01.10.2018 ರಿಂದ ಸರಕು ಮತ್ತು ಸೇವೆಗಳ ಪೂರೈಕೆಗೆ ಸಂಬಂಧಿಸಿದ ಬಿಲ್ಲುಗಳ ಪಾವತಿಗಳ ಒಟ್ಟು ಮೊತ್ತ ವಾರ್ಷಿಕ ರೂ.2.50 ಲಕ್ಷಗಳಿಗಿಂತ ಹೆಚ್ಚಿದ್ದಲ್ಲಿ ಶೇ.2ರ ದರದಲ್ಲಿ [ರಾ.ಜಿ.ಎಸ್.ಟಿ, ಶೇ.1ರಷ್ಟು + ಕೇಂ.ಜಿ.ಎಸ್.ಟಿ ಶೇ.1ರಷ್ಟು] ಜಿ.ಎಸ್.ಟಿ – ಟಿ.ಡಿ.ಎಸ್ ರೂ 4,39,281ಗಳನ್ನು ಕಟಾವಣೆ ಮಾಡ ಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಅನುಬಂಧ - 23ರಲ್ಲಿ ವಿವರಿಸಿರುವ ಬಿಲ್ಲುಗಳಲ್ಲಿ ಜಿ.ಎಸ್.ಟಿ – ಟಿ.ಡಿ.ಎಸ್ ಕಟಾಯಿಸಿರುವ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿವಂತೆ ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 31/11.08.2021, 129/25.10.201, 147/25.10.2021 ಮತ್ತು 172/29.10.2021, 181/29.10.2021ಗಳನ್ನು ನೀಡಲಾಗಿತ್ತು. ವಿಶ್ವ ವಿದ್ಯಾನಿಲಯದವರು ದಿನಾಂಕಃ 07-01-2022ರಂದು ನೀಡಿರುವ ಉತ್ತರದಲ್ಲಿ ಜಿ.ಎಸ್.ಟಿ ಕಟಾಯಿಸದಿರುವ ಸಂಸ್ಥೆಗಳ ಮುಂದಿನ ಬಿಲ್ಲುಗಳಲ್ಲಿ ಜಿ.ಎಸ್.ಟಿ ಕಟಾಯಿಸಲಾಗುವುದು ಎಂದು ಉತ್ತರಿಸಿರುತ್ತಾರೆ, ಆದರೆ ವಿಶ್ವ ವಿದ್ಯಾನಿಲಯದವರು ನೀಡಿರುವ ಈ ಉತ್ತರ ಸಮಂಜಸವಾದುದಲ್ಲವಾದ್ದರಿಂದ ಜಿ.ಎಸ್.ಟಿ. ಟಿ.ಡಿ.ಎಸ್ ಮೊತ್ತವನ್ನು ಸಂಬಂಧಿಸಿದವರಿಂದ ವಸೂಲಿಸಿ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿರುವ ಬಗ್ಗೆ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸುವಂತೆ ಸೂಚಿಸಿದೆ.

### 23.3 ಕೆ.ಟಿ.ಪಿ.ಪಿ. ನಿಯಮಗಳನ್ನು ಪಾಲಿಸದೇ ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸಿ ಕೊಂಡಿರುವುದು.

ಸಾಮಾನ್ಯ ಖಾತೆಯ ವೋಚರ್‌ಗಳನ್ನು ಪರಿಶೀಲಿಸಲಾಗಿ ಮೇ|| ಮೆಹ್ರಾ ಕಂಪ್ಯೂಟರ್ ಸಿಸ್ಟಂ ಲಿಮಿಟೆಡ್‌ಬೆಂಗಳೂರುರವರಿಂದ ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಿಸಿಕೊಂಡ ಬಿಲ್ಲಿನ ಬಾಬ್ತು ರೂ. 90,81,947/- ಗಳನ್ನು ಸದರಿ ಸಂಸ್ಥೆಗೆ ಪಾವತಿಸಲಾಗಿರುತ್ತದೆ. ವಿವರಗಳನ್ನು ಅನುಬಂಧ-24 ರಲ್ಲಿ ನೀಡಲಾಗಿದೆ. ಪ್ರಶ್ನೆ ಪತ್ರಿಕೆಗಳ ಮುದ್ರಣಕ್ಕೆ ಸಂಬಂದಿಸಿದಂತೆ ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ-131/ ,ದಿನಾಂಕ:25.10.2021ರಲ್ಲಿ ಕೋರಲಾಗಿತ್ತು.

1) ಪ್ರಶ್ನೆ ಪತ್ರಿಕೆ ಮುದ್ರಿಸಲು ಟೆಂಡರ್ ಆಹ್ವಾನಿಸಿದ ಅಥವಾ ಕೆ.ಟಿ.ಪಿ.ಪಿ ಅಧಿನಿಯಮ,1999ರ ಪ್ರಕರಣ-4(ಜಿ)ಅಡಿ ಈ ಪ್ರಕ್ರಿಯೆಗೆ ಕೆ.ಟಿ.ಪಿ.ಪಿಯಿಂದ ವಿನಾಯಿತಿ ಪಡೆದಿರುವ ಆರ್ಥಿಕಇಲಾಖೆಯ ಅಧಿಸೂಚನೆಯ ಪ್ರತಿ.
2) ವಿಶ್ವ ವಿದ್ಯಾನಿಲಯದ ಎಲ್ಲಾ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಅವಶ್ಯಕತೆಯಿರುವ ಪ್ರಶ್ನೆ ಪತ್ರಿಕೆಗಳ ವಿವರಗಳು, ಪ್ರಶ್ನೆ ಪತ್ರಿಕೆ ಮುದ್ರಿಸಲು ಮಾಡಿಕೊಂಡಿರುವ ಒಡಂಬಡಿಕೆಗಳು.
3) ಪ್ರಶ್ನೆ ಪತ್ರಿಕೆ ಮುದ್ರಿಸಲು ನೀಡಿರುವ ಸರಬರಾಜು ಆದೇಶಗಳು.
4) ಪ್ರಶ್ನೆ ಪತ್ರಿಕೆಗಳ ದಾಸ್ತಾನು & ವಿತರಣಾ ವಿವರಗಳು.
5) ಕಾಲೇಜುಗಳಿಂದ ಉಪಯೋಗಿಸದ ಪ್ರಶ್ನೆ ಪತ್ರಿಕೆಗಳನ್ನು ಹಿಂಪಡೆದಿರುವ ವಿವರಗಳು.

ಮೇಲಿನ ವಿಷಯಗಳ ಕಡತಗಳು/ ದಾಖಲಾತಿಗಳನ್ನು ಹಾಜರುಪಡಿಸುವಂತೆ ಕೋರಲಾಗಿದ್ದರೂ ವಿಶ್ವ ವಿದ್ಯಾನಿಲಯವು ಯಾವುದೇ ಉತ್ತರವನ್ನು ನೀಡದಿರುವುದಿಲ್ಲ.

ಹೀಗೆ ಮುದ್ರಿಸಿಕೊಂಡ ಪ್ರಶ್ನೆಪತ್ರಿಕೆಗಳ ಸಂಬಂಧ ಪ್ರತ್ಯೇಕ ದಾಸ್ತಾನು ವಹಿಯನ್ನು ನಿರ್ವಹಿಸಿ ಸ್ವೀಕೃತಿ ಮತ್ತು ವಿತರಣೆಯನ್ನು ಸದರಿ ವಹಿಯಲ್ಲಿ ನಮೂದಿಸಬೇಕಾಗಿರುತ್ತದೆ ಹಾಗೂ ವಿದ್ಯಾರ್ಥಿಗಳಿಗೆ ನೀಡುವವರೆಗಿನ ಪ್ರತೀ ಹಂತಗಳಲ್ಲಿ ಉಪದಾಸ್ತಾನು ವಹಿಗಳನ್ನು ನಿರ್ವಹಿಸ ಬೇಕಾಗಿರುತ್ತದೆ. ಮುದ್ರಿಸಲಾದ ಪ್ರಶ್ನೆಪತ್ರಿಕೆ, ಉತ್ತರ ಪತ್ರಿಕೆ, ಓ.ಎಂ. ಆರ್, ಶೀಟ್‌ಗಳ ದಾಸ್ತಾನು, ಉಪ ದಾಸ್ತಾನು ಹಾಗೂ ವಿತರಣೆ ಮತ್ತು ಬಾಕಿ ಉಳಿದಿರುವ ವಿವರಗಳನ್ನು ನೀಡಲಾದ ನಮೂನೆಯಲ್ಲಿ ನಿರ್ವಹಿಸಿರುವ ವಹಿಗಳ ಸಹಿತ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ 06, ದಿನಾಂಕಃ 04.08.2021, ಸಂಖ್ಯೆ-61, ದಿನಾಂಕಃ 13-09-2021, ಸಂಖ್ಯೆ-62, ದಿನಾಂಕಃ 13-09-2021, ಸಂಖ್ಯೆ-63, ದಿನಾಂಕಃ13-09-2021, ಸಂಖ್ಯೆ-64,ದಿನಾಂಕಃ 13-09-2021 ಹಾಗೂ ವಿಚಾರಣಾ ಪತ್ರ **ಸಂಖ್ಯೆ**-194, ದಿನಾಂಕ 02.11.2021ರಲ್ಲಿ ಕೋರಲಾಗಿದ್ದರೂ ಸಹ ಯಾವುದೇ ವಿವರಗಳನ್ನಾಗಲೀ ಅಥವಾ ವಹಿಗಳನ್ನಾಗಲೀ ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ. ಪ್ರಶ್ನೆ ಪತ್ರಿಕೆಗಳು, ಉತ್ತರ ಪತ್ರಿಕೆಗಳು, ಓ.ಎಂ.ಆರ್ ಶೀಟ್‌ಗಳ ಆರಂಭಿಕ ಶಿಲ್ಕು, ಸ್ವೀಕೃತಿ, ವಿತರಣೆ ಮತ್ತು ಬಾಕಿಗಳ ವಿವರಗಳನ್ನು ದೃಡೀಕರಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ.

ಮೇಲಿನ ಕಾರಣಗಳಿಂದ ಈ ಬಾಬ್ತು ಪಾವತಿಸಿರುವ ಒಟ್ಟು ಮೊತ್ತ ರೂ. 90,81,947/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

## 23.4 ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಖಾಲಿ ಅಂಕಪಟ್ಟಿ & ಪದವಿ ಪ್ರಮಾಣಪತ್ರಗಳನ್ನು ಮುದ್ರಿಸಿಕೊಳ್ಳದೇ ಖಾಸಗಿಯವರಿಂದ ಮುದ್ರಿಸಿಕೊಂಡಿರುವುದು.

ಸಾಮಾನ್ಯ ಖಾತೆಯ ವೋಚರರುಗಳನ್ನು ಪರಿಶೀಲಿಸಿದಾಗ ಮಂಗಳೂರು ವಿಶ್ವ ವಿದ್ಯಾನಿಲಯಕ್ಕೆ ಅವಶ್ಯಕವಿರುವ ಅಂಕಪಟ್ಟಿಗಳು, ಪದವಿ ಪ್ರಮಾಣಪತ್ರಗಳನ್ನು ಮೆ|| ಮೆಹ್ರಾ ಕಂಪ್ಯೂಟರ್ ಸಿಸ್ಟಂ ಲಿಮಿಟೆಡ್ ಹಾಗೂ ಇತರೇ ಖಾಸಗಿ ಸಂಸ್ಥೆಯವರಿಂದ ಮುದ್ರಿಸಿಕೊಂಡು ಈ ಬಾಬ್ತು ಒಟ್ಟು ಬಿಲ್ಲಿನ ಮೊತ್ತ ರೂ.28,98,972/- ಗಳನ್ನು ಪಾವತಿಸಲಾಗಿದೆ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರುರವರ ಪತ್ರ ಸಂಖ್ಯೆ: ಇಡಿ386/ ಯು.ಎನ್.ಇ/ 2016/ ದಿ: 29.09.2016 ರಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಅಂಕಪಟ್ಟಿಗಳು ಹಾಗೂ ಪದವಿ ಪ್ರಮಾಣಪತ್ರಗಳನ್ನು ಮೆ.ಎಂ.ಎಸ್.ಐ.ಎಲ್ ರವರಿಂದ ಮುದ್ರಿಸಿ ಕೊಳ್ಳುವಂತೆ ತಿಳಿಸಿದ್ದರೂ, ಸದರಿ ಆದೇಶವನ್ನು ಉಲ್ಲಂಘಿಸಿ ಮೆ|| ಮೆಹ್ರಾ ಕಂಪ್ಯೂಟರ್ಸ್ ಸಿಸ್ಟಂ ಲಿಮಿಟೆಡ್ ಮತ್ತು ಇತರೆ ಖಾಸಗಿ ಸಂಸ್ಥೆಯವರಿಂದ ಮುದ್ರಿಸಿ ಕೊಂಡಿರುವುದಕ್ಕೆ ಸೂಕ್ತ ವಿವರಣೆ ನೀಡುವಂತೆ ಕೋರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 103/ದಿ:21.10.2021ನ್ನು ನೀಡಲಾಗಿತ್ತು. ವಿಶ್ವ ವಿದ್ಯಾನಿಲಯದವರು ದಿನಾಂಕ:07-01-2022 ರಂದು ನೀಡಿರುವ ಉತ್ತರದಲ್ಲಿ 2019ನೇ ಸಾಲಿನ ಪ್ರಾರಂಭದಲ್ಲಿ ಸ್ನಾತಕ/ ಸ್ನಾತಕೋತ್ತರ ತರಗತಿಯ ವಿದ್ಯಾರ್ಥಿಗಳಿಗೆ ಹಳೆಯ ದಾಸ್ತಾನಿನಲ್ಲಿ ಉಳಿದುಕೊಂಡಿದ್ದ ಅಂಕ ಪಟ್ಟಿಗಳ ಸಮಾನ ವೈಶಿಷ್ಟ್ಯಗಳ ಅಂಕ ಪಟ್ಟಿಗಳನ್ನು ವಿತರಿಸಲು ಅನುಕೂಲವಾಗುವಂತೆ ದರಪಟ್ಟಿಗಳನ್ನು ಕರೆದು ಕನಿಷ್ಠ ದರ ನಮೂದಿಸಿದ ಮೆ|| ಮೆಹ್ರಾ ಕಂಪ್ಯೂಟರ್ಸ್ ಸಿಸ್ಟಂ ಲಿಮಿಟೆಡ್, ಬೆಂಗಳೂರುರವರಿಂದ ಮುದ್ರಿಸಿ ಕೊಳ್ಳಲಾಗಿದೆ. ಇನ್ನು ಮುಂದೆ ಮೆ. ಎಂ.ಎಸ್.ಐ.ಎಲ್ ರವರಿಂದ ಮುದ್ರಿಸಿ ಕೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಸರ್ಕಾರದ ಆದೇಶ ಉಲ್ಲಂಘಿಸಿ ಎಂ.ಎಸ್.ಐ.ಎಲ್ ರವರಿಂದ ಅಂಕಪಟ್ಟಿ & ಪದವಿ ಪ್ರಮಾಣಪತ್ರಗಳನ್ನು ಮುದ್ರಿಸಿಕೊಳ್ಳದೆ, ಕೆ.ಟಿ.ಪಿ.ಪಿ. ನಿಯಮಾವಳಿಗಳನ್ವಯ ಟೆಂಡರ್ ನ್ನು ಕೂಡ ಕರೆಯದೆಯೇ ದರಪಟ್ಟಿ ಕರೆದು ಖಾಸಗಿಯವರಿಂದ ಮುದ್ರಿಸಿಕೊಂಡಿರುವುದರಿಂದ ಅಂಕಪಟ್ಟಿಗಳ ಗೌಪ್ಯತೆ ಕಾಯ್ದುಕೊಳ್ಳುವುದು ಕಷ್ಟಕರವಾಗುತ್ತದೆ ಮತ್ತು ಅವುಗಳ ದುರ್ಬಳಕೆಯಾಗುವ ಸಂಭವವಿರುತ್ತದೆ.

ಹೀಗೆ ಮುದ್ರಿಸಿ ಕೊಂಡ ಅಂಕಪಟ್ಟಿಗಳು ಮತ್ತು ಪದವಿ ಪ್ರಮಾಣ ಪತ್ರಗಳ ಸಂಬಂಧ ಪ್ರತ್ಯೇಕ ದಾಸ್ತಾನು ವಹಿಯನ್ನು ನಿರ್ವಹಿಸಿ ಸ್ವೀಕೃತಿ ಮತ್ತು ವಿತರಣೆಯನ್ನು ಸದರಿ ವಹಿಯಲ್ಲಿ ನಮೂದಿಸಬೇಕಾಗಿರುತ್ತದೆ ಹಾಗೂ ವಿದ್ಯಾರ್ಥಿಗಳಿಗೆ ನೀಡುವವರೆಗಿನ ಪ್ರತೀ ಹಂತಗಳಲ್ಲಿ ಉಪದಾಸ್ತಾನು ವಹಿಗಳನ್ನು ನಿರ್ವಹಿಸ ಬೇಕಾಗಿರುತ್ತದೆ. ಮುದ್ರಿಸಲಾದ ಸ್ನಾತಕ/ ಸ್ನಾತಕೋತ್ತರ ಪದವಿಗಳ ಅಂಕಪಟ್ಟಿ, ಪದವಿ ಪ್ರಮಾಣಪತ್ರಗಳ ದಾಸ್ತಾನು, ಉಪ ದಾಸ್ತಾನು ಹಾಗೂ ವಿತರಣೆ ಮತ್ತು ಬಾಕಿ ಉಳಿದಿರುವ ವಿವರಗಳನ್ನು ನೀಡಲಾದ ನಮೂನೆಯಲ್ಲಿ ನಿರ್ವಹಿಸಿರುವ ವಹಿಗಳ ಸಹಿತ ಲೆಕ್ಕಪರಿಶೋಧನೆಗೆ ಹಾಜರು ಪಡಿಸುವಂತೆ ವಿಚಾರಣಾ ಪತ್ರ **ಸಂಖ್ಯೆ** 06, ದಿನಾಂಕ:04.08.2021, **ಸಂಖ್ಯೆ**-61, ದಿನಾಂಕ: 13-09-2021, **ಸಂಖ್ಯೆ**-62,ದಿನಾಂಕ: 13-09-2021, **ಸಂಖ್ಯೆ**-63, ದಿನಾಂಕ:13-09-2021, **ಸಂಖ್ಯೆ**-64, ದಿನಾಂಕ: 13-09-2021 ಹಾಗೂ ವಿಚಾರಣಾ ಪತ್ರ**ಸಂಖ್ಯೆ** - 194, ದಿನಾಂಕ 02.11.2021ರಲ್ಲಿ ಕೋರಲಾಗಿದ್ದರೂ ಸಹ ಯಾವುದೇ ವಿವರಗಳನ್ನಾಗಲೀ ಅಥವಾ ವಹಿಗಳನ್ನಾಗಲೀ ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ. ಅಂಕಪಟ್ಟಿಗಳು, ಪದವಿ ಪ್ರಮಾಣಪತ್ರಗಳ ಆರಂಭಿಕ ಶಿಲ್ಕು, ಸ್ವೀಕೃತಿ, ವಿತರಣೆ ಮತ್ತು ಬಾಕಿಗಳ ವಿವರಗಳನ್ನು ದೃಡೀಕರಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಈ ಬಾಬ್ತು ಪಾವತಿಸಿರುವ ಒಟ್ಟು ಮೊತ್ತ ರೂ.28,98,972/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು ಅನುಬಂಧ-25 ರಲ್ಲಿ ವಿವರಿಸಲಾಗಿದೆ.

## 23.5 ಕೇಂದ್ರ ಅಬಕಾರಿ ಸುಂಕ ಮತ್ತು ಕೇಂದ್ರ ತೆರಿಗೆ ಇಲಾಖೆಗೆ ಸೇವಾ ತೆರಿಗೆಯನ್ನು ವಿಳಂಬವಾಗಿ ಪಾವತಿಸಿರುವುದಕ್ಕೆ ಬಡ್ಡಿ ಮತ್ತು ದಂಡವನ್ನು ಪಾವತಿಸಿರುವುದು

ಸಾಮಾನ್ಯ ಖಾತೆಯ ವೋಚರುಗಳನ್ನು ಪರಿಶೀಲಿಸಲಾಗಿ, ವೋಚರ್ ಸಂಖ್ಯೆ: 2246, ಧನಾದೇಶ ಸಂಖ್ಯೆ:166607/ ದಿನಾಂಕ: 08.08.2019ರಲ್ಲಿ ರೂ.2,34,733/-ಗಳನ್ನು ಕೇಂದ್ರ ಅಬಕಾರಿ ಸುಂಕ ಮತ್ತು ಕೇಂದ್ರ ತೆರಿಗೆ ಇಲಾಖೆಗೆ ಪಾವತಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುತ್ತದೆ.

ಕೇಂದ್ರ ಅಬಕಾರಿ ಸುಂಕ ಮತ್ತು ಕೇಂದ್ರ ತೆರಿಗೆ ಇಲಾಖೆಯ ಆದೇಶ ಸಂಖ್ಯೆ: ಸಿ.ನಂ.335 ಎನ್/ಎಸ್.ಟಿ.1/05/2014/ಯು.ಕೆ.ರೆಂಜ್, ದಿನಾಂಕ: 24.04.2019ರಲ್ಲಿ ರೂ.2,34,733/-ಗಳನ್ನು (ಸೇವಾ ತೆರಿಗೆ ಮೊತ್ತ ರೂ.21,783/- ಗಳಿಗೆ ಬಡ್ಡಿ ಮೊತ್ತ ರೂ.2,12,950/-ಗಳು) ಪಾವತಿಸುವಂತೆ ಆದೇಶಿಸಿದುದರಿಂದ ವಿಶ್ವ ವಿದ್ಯಾನಿಲಯದಿಂದ ಪಾವತಿಸಲಾಗಿದೆ. 2013-14 ಹಾಗೂ 2014-15ರಲ್ಲಿ ರೂ.21,783/-ಗಳ ಸೇವಾ ತೆರಿಗೆಯನ್ನು ವಿಳಂಬವಾಗಿ ಪಾವತಿಸಿರುವುದಕ್ಕೆ ಸೂಕ್ತ ವಿವರಣೆಯನ್ನು ನೀಡುವಂತೆ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:102/ದಿ:21.10.2021ರಲ್ಲಿ ಕೋರಲಾಗಿತ್ತು.

ಇದಕ್ಕೆ ವಿಶ್ವ ವಿದ್ಯಾನಿಲಯವು ನೀಡಿರುವ ಉತ್ತರದಲ್ಲಿ ವಿಶ್ವ ವಿದ್ಯಾನಿಲಯವು ಶೈಕ್ಷಣಿಕ ಸಂಸ್ಥೆಯಾಗಿರುವುದರಿಂದ ಫೈನಾನ್ಸ್ ಆಕ್ಟ್ 1994ರ ಸೆಕ್ಷನ್-193ರ ಪ್ರಕಾರ ಸೇವಾ ತೆರಿಗೆ ಪಾವತಿಸುವುದರಿಂದ ವಿನಾಯಿತಿ ಪಡೆಯುವ ನಿರೀಕ್ಷೆಯಲ್ಲಿ ಆಯಾ ಆರ್ಥಿಕ ವರ್ಷದಲ್ಲಿ ಸೇವಾ ತೆರಿಗೆಯನ್ನು ಪಾವತಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

ವಿಶ್ವ ವಿದ್ಯಾನಿಲಯದ ವಸತಿಗೃಹಗಳನ್ನು ವಿಶ್ವ ವಿದ್ಯಾನಿಲಯದ ನೌಕರರಿಗೆ ಹಂಚಿಕೆ ಮಾಡಿ ಸದರಿ ನೌಕರರುಗಳಿಂದ ಹೆಚ್ .ಆರ್.ಎ. ಕಟಾಯಿಸುತ್ತಿರುವುದರಿಂದ ಹಾಗೂ ವಾಣಿಜ್ಯ ಮಳಿಗೆಗಳನ್ನು ಬಾಡಿಗೆಗೆ ನೀಡಿರುವುದರಿಂದ ಸದರಿಯವರಿಂದ ಸೇವಾ ತೆರಿಗೆಯನ್ನು ಕಟಾಯಿಸಿ ಸಂಬಂಧಪಟ್ಟ ಇಲಾಖೆಗೆ ರೂ. 21,783/-ಗಳನ್ನು ಪಾವತಿಸಿರುವುದರಿಂದ, ಸದರಿ ಮೊತ್ತಕ್ಕೆ ಬಡ್ಡಿರೂ.2,12,950/-ಗಳನ್ನು ಪಾವತಿಸಿರುವುದು ವಿಶ್ವ ವಿದ್ಯಾನಿಲಯಕ್ಕೆ ಅನಗತ್ಯ ನಷ್ಟವಾಗಿರುತ್ತದೆ. ಆದ್ದರಿಂದ ಈ ಲೋಪಕ್ಕೆ ಕಾರಣರಾದವರಿಂದ ಬಡ್ಡಿ/ದಂಡದ ಮೊತ್ತ ಒಟ್ಟು ರೂ.,2,12,950/-U ವಸೂಲಿಸಿ, ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಸೂಚಿಸಿದೆ.

## 23.6 ಕೆ.ಟಿ.ಪಿ.ಪಿ. ನಿಯಮ ಉಲ್ಲಂಘಿಸಿ ಆರೋಗ್ಯ ಕೇಂದ್ರಕ್ಕೆ ಔಷಧಿ ಖರೀದಿಸಿರುವುದು.

ವಿಶ್ವ ವಿದ್ಯಾನಿಲಯ ಆರೋಗ್ಯ ಕೇಂದ್ರಕ್ಕೆ ಅಗತ್ಯವಾದ ಔಷಧಿಗಳನ್ನು ವಿವಿಧ ಸಂಸ್ಥೆಗಳಿಂದ ಖರೀದಿಸಿ ಸಾಮಾನ್ಯ ಖಾತೆಯಿಂದ ಒಟ್ಟು ರೂ. 9,00,602/-ಗಳ ವೆಚ್ಚ ಭರಿಸಿರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಗಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 876/(ಪಿ-2) ವೆಚ್ಚ - 12/2018, ದಿನಾಂಕ: 05.02.2018ರಂತೆ ರೂ.1.00 ಲಕ್ಷ ಮೀರಿದ ಮೌಲ್ಯದ ಪ್ರತಿಯೊಂದು ಸಂಗ್ರಹಣೆಯ ಸಂಬಂಧದಲ್ಲಿ ಎಲ್ಲಾ ಸಂಗ್ರಹಣಾ ಸಂಸ್ಥೆಗಳು 2018ರ ಫೆಬ್ರವರಿ 20ನೇ ದಿನಾಂಕದಿಂದ ಜಾರಿಗೆ ಬರುವಂತೆ ವಿದ್ಯುನ್ಮಾನ ಸಂಗ್ರಹಣೆಯ ಮೂಲಕವೇ ತಮ್ಮ ಸಂಗ್ರಹಣೆಯನ್ನು ಸಂಗ್ರಹಿಸತಕ್ಕದ್ದೆಂದು ನಿರ್ಧಿಷ್ಟ ಪಡಿಸಿದ್ದರೂ ಸಹ ಸರ್ಕಾರದ ಸೂಚನೆಯನ್ನು ಉಲ್ಲಂಘಿಸಿ ಬಿಡಿಬಿಡಿಯಾಗಿ ದರಪಟ್ಟಿ ಕರೆದು ಔಷಧಿ ಖರೀದಿಸಲಾಗಿರುತ್ತದೆ. ಈ ಸಂಬಂಧ ವಿವರಣೆಯೊಂದಿಗೆ ದಾಖಲಾತಿಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 188/ದಿ:29.10.2021ನ್ನು ನೀಡಲಾಗಿತ್ತು. ವಿಶ್ವ ವಿದ್ಯಾನಿಲಯದಿಂದ ದಿನಾಂಕ:07-01-

2022ರಂದು ನೀಡಿರುವ ಉತ್ತರದಲ್ಲಿ 2020-21ನೇ ಸಾಲಿನಿಂದ ವಾರ್ಷಿಕವಾಗಿ ಅಗತ್ಯವಿರುವ ಔಷಧಗಳನ್ನು ಪಟ್ಟಿ ಮಾಡಿಕೊಂಡು ಟೆಂಡರ್ ಕರೆದು ಖರೀದಿ ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಇದು 2019-20ನೇ ಸಾಲಿನ ಖರೀದಿಗೆ ಯಾವುದೇ ರೀತಿಯ ಸಂಬಂಧವನ್ನು ಹೊಂದಿಲ್ಲದಿರುವುದರಿಂದ ಈ ಉತ್ತರವನ್ನು ಒಪ್ಪಲು ಬರುವುದಿಲ್ಲ. ಹೀಗಾಗಿ ಬಿಡಿಬಿಡಿಯಾಗಿ ದರಪಟ್ಟಿ ಕರೆದು ವಿವಿಧ ಸಂಸ್ಥೆಗಳಿಂದ ಔಷಧಿ ಖರೀದಿಸಿ ವೆಚ್ಚ ಭರಿಸಿರುವ ಒಟ್ಟು ಮೊತ್ತ ರೂ.9,00,602/-ಗಳನ್ನು ಸಂಬಂಧಿಸಿದವರ ಹೊಣೆಗಾರಿಕೆ ಮೇಲೆ ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ - 26ರಲ್ಲಿ ನೀಡಿದೆ.

## 23.7 ತ್ವರಿತ ಅಂಚೆ ಲಕೋಟೆಗಳನ್ನು ರವಾನಿಸಿದ ಬಾಬ್ತು ಬಿಲ್ಲುಗಳ ವಿಳಂಬ ಪಾವತಿಗಾಗಿ ದಂಡ ಪಾವತಿಸಿರುವುದು.

ಕುಲಸಚಿವರು (ಪರೀಕ್ಷಾಂಗ) ರವರ ಕಛೇರಿಯಿಂದ ವಿವಿಧ ಮಾಹೆಗಳಲ್ಲಿ ತ್ವರಿತ ಅಂಚೆ ಲಕೋಟೆಗಳನ್ನು ರವಾನಿಸಿರುವ ಸಂಬಂಧ ಪ್ರಧಾನ ಅಂಚೆ ಕಛೇರಿ, ಮಂಗಳೂರು ಇವರಿಗೆ ಪಾವತಿಸಲಾದ ಬಿಲ್ಲುಗಳಲ್ಲಿ ಹಿಂದಿನ ಬಿಲ್ಲುಗಳ ವಿಳಂಬ ಪಾವತಿಗಾಗಿ ಪ್ರತಿ ಬಿಲ್ಲುಗಳಲ್ಲಿಯೂ ದಂಡ ಶುಲ್ಕವನ್ನು ಪಾವತಿಸಲಾಗಿರುತ್ತದೆ. ಹೀಗೆ ನಿಗದಿತ ಅವಧಿಯೊಳಗೆ ಬಿಲ್ಲು ಪಾವತಿಸದೆ ದಂಡಪಾವತಿಸಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರುತ್ತದೆ. ಈ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 101/ದಿನಾಂಕ: 21.10.2021ನ್ನು ನೀಡಲಾಗಿತ್ತು. ಇದಕ್ಕೆ ವಿಶ್ವ ವಿದ್ಯಾನಿಲಯದವರು ನೀಡಿರುವ ಅನುಪಾಲನಾ ವರದಿಯಲ್ಲಿ ಮುಂದಿನ ಬಿಲ್ಲುಗಳಲ್ಲಿ ನಿಗದಿತ ಅವಧಿಯೊಳಗೆ ಬಿಲ್ಲು ಪಾವತಿಸಲು ಕ್ರಮ ಕೈ ಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಸದರಿ ಆಕ್ಷೇಪಣೆಗೆ ನೀಡಿರುವ ಉತ್ತರವು ಅಸಮಂಜಸವಾಗಿರುವುದರಿಂದ ಪಾವತಿಸಲಾಗಿರುವ ದಂಡದ ಒಟ್ಟು ಮೊತ್ತ ರೂ.22,200/-ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ ವಿಶ್ವ ವಿದ್ಯಾನಿಲಯದ ಖಾತೆಗೆ ಜಮಾ ಮಾಡಿ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸುವಂತೆ ಸೂಚಿಸಿದೆ. ದಂಡದ ಬಾಬ್ತು ಪಾವತಿಸಲಾಗಿರುವ ವಿವರಗಳನ್ನು ಅನುಬಂಧ-27ರಲ್ಲಿ ನೀಡಲಾಗಿದೆ.

## 23.8 ಕೆ.ಟಿ.ಪಿ.ಪಿ. ನಿಯಮ ಉಲ್ಲಂಘಿಸಿ ಕಸ ವಿಲೇವಾರಿ ವೆಚ್ಚ ಭರಿಸಿರುವುದು.

ವಿಶ್ವ ವಿದ್ಯಾನಿಲಯದ ಆವರಣದ ಕಸ ವಿಲೇವಾರಿ ನಿರ್ವಹಣೆಯನ್ನು ದರಪಟ್ಟಿ ಪಡೆದು ಕೊಂಡು ಶ್ರೀ ಅಬ್ದುಲ್ ರಜಾಕ್ ಇವರಿಗೆ ವಹಿಸಿ, 2019-20ನೇ ಸಾಲಿನಲ್ಲಿ ಮಾಸಿಕ ರೂ.45,000/-ಗಳಂತೆ ಒಟ್ಟು ರೂ.5,40,000/-ಗಳನ್ನು ಸಾಮಾನ್ಯ ಖಾತೆಯಿಂದ ಪಾವತಿಸಲಾಗಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ876(ಪಿ-2) ವೆಚ್ಚ-12/2018, ದಿ:05.02.2018ರಂತೆ ರೂ.1.00 ಲಕ್ಷ ಮೀರಿದ ಮೌಲ್ಯದ ಪ್ರತಿಯೊಂದು ಸಂಗ್ರಹಣೆಯ ಸಂಬಂಧದಲ್ಲಿ ಎಲ್ಲಾ ಸಂಗ್ರಹಣಾ ಸಂಸ್ಥೆಗಳು 2018ರ ಫೆಬ್ರವರಿ 20ನೇ ದಿನಾಂಕದಿಂದ ಜಾರಿಗೆ ಬರುವಂತೆ ವಿದ್ಯುನ್ಮಾನ ಸಂಗ್ರಹಣಾ ವೇದಿಕೆಯ ಮೂಲಕವೇ ತಮ್ಮ ಸಂಗ್ರಹಣೆಯನ್ನು ಸಂಗ್ರಹಿಸತಕ್ಕದ್ದೆಂದು ಸ್ಪಷ್ಟಪಡಿಸಲಾಗಿರುತ್ತದೆ. ಆದರೆ ಸರ್ಕಾರದ ಆದೇಶವನ್ನು ಉಲ್ಲಂಘಿಸಿ ದರಪಟ್ಟಿ ಕರೆದು ಕ್ರಮ ವಹಿಸಿರುವುದರ ಬಗ್ಗೆ ಸ್ಪಷ್ಟೀಕರಣ ನೀಡಲು ವಿಚಾರಣಾ ಪತ್ರ ಸಂಖ್ಯೆ: 185/29.10.2021ನ್ನು ನೀಡಲಾಗಿ ಯಾವುದೇ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ಹಾಗೂ ಕೆ.ಟಿ.ಪಿ.ಪಿ (ತಿದ್ದುಪಡಿ) ನಿಯಮಗಳು-2001ರ ಉಪನಿಯಮ-4(ಇ) ಪ್ರಕಾರ ಟೆಂಡರ್ ಆಹ್ವಾನಿಸಿದೆ ವೆಚ್ಚ ಮಾಡಿರುವ ಮೊತ್ತರೂ. 5,40,000/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ-28 ರಲ್ಲಿ ನೀಡಿದೆ. ವಿಶ್ವ ವಿದ್ಯಾನಿಲಯದ ನೌಕರರ ವಸತಿ ಗೃಹಗಳ ಕಟ್ಟಡ ತೆರಿಗೆಯನ್ನು ಕೊಣಜೆ ಗ್ರಾಮ ಪಂಚಾಯಿತಿಗೆ ಪಾವತಿಸಲಾಗುತ್ತಿದ್ದು, ವಸತಿ ಗೃಹ ಪ್ರದೇಶದ ಕಸ ವಿಲೇವಾರಿ ನಿರ್ವಹಣಾ ಸೇವೆ ಹಾಗೂ ಬೀದಿ ದೀಪ ಸೌಲಭ್ಯಗಳನ್ನು ಗ್ರಾಮ ಪಂಚಾಯಿತಿಯಿಂದ ಪಡೆದುಕೊಳ್ಳುವ ಬಗ್ಗೆ ವಿಶ್ವ ವಿದ್ಯಾನಿಲಯವು ಪರಿಶೀಲಿಸಬಹುದಾಗಿದೆ.

## 23.9 ಲೈಸನಿಂಗ್ ಆಫೀಸರ್‌ಗಳ ನೇಮಕಾತಿ ಕಡತವನ್ನು ಹಾಜರು ಪಡಿಸದಿರುವುದು.

ವಿಶ್ವ ವಿದ್ಯಾನಿಲಯವು ವಿಶ್ವ ವಿದ್ಯಾನಿಲಯ ಮತ್ತು ಸರ್ಕಾರದ ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸಿ ವಿಶ್ವ ವಿದ್ಯಾನಿಲಯದ ಕೆಲಸಗಳ ಸುಸೂತ್ರನಿರ್ವಹಣೆ ದೃಷ್ಟಿಯಿಂದ ಬೆಂಗಳೂರು ಮತ್ತು ದೆಹಲಿಗಳಲ್ಲಿ ಲೈಸನಿಂಗ್ ಅಫೀಸರ್‌ಗಳನ್ನು ನೇಮಕ ಮಾಡಿಕೊಂಡಿದ್ದು, 2019-20ನೇ ಸಾಲಿನಲ್ಲಿ ಇವರುಗಳ ಸಂಭಾವನೆ ಬಾಬ್ತು ರೂ.5,46,667/-ಗಳನ್ನು ಸಾಮಾನ್ಯ ಖಾತೆಯಿಂದ ವೆಚ್ಚ ಭರಿಸಲಾಗಿದೆ. ಈ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:173/ದಿ: 29.10.21ನ್ನು ನೀಡಲಾಗಿತ್ತು. ಇದಕ್ಕೆ ವಿಶ್ವ ವಿದ್ಯಾನಿಲಯವು ದಿನಾಂಕ: 07-01-2022 ರಂದು ನೀಡಿರುವ ಉತ್ತರದಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಬಾಕಿ ಇರುವ ವಿಶ್ವ

ವಿದ್ಯಾನಿಲಯದ ಪ್ರಸ್ತಾವನೆಗಳ ತ್ವರಿತ ವಿಲೇವಾರಿಗಾಗಿ ಸಿಂಡಿಕೇಟ್ ಸಭೆಯ ನಿರ್ಣಯ ದಿನಾಂಕ: 23-08-2014 ಹಾಗೂ 30-09-2014ರ ಅನುಸಾರ ನೇಮಕ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ ಶ್ರೀಮತಿ ಮೈನಾ ಮತ್ತು ಶ್ರೀಮತಿ ಶಾರದ ಇವರುಗಳ ನೇಮಕಾತಿಗೆ ಸಂಬಂಧಿಸಿದಂತೆ ಸಿಂಡಿಕೇಟ್ ಸಭೆಯ ತೀರ್ಮಾನಗಳ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ. ಆದುದರಿಂದ ಈ ವಿಷಯಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್ ಸಭೆಯತೀರ್ಮಾನಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಲು ಸೂಚಿಸಿದೆ.

## 23.10 ಸಾಮಾನ್ಯ ಖಾತೆಯಡಿ ಪಾವತಿಸಲಾದ ಮೊತ್ತಕ್ಕೆ ಕಡತಗಳನ್ನು ಹಾಜರು ಪಡಿಸದಿರುವುದು.

ವಿಶ್ವ ವಿದ್ಯಾನಿಲಯದ ಸಾಮಾನ್ಯ ಖಾತೆಯ ನಗದು ಪುಸ್ತಕ, ಧನಾದೇಶ ವಿತರಣಾ ವಹಿ, ಬ್ಯಾಂಕ್ ಪಾಸ್ ಶೀಟ್ ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿದಾಗ ಅನುಬಂಧ-29 ರಲ್ಲಿ ವಿವರಿಸಿರು ವ ವೆಚ್ಚಗಳಿಗೆ ಸಂಬಂಧಿಸಿದಂತೆ ವೋಚರುಗಳು, ಪೂರಕ ಲೆಕ್ಕಪತ್ರಗಳಾದ ದರಪಟ್ಟಿ, ಟೆಂಡರ್ ಕಡತ, ಸರಬರಾಜು ಆದೇಶ, ದಾಸ್ತಾನು ಸ್ವೀಕೃತಿ ಮತ್ತು ವಿತರಣಾವಹಿ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿ ಹಾಗೂ ಇನ್ನಿತರ ಪೂರಕ ಲೆಕ್ಕಪತ್ರ ದಾಖಲೆಗಳನ್ನುಹಾಜರು ಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 01/ 02.08.2021, 136/25.10.2021, 220/08.11.2021ಗಳನ್ನು ನೀಡಲಾಗಿದ್ದರೂ, ವಿಶ್ವ ವಿದ್ಯಾನಿಲಯದಿಂದ ಯಾವುದೇ ಉತ್ತರ/ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ-57ರ ಪ್ರಕಾರ ಎಲ್ಲಾ ಓಚರುಗಳು ಮಹತ್ವದ ದಸ್ತಾವೇಜುಗಳಾಗಿರುವುದರಿಂದ ಸಂಬಂಧ ಪಟ್ಟ ಕಛೇರಿಯಲ್ಲಿ ರಕ್ಷಿಸ ಬೇಕಾಗಿರುತ್ತದೆ ಹಾಗೂ ಎಲ್ಲಾ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಬೇಕಾಗಿರುವುದು ಕಛೇರಿ ಮುಖ್ಯಸ್ಥರ ಕರ್ತವ್ಯವಾಗಿರುತ್ತದೆ. ಹೀಗಾಗಿ ವೋಚರ್‌ಗಳು ಮತ್ತು ದಾಖಲಾತಿಗಳನ್ನು ಹಾಜರುಪಡಿಸದಿರುವ ಒಟ್ಟು ಮೊತ್ತ ರೂ.71,49,512/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

## 23.11 ಗುತ್ತಿಗೆದಾರರಿಂದ ಭದ್ರತಾ ಠೇವಣಿ ಪಡೆಯದೆ ಗುತ್ತಿಗೆ ಕರಾರು ಮಾಡಿಕೊಂಡು ವಾರ್ಷಿಕ ನಿರ್ವಹಣಾ ವೆಚ್ಚಗಳನ್ನು ಭರಿಸಿರುವುದು.

ಮೆ. ಟೆಕ್ಸರ್ ಪವರ್ ಸಲ್ಯೂಷನ್ಸ್, ಬೆಂಗಳೂರುರವರಿಂದ ಫೈರ್‌ವಾಲ್(FIREWALL)ಸಾಫ್ಟ್‌ವೇರ್, ವೈ.ಫೈ. ನೆಟ್‌ವರ್ಕಿಂಗ್ ಮತ್ತು ನೆಟ್ ವರ್ಕಿಂಗ್ ಐಟಂಗಳ ವಾರ್ಷಿಕ ನಿರ್ವಹಣೆಗಾಗಿ ಸಾಮಾನ್ಯ ಖಾತೆಯಿಂದ ರೂ.18,38,736/ಗಳನ್ನು ಪಾವತಿಸಲಾಗಿದೆ. ಈ ಪಾವತಿಗೆ ಸಂಬಂಧಿಸಿದಂತೆ ಕೆಳಕಂಡ ನ್ಯೂನ್ಯತೆಗಳನ್ನು ಗಮನಿಸಲಾಗಿದೆ..

1. ಈ ಕೆಳಗೆ ವಿವರಿಸಿರುವ ಸಂಸ್ಥೆಯೊಂದಿಗೆ ಗುತ್ತಿಗೆ ಕರಾರು ಮಾಡಿಕೊಳ್ಳುವಾಗ ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ-2014ರ ಅಧ್ಯಾಯ-12ರ ಕಂಡಿಕೆ-201ರಂತೆ ಗುತ್ತಿಗೆದಾರರಿಗೆ ವಹಿಸಲಾದ ಮೊತ್ತಕ್ಕೆ ಶೇ.5ರಷ್ಟು ಭದ್ರತಾ ಠೇವಣಿ ಪಡೆದ ನಂತರವೇ ಗುತ್ತಿಗೆ ಕರಾರು ಮಾಡಿಕೊಳ್ಳಬೇಕಾಗಿರುತ್ತದೆ. ಆದರೆ ನಿಯಮ ಪಾಲಿಸದೆಯೇ ಕಾರ್ಯಾದೇಶ ನೀಡಿ ವೆಚ್ಚ ಭರಿಸಿರುವುದರಿಂದ ಸದರಿ ಸಂಸ್ಥೆಗಳ ಕಾರ್ಯ ನಿರ್ವಹಣೆಯಲ್ಲಿ ವ್ಯತ್ಯಾಸಗಳುಂಟಾದಲ್ಲಿ ಯಾವುದೇ ಜವಾಬ್ದಾರಿಯನ್ನು ನಿಗದಿಪಡಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ ಅಂತಹ ಸಂದರ್ಭಗಳಲ್ಲಿ ವಿಶ್ವ ವಿದ್ಯಾನಿಲಯಕ್ಕೆ ಆರ್ಥಿಕವಾಗಿ ನಷ್ಟ ಉಂಟಾಗುವ ಸಂಭವವಿರುತ್ತದೆ.

| ಕ್ರ.ಸಂ | ವಾರ್ಷಿಕ ನಿರ್ವಹಣಾ ವಿವರಗಳು | ಗುತ್ತಿಗೆದಾರರಿಗೆ ವಹಿಸಿದ ಮೊತ್ತ | ಪಡೆಯ ಬೇಕಾದ ಭದ್ರತಾ ಠೇವಣಿ |
|---|---|---|---|
| 1 | ವೈ.ಫೈ. ನೆಟ್ ವರ್ಕಿಂಗ್ ವಾರ್ಷಿಕ ನಿರ್ವಹಣೆ | 674840 | 33742 |
| 2 | ನೆಟ್ ವರ್ಕಿಂಗ್ ಐಟಂಗಳ ವಾರ್ಷಿಕ ನಿರ್ವಹಣೆ | 685996 | 34300 |
| 3 | ಫೈರ್‌ವಾಲ್ ನೆಟ್ ವರ್ಕಿಂಗ್‌ನ ವಾರ್ಷಿಕ ನಿರ್ವಹಣೆ | 477900 | 23895 |
| | **ಒಟ್ಟುರೂ.** | | **91937** |

2. ವಿಶ್ವ ವಿದ್ಯಾನಿಲಯದಲ್ಲಿ ಫೈರ್ ವಾಲ್ (FIREWALL) ಸಾಫ್ಟ್‌ವೇರ್ ನ ವಾರ್ಷಿಕ ನಿರ್ವಹಣೆಗಾಗಿ ಧನಾದೇಶ ಸಂಖ್ಯೆ: 279263, ದಿನಾಂಕ: 30.01.2020ರ ಮೂಲಕ ರೂ.4,77,900/-ಗಳನ್ನು ಪಾವತಿಸಲಾಗಿದ್ದು, ವಾರ್ಷಿಕ ನಿರ್ವಹಣೆಯ ಅವಧಿ ದಿನಾಂಕ: 17.06.2019 ರಿಂದ ದಿ:16.06.2020ರ ವರೆಗೆ ಇರುತ್ತದೆ. ಆದರೆ ಈ ನಿರ್ವಹಣೆ ಅವಧಿಯು ಮುಗಿಯುವುದಕ್ಕೆ 4 1/2 ತಿಂಗಳು ಮುಂಚೆಯೇ ಬಿಲ್ಲಿನ ಪೂರ್ಣ ಮೊತ್ತವನ್ನು ಪಾವತಿಸಲಾಗಿದೆ.

ಅವಧಿ ಪೂರ್ವ ಪಾವತಿಗೆ ಸಂಬಂಧಿಸಿದಂತೆ ಸೂಕ್ತ ವಿವರಣೆಯನ್ನು ಪೂರಕ ದಾಖಲಾತಿಯೊಂದಿಗೆ ಹಾಜರುಪಡಿಸುವಂತೆ ವಿಚಾರಣಾಪತ್ರ ಸಂಖ್ಯೆ: 217/ ದಿನಾಂಕ: 06.11.2021ರಲ್ಲಿ ಕೋರಲಾಗಿತ್ತು. ವಿಶ್ವ ವಿದ್ಯಾನಿಲಯದಿಂದ ನೀಡಲಾದ ಉತ್ತರದಲ್ಲಿ ಗುತ್ತಿಗೆ ಕರಾರಿನಂತೆ ಸಂಪೂರ್ಣ ಮೊತ್ತವನ್ನು ಪಾವತಿಸಿರುವುದಾಗಿ ತಿಳಿಸಿರುತ್ತಾರೆ. ನಿರ್ವಹಣಾ ಅವಧಿಗೆ ಭದ್ರತಾ ಠೇವಣಿಯನ್ನು ಪಡೆಯದೆ ಅವಧಿ ಪೂರ್ವದಲ್ಲೇ ಪೂರ್ಣ ನಿರ್ವಹಣಾ ಬಿಲ್ಲಿನ ಮೊತ್ತವನ್ನು ಪಾವತಿಸಿರುವುದು ಸರಿಯಾದ ಕ್ರಮವಾಗಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಸಂಬಂಧಿಸಿದವರ ಮೇಲೆ ಆಡಳಿತಾತ್ಮಕ ಕ್ರಮ ಕೈ ಗೊಳ್ಳಲು ಸೂಚಿಸಿದೆ.

## 23.12 ಕೆ.ಟಿ.ಪಿ.ಪಿ. ನಿಯಮಾವಳಿಗಳನ್ನು ಉಲ್ಲಂಘಿಸಿ ಮಡಿಕೇರಿ ಕಾಲೇಜಿಗೆ ಸಾಮಾಗ್ರಿಗಳನ್ನು ಖರೀದಿಸಿರುವುದು.

ವಿಶ್ವ ವಿದ್ಯಾನಿಲಯದ ಅಭಿವೃದ್ದಿ ಲೆಕ್ಕ ಶೀರ್ಷಿಕೆಯಿಂದ ಎಫ್.ಎಂ.ಕೆ.ಎಂ.ಸಿ. ಕಾಲೇಜು, ಮಡಿಕೇರಿ ಇಲ್ಲಿನ ಐ.ಕ್ಯೂ.ಎ.ಸಿ. ಕೊಠಡಿಗೆ ದರಪಟ್ಟಿ ಮೂಲಕ ಕಾನ್‌ಫರೆನ್ಸ್ ಟೇಬಲ್ ನ್ನು ಮೆ|| ನೀಲ್ ಸೇಲ್ಸ್ ಅಂಡ್ ಸರ್ವೀಸಸ್, ಮಡಿಕೇರಿರವರಿಂದ ಖರೀದಿಸಿ, ಈ ಬಾಬ್ತು ಬಿಲ್ಲಿನ ಮೊತ್ತ ರೂ.1,41,450/-ಗಳನ್ನು (ಧನಾದೇಶ ಸಂಖ್ಯೆ:392148, ದಿ:20.03.2020) ಪಾವತಿಸಲಾಗಿರುತ್ತದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ಅಧಿನಿಯಮ,1999 ಹಾಗೂ ಕೆ.ಟಿ.ಪಿ.ಪಿ. (ತಿದ್ದುಪಡಿ) ಅಧಿ ನಿಯಮ- 2001ರ ಪ್ರಕರಣ4 (ಇ) ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 876(ಪಿ-2) ವೆಚ್ಚ-12/2018 ದಿ: 05.02.2018ರಂತೆ ರೂ.1.00 ಲಕ್ಷ ಮೀರಿದ ಮೌಲ್ಯವನ್ನು ಹೊಂದಿರುವ ಪ್ರತಿಯೊಂದು ಸಂಗ್ರಹಣೆಯ ಸಂಬಂಧದಲ್ಲಿ ಎಲ್ಲಾ ಸಂಗ್ರಹಣಾ ಸಂಸ್ಥೆಗಳು 2018ರ ಫೆಬ್ರವರಿ 20ನೇ ದಿನಾಂಕದಿಂದ ಜಾರಿಗೆ ಬರುವಂತೆ ವಿದ್ಯುನ್ಮಾನ ಸಂಗ್ರಹಣಾ ವೇದಿಕೆಯ ಮೂಲಕವೇ ತಮ್ಮ ಸಂಗ್ರಹಣೆಗಳನ್ನು ಮಾಡ ಬೇಕಾಗಿರುತ್ತದೆ. ಆದರೆ ಸರ್ಕಾರದ ನಿರ್ದೇಶನವನ್ನು ಉಲ್ಲಂಘಿಸಿ ವೆಚ್ಚ ದರಪಟ್ಟಿ ಮೂಲಕ ಖರೀದಿಸಿರುವುದಕ್ಕೆ ಸ್ಪಷ್ಟೀಕರಣವನ್ನು ಪೂರಕ ದಾಖಲಾತಿಗಳೊಡನೆ ಲೆಕ್ಕ ಪರಿಶೋಧನೆಗೆ ಹಾಜರು ಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ: 148/ದಿ: 25.10.21ನ್ನು ನೀಡಲಾಗಿತ್ತು.

ಆದರೆ ವಿಶ್ವ ವಿದ್ಯಾನಿಲಯವು ನೀಡಿರುವ ಅನುಪಾಲನಾ ವರದಿಯಲ್ಲಿ ಇನ್ನು ಮುಂದೆ ಸರ್ಕಾರದ ಆದೇಶದಂತೆ ಕ್ರಮ ವಹಿಸಲಾಗುವುದು ಎಂದು ತಿಳಿಸಿರುತ್ತಾರೆ. ಆದರೆ ನೀಡಿರುವ ಉತ್ತರವು ಸಮಂಜಸವಾಗಿಲ್ಲದಿರುವುದರಿಂದ ಟೆಂಡರ್ ಕರೆಯದೆ ದರಪಟ್ಟಿ ಕರೆದು ಖರೀದಿಸಲಾದ ಮೊತ್ತ ರೂ.1,41,450/ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

## 23.13 ಮೆ|| ಆಟ್ರಿಸ್ ಟೆಕ್ನಾಲಜೀಸ್ ಬೆಂಗಳೂರುರವರಿಗೆ ಪರೀಕ್ಷಾ ಕಾರ್ಯ ನಿರ್ವಹಣಾ ಗುತ್ತಿಗೆಯನ್ನು ನೀಡಿರುವುದು:-

ಸಾಮಾನ್ಯ ಖಾತೆಯ ವೋಚರುಗಳನ್ನು ಪರಿಶೀಲಿಸಲಾಗಿ ವಿಶ್ವ ವಿದ್ಯಾನಿಲಯದ ಪರೀಕ್ಷಾ ಕಾರ್ಯ ನಿರ್ವಹಣೆ ಮಾಡಿರುವ ಮೆ|| ಆಟ್ರಿಸ್ ಟೆಕ್ನಾಲಜೀಸ್, ಬೆಂಗಳೂರುರವರಿಗೆ ಬಿಲ್ಲಿನ ಬಾಬ್ತು ಒಟ್ಟು ರೂ.2,21,83,848/- ಗಳನ್ನು ಪಾವತಿಸಲಾಗಿರುತ್ತದೆ.

ಮೆ|| ಆಟ್ರಿಸ್ ಟೆಕ್ನಾಲಜೀಸ್ ಬೆಂಗಳೂರು ರವರು ಪರೀಕ್ಷಾ ಕಾರ್ಯಗಳನ್ನು (ಎಂಡ್ ಟುಎಂಡ್ ಎಗ್ಸಾಮಿನೇಷನ್ ಪ್ರೋಸಸ್ ) ನಿರ್ವಹಿಸಿರುವುದಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸುವಂತೆ ಕೋರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 01/02.08.2021, 126/ ದಿನಾಂಕ:25.10.2021, 224/ದಿ:08.11.2021ನ್ನು ನೀಡಲಾಗಿತ್ತು..

1. 2019-20ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ವಿವರ.
2. ಪರೀಕ್ಷೆಗೆ ಹಾಜರಾಗಲು ಪರೀಕ್ಷಾ ಶುಲ್ಕ ಪಾವತಿಸಿರುವ ವಿದ್ಯಾರ್ಥಿಗಳ ವಿವರ
3. ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ವಿವರ (ಪುನರಾವರ್ತನೆಯಾದ ವಿದ್ಯಾರ್ಥಿಗಳೂ ಒಳಗೊಂಡಂತೆ)
4. ಪರೀಕ್ಷೆಗೆ ಹಾಜರಾಗದಿರುವ ವಿದ್ಯಾರ್ಥಿಗಳ ವಿವರಗಳು
5. ಆಟ್ರಿಸ್ ಟೆಕ್ನಾಲಜೀಸ್ ರವರಿಗೆ ಮಾಹಿತಿಯನ್ನು ಮುದ್ರಿಸಲು ವಿಶ್ವ ವಿದ್ಯಾನಿಲಯದಿಂದ ನೀಡಿರುವ ಖಾಲಿ ಅಂಕ ಪಟ್ಟಿಗಳ ವಿವರ.
6. ಮುದ್ರಣ ಸಂದರ್ಭದಲ್ಲಿ ವ್ಯರ್ಥವಾದ ಅಂಕ ಪಟ್ಟಿಗಳ ವಿವರ.
7. ಆಟ್ರಿಸ್ ಟೆಕ್ನಾಲಜೀಸ್ ರವರು ಅಂಕ ಪಟ್ಟಿಗಳನ್ನು ಮುದ್ರಿಸಿದ ನಂತರ ಪರೀಕ್ಷಾ ವಿಭಾಗಕ್ಕೆ ಹಿಂದಿರುಗಿಸಿರುವ ವಿವರಗಳು.
8. ಪರೀಕ್ಷಾಂಗ ವತಿಯಿಂದ ವಿದ್ಯಾರ್ಥಿಗಳಿಗೆ ವಿತರಿಸಿರುವ ಅಂಕಪಟ್ಟಿಗಳ ವಿವರಗಳು

9. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ಅಧಿನಿಯಮ,1999 ಹಾಗೂ ಕೆ.ಟಿ.ಪಿ.ಪಿ (ತಿದ್ದುಪಡಿ) ಅಧಿನಿಯಮ- 2001ರ ಪ್ರಕರಣ 4(ಇ) ಪ್ರಕಾರ ಟೆಂಡರ್ ಆಹ್ವಾನಿಸಿರುವ ಕಡತ.

ಮೇಲೆ ಕೋರಲಾಗಿದ್ದ ಕಡತಗಳನ್ನು ವಿಶ್ವ ವಿದ್ಯಾನಿಲಯದಿಂದ ಹಾಜರು ಪಡಿಸದಿರುವುದರಿಂದ ಮೆ|| ಆಟ್ರಿಸ್ ಟೆಕ್ನಾಲಜಿಸ್, ಬೆಂಗಳೂರುರವರಿಗೆ ಪಾವತಿಸಿರುವ ಒಟ್ಟು ಮೊತ್ತ ರೂ.2,21,83,848/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ-30 ರಲ್ಲಿ ನೀಡಲಾಗಿದೆ.

### 23.14 ಪರೀಕ್ಷಾಂಗ ಖಾತೆಯಿಂದ ವೆಚ್ಚ ಮಾಡಿರುವ ಮೊತ್ತಕ್ಕೆ ವೋಚರ್‌ಗಳನ್ನು ಹಾಜರು ಪಡಿಸದಿರುವುದು.

ಪರೀಕ್ಷಾಂಗ ಖಾತೆಯ ನಗದು ಪುಸ್ತಕ, ಬ್ಯಾಂಕ್ ಪಾಸ್ ಪುಸ್ತಕಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಧನಾದೇಶಗಳ ಮೂಲಕ ಮಾಡಲಾದ ವೆಚ್ಚಗಳಿಗೆ ಸಂಬಂಧಿಸಿದ ಲೆಕ್ಕಪತ್ರ ದಾಖಲೆಗಳನ್ನು ವಿಶ್ವ ವಿದ್ಯಾನಿಲಯದವರು ಹಾಜರು ಪಡಿಸಿರುವುದಿಲ್ಲ. ಲೆಕ್ಕಪತ್ರ ದಾಖಲೆಗಳನ್ನು ಹಾಜರು ಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ 91 ದಿನಾಂಕ 11.10.2021ನ್ನು ನೀಡಲಾಗಿದ್ದರೂ ಸಹ ವಿಶ್ವ ವಿದ್ಯಾನಿಲಯದಿಂದ ಯಾವುದೇ ವೋಚರ್/ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ..

| ಕ್ರಮಸಂಖ್ಯೆ | ವೋಚರ್ ನಂ. | ದಿನಾಂಕ | ಧನಾದೇಶಸಂಖ್ಯೆ | ದಿನಾಂಕ | ಮೊತ್ತ |
|---|---|---|---|---|---|
| 01 | 3393-3403 | 18.10.2019 | 222257-267 | 18.10.2019 | 196080-00 |
| 02 | 3405 | 18.10.2019 | 222269 | 18.10.2019 | 4870-00 |
| 03 | 3406 | 18.10.2019 | 222271 | 18.10.2019 | 4895-00 |
| 04 | 3753 - 3782 | 02.11.2019 | 222624-652 | 02.11.2019 | 146667-00 |
| 05 | 4133 - 4174 | 06.12.2016 | 363492-533 | 06.12.2019 | 108270-00 |
| 06 | 4387 | 23.12.2019 | 363761 | 23.12.2019 | 840874-00 |
| 07 | 4828-4833 | 29.01.2020 | 590111-117 | 29.01.2020 | 21624-00 |
| | | | **ಒಟ್ಟುರೂ.** | | **1323280-00** |

ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 57 ರ ಪ್ರಕಾರ ಎಲ್ಲಾ ಓಚರುಗಳು ಮಹತ್ವದ ದಸ್ತಾವೇಜುಗಳಾಗಿರುವುದರಿಂದ ಸಂಬಂಧಪಟ್ಟ ಕಛೇರಿಯಲ್ಲಿ ರಕ್ಷಿಸಬೇಕಾಗಿರುತ್ತದೆ ಹಾಗೂ ಎಲ್ಲಾ ದಾಖಲೆಗಳನ್ನು ಲೆಕ್ಕ ಪರಿಶೂಧನೆಗೆ ಹಾಜರು ಪಡಿಸ ಬೇಕಾಗಿರುವುದು ಕಛೇರಿಯ ಮುಖ್ಯಸ್ಥರ ಕರ್ತವ್ಯ ವಾಗಿರುತ್ತದೆ. ಹೀಗಾಗಿ ವೋಚರ್‌ಗಳು ಮತ್ತು ದಾಖಲಾತಿಗಳನ್ನು ಹಾಜರು ಪಡಿಸದಿರುವ ವೆಚ್ಚದ ಒಟ್ಟು ಮೊತ್ತ ರೂ.13,23,280/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

### 23.15 ಸ್ವಯಂ ಆರ್ಥಿಕ ಯೋಜನೆಯಡಿ ಎಲೆಕ್ಟ್ರಾನಿಕ್ಸ್ ವಿಭಾಗಕ್ಕೆ ಕ್ಲೌಡ್ ಆಧಾರಿತ ಕೇಂದ್ರೀಕೃತ ಸೌಲಭ್ಯ ವ್ಯವಸ್ಥೆಗೆ ಅಗತ್ಯ ಯಂತ್ರಾಂಶ ಮತ್ತು ತಂತ್ರಾಂಶವನ್ನು ಟೆಂಡರ್ ಕರೆಯದೇ ಖರೀದಿಸಿರುವುದು.

ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಸ್ವಯಂ ಆರ್ಥಿಕ ಯೋಜನೆ ಲೆಕ್ಕ ಶೀರ್ಷಿಕೆ 1444ರ ಅಡಿಯಲ್ಲಿ ಕ್ಲೌಡ್ ಆಧಾರಿತ ಕೇಂದ್ರೀಕೃತ ಸೌಲಭ್ಯ ವ್ಯವಸ್ಥೆಗೆ ಅಗತ್ಯ ವಿರುವ ಯಂತ್ರಾಂಶ ಮತ್ತು ತಂತ್ರಾಂಶವನ್ನು ಅಳವಡಿಸಲು ಮೆ|| ನಿಹಾನ್ ಕಮ್ಯೂನಿಕೇಷನ್ಸ್ ಸೊಲ್ಯೂಷನ್ಸ್ ಪ್ರೈ. ಲಿ., ಬೆಂಗಳೂರುರವರಿಗೆ ವಿಶ್ವ ವಿದ್ಯಾನಿಲಯದ ಅಧಿಕೃತ ಜ್ಞಾಪನ ಸಂಖ್ಯೆ ಮಂವಿ/ಡಿಇವಿ/58/2017-

18/ಡಿ4,ದಿನಾಂಕ:17.10.2019ರ ಮಂಜೂರಾತಿ ಆದೇಶದಲ್ಲಿನ ಮೊತ್ತ ರೂ.2,46,75,000-00ಗಳಲ್ಲಿ ಪಾವತಿಸಲು ಬಾಕಿ ಉಳಿದಿರುವ ರೂ.53,37,500-00 ಗಳ ಮೊತ್ತದಲ್ಲಿ ರೂ.30,00,000/-ಗಳನ್ನು ವೋಚರ್ ಸಂ.07/23.10.2019, ಧನಾಧೇಶ ಸಂಖ್ಯೆ: 249807, ದಿನಾಂಕ: 23.10.2019ರಲ್ಲಿ ಪಾವತಿಸಲಾಗಿದೆ.

ಮೇಲಿನ ರೂ. 30,00,000-00ಗಳ ಪಾವತಿಗೆ ಸಂಬಂಧಿಸಿದ ಟೆಂಡರ್‌ಕಡತಗಳು ಹಾಗೂ ಪೂರಕ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:176/ ದಿನಾಂಕ: 29.10.2021ರಲ್ಲಿ ಕೋರಲಾಗಿತ್ತು. ವಿಶ್ವ ವಿದ್ಯಾನಿಲಯದವರು ಹಾಜರು ಪಡಿಸಿದ ಕಡತವನ್ನು ಪರಿಶೀಲಿಸಲಾಗಿ 2018-19ನೇ ಸಾಲಿನಲ್ಲಿ ಕ್ಲೌಡ್ ಆಧಾರಿತ ಕೇಂದ್ರೀಕೃತ ಸೌಲಭ್ಯ ವ್ಯವಸ್ಥೆಗೆ ಅಗತ್ಯವಿರುವ ಯಂತ್ರಾಂಶ ಮತ್ತು ತಂತ್ರಾಂಶ(Hardware&Software)**ವ**ನ್ನು ಖರೀದಿಸುವುದಕ್ಕಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ಅಧಿ ನಿಯಮ, 1999 ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ನಿಯಮಗಳು, 2000ದ ಅನ್ವಯ ಟೆಂಡರ್ ಕರೆಯದೇ ನೇರವಾಗಿ ಮೆ/.ಐ.ಬಿ.ಎಂ. ಇಂಡಿಯಾ ಪ್ರೈ.ಲಿ., ಬೆಂಗಳೂರು ಇವರೊಂದಿಗೆ ದಿನಾಂಕ: 07.04.2018ರಲ್ಲಿ ರೂ. 2,46,75,000-00ಗಳಿಗೆ (ಜಿ.ಎಸ್.ಟಿ.ಸೇರಿ) ಒಪ್ಪಂದ ಮಾಡಿಕೊಂಡಿದ್ದು, ದಿನಾಂಕ 23.05.2018 ರ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯಾಗಿರುವುದು ಕಂಡು ಬಂದಿರುತ್ತದೆ. ಮೆ/.ಐ.ಬಿ.ಎಂ.ಇಂಡಿಯಾ ಪ್ರೈ.ಲಿ., ಬೆಂಗಳೂರು ಇವರ ಅಧಿಕೃತ ಉಪ ಸರಬರಾಜುದಾರರಾದ ಮೆ/. ನಿಹಾನ್ ಕಮ್ಯುನಿಕೇಷನ್ ಸೊಲ್ಯೂಷನ್ಸ್ ಪ್ರೈ.ಲಿ., ಬೆಂಗಳೂರು ಇವರಿಗೆ ರೂ.2,46,75,000-00ಗಳ ಸರಬರಾಜು ಆದೇಶವನ್ನು **ದಿನಾಂಕ**26.05.2018ರಲ್ಲಿ ವಿಶ್ವ ವಿದ್ಯಾನಿಲಯದ ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥರು ನೀಡಿರುತ್ತಾರೆ. 2018-19**ನೇ** ಸಾಲಿನಲ್ಲಿ ರೂ.1,93,37,500-00ಗಳನ್ನು (ವೋಚರ್ ನಂ.13, ದಿನಾಂಕ 22.10.2018, ಧನಾದೇಶ ಸಂಖ್ಯೆ 249788ರ ಮೂಲಕ ರೂ.1,23,37,500-00 ಹಾಗೂ ವೋಚರ್ ಸಂ.15, ದಿನಾಂಕ: 12.12.2018, ಧನಾದೇಶ ಸಂಖ್ಯೆ: 249791ರ ಮೂಲಕ ರೂ. 70,00,000-00) ಗಳನ್ನು ಈಗಾಗಲೇ ಪಾವತಿಸಲಾಗಿರುತ್ತದೆ. 2019-20ನೇ ಸಾಲಿನಲ್ಲಿ ಸಂಸ್ಥೆಗೆ ಪಾವತಿಸ ಬೇಕಾದ ರೂ.53,37,500ಗಳ ಬಾಕಿ ಮೊತ್ತದಲ್ಲಿ ರೂ.30,00,000-00ಗಳನ್ನು ಪಾವತಿಸಲಾಗಿದೆ. ಹೀಗಾಗಿ 2019-20ನೇ ಸಾಲಿನವರಗೆ ಒಟ್ಟು **ರೂ.**2,23,37,500-00ಗಳನ್ನು ಮೆ/. ನಿಹಾನ್ ಕಮ್ಯುನಿಕೇಷನ್ ಸೊಲ್ಯೂಷನ್ಸ್ ಪ್ರೈ.ಲಿ. ,ಬೆಂಗಳೂರು ಇವರಿಗೆ ಪಾವತಿಸಿದಂತಾಗಿರುತ್ತದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಅಧಿನಿಯಮ, 1999 ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ನಿಯಮಗಳು, 2000ದ ಅನ್ವಯ ಟೆಂಡರ್ ಮೂಲಕ ಸಂಗ್ರಹಣೆಯನ್ನು ಕೈಗೊಳ್ಳದೇ ನೇರವಾಗಿ ಮೆ.ನಿಹಾನ್ ಕಮ್ಯುನಿಕೇಷನ್ ಸೊಲ್ಯೂಷನ್ಸ್ ಪ್ರೈ ಲಿ., ಬೆಂಗಳೂರು ಇವರಿಂದ ಕ್ಲೌಡ್ ಆಧಾರಿತ ಕೇಂದ್ರೀಕೃತ ಸೌಲಭ್ಯ ವ್ಯವಸ್ಥೆಗೆ ಅಗತ್ಯವಿರುವ ಯಂತ್ರಾಂಶ ಮತ್ತು ತಂತ್ರಾಂಶವನ್ನು ಖರೀದಿಸಿರುವುದರ ಬಗ್ಗೆ ಸ್ಪಷ್ಟೀಕರಣವನ್ನು ನೀಡುವಂತೆ ವಿಚಾರಣಾ ಪತ್ರ ಸಂ: 201/2021-22, ದಿನಾಂಕ 06.11.2021ರಲ್ಲಿ ಕೋರಲಾಗಿದ್ದು ವಿಶ್ವ ವಿದ್ಯಾನಿಲಯದವರು ಯಾವುದೇ ಉತ್ತರವನ್ನು ಲೆಕ್ಕಪರಿಶೋಧನಗೆ ನೀಡಿರುವುದಿಲ್ಲ. ಆದ್ದರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಅಧಿ ನಿಯಮ,1999 ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ನಿಯಮಗಳು, 2000ದಂತೆ ಟೆಂಡರ್ ಮೂಲಕ ಸಂಗ್ರಹಣೆಯನ್ನು ಕೈಗೊಳ್ಳಲು ಕ್ರಮ ವಹಿಸದೇ ನೇರವಾಗಿ ಖರೀದಿಸಿರುವುದರಿಂದ ಈ ಬಾಬ್ತು 2019-20ನೇ ಸಾಲಿನಲ್ಲಿ ಪಾವತಿಸಲಾದ ಮೊತ್ತ **ರೂ.**30,00,000-00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

## 23.16 ಎಂ.ಬಿ.ಎ. ವಿಭಾಗದ ಗಣಕ ಯಂತ್ರ ಪ್ರಯೋಗಾಲಯದಲ್ಲಿ ಪ್ರೊವೆಸ್ ಡಾಟಾ ಬೇಸ್‌ನ ವಾರ್ಷಿಕ ನವೀಕರಣದ ವೆಚ್ಚ ಮಾಡಿರುವುದು.

•

ಎಂ.ಬಿ.ಎ. ವಿಭಾಗದ ಗಣಕಯಂತ್ರ ಪ್ರಯೋಗಾಲಯದಲ್ಲಿ ಈ ಹಿಂದೆ ಅಳವಡಿಸಲಾಗಿದ್ದ ಮೆ/ .ಸೆಂಟರ್ ಫಾರ್ ಇಂಡಿಯನ್ ಎಕಾನಮಿ ಪ್ರೈ ಲಿ.,(ಸಿ.ಎಂ.ಐ.ಇ), ಬೆಂಗಳೂರು ಇವರ ಪ್ರೊವೆಸ್ ಡಾಟಾ ಬೇಸ್ (ಸ್ಟಾಂಡ್ ಅಲೋನ್**)**ನ್ನು ಡಿಸೆಂಬರ್-2019 ರಿಂದ ನವೆಂಬರ್-2020ರ ಅವಧಿಗೆ ವಾರ್ಷಿಕ ಲೈಸೆನ್ಸ್ ನವೀಕರಣಕ್ಕಾಗಿ 2019-20ನೇ ಸಾಲಿನಲ್ಲಿ ಮೆ/.ಸಿ.ಎಂ.ಐ.ಇ ಸಂಸ್ಥೆಗೆ **ರೂ.** 233640-00 ಗಳನ್ನು (ವೋಚರ್ **ನಂ.16, ದಿನಾಂಕ** 18.02.2020, ಧನಾದೇಶ ಸಂಖ್ಯೆ 249824**, ದಿನಾಂಕ:** 18.02.2020**)** ಪಾವತಿಸಲಾಗಿರುತ್ತದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ಅಧಿನಿಯಮ,1999 ಹಾಗೂ ಕೆ.ಟಿ.ಪಿ.ಪಿ (ತಿದ್ದುಪಡಿ) ಅಧಿನಿಯಮ-2001ರ ಪ್ರಕರಣ-4(ಇ) ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 876(ಪಿ-2) ವೆಚ್ಚ-12/2018 ದಿ:05.02.2018 ರಂತೆ ರೂ.1.00 ಲಕ್ಷ ಮೀರಿದ ಮೌಲ್ಯವನ್ನು ಹೊಂದಿರುವ ಪ್ರತಿಯೊಂದು ಸಂಗ್ರಹಣೆಯನ್ನು ಸಂಗ್ರಹಣಾ ಸಂಸ್ಥೆಗಳು 2018ರ ಫೆಬ್ರವರಿ 20ನೇ ದಿನಾಂಕದಿಂದ

ಜಾರಿಗೆ ಬರುವಂತೆ ವಿದ್ಯುನ್ಮಾನ ಸಂಗ್ರಹಣಾ ವೇದಿಕೆಯ ಮೂಲಕವೇ ಮಾಡಬೇಕಾಗಿರುತ್ತದೆ. ಈ ಬಗ್ಗೆ ಟೆಂಡರ್ ಕರೆದ ಕಡತಗಳನ್ನು ಹಾಜರು ಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾಪತ್ರ ಸಂಖ್ಯೆ 177/2021-22, ದಿನಾಂಕ:29.10.2021 ಮತ್ತು ವಿಚಾರಣಾಪತ್ರ ಸಂಖ್ಯೆ: 216/2021-22, ದಿನಾಂಕ:06.11.2021ರಲ್ಲಿ ಕೋರಲಾಗಿತ್ತು. ಆದರೆ ವಿಶ್ವ ವಿದ್ಯಾನಿಲಯದಿಂದ ಈ ಸಂಬಂಧದ ಕಡತವನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಅದರಂತೆ ಈ ಬಾಬ್ತು ಪಾವತಿ ವೋಚರನ್ನು ಪರಿಶೀಲಿಸಲಾಗಿ ಮೆ/.ಸೆಂಟರ್ ಫಾರ್ ಇಂಡಿಯನ್ ಎಕಾನಮಿ ಪ್ರೈ ಲಿ.,(ಸಿ.ಎಂ.ಐ.ಇ), ಬೆಂಗಳೂರು ಇವರು ದಿನಾಂಕ 09.09.2019 ರಲ್ಲಿ ರೂ.233640-00ಗಳಿಗೆ ಪ್ರೊಫಾರ್ಮ ಇನ್‌ವಾಯ್ಸ್‌ನ್ನು ನೀಡಿದ್ದುಸದರಿ ಡಾಟಾಬೇಸ್‌ನ್ನು ನವೀಕರಿಸಲು ದಿನಾಂಕ:07.11.2019ರ ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ಕುಲಸಚಿವರು ಅಧಿಕೃತ ಜ್ಞಾಪನಾ ಸಂಖ್ಯೆ ಮಂವಿ/ ಡಿಇವಿ/42/2019-20/ಡಿ2 ದಿನಾಂಕ 28.11.2019ರಲ್ಲಿ ಪಾವತಿಗೆ ಮಂಜೂರಾತಿ ನೀಡಿರುವುದು ಕಂಡುಬಂದಿರುತ್ತದೆ.

ಪಾರದರ್ಶಕ ನಿಯಮವನ್ನು ಉಲ್ಲಂಘಿಸಿ ಗಣಕ ಯಂತ್ರ ಪ್ರಯೋಗಾಲಯದ ಪ್ರೊವೆಸ್ ಡಾಟಾ ಬೇಸ್ (ಸ್ಟಾಂಡ್ ಅಲೋನ್)ನ ವಾರ್ಷಿಕ ನವೀಕರಣಕ್ಕಾಗಿ ಪಾವತಿಸಿರುವ ಮೊತ್ತರೂ. 2,33,640-00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

### 23.17 ಮಂಗಳೂರು ವಿಶ್ವ ವಿದ್ಯಾನಿಲಯದ ವಿವಿಧ ವಿದ್ಯುತ್ ಸ್ಥಾವರಗಳ ವಿದ್ಯುತ್ ಸರಬರಾಜು ಬಿಲ್ಲುಗಳಲ್ಲಿ Interest charges for Revenue Over due, Interest ಮತ್ತು Interest on revenue arrears ಎಂದು ಹೆಚ್ಚುವರಿ ಪಾವತಿಸಿರುವುದು.

ಮಂಗಳೂರು ವಿಶ್ವ ವಿದ್ಯಾನಿಲಯದ ವಿವಿಧ ವಿದ್ಯುತ್ ಸ್ಥಾವರಗಳ ವಿದ್ಯುತ್ ಬಿಲ್ಲುಗಳನ್ನು ಪರಿಶೀಲಿಸಿದಾಗ ವಿದ್ಯುತ್ ಶುಲ್ಕ ಗಳೊಂದಿಗೆ Interest charges for revenue over due, Interest ಮತ್ತು Interest on revenues arrears ಎಂದು ಕ್ರಮವಾಗಿ ರೂ.39,495/-, ರೂ.13,792/- ಮತ್ತು ರೂ.13,090/- ಒಟ್ಟು ಮೊತ್ತ ರೂ.66,377/- ಗಳನ್ನು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮಂಗಳೂರುರವರಿಗೆ ಹೆಚ್ಚುವರಿಯಾಗಿ ಪಾವತಿಸಿರುವುದು ಕಂಡು ಬಂದಿರುತ್ತದೆ. ವಿವರಗಳನ್ನು ಅನುಬಂಧ-31 ನಲ್ಲಿನೀಡಲಾಗಿದೆ.

ಈ ಹೆಚ್ಚುವರಿ ಪಾವತಿ ಸಂಬಂಧ ವಿವರಣೆ ನೀಡುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:32/ ದಿನಾಂಕ:12.08.2021ನ್ನು ನೀಡಿದ್ದರೂ, ವಿಶ್ವ ವಿದ್ಯಾನಿಲಯದವರು ಯಾವುದೇ ಉತ್ತರ ನೀಡಿರುವುದಿಲ್ಲ.

ಆದುದರಿಂದ ಹೆಚ್ಚುವರಿಯಾಗಿ ಪಾವತಿಸಿರುವ ಒಟ್ಟು ಮೊತ್ತ ರೂ.66,377/-ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ, ವಿಶ್ವ ವಿದ್ಯಾನಿಲಯದ ನಿಧಿಗೆ ಜಮೆ ಮಾಡಲುತಿಳಿಸಿದೆ.

### 23.18ಮೆ. ಕೆನಾನ್ ಡಿಟೆಕ್ಟಿವ್ ಅಂಡ್ ಸೆಕ್ಯುರಿಟಿ ಸರ್ವಿಸ್ ಪ್ರೈ, ಲಿ., ಬೆಂಗಳೂರುರವರ ಬಿಲ್ಲುಗಳಲ್ಲಿ ಸರಕು ಮತ್ತು ಸೇವಾ ತೆರಿಗೆಯ ಟಿಡಿಎಸ್ ನ್ನು (GST-TDS) ಕಟಾಯಿಸದೇ ಬಿಲ್ಲುಗಳನ್ನು ಪಾವತಿಸಿರುವುದು.

2019-20ನೇ ಸಾಲಿನಲ್ಲಿ ಮೆ. ಕೆನಾನ್ ಡಿಟೆಕ್ಟಿವ್ ಅಂಡ್ ಸೆಕ್ಯುರಿಟಿ ಸರ್ವಿಸ್ ಪ್ರೈ, ಲಿ., ಬೆಂಗಳೂರುರವರಿಂದ ವಿಶ್ವ ವಿದ್ಯಾನಿಲಯಕ್ಕೆ ಗ್ರೂಪ್-ಡಿ ಸಿಬ್ಬಂದಿಗಳು, ಸ್ವಚ್ಛತಾ ಸಿಬ್ಬಂದಿಗಳು, ಭದ್ರತಾ ಸಿಬ್ಬಂದಿಗಳು ಮತ್ತು ತೋಟಗಾರಿಕಾ ನಿರ್ವಹಣಾ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಮೇಲೆ ಪಡೆದಿದ್ದು, ಈ ಸಾಲಿನಲ್ಲಿ ಸದರಿ ಸಂಸ್ಥೆಯವರಿಗೆ ಒಟ್ಟು ಮೊತ್ತ ರೂ.3,99,87,330/- ಗಳನ್ನು ಪಾವತಿಸಲಾಗಿದ್ದು, ಈ ಬಿಲ್ಲುಗಳಿಂದ ಸರಕು ಮತ್ತು ಸೇವಾತೆರಿಗೆಯ ಟಿಡಿಎಸ್.ನ್ನು (GST-TDS) ಕಟಾಯಿಸದೇ ಪಾವತಿಸಲಾಗಿದೆ.

ಸರ್ಕಾರದ ಸುತ್ತೋಲೆ ಸಂಖ್ಯೆ:ಎಸಿಎಸ್‌ಎಫ್‌ಡಿ 2018, ಬೆಂಗಳೂರು, ದಿನಾಂಕ:28.09.2018ರಂತೆ ಬಿಲ್ಲಿನ ಒಟ್ಟು ಮೊತ್ತದಲ್ಲಿ ಶೇ.2 ರಷ್ಟನ್ನು ಸರಕು ಮತ್ತು ಸೇವಾ ತೆರಿಗೆಯ ಟಿಡಿಎಸ್(GST-TDS)ನ್ನು ಕಟಾಯಿಸಿ ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಬೇಕಾಗಿರುತ್ತದೆ. ಆದರೆ ಈ ಕ್ರಮ ಕೈಗೊಳ್ಳದ ಕಾರಣ ಅನುಬಂಧ-32ರಲ್ಲಿ ವಿವರಿಸಿರುವಂತೆ ಸರಕು ಮತ್ತು ಸೇವಾತೆರಿಗೆ (GST) ಒಟ್ಟು ಮೊತ್ತ ರೂ. 7,99,746/- ಗಳನ್ನು ಸಂಬಂಧಿಸಿದವರಿಂದ ವಸೂಲಿಸಲು ತಿಳಿಸಿದೆ. ಹಾಗೂ ಈ ಕುರಿತು ಅನುಪಾಲನಾ ವರದಿ ಸಲ್ಲಿಸಲು ತಿಳಿಸಿದೆ.

## 24. ಪರೀಕ್ಷಕರ ಸಂಭಾವನೆ ಪಾವತಿಗಳು

### 24. ಪರೀಕ್ಷಾ ಕಾರ್ಯಕ್ಕೆ ಹಾಜರಾದ ಯು.ಜಿ.ಸಿ. ವೃಂದದ ಬೋಧಕ ವರ್ಗದವರಿಗೆ ಮೌಲ್ಯಮಾಪನ ಸಂಭಾವನೆ ಪಾವತಿಸಿರುವುದು.

ವಿಶ್ವ ವಿದ್ಯಾಲಯದ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಪರೀಕ್ಷಾ ಕಾರ್ಯನಿರ್ವಹಿಸಿದ ಯು.ಜಿ.ಸಿ. ವೃಂದದ ಬೋಧಕ ವರ್ಗದವರಿಗೆ ದಿನಭತ್ಯೆ, ಪ್ರಯಾಣ ಭತ್ಯೆಗಳ ಜೊತೆಗೆ ಹೆಚ್ಚುವರಿಯಾಗಿ ಮೌಲ್ಯಮಾಪನ ಸಂಭಾವನೆ ರೂ.11,34,134/-ಗಳನ್ನು ಪಾವತಿಸಿರುವುದು ಲೆಕ್ಕಪರಿಶೋಧನೆಗೆ ಹಾಜರು ಪಡಿಸಿದ ವೋಚರ್‌ಗಳನ್ನು ಪರಿಶೀಲಿಸಿದಾಗ ಕಂಡುಬಂದಿರುತ್ತದೆ. ಈ ಸಂಬಂಧ ಮೌಲ್ಯ ಮಾಪನ ಸಂಭಾವನೆಯನ್ನು ಪಾವತಿಸಲು ವಿಶ್ವವಿದ್ಯಾನಿಲಯದ ಪರಿನಿಯಮದ ಆದೇಶಪ್ರತಿಯನ್ನು ಹಾಜರುಪಡಿಸುವಂತೆ ಕೋರಿ ಲೆಕ್ಕಪರಿಶೋಧನಾವಿಚಾರಣಾಪತ್ರ ಸಂಖ್ಯೆ: 09 ,ದಿನಾಂಕ: 04.08.2021ರಲ್ಲಿ ನೀಡಲಾಗಿತ್ತು. ವಿಶ್ವ ವಿದ್ಯಾನಿಲಯದವರು ಈ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ಇಡಿ 23 ಯು.ಡಿ.ಎಸ್.2010, ದಿನಾಂಕ: 11.01.2011ರಲ್ಲಿ ಅನುಮೋದನೆಗೊಂಡ ಪರಿನಿಯಮದ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಿರುತ್ತಾರೆ. ಹಾಜರು ಪಡಿಸಿದ ಸದರಿ ಪರಿನಿಯಮದ ಕ್ರಮಾಂಕ-3(ii)ರಲ್ಲಿ ಯು.ಜಿ.ಸಿ. ವೇತನ ಪಡೆಯುತ್ತಿರುವ ಬೋಧಕರಿಗೆ ಯಾವುದೇ ಸಂಭಾವನೆಯನ್ನು ಪಾವತಿಸಲು ಅವಕಾಶವಿರುವುದಿಲ್ಲ ಎಂದು ತಿಳಿಸಲಾಗಿದೆ. ಹೀಗೆ ಪರಿನಿಯಮದಲ್ಲಿ ಅವಕಾಶವಿಲ್ಲದಿದ್ದರೂ ಮೌಲ್ಯಮಾಪಕರಿಗೆ ಸಂಭಾವನೆ ಪಾವತಿಸಿರುವ ಸಂಬಂಧ ಸ್ಪಷ್ಟೀಕರಣ ನೀಡಲು ಲೆಕ್ಕಪರಿಶೋಧನಾ ವಿಚಾರಣಾಪತ್ರ ಸಂಖ್ಯೆ:53,ದಿನಾಂಕ:06.09.2021 ಮತ್ತು ವಿಚಾರಣಾಪತ್ರ ಸಂಖ್ಯೆ: 210/2021-22/06.11.2021ನ್ನು ನೀಡಲಾಗಿತ್ತು. ವಿಶ್ವವಿದ್ಯಾನಿಲಯವು ದಿನಾಂಕ 28.09.2021 ರಂದು ನೀಡಿರುವ ಉತ್ತರದಲ್ಲಿ ಯು.ಜಿ.ಸಿ.ವೇತನ ಪಡೆಯುವ ಅಧ್ಯಾಪಕರುಗಳಿಗೆ ಸಂಭಾವನೆ ಪಾವತಿಸಲು ಅವಕಾಶ ಇರುವುದಿಲ್ಲ. ಆದರೆ ಕೇಂದ್ರೀಯ ಮೌಲ್ಯ ಮಾಪನ ಸಂದರ್ಭದಲ್ಲಿ ಬಾಹ್ಯಪರೀಕ್ಷಕರಿಗೆ ಸಂಭಾವನೆಯನ್ನು ಪಾವತಿಸಲು ಪರಿನಿಯಮದಲ್ಲಿ ಅವಕಾಶ ಮಾಡಿಕೊಳ್ಳಲಾಗಿದೆ ಎಂದು ಉತ್ತರಿಸಿರುತ್ತಾರೆ. ಬಾಹ್ಯಪರೀಕ್ಷಕರಿಗೆ ಸಂಭಾವನೆ ಪಾವತಿಸಲು ಅವಕಾಶ ಮಾಡಿಕೊಂಡಿರುವ ಪರಿನಿಯಮದ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ. ಸರ್ಕಾರದ ಆದೇಶ ಸಂಖ್ಯೆ:ಇಡಿ 100 ಯುಎನ್‌ಇ 2000, ದಿನಾಂಕ: 08.08.2000 ಮತ್ತು ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯಗಳ ಕಾಯ್ದೆ, 2000ದ ಪ್ರಕರಣ-73 ಮತ್ತು 74 ರಂತೆ ಪರೀಕ್ಷಾ ಕಾರ್ಯವು ಬೋಧನಾ ಕಾರ್ಯದ ಒಂದು ಭಾಗವೇ ಆಗಿರುತ್ತದೆ. ಅಲ್ಲದೆ 6ನೇ ಯು.ಜಿ.ಸಿ. ವೇತನ ಪರಿಷ್ಕರಣೆ ನಿಯಮಾವಳಿಯಂತೆ ಯು.ಜಿ.ಸಿ. ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಪರೀಕ್ಷಾ ಕಾರ್ಯಗಳಿಗಾಗಿ ಯಾವುದೇ ಸಂಭಾವನೆ ಪಾವತಿಸಲು ಅವಕಾಶವಿರುವುದಿಲ್ಲ. ವಿಶ್ವ ವಿದ್ಯಾನಿಲಯದ ಪರಿನಿಯಮ ಮತ್ತು ಯು.ಜಿ.ಸಿ. ನಿಯಮಗಳನ್ನು ಉಲ್ಲಂಘಿಸಿ ಮೌಲ್ಯಮಾಪನ ಸಂಭಾವನೆಯನ್ನು ಪಾವತಿಸಲಾಗಿರುತ್ತದೆ. ಆದ್ದರಿಂದ ಪಾವತಿಸಿರುವ ಮೌಲ್ಯಮಾಪನ ಸಂಭಾವನೆ ಮೊತ್ತ ರೂ.11,34,134/-ಗಳನ್ನು ಕುಲಸಚಿವರು (ಪರೀಕ್ಷಾಂಗ) ಹಾಗೂ ಹಣಕಾಸು ಅಧಿಕಾರಿಗಳಿಂದ ವಸೂಲಿಸಿ, ವಿಶ್ವ ವಿದ್ಯಾನಿಲಯನಿಧಿಗೆ (ಪರೀಕ್ಷಾಂಗ) ಜಮಾ ಮಾಡಲು ಸೂಚಿಸಿದೆ. ವಿವರವನ್ನು ಅನುಬಂಧ-33ರಲ್ಲಿ ಲಗತ್ತಿಸಿದೆ.

## 25. ಕಾಮಗಾರಿ ವೆಚ್ಚಗಳು

### 25.1 ಅಳತೆ ಪರಿಶೀಲನೆ ಮಾಡದೇ ಕಾಮಗಾರಿ ಬಿಲ್ಲುಗಳನ್ನು ಪಾವತಿಸಿರುವುದು

ವಿಶ್ವ ವಿದ್ಯಾನಿಲಯದ ಅಭಿವೃದ್ಧಿ ಲೆಕ್ಕಶೀರ್ಷಿಕೆಯಡಿಯಲ್ಲಿ ವೆಚ್ಚ ಭರಿಸಲಾದ ಕಾಮಗಾರಿ ಬಿಲ್ಲುಗಳು ದಾಖಲಾತಿಗಳನ್ನು ಪರಿಶೀಲಿಸಲಾಗಿ ಕೆಲವು ಬಿಲ್ಲುಗಳಲ್ಲಿ ಅಳತೆ ಪರಿಶೀಲನೆ ಮಾಡದಯೇ ವೆಚ್ಚ ಭರಿಸಿರುವುದು ಗಮನಿಸಲಾಗಿದೆ .ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ 2014ರ ನಿಯಮ- 110 (9)ರ ಅನ್ವಯ ವಿಭಾಗೀಯ ಅಧಿಕಾರಿಗಳು (ಕಾರ್ಯಪಾಲಕ ಅಭಿಯಂತರರು) ರೂ.25.00 ಲಕ್ಷಗಳ ವರೆಗಿನ ಬಿಲ್ಲುಗಳ ಸಂದರ್ಭದಲ್ಲಿ ಶೇ.10 ರಷ್ಟು ಹಾಗೂ ರೂ.25 ಲಕ್ಷಗಳಿಗೆ ಮೀರಿದ ಮೌಲ್ಯದ ಬಿಲ್ಲುಗಳ ಸಂದರ್ಭದಲ್ಲಿ ಶೇ.25ರಷ್ಟು ಅಳತೆ ಪರಿಶೀಲನೆ ಮಾಡಿ ಅಳತೆ ಪುಸ್ತಕದಲ್ಲಿ ದಿನಾಂಕ ದೊಂದಿಗೆ ಸಹಿ ಮಾಡಿ ದೃಢೀಕರಿಸಿದ ನಂತರ ಬಿಲ್ಲು ಪಾವತಿಸಬೇಕಾಗಿರುತ್ತದೆ. ಆದರೆ ಈ ಕ್ರಮವನ್ನು ಅನುಸರಿಸದೇ ಬಿಲ್ಲು ಪಾವತಿಸಿರುವ ಬಗ್ಗೆ ಸ್ಪಷ್ಟೀಕರಣ ನೀಡಲು ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 110/ದಿನಾಂಕ: 25.10.2021, 153/ದಿನಾಂಕ: 27.10.2021 ಮತ್ತು 207/ದಿನಾಂಕ: 06.11.2021ನ್ನು ನೀಡಲಾಗಿತ್ತು. ವಿಶ್ವ ವಿದ್ಯಾನಿಲಯದವರು ನೀಡಿರುವ ಅನುಪಾಲನಾ ವರದಿಯಲ್ಲಿ ಅಳತೆ ಪರಿಶೀಲನೆಯು ಕಣ್ತಪ್ಪಿನಿಂದ ಬಿಟ್ಟು ಹೋಗಿದ್ದು, ಇದೀಗ ಕಾರ್ಯಪಾಲಕ ಅಭಿಯಂತರರು ಸದರಿ ಬಿಲ್ಲುಗಳಿಗೆ ಘಟನೋತ್ತರವಾಗಿ ಅಳತೆ ಪರಿಶೀಲನೆಯನ್ನು ಮಾಡಿ ದೃಢೀಕರಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಆದರೆ ಇದಕ್ಕೆ ಸಂಬಂಧಿಸಿದಂತೆ ಮೂಲ ಅಳತೆ ಪುಸ್ತಕಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ. ಕಾಮಗಾರಿಗಳ ಅಳತೆ ಪರಿಶೀಲನೆಯನ್ನು ಅನುಷ್ಟಾನ ಸಮಯದಲ್ಲಿಯೇ ವಿವಿಧ ಹಂತಗಳಲ್ಲಿ ಮಾಡಿ, ಅಳತೆ

ಪುಸ್ತಕಗಳಲ್ಲಿ ದಾಖಲಿಸಿದ ನಂತರವಷ್ಟೇ ಬಿಲ್ಲುಗಳನ್ನು ಪಾವತಿಗಾಗಿ ಸಲ್ಲಿಸಬೇಕಾಗಿರುತ್ತದೆ. ಘಟನೋತ್ತರವಾಗಿ ಅಳತೆ ಮತ್ತು ಪರಿಶೀಲನೆಯನ್ನು ಮಾಡುವುದು ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ, 2014ರ ಕಂಡಿಕೆಗಳಿಗೆ ವಿರುದ್ದವಾದ ಕ್ರಮವಾಗಿರುತ್ತದೆ. ಆದ್ದರಿಂದ ಸರ್ಕಾರದ ನಿಯಮಾವಳಿಗಳ ಅನ್ವಯ ಕಾರ್ಯನಿರ್ವಹಿಸದೆ ವೆಚ್ಚ ಮಾಡಿರುವ ಮೊತ್ತ ರೂ 73,51,846/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ-34ರಲ್ಲಿ ನೀಡಿದೆ. ಅಲ್ಲದೆ ಈ ಬಗೆಯ ಲೋಪಕ್ಕೆ ಕಾರಣರಾದವರ ಮೇಲೆ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ.

### 25.2 2019-20ನೇ ಸಾಲಿನಲ್ಲಿ ಅಭಿವೃದ್ಧಿ ಲೆಕ್ಕಶೀರ್ಷಿಕೆಯಿಂದ ವೆಚ್ಚ ಭರಿಸಲಾದ ಸಂಬಂಧ ದಾಖಲಾತಿಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸದಿರುವುದು.

2019-20ನೇ ಸಾಲಿನಲ್ಲಿ ವಿಶ್ವ ವಿದ್ಯಾನಿಲಯದಿಂದ ಅಭಿವೃದ್ದಿ ಲೆಕ್ಕಶೀರ್ಷಿಕೆಯಡಿ ವೆಚ್ಚ ಭರಿಸಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಹಾಜರು ಪಡಿಸುವಂತೆ ಕೋರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :87/ ದಿನಾಂಕಃ 01.10.2021 ಹಾಗೂ ವಿಚಾರಣಾ ಪತ್ರ ಸಂಖ್ಯೆ: 124/ ದಿನಾಂಕಃ25.10.2021ನ್ನು ನೀಡಲಾಗಿತ್ತು. ಆದರೆ ವಿಶ್ವ ವಿದ್ಯಾನಿಲಯದವರು ಈ ಸಂಬಂಧ ಭಾಗಶಃ ದಾಖಲಾತಿಗಳನ್ನು ಮಾತ್ರ ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿದ್ದು, ಉಳಿದಂತೆ ಮೂಲ ದಾಖಲಾತಿಗಳನ್ನು ಹಾಜರು ಪಡಿಸದಯೇ ಜೆರಾಕ್ಸ್ ಪ್ರತಿಗಳನ್ನು ಮಾತ್ರ ಹಾಜರು ಪಡಿಸಿ, ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಿರುತ್ತಾರೆ. ಜೆರಾಕ್ಸ್ ಪ್ರತಿಗಳನ್ನು ಮಾತ್ರ ಹಾಜರು ಪಡಿಸಿರುವುದರಿಂದ ಸದರಿ ಬಿಲ್ಲುಗಳನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಹೀಗಾಗಿ ವಿಚಾರಣಾ ಪತ್ರಗಳಿಗೆ ನೀಡಿರುವ ಅನುಪಾಲನಾ ವರದಿಯು ಅಸಮಂಜಸವಾಗಿರುವುದರಿಂದ ಲೆಕ್ಕಪರಿಶೋಧನಾ ಸಮಯದಲ್ಲಿ ಮೂಲ ದಾಖಲಾತಿಗಳನ್ನು ಹಾಜರು ಪಡಿಸದಿರುವ ಬಿಲ್ಲುಗಳ ಒಟ್ಟು ಮೊತ್ತ ರೂ. 81,73,998/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ-35ರಲ್ಲಿ ನೀಡಿದೆ.

### 25.3 ಟೆಂಡರ್ ಆಹ್ವಾನಿಸದೇ ದರಪಟ್ಟಿ ಕರೆಯುವ ಮೂಲಕ ಕಾಮಗಾರಿಯನ್ನು ನಿರ್ವಹಿಸಿರುವುದು.

2019-20ನೇ ಸಾಲಿನಲ್ಲಿ ಇಂಜಿನಿಯರಿಂಗ್ ವಿಭಾಗದಲ್ಲಿ ದರಪಟ್ಟಿ ಮೂಲಕ ಆರು ಕಾಮಗಾರಿಗಳನ್ನು ನಿರ್ವಹಿಸಿ ಒಟ್ಟು ರೂ. 27,54,416-00 ಗಳನ್ನು ಪಾವತಿಸಲಾಗಿದೆ. ಕಟ್ಟಡ ನಿರ್ವಹಣಾ ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ಅಧಿನಿಯಮ, 1999ರ ಪ್ರಕರಣ-4(ಇ) ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ ಸಿ.ಆ.ಸು.ಇ.ಇ./ಇ ಸಂಗ್ರಹ/ 2009 / 09.10.2012ರನ್ವಯ ರೂಪಾಯಿ ಒಂದು ಲಕ್ಷ ಮೀರಿದ ಕಾಮಗಾರಿಯನ್ನು ಟೆಂಡರ್ ಕರೆದು ಅನುಷ್ಟಾನ ಗೊಳಿಸಬೇಕಾಗಿರುತ್ತದೆ. ಈ ನಿಯಮವನ್ನು ಪಾಲಿಸದೆಯೇ ವಿಶ್ವ ವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದಲ್ಲಿ ದರಪಟ್ಟಿ ಮೂಲಕ ಆರು ಕಾಮಗಾರಿಗಳನ್ನು ನಿರ್ವಹಿಸಿದ್ದು ಒಟ್ಟು ರೂ.27,54,416-00 ಗಳನ್ನು ಪಾವತಿಸಲಾಗಿರುತ್ತದೆ. ಸದರಿ ಕಾಮಗಾರಿಗಳನ್ನು ದರಪಟ್ಟಿ ಮೂಲಕ ಅನುಷ್ಠಾನ ಗೊಳಿಸಿ ಪಾವತಿಸಿರುವುದಕ್ಕೆ ವಿವರಣೆ ಕೋರಿ ವಿಚಾರಣಾ ಪತ್ರ ಸಂಖ್ಯೆ: 109/ ದಿನಾಂಕಃ 25.10.2021ನ್ನು ನೀಡಲಾಗಿತ್ತು. ಇದಕ್ಕೆ ಕಾರ್ಯಪಾಲಕ ಅಭಿಯಂತರರು ನೀಡಿರುವ ಉತ್ತರದಲ್ಲಿ ಕೆಲವೊಂದು ಕಾಮಗಾರಿಗಳನ್ನು ಅಗತ್ಯತೆಗೆ ಅನುಗುಣವಾಗಿ ತುರ್ತಾಗಿ ನಿರ್ವಹಿಸುವ ಸಂದರ್ಭಗಳಲ್ಲಿ ದರಪಟ್ಟಿಗಳನ್ನು ಕರೆದು ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ ಎಂದು ಹೇಳಿ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಿರುತ್ತಾರೆ. ಹಾಗೂ ಇನ್ನು ಮುಂದೆ ಟೆಂಡರ್ ಕರೆದು ಕಾಮಗಾರಿಗಳನ್ನು ಕೈ ಗೆತ್ತಿಕೊಳ್ಳಲಾಗುವುದೆಂದು ಉತ್ತರಿಸಿರುತ್ತಾರೆ. ಕಾರ್ಯಪಾಲಕ ಅಭಿಯಂತರರು ನೀಡಿರುವ ಉತ್ತರವು ಸಮಂಜಸವಾಗಿಲ್ಲದಿರುವುದರಿಂದ ಪಾವತಿಸಲಾದ ಒಟ್ಟುಮೊತ್ತ ರೂ. 27,54,416-00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಕಾಮಗಾರಿಗಳ ವಿವರಗಳನ್ನು **ಅನುಬಂಧ-36ರಲ್ಲಿ** ನೀಡಲಾಗಿದೆ.

### 25.4 ಕಾಮಗಾರಿ ವಹಿಯನ್ನು ನಿರ್ವಹಿಸದಿರುವುದು

ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಮಂಗಳೂರುರವರು ವಿಶ್ವ ವಿದ್ಯಾಲಯದಲ್ಲಿ 2019-20ನೇ ಸಾಲಿನಲ್ಲಿ ಅನುಷ್ಟಾನ ಗೊಳಿಸಿರುವ ವಿವಿಧ ಬಗೆಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಾಮಗಾರಿಗಳ ವಹಿಯನ್ನು ನಿರ್ವಹಿಸಿರುವುದಿಲ್ಲ. ಈ ಕಾರಣದಿಂದ ಕಾಮಗಾರಿಗಳ ಆರ್ಥಿಕ ಪ್ರಗತಿ ಮತ್ತು ಭೌತಿಕ ಪ್ರಗತಿಯ ವಿವರಗಳು ಮತ್ತು ಕಾಮಗಾರಿಗಳಿಗೆ ಇದುವರೆಗೆ ಆಗಿರುವ ಒಟ್ಟಾರೆ ವೆಚ್ಚದ ವಿವರಗಳನ್ನು ನಿಖರವಾಗಿ ತಿಳಿಯಲು ಸಾಧ್ಯವಾಗಿರುವುದಿಲ್ಲ. ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ – 2014ರ ಪ್ಯಾರಾ ಸಂಖ್ಯೆ 220 ರಂತೆ ವಿವಿಧ ಕಾಮಗಾರಿಗೆ ಹಂಚಿಕೆ ಮಾಡಲಾದ ಅನುದಾನಕ್ಕೆ ಎದುರಾಗಿ ಲೆಕ್ಕ ಶೀರ್ಷಿಕೆವಾರು ಪ್ರಸಕ್ತ ಬಿಲ್ಲಿನವರೆಗೆ ಭರಿಸಲಾಗಿರುವ ವೆಚ್ಚದ ವಿವರಗಳನ್ನು ಕಾಮಗಾರಿಯ ವಹಿಯಲ್ಲಿ ನಮೂದಿಸ ಬೇಕಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧನಾ ವಿಚಾರಣಾ ಸಂಖ್ಯೆ: 133/ದಿನಾಂಕಃ 25.10.2021ನ್ನು ನೀಡಲಾಗಿತ್ತು. ಇದಕ್ಕೆ ವಿಶ್ವ ವಿದ್ಯಾನಿಲಯದವರು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಕಾಮಗಾರಿ ವಹಿಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಸೂಚಿಸುತ್ತಾ ಸದರಿ ವಹಿಯನ್ನು ನಿರ್ವಹಿಸದಿರುವ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳ ವಿರುದ್ದ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ.

### 25.5 ಕಾಮಗಾರಿ ಬಿಲ್ಲುಗಳಲ್ಲಿ ಕಡಿತ ಮಾಡಿದ ಶಾಸನ ಬದ್ದ ತೆರಿಗೆಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ಜಮೆ ಮಾಡಿದ ದಾಖಲೆಗಳನ್ನು ಹಾಜರು ಪಡಿಸದಿರುವುದು.

ಕಟ್ಟಡ ಹಾಗೂ ನೀರು ಸರಬರಾಜು ನಿರ್ವಹಣೆಯ ಕಾಮಗಾರಿ ಬಿಲ್ಲುಗಳಿಂದ ಶಾಸನಬದ್ದ ಕಟಾವಣೆಗಳಾದ ಆದಾಯತೆರಿಗೆ ಟಿಡಿಎಸ್, ಜಿ.ಎಸ್.ಟಿ.ಟಿಡಿಎಸ್, ರಾಜಧನ, ಸಿ.ಬಿ.ಎಫ್, ಹಾಗೂ ಕಾರ್ಮಿಕ ಕಲ್ಯಾಣ ನಿಧಿ ತೆರಿಗೆಗಳ ಬಾಬ್ತು ಒಟ್ಟು ಮೊತ್ತ **ರೂ.** 4,19,625-00 ಗಳನ್ನು ಕಟಾಯಿಸಲಾಗಿದ್ದು ಈ ಮೊತ್ತಗಳನ್ನು ಸಂಬಂಧಿಸಿದ ಇಲಾಖೆ/ಸಂಸ್ಥೆಗಳಿಗೆ ಜಮೆಮಾಡಿರುವ ಬಗ್ಗೆ ಮಾಹಿತಿ/ದಾಖಲಾತಿಗಳನ್ನು ಹಾಜರು ಪಡಿಸಲು ಕೋರಿ ವಿಚಾರಣಾ ಪತ್ರಸಂಖ್ಯೆ 112/ದಿನಾಂಕ: 25.10.2021ನ್ನು ನೀಡಲಾಗಿತ್ತು. ಆದರೆ ವಿಶ್ವ ವಿದ್ಯಾನಿಲಯದವರು ಈ ಸಂಬಂಧ ಯಾವುದೇ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ.

**ತೆರಿಗೆ ಕಡಿತದ ವಿವರ ಈ ಕೆಳಗಿನಂತಿದೆ**

1.ಆದಾಯತೆರಿಗೆ ರೂ.138455-00
2.ಜಿ.ಎಸ್.ಟಿ. ರೂ.163714-00
3.ರಾಜಧನ ರೂ. 35174-00
4.ಸಿ.ಬಿ.ಎಫ್ ರೂ. 7478-00
5.ಕಾ.ಕ.ನಿಧಿರೂ.74804-00

**ಒಟ್ಟು ರೂ. 4,19,625-00**

ರೂ. 4,19,625-00ಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ಪಾವತಿ ಮಾಡಿರುವ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸದೇ ಇರುವುದರಿಂದ ಸದರಿ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಕಾಮಗಾರಿ ಬಿಲ್ಲುಗಳಿಂದ ಕಟಾಯಿಸಲಾದ ವಿವಿಧ ಕಟಾವಣೆಗಳ ವಿವರಗಳನ್ನು **ಅನುಬಂಧ-37ರಲ್ಲಿ** ನೀಡಲಾಗಿದೆ.

### 25.6 ಅಳತೆ ಪುಸ್ತಕಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸದೇ ಇರುವುದು.

2019-20ನೇ ಸಾಲಿನಲ್ಲಿ ವಿಶ್ವ ವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದಿಂದ ಅನುಷ್ಠಾನ ಗೊಳಿಸಲಾದ ಕೆಳಕಂಡ 5 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಳತೆ ಪುಸ್ತಕ ಸಂಖ್ಯೆ 1043, 1086, 1094 ಮತ್ತು 1101 ಗಳನ್ನು ಲೆಕ್ಕ ಪರಿಶೋಧನಗೆ ಹಾಜರು ಪಡಿಸಿರುವುದಿಲ್ಲ. ಸದರಿ ಅಳತೆ ಪುಸ್ತಕಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣಾ ಸಂಖ್ಯೆ:111/2021-22, ದಿನಾಂಕ: 25.10.2021ನ್ನು ಕೋರಲಾಗಿತ್ತು. ಕಾರ್ಯಪಾಲಕ ಅಭಿಯಂತರರು ದಿನಾಂಕ: 08.11.2021ರ ಪತ್ರ ಸಂಖ್ಯೆ :ಮಂವಿವಿ/ ಇಡಿ/ ಲೆ.ಪ.ಅ/ 2021-22/ ಅ/ 916ರಲ್ಲಿ ಸದರಿ ಅಳತೆ ಪುಸ್ತಕಗಳನ್ನು ಈಗಾಗಲೇ ಲೆಕ್ಕ ಪರಿಶೋಧನಗೆ ಹಾಜರು ಪಡಿಸಲಾಗಿದೆಯೆಂದು ಉತ್ತರಿಸಿರುತ್ತಾರೆ. ಆದರೆ ವಾಸ್ತವವಾಗಿ ಸದರಿ ಅಳತೆ ಪುಸ್ತಕಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ. ಸದರಿ 5 ಕಾಮಗಾರಿಗಳ ಬಿಲ್ಲುಗಳಲ್ಲಿ ಅಳತೆ ಪುಸ್ತಕಗಳಲ್ಲಿ ಅಳತೆ ಪುಸ್ತಕದಲ್ಲಿ ಅಳತೆ ಪರಿಶೀಲನೆಯನ್ನು ದಾಖಲಿಸಿರುವುದಾಗಿ ತಿಳಿಸಿದ್ದು, **ರೂ.**11,68,571-00ಗಳು ಆಗಿರುತ್ತದೆ. ಹೀಗಾಗಿ ಅಳತೆ ಪುಸ್ತಕಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸದ ಕಾಮಗಾರಿಗಳ ಬಿಲ್ಲುಗಳ ಮೊತ್ತ ಒಟ್ಟು ರೂ.11,68,571-00**ಗಳನ್ನು** ಆಕ್ಷೇಪಣೆಯಲ್ಲಿಡಲಾಗಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

| ಕ್ರ. ಸಂ | ಕಾಮಗಾರಿ ವಿವರ | ಧನಾದೇಶ ಸಂ/ ದಿನಾಂಕ | ವೋಚರ್ ಸಂ./ ದಿನಾಂಕ | ಅಳತೆ ಪುಸ್ತಕ ಸಂಖ್ಯೆ | ಪಾವತಿ ಮೊತ್ತ |
|---|---|---|---|---|---|
| 01 | ಮಂ.ವಿ.ವಿ. ಆವರಣದ ಲೆಕ್ಚರ್ ಕಾಂಪ್ಲೆಕ್ಸ್ ಕಟ್ಟಡದಲ್ಲಿರುವ Cloud Based Systeme ವಿಭಾಗದ ಕೊಠಡಿಗೆ 2 ton 3 star split AC LED fixture ಮತ್ತು ಗ್ಲಾಸ್ ಡೋರ್ ಗಳನ್ನು ಸರಬರಾಜು ಮಾಡಿ ಅಳವಡಿಸುವ ಕಾಮಗಾರಿ | 080667/ 16.05.2019 | 773/ 16.05.2019 | 1043 | 478372 |
| 02 | ಮಂ.ವಿ.ವಿ. ಆವರಣದ ಲೆಕ್ಚರ್ ಕಾಂಪ್ಲೆಕ್ಸ್ ಕಟ್ಟಡದಲ್ಲಿರುವ IOT ವಿಭಾಗದ ಕೊಠಡಿಗೆ 2 ton 3 star split A,C LED fixture ಮತ್ತು ಗ್ಲಾಸ್ ಡೋರ್ ಗಳನ್ನು ಸರಬರಾಜು ಮಾಡಿ ಅಳವಡಿಸುವ ಕಾಮಗಾರಿ | 080998/ 17.06.2019 | 1241/ 17.06.2019 | 1086 | 494090 |

| | | | | | |
|---|---|---|---|---|---|
| 03 | ಮಂ.ವಿ.ವಿ. ಬಯೋಸೈನ್ಸ್ ವಿಭಾಗದ ಪರಿಸರ ವಿಜ್ಞಾನದ ಒಳ ಭಾಗಕ್ಕೆ ಬಣ್ಣ | 080530/ 14.05.2019 | 631/ 14.05.2019 | 1094 | 59700 |
| 04 | ಮಂ.ವಿ.ವಿ. ಕುಲಪತಿ ಬಂಗಲೆ ಆವರಣದ ಗಾರ್ಡನ್ ನಲ್ಲಿರುವ 25000 ಲೀ ನೀರಿನ ಟ್ಯಾಂಕ್ (ಗ್ರೌಂಡ್ ಲೆವೆಲ್) Reserviorಗೆ ಅಗತ್ಯ ದುರಸ್ತಿ | 245451-52/ 20.11.2019 | 3791/ 20.11.2019 | 1101 | 40195 |
| 05 | ಮಂ.ವಿ.ವಿ.ಯ ವಿಜ್ಞಾನ ಸಂಕೀರ್ಣ ಕಟ್ಟಡದ ಅಧ್ಯಕ್ಷರ ಕೊಠಡಿಯ ಮತ್ತು ಕಛೇರಿಯ ಕೊಠಡಿ ವಿಸ್ತರಿಸುವ ಕಾಮಗಾರಿ | 144928-930/ 28.06.2019 | 1586/ 28.06.2019 | 1101 | 96214 |
| | | | **ಒಟ್ಟುರೂ.** | | **11,68,571** |

**25.7 ವಿಶೇಶ ಘಟಕ / ಗಿರಿಜನ ಉಪ ಯೋಜನೆಯಡಿ ನಿರ್ವಹಿಸಿದ ಕಾಮಗಾರಿಯ ವೋಚರ್‌ಗಳನ್ನು ಹಾಜರು ಪಡಿಸದಿರುವುದು.**

ವಿಶೇಶ ಘಟಕ/ ಗಿರಿಜನ ಉಪಯೋಜನೆಯಡಿ ಮಹಿಳಾ ಹಾಸ್ಟೆಲ್ ಕಟ್ಟಡದ ಮೇಲೆ ಎರಡನೇ ಮಹಡಿ ನಿರ್ಮಾಣ ಕಾಮಗಾರಿ ಸಂಬಂಧ ರೂ.63,35,917-00 ಗಳನ್ನು ಧನಾದೇಶ ಸಂಖ್ಯೆ 680175 ದಿನಾಂಕ: 26.09.2019ರಲ್ಲಿ ಶ್ರೀ ಕ್ಲೀಫರ್ಡ್‌ಡಿ'ಸೋಜಾ ಎಂಬ ಗುತ್ತಿಗೆದಾರರಿಗೆ ಪಾವತಿಸಲಾಗಿರುವುದು ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ. ಸದರಿ ಕಾಮಗಾರಿ ಬಿಲ್ಲು ಪಾವತಿ ಸಂಬಂಧದ ಟೆಂಡರ್ ಕಡತಗಳು ಹಾಗೂ ಪೂರಕ ದಾಖಲೆಗಳಾದ, ಇ.ಎಂ.ಡಿ. ವಿವರ, ಅಳತೆ ಪುಸ್ತಕ, ಪಾವತಿ ಬಿಲ್ಲುಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸುವಂತೆ ವಿಚಾರಣಾಪತ್ರ ಸಂಖ್ಯೆ 206/ದಿನಾಂಕ: 06.11.2021ರಲ್ಲಿ ಕೋರಲಾಗಿತ್ತು. ಆದರೆ ಈ ಸಂಬಂಧದ ಯಾವುದೇ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸದಿರುವುದಿಂದ ಸದರಿ ಕಾಮಗಾರಿಗೆ ಪಾವತಿಸಲಾದ ಮೊತ್ತ ರೂ.63,35,917-00 ಗಳನ್ನು ಆಕ್ಷೇಪಿಸಲಾಗಿದೆ.

## 26. ದಾಸ್ತಾನು ಲೆಕ್ಕಗಳು

**26.1 ರಶೀದಿ ಪುಸ್ತಕಗಳ ದಾಸ್ತಾನು**

**ಅ. ಹಣಕಾಸು ವಿಭಾಗದ ರಶೀದಿ ಪುಸ್ತಕಗಳ ದಾಸ್ತಾನು ವಹಿ ಪರಿಶೀಲನೆ.**

| ಕ್ರ. ಸಂ | ರಶೀದಿ ಪುಸ್ತಕ ಸಂಖ್ಯೆ | **ರಶೀದಿ ಕ್ರಮ ಸಂಖ್ಯೆ/ದಿನಾಂಕ** | | **ಷರಾ** | **ಷರಾ** |
|---|---|---|---|---|---|
| | | ಇಂದ | ವರೆಗೆ | | |
| 1 | 048 | 4756/03.04.2019 | 4799/19.03.2020 | 1,39,87,494 | 2019-20 ಗೆ ಭಾಗಶಃ ಉಪಯೋಗಿಸ ಲಾಗಿದ್ದು, 2020-21ನೇ ಸಾಲಿಗೆ ಮುಂದುವರೆದಿದೆ. |
| 2 | 022 | 2101/20.03.2020 | 2102/20.03.2020 | 4,00,000 | 2019-20ನೇ ಸಾಲಿಗೆ ಭಾಗಶಃ ಉಪಯೋಗಿಸಲಾಗಿದ್ದು, 2020-21ನೇ ಸಾಲಿಗೆ ಮುಂದುವರೆದಿದೆ |

ವಿಶ್ವ ವಿದ್ಯಾನಿಲಯದ ಹಣಕಾಸು ವಿಭಾಗದ ರಶೀದಿ ಪುಸ್ತಕಗಳ ದಾಸ್ತಾನನ್ನು ಭೌತಿಕವಾಗಿ ಪರಿಶೀಲಿಸಲಾಗಿ ರಶೀದಿ ಪುಸ್ತಕ ಸಂಖ್ಯೆ 147 ರಿಂದ 150 ರವರೆಗೆ (ರಶೀದಿಕ್ರಮ ಸಂಖ್ಯೆ:4601 ರಿಂದ 5000 ರವರೆಗೆ) ಒಟ್ಟು 04 ರಶೀದಿ ಪುಸ್ತಕಗಳು ಉಪಯೋಗಿಸದೇ ಬಾಕಿಉಳಿದಿದ್ದು, ದಾಸ್ತಾನು ವಹಿಯ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ.

2019-20ನೇ ಸಾಲಿಗೆ ಹಣಕಾಸು ವಿಭಾಗದ ರಶೀದಿಗಳನ್ನು ಬ್ಯಾಂಕ್ ಗಳು ಹಾಗೂ ಬ್ಯಾಂಕ್ ಸ್ಕ್ರೋಲ್ ನೊಂದಿಗೆ ಪರಿಶೀಲಿಸಿದ್ದು, ವಿವರಗಳು ಕೆಳಗಿನಂತಿದೆ.

| ಕ್ರ.ಸಂ | ರಶೀದಿ ಪುಸ್ತಕ ಸಂಖ್ಯೆ | ರಶೀದಿ ಕ್ರಮ ಸಂಖ್ಯೆ | | ರಶೀದಿ ಪುಸ್ತಕದ ದಿನಾಂಕ | | ವಸೂಲಾದ ಮೊತ್ತ ರೂ.ಗಳಲ್ಲಿ | ರಶೀದಿ ಪುಸ್ತಕಗಳನ್ನು ಉಪಯೋಗಿಸಲಾದ ವರ್ಷವಾರು ವಿವರಗಳು |
|---|---|---|---|---|---|---|---|
| | | ರಿಂದ | ವರೆಗೆ | ರಿಂದ | ವರೆಗೆ | | |
| 1 | 048 | 4756 | 4799 | 03.04.2019 | 19.03.2020 | 1,39,87,494 | 2019-20 |
| 2 | 022 | 2101 | 2102 | 20.03.2020 | 20.03.2020 | 4,00,000 | |
| | | | | | **ಒಟ್ಟು** | **1,43,87,494** | |

ಹಣಕಾಸು ವಿಭಾಗದ ರಶೀದಿಗಳಿಂದ ಸ್ವೀಕರಿಸಲಾದ ಮೊತ್ತ ರೂ.1,43,87,494/-ಗಳಾಗಿದ್ದು ಇದರಲ್ಲಿ ರೂ.1,27,34,688/-ಗಳನ್ನು ಮಾತ್ರ ವಿಶ್ವ ವಿದ್ಯಾನಿಲಯ ಬ್ಯಾಂಕ್ ಖಾತೆಗೆ ಜಮಾ ಮಾಡಿದ್ದು, ರೂ.16,52,806/-ಗಳನ್ನು ಕಡಿಮೆ ಜಮೆ ಮಾಡಿರುತ್ತಾರೆ. ಈ ಮೊತ್ತವನ್ನು ಕಂಡಿಕೆ 13.2ರಲ್ಲಿ ಆಕ್ಷೇಪಣೆಯಲ್ಲಿರಿಸಿದೆ.

**ಆ. ಆಡಳಿತ ವಿಭಾಗದ ರಶೀದಿ ಪುಸ್ತಕಗಳ ಪರಿಶೀಲನೆ**

2019-20ನೇ ಸಾಲಿಗೆ ಆಡಳಿತ ಶಾಖೆಯ ರಶೀದಿ ಪುಸ್ತಕದ ದಾಸ್ತಾನು ವಹಿಯನ್ನು ಭೌತಿಕವಾಗಿ ಪರಿಶೀಲಿಸಲಾಗಿ ಒಟ್ಟು 11 ರಶೀದಿ ಪುಸ್ತಕಗಳನ್ನು ಕ್ರಮ ಸಂಖ್ಯೆ: 009 ರಿಂದ 019 ರವರೆಗೆ (0717 ರಿಂದ 1855 ರವರೆಗೆ) ಉಪಯೋಗಿಸಿ ದಾಸ್ತಾನು ವಹಿಯ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ. ಪರಿಶೀಲಿಸಿದ ರಶೀದಿ ವಿವರಗಳು ಈ ಕೆಳಗಿನಂತಿವೆ.

| ಕ್ರ.ಸಂ | ರಶೀದಿ ಪುಸ್ತಕ ಸಂಖ್ಯೆ | ರಶೀದಿ ಕ್ರಮ ಸಂಖ್ಯೆ | | ರಶೀದಿ ಪುಸ್ತಕದ ದಿನಾಂಕ | | ವಸೂಲಾದ ಮೊತ್ತ ರೂ.ಗಳಲ್ಲಿ | ರಶೀದಿ ಪುಸ್ತಕಗಳನ್ನು ಉಪಯೋಗಿಸಲಾದ ವರ್ಷವಾರು ವಿವರಗಳು |
|---|---|---|---|---|---|---|---|
| | | ರಿಂದ | ವರೆಗೆ | ರಿಂದ | ವರೆಗೆ | | |
| 1 | 08 | 0717 | 0800 | 08.04.2019 | 27.06.2019 | 17,68,425 | 2019-20 |
| 2 | 09 | 0801 | 0900 | 27.06.2019 | 16.07.2019 | 8,16,210 | |
| 3 | 10 | 0901 | 1000 | 16.07.2019 | 25.07.2019 | 7,27,370 | |
| 4 | 11 | 1001 | 1100 | 24.07.2019 | 19.08.2019 | 78,95,070 | |
| 5 | 12 | 1101 | 1200 | 19.08.2019 | 20.08.2019 | 78,96,990 | |
| 6 | 13 | 1201 | 1300 | 20.08.2019 | 05.09.2019 | 1,17,26,158 | |
| 7 | 15 | 1401 | 1500 | 09.09.2019 | 27.09.2019 | 1,34,80,315 | |
| 8 | 16 | 1501 | 1600 | 27.09.2019 | 18.11.2019 | 90,04,815 | |
| 9 | 17 | 1601 | 1700 | 18.11.2019 | 02.01.2020 | 1,29,35,690 | |
| 10 | 18 | 1701 | 1800 | 02.01.2020 | 16.01.2020 | 2,44,17,571 | |
| 11 | 19 | 1801 | 1855 | 16.01.2020 | 21.03.2020 | 26,17,565 | |
| | | | | | **ಒಟ್ಟು** | **9,32,86,179** | |

**ಆಡಳಿತ ಶಾಖೆಯ ಮೇಲ್ಕಂಡ ರಶೀದಿಗಳಿಂದ ಸ್ವೀಕರಿಸಲಾದ ಮೊತ್ತ ರೂ.9,32,86,179/-ರಲ್ಲಿ**ರೂ. 9,28,68,429/-ಗಳನ್ನು 2019-20 ನೇ ಸಾಲಿನಲ್ಲಿ ವಿಶ್ವ ವಿದ್ಯಾನಿಲಯದ ಬ್ಯಾಂಕ್ ಖಾತೆಗೆ ಜಮೆ ಮಾಡಿದ್ದು, ಉಳಿಕೆ ಮೊತ್ತ ರೂ.4,17,750/-ನ್ನು 2020-21ನೇಸಾಲಿನಲ್ಲಿ ವಿಶ್ವ ವಿದ್ಯಾನಿಲಯದ ಬ್ಯಾಂಕ್ ಖಾತೆಗೆ ಜಮೆ ಮಾಡಿರುತ್ತಾರೆ.

**ಇ. ಗ್ರಂಥಾಲಯ ವಿಭಾಗ ರಶೀದಿ ಪುಸ್ತಕಗಳ ಪರಿಶೀಲನೆ**

2019-20 ನೇ ಸಾಲಿಗೆ ಗ್ರಂಥಾಲಯ ಶಾಖೆಯ ರಶೀದಿ ಪುಸ್ತಕದ ದಾಸ್ತಾನು ವಹಿಯನ್ನು ಭೌತಿಕವಾಗಿ ಪರಿಶೀಲಿಸಲಾಗಿ ಒಟ್ಟು 05 ರಶೀದಿ ಪುಸ್ತಕಗಳನ್ನು ಕ್ರಮ ಸಂಖ್ಯೆ:823 ರಿಂದ 827 ರವರೆಗೆ (082230 ರಿಂದ 082648 ರವರೆಗೆ) ಉಪಯೋಗಿಸಿದ್ದು, ದಾಸ್ತಾನು ವಹಿಯ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ. ಪರಿಶೀಲಿಸಿದ ರಶೀದಿ ಪುಸ್ತಕಗಳ ವಿವರಗಳು ಈ ಕೆಳಗಿನಂತಿವೆ.

| ಕ್ರ.ಸಂ | ರಶೀದಿ ಪುಸ್ತಕ ಸಂಖ್ಯೆ | ರಶೀದಿ ಕ್ರಮ ಸಂಖ್ಯೆ | | ರಶೀದಿ ಪುಸ್ತಕದ ದಿನಾಂಕ | | ವಸೂಲಾದ ಮೊತ್ತ ರೂ.ಗಳಲ್ಲಿ | ರಶೀದಿ ಪುಸ್ತಕಗಳನ್ನು ಉಪಯೋಗಿಸಲಾದ ವರ್ಷವಾರು ವಿವರಗಳು |
|---|---|---|---|---|---|---|---|
| | | ರಿಂದ | ವರೆಗೆ | ರಿಂದ | ವರೆಗೆ | | |
| 1 | 823 | 08220 | 082300 | 01.04.2019 | 10.05.2019 | 17084 | 2019-20 |
| 2 | 824 | 082301 | 082400 | 10.05.2019 | 03.07.2019 | 14385 | |
| 3 | 825 | 082401 | 082500 | 15.07.2019 | 05.11.2019 | 28167 | |
| 4 | 826 | 082501 | 082600 | 05.11.2019 | 06.02.2020 | 49927 | |
| 5 | 827 | 082601 | 082648 | 06.02.2020 | 05.03.2020 | 15580 | |
| | | | | | **ಒಟ್ಟು** | **1,23,143** | |

ಮೇಲ್ಕಂಡ ರಶೀತಿಗಳಿಂದ ವಸೂಲಿಸಿದ ಮೊತ್ತ ರೂ.1,23,143/-ಗಳ ಮಾಹೆ ವಾರು ವಿವರವನ್ನು ಅನುಬಂಧ-38 ರಲ್ಲಿ ವಿವರಿಸಲಾಗಿದೆ. ವಿಶ್ವ ವಿದ್ಯಾನಿಲಯದ ಗ್ರಂಥಾಲಯ ವಿಭಾಗದ ರಶೀದಿ ಪುಸ್ತಕಗಳ ದಾಸ್ತಾನನ್ನು ಭೌತಿಕವಾಗಿ ಪರಿಶೀಲಿಸಲಾಗಿ ರಶೀದಿ ಪುಸ್ತಕ ಸಂಖ್ಯೆ 831 ರಿಂದ 835 ರವರೆಗೆ (ರಶೀದಿಕ್ರಮ ಸಂಖ್ಯೆ:083001 ರಿಂದ 083500 ರವರೆಗೆ) ಒಟ್ಟು 05 ರಶೀದಿ ಪುಸ್ತಕಗಳು ಉಪಯೋಗಿಸದೇ ಬಾಕಿಉಳಿದಿದ್ದು, ದಾಸ್ತಾನು ವಹಿಯ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ.

**ಈ. ಕಾವೇರಿ ಅತಿಥಿಗೃಹದ ರಶೀದಿ ಪುಸ್ತಕಗಳ ದಾಸ್ತಾನು ವಹಿ ಪರಿಶೀಲನೆ.**

| ಕ್ರ. ಸಂ | ರಶೀದಿ ಪುಸ್ತಕ ಸಂಖ್ಯೆ | ರಶೀದಿ ಹಾಳೆ ಸಂಖ್ಯೆ | | ಒಟ್ಟು ಮೊತ್ತ | ರಶೀದಿ ಪುಸ್ತಕದಉಪಯೋಗಿಸಲಾದ ವರ್ಷ ವಿವರಗಳು |
|---|---|---|---|---|---|
| | | ಯಿಂದ | ವರೆಗೆ | | |
| 1 | 48 | 4768/01.04.2019 | 4800/10.06.2019 | 27,600 | 2018-19 U sUB ಉಪಯೋಗಿಸಲಾಗಿತ್ತು. 2019-20 ನಲ್ಲಿ ಪೂರ್ಣ ಉಪಯೋಗಿಸಿದೆ. |
| 2 | 19 | 1801/11.06.2019 | 1900/27.09.2019 | 73,600 | 2019-20 ನಲ್ಲಿಪೂರ್ಣ ಉಪಯೋಗಿಸಿದೆ. |
| 3 | 20 | 1901/29.09.2019 | 2000/12.01.2020 | 62,100 | |
| 4 | 41 | 4001/12.01.2020 | 4059/18.03.2020 | 34,800 | 2019-20 ನಲ್ಲಿ ಭಾಗಶಃ ಉಪಯೋಗಿಸಿದೆ |
| | | | ಒಟ್ಟು | **1,98,100** | |

**ಉ. ನೇತ್ರಾವತಿ ಅತಿಥಿ ಗೃಹದ ರಶೀದಿ ಪುಸ್ತಕಗಳ ದಾಸ್ತಾನು ವಹಿ ಪರಿಶೀಲನೆ.**

| ಕ್ರಮ ಸಂಖ್ಯೆ | ರಶೀದಿ ಪುಸ್ತಕ ಸಂಖ್ಯೆ | ರಶೀದಿ ಹಾಳೆ ಸಂಖ್ಯೆ | | ಒಟ್ಟು ಮೊತ್ತ | ರಶೀದಿ ಪುಸ್ತಕದಉಪಯೋಗಿಸಲಾದ ವರ್ಷ ವಿವರಗಳು |
|---|---|---|---|---|---|
| | | ಯಿಂದ | ವರೆಗೆ | | |
| 1 | 21 | 2048/03.04.2019 | 2100/01.05.2019 | 65,800 | 2018-19 ಗೆ ಭಾಗಶಃ ಉಪಯೋಗಿಸಲಾಗಿತ್ತು. 2019-20 ಸಾಲಿನಲ್ಲಿ ಪೂರ್ಣ ಉಪಯೋಗಿಸಿದೆ. |
| 2 | 22 | 2101/01.05.2019 | 2200/14.06.2019 | 104700 | |
| 3 | 26 | 2501/15.06.2019 | 2600/30.06.2019 | 62400 | |
| 4 | 25 | 2401/30.06.2019 | 2500/24.07.2019 | 67150 | |
| 5 | 27 | 2601/23.07.2019 | 2699/23.09.2019 | 79500 | |
| 6 | 28 | 2701/27.09.2019 | 2800/22.11.2019 | 155050 | |
| 7 | 29 | 2801/22.11.2019 | 2900/28.12.2019 | 76300 | |
| 8 | 30 | 2901/28.12.2019 | 3000/18.01.2020 | 86600 | |
| 9 | 50 | 4901/18.01.2020 | 5000/19.02.2020 | 58050 | |
| 10 | 51 | 5001/19.02.2020 | 5031/19.03.2020 | 27000 | 2019-20 ನಲ್ಲಿ ಭಾಗಶಃ ಉಪಯೋಗಿಸಿದೆ |
| | | | ಒಟ್ಟು | **782550** | |

**26.2 ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಹಾಜರು ಪಡಿಸದಿರುವುದು.**

ಕರ್ನಾಟಕ ಆರ್ಥಿಕ ಸಂಹಿತೆ - 1958ರ ಅನುಚ್ಛೇದ-169 ರನ್ವಯ ಪ್ರತೀ ಆರ್ಥಿಕ ವರ್ಷದ ಕೊನೆಯಲ್ಲಿ ವಾರ್ಷಿಕ ದಾಸ್ತಾನು ಪರಿಶೀಲನೆಯನ್ನು ಕೈಗೊಂಡು, ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ ಹಾಗೂ ಕೆ.ಎಫ್.ಸಿ-1958ರ ಅನುಚ್ಛೇದ-168 ರನ್ವಯ ಅನುಪಯುಕ್ತ ವಸ್ತುಗಳನ್ನು ಪಟ್ಟಿ ಮಾಡಿ ವಿಲೇಮಾಡಲು ಕ್ರಮ ಕೈ ಗೊಳ್ಳಬೇಕಾಗಿರುತ್ತದೆ. ಅದರಂತೆ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಹಾಜರು ಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:15/2021-22, ದಿನಾಂಕ:05.08.2021 ಹಾಗೂ ವಿಚಾರಣಾಪತ್ರ ಸಂಖ್ಯೆ:198/ದಿನಾಂಕ: 02.11.2021ನ್ನು ನೀಡಲಾಗಿದ್ದರೂ ಸಹ ವರದಿಯನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ. ಆದ್ದರಿಂದ ವಿಶ್ವ ವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಪ್ರಸ್ತುತ ಲಭ್ಯವಿರುವ ವಿವಿಧ ಸಾಮಗ್ರಿ/ಸಲಕರಣೆಗಳ ಪರಿಮಾಣಗಳ ಹಾಗೂ ಸ್ಥಿತಿಗತಿಗಳ ಬಗ್ಗೆ ಖಚಿತ ಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಪ್ರತೀವರ್ಷ ದಾಸ್ತಾನುಗಳನ್ನು ಭೌತಿಕವಾಗಿ ಪರಿಶೀಲಿಸಿ ದೃಢೀಕರಿಸದಿದ್ದಲ್ಲಿ ದಾಸ್ತಾನು ಪುಸ್ತಕದ ಶಿಲ್ಕಿಗೂ ಹಾಗೂ ವಾಸ್ತವಿಕವಾಗಿರುವ ಭೌತಿಕ ಶಿಲ್ಕಿಗೂ ವ್ಯತ್ಯಾಸವನ್ನು ತಿಳಿಯಲು

ಸಾಧ್ಯವಾಗುವುದಿಲ್ಲ. ಆದ್ದರಿಂದ ನಿಯಮಾನುಸಾರ ಪ್ರತಿ ವಿಭಾಗಗಳ ವಾರ್ಷಿಕ ದಾಸ್ತಾನು ಪರಿಶೀಲನೆ ಕೈಗೊಂಡು ಕ್ರೋಢೀಕರಿಸಿ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲು ಸೂಚಿಸಿದೆ.

**26.3 ದೂರ ಶಿಕ್ಷಣ ವಿಭಾಗದ ಅಧ್ಯಯನ ಸಾಮಾಗ್ರಿಗಳ (Study Materials) ದಾಸ್ತಾನು ವಹಿ ಪರಿಶೀಲನೆ.**

ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತ ಕೋರ್ಸುಗಳಿಗೆ 2019-20ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ವಿತರಣೆಯಾಗಿರುವ ವಿವಿಧ ಅಧ್ಯಯನ ಸಾಮಾಗ್ರಿಗಳ ದಾಸ್ತಾನು ವಹಿಯನ್ನು ಪರಿಶೀಲಿಸಲಾಗಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ವಿತರಣೆಯಾಗಿರುವ ವಿವಿಧ ಕೋರ್ಸ್ ಗಳ ಪುಸ್ತಕಗಳ ಸಂಖ್ಯೆಗೂ ಹಾಗೂ ದಾಸ್ತಾನು ವಹಿಯಲ್ಲಿ ನಮೂದಿಸಿರುವ ಸಂಖ್ಯೆಗೂ ಭೌತಿಕವಾಗಿ ತಾಳೆಯಾಗಿರುತ್ತದೆ. ದಾಸ್ತಾನು ವಹಿಯಲ್ಲಿ ನಮೂದಿಸಿರುವ ಪುಸ್ತಕ ಸಂಖ್ಯೆ ಮತ್ತು ವಿವರಗಳನ್ನು ಅನುಬಂಧ-39 ರಲ್ಲಿ ಲಗತ್ತಿಸಿದೆ.

**26.4 ಪ್ರಸಾರಾಂಗದ ದಾಸ್ತಾನಿನಲ್ಲಿ ಬಾಕಿ ಉಳಿದಿರುವ ಪುಸ್ತಕಗಳ ವಿವರ.**

ಪ್ರಸಾರಾಂಗ ವಿಭಾಗದಲ್ಲಿ ದಿನಾಂಕ: 31.03.2020ರ ಅಂತ್ಯಕ್ಕೆ ದಾಸ್ತಾನುವಿನಲ್ಲಿ ರೂ.79,05,893/-ಗಳ ಮೌಲ್ಯದ ಪುಸ್ತಕಗಳು (ಪ್ರಕಟಣೆಯ ವರ್ಷ 1991 ರಿಂದ 2018 ರವರೆಗೆ) ಬಾಕಿ ಉಳಿದಿದ್ದು, ಇಷ್ಟು ಪ್ರಮಾಣದ ಪುಸ್ತಕಗಳನ್ನು ಪ್ರಕಟಣೆ ಮಾಡಿ ಮುದ್ರಿಸಿ ದಾಸ್ತಾನುವಿನಲ್ಲಿಯೇ ಉಳಿಸಿ ಕೊಂಡಿರುವುದರಿಂದ ಪ್ರಸಾರಾಂಗದ ಉದ್ದೇಶವನ್ನು ಈಡೇರಿಸಿದಂತಾಗುವುದಿಲ್ಲ. ಆದ್ದರಿಂದ ದಾಸ್ತಾನಿನಲ್ಲಿ ಬಾಕಿ ಉಳಿದಿರುವ ಪುಸ್ತಕಗಳನ್ನು ವಿಲೇವಾರಿ ಮಾಡಲು ವ್ಯಾಪಕ ಪ್ರಚಾರ ಕೈಗೊಳುವುದು ಮತ್ತು ವಿಶ್ವ ವಿದ್ಯಾನಿಲಯದ ಸಂಯೋಜನೆಗೆ ಒಳಪಟ್ಟಿರುವ ಕಾಲೇಜುಗಳಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆ ಮಾಡುವ ಮೂಲಕ ಪುಸ್ತಕಗಳ ವಿಲೇವಾರಿಗೆ ಅಗತ್ಯ ಕ್ರಮ ವಹಹಿಸಲು ಸೂಚಿಸಿದೆ. ಪ್ರಸಾರಾಂಗದ ದಾಸ್ತಾನುವು ನಲ್ಲಿರುವ ಪುಸ್ತಕಗಳ ವಿವರವನ್ನು ಅನುಬಂಧ-40 ರಲ್ಲಿ ನೀಡಲಾಗಿದೆ.

**27. ವಿಶ್ವ ವಿದ್ಯಾಲಯ ಮುದ್ರಣಾಲಯ**

ಮಂಗಳೂರು ವಿಶ್ವವಿದ್ಯಾಲಯದಲ್ಲಿ ಯಾವುದೇ ಮುದ್ರಣಾಲಯ ಇರುವುದಿಲ್ಲ

**28. ವಾಹನ ಖರೀದಿ ಮುಂಗಡಗಳು**

. ಮಂಗಳೂರು ವಿಶ್ವವಿದ್ಯಾಲಯದಲ್ಲಿ ಯಾವುದೇ ವಾಹನ ಖರೀದಿ ಮುಂಗಡ ಇರುವುದಿಲ್ಲ

**29. ಗೃಹ ನಿರ್ಮಾಣ ಮುಂಗಡಗಳು**

2019-20ನೇ ಸಾಲಿನ ಆರ್ಥಿಕ ವರ್ಷದಲ್ಲಿ ವಿಶ್ವ ವಿದ್ಯಾನಿಲಯದಿಂದ ಅಧಿಕಾರಿಗಳಿಗೆ/ ಸಿಬ್ಬಂದಿಗಳಿಗೆ ಪಾವತಿಸಲಾದ ವೇತನದಿಂದ ರೂ.2,24,144/- ಗಳ ಗೃಹ ನಿರ್ಮಾಣದ ಮುಂಗಡ ಹಾಗೂ ಬಡ್ಡಿ ಮೊತ್ತವನ್ನು ಕಟಾಯಿಸಿದ್ದು, ವಿವರವನ್ನು ಅನುಬಂಧ-41ರಲ್ಲಿ ವಿವರಿಸಲಾಗಿದೆ.

**30. ಇತರೆ ಮುಂಗಡಗಳು**

**30.1 ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಎ.ಸಿ.ಬಿಲ್ಲುಗಳ ಮೂಲಕ ವೆಚ್ಚ ಭರಿಸಿರುವುದು:-**

ವಿಶ್ವ ವಿದ್ಯಾನಿಲಯದ ವಿವಿಧ ಲೆಕ್ಕ ಶೀರ್ಷಿಕೆಗಳಡಿ ವಿವಿಧ ಉದ್ದೇಶಗಳಿಗಾಗಿ ಕನಿಷ್ಠ ರೂ.2000 ದಿಂದ ಗರಿಷ್ಠ ರೂ.19,78,000/-ಗಳನ್ನು ಮುಂಗಡ ಬಿಲ್ಲುಗಳ ಮೂಲಕ ಡ್ರಾ ಮಾಡಿ ವೆಚ್ಚ ಭರಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಆಇ-03 ಟಿಎಫ್‌ಪಿ-2018, ಬೆಂಗಳೂರು ದಿನಾಂಕ:14.05.2018ರ ಅನುಬಂಧದ ಕ್ರಮ ಸಂಖ್ಯೆ: 28 ರಂತೆ ರೂ. 2.00 ಲಕ್ಷಗಳಿಗೆ ಮೀರಿದ ಮುಂಗಡ ಬಿಲ್ಲುಗಳಿಗೆ ಹಣಕಾಸು ಇಲಾಖೆಯ ಅನುಮತಿ ಪಡೆದು ಕ್ರಮ ವಹಿಸಬೇಕಾಗಿರುತ್ತದೆ. ಆದ್ದರಿಂದ ರೂ.2.00 ಲಕ್ಷಗಳಿಗೆ ಮೀರಿದ ಮುಂಗಡ ಬಿಲ್ಲುಗಳಿಗೆ ಸಂಬಂಧಿಸಿದಂತೆ ಸರ್ಕಾರದ ಅನುಮತಿ ಪಡೆಯಬೇಕಾಗಿರುತ್ತದೆ. ಸರ್ಕಾರದ ಅನುಮತಿ ಪಡೆದಿರುವ ಬಗ್ಗೆ ದಾಖಲಾತಿಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:154/ ದಿ: 27.10.21ನ್ನು ನೀಡಲಾಗಿತ್ತು. ಆದರೆ ವಿಶ್ವ ವಿದ್ಯಾನಿಲಯದಿಂದ ಯಾವುದೇ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಿರುವು

ದಿಲ್ಲ ಆದ್ದರಿಂದ ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಎ.ಸಿಬಿಲ್ಲುಗಳ ಮೂಲಕ ಡ್ರಾ ಮಾಡಿ ವೆಚ್ಚ ಭರಿಸಲಾದ ಒಟ್ಟು ಮೊತ್ತ ರೂ.68,97,315/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ-42ರಲ್ಲಿ ನೀಡಿದೆ.

## 30.2 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ ಖರ್ಚಾಗದೇ ಉಳಿದ ಮೊತ್ತಗಳು ವಿಶ್ವ ವಿದ್ಯಾನಿಲಯಕ್ಕೆ ಮರು ಜಮೆಯಾದ ಬಗ್ಗೆ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸದಿರುವುದು

2019-20ನೇ ಸಾಲಿನಲ್ಲಿ ವಿಶ್ವ ವಿದ್ಯಾನಿಲಯದ ವಿವಿಧ ಲೆಕ್ಕ ಶೀರ್ಷಿಕೆಗಳಿಂದ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ವೆಚ್ಚಭರಿಸಿದ ಸಂಬಂಧ ಹೊಂದಾಣಿಕೆ ಬಿಲ್ಲುಗಳನ್ನು ಪರಿಶೀಲಿಸಲಾಗಿ, ಸದರಿ ಬಿಲ್ಲುಗಳಲ್ಲಿ ಖರ್ಚಾಗದೇ ಬಾಕಿ ಉಳಿದ ಮೊತ್ತಗಳನ್ನು ಚಲನ್‌ಗಳ ಮೂಲಕ ವಿಶ್ವ ವಿದ್ಯಾನಿಲಯದ ವಿವಿಧ ಖಾತೆಗಳಿಗೆ ಜಮಾ ಮಾಡಿರುವ ಬಗ್ಗೆ ದಾಖಲೆಗಳನ್ನು ಹೊಂದಾಣಿಕೆ ಬಿಲ್ಲುಗಳಲ್ಲಿ ಗಮನಿಸಲಾಗಿರುತ್ತದೆ. ಹೀಗೆ ಖರ್ಚಾಗದೇ ಬಾಕಿ ಉಳಿದ ಮೊತ್ತಗಳು ವಿಶ್ವ ವಿದ್ಯಾನಿಲಯದ ಸಂಬಂಧಿತ ಖಾತೆಗಳಿಗೆ ಜಮೆಯಾಗಿರುವ ಬಗ್ಗೆ ಬ್ಯಾಂಕ್ ಪಾಸ್ ಶೀಟ್, ಹಾಗೂ ಸದರಿ ಮೊತ್ತಗಳನ್ನು ಸಂಬಂಧಿತ ನಗದು ಪುಸ್ತಕಗಳಲ್ಲಿ ಸ್ವೀಕೃತಿ ತೆಗೆದುಕೊಂಡಿರುವ ಬಗ್ಗೆ ದಾಖಲಾತಿಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಕೋರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 214/21-22, ದಿ:06.11.21ನ್ನು ನೀಡಲಾಗಿತ್ತು. ಆದರೆ ಈ ಸಂಬಂಧ ವಿಶ್ವ ವಿದ್ಯಾನಿಲಯವು ಯಾವುದೇ ದಾಖಲಾತಿಗಳನ್ನು ಲೆಕ್ಕಪರಿಶೊಧನೆಗೆ ಹಾಜರು ಪಡಿಸದಿರುವುದರಿಂದ ಒಟ್ಟು ಮೊತ್ತ ರೂ.7,74,720/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ-43ರಲ್ಲಿ ನೀಡಿದೆ.

## 30.3 ಸಂಕ್ಷಿಪ್ತ ಸಾದಿಲ್ವಾರು (A.C) ಬಿಲ್ಲುಗಳ ಮೂಲಕ ಡ್ರಾ ಮಾಡಿರುವ ಮೊತ್ತಗಳಿಗೆ ಎನ್.ಡಿ.ಸಿ. ಸಲ್ಲಿಸಿರುವ ಬಗ್ಗೆ ದಾಖಲಾತಿಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸದಿರುವುದು.

ಸಾಮಾನ್ಯ ಖಾತೆ, ಪರೀಕ್ಷಾಂಗವಿಭಾಗ, ದೂರ ಶಿಕ್ಷಣ ಮತ್ತು ಕ್ರೀಡಾ ಖಾತೆಯಿಂದ ಹಾಗೂ ವಿಶ್ವ ವಿದ್ಯಾನಿಲಯದ ಅಧೀನ ಸಂಸ್ಥೆಗಳು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಭರಿಸಲಾದ ವೆಚ್ಚಗಳಿಗೆ ಸಂಬಂಧಿಸಿದಂತೆ ಹೊಂದಾಣಿಕೆ ಬಿಲ್ಲುಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಸದರಿ ಬಿಲ್ಲುಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸುವಂತೆ ಕೋರಿ ವಿಚಾರಣಾಪತ್ರ ಸಂಖ್ಯೆ: 58/ದಿನಾಂಕ 13.09.2021, 121/ದಿ:25.10.21 ಹಾಗೂ 174/ದಿ:29.10.21 203/ದಿನಾಂಕ 06.11.2021ಗಳನ್ನು ನೀಡಲಾಗಿತ್ತು. ಆದರೆ ಈ ಸಂಬಂಧ ಭಾಗಶಃ ಬಿಲ್ಲುಗಳನ್ನು ಮಾತ್ರ ಲೆಕ್ಕ ಪರಿಶೋಧನೆಗೆ ಹಾಜರು ಪಡಿಸ ಲಾಗಿದ್ದು, ಉಳಿದ ಬಿಲ್ಲುಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ. ಆದ್ದರಿಂದ ಲೆಕ್ಕಪರಿಶೋಧನೆಗೆ ಹಾಜರು ಪಡಿಸದಿರುವ ಬಿಲ್ಲುಗಳ ಮೊತ್ತ ರೂ. 1,17,84,561/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ-44ರಲ್ಲಿ ನೀಡಲಾಗಿದೆ. ಎನ್.ಡಿ.ಸಿ. ಸಲ್ಲಿಸುವಲ್ಲಿ ವಿಳಂಬವಾದ ಅವಧಿಗೆ ಬಡ್ಡಿ ಲೆಕ್ಕಾಚಾರ ಮಾಡಿ ವಸೂಲಿಸುವ ಬಗ್ಗೆ ವಿಶ್ವ ವಿದ್ಯಾನಿಲಯವು ಪರಿಶೀಲಿಸಬಹುದಾಗಿದೆ.

## 30.4 ಮುಂಜಾಗ್ರತಾ ಠೇವಣಿ ಮೊತ್ತ (caution deposit)ವನ್ನು ಹಿಂದುರುಗಿಸಿರುವ ವಿವರ.

ವಿಶ್ವ ವಿದ್ಯಾನಿಲಯದ ವಸತಿನಿಲಯಗಳಲ್ಲಿರುವ ಸಾಮಾನ್ಯ ವರ್ಗದ (General) ವಿದ್ಯಾರ್ಥಿಗಳು ವಿಶ್ವ ವಿದ್ಯಾನಿಲಯಕ್ಕೆ ಪಾವತಿಸಿರುವ ಮುಂಜಾಗ್ರತಾ ಠೇವಣಿಯ ವಿವರಗಳನ್ನು ಪರಿಶೀಲಿಸಲಾಗಿ, ಸದರಿ ಸಾಲಿನಲ್ಲಿ ಪ್ರಾರಂಭಿಕಶಿಲ್ಕು ಸೇರಿದಂತೆ ವಸೂಲಾತಿಯಾಗಿರುವ ಮುಂಜಾಗ್ರತಾ ಠೇವಣಿ ಮೊತ್ತ 82,48,979/ - ಗಳಲ್ಲಿ ವಿದ್ಯಾರ್ಥಿಗಳು ಕಟ್ಟದಿರುವ ಮೆಸ್ ಶುಲ್ಕದ ಬಾಬ್ತು ರೂ.22,31,409/-ಗಳನ್ನು ಹೊಂದಾಣಿಕೆ ಮಾಡಿಕೊಳ್ಳಲಾಗಿದೆ ಹಾಗೂ ರೂ.14,44,255/-ಗಳನ್ನು ವಿದ್ಯಾರ್ಥಿಗಳಿಗೆ ಹಿಂದಿರುಗಿಸಲಾಗಿದೆ. ಆದರೆ ಸದರಿ ಸಾಲಿನಲ್ಲಿ ಮುಂಜಾಗ್ರತಾ ಠೇವಣಿ ಮೊತ್ತ ರೂ.45,73,315/-ಗಳು ಬಾಕಿ ಉಳಿದಿರುತ್ತದೆ. ವಿವರಗಳನ್ನು ಅನುಬಂಧ-45ರಲ್ಲಿ ನೀಡಲಾಗಿದೆ.

## 30.5 ಹೊಂದಾಣಿಕೆ ಬಿಲ್ಲುಗಳಲ್ಲಿ ನಿಯಮ ಉಲ್ಲಂಘಿಸಿ ವೆಚ್ಚ ಭರಿಸಿರುವುದು.

2019-20ನೇ ಸಾಲಿನಲ್ಲಿ ಜಿ.ಆರ್.ಎ. ಹಾಗೂ ಕ್ರೀಡಾ ಖಾತೆಯಿಂದ ಡ್ರಾ ಮಾಡಲಾದ ಎ.ಸಿ. ಬಿಲ್ಲುಗಳಿಗೆ ಸಂಬಂಧಿಸಿದಂತೆ ಎನ್.ಡಿ.ಸಿ. ಬಿಲ್ಲುಗಳನ್ನು ಪರಿಶೀಲಿಸಲಾಗಿ, ಕೆಲವು ಬಿಲ್ಲುಗಳಲ್ಲಿ ರೂ. 10,000/- ಮೀರಿದ ವೆಚ್ಚಗಳಿಗೆ ದರಪಟ್ಟಿ/ಟೆಂಡರ್ ಆಹ್ವಾನಿಸಿ ಕ್ರಮ ವಹಿಸದಿರುವ ಬಗ್ಗೆ ಹಾಗೂ ಎ.ಸಿಬಿಲ್ಲುಗಳನ್ನು ಡ್ರಾ ಮಾಡುವುದಕ್ಕೆ ಮೊದಲಿನ ಬಿಲ್ಲುಗಳನ್ನು ಎ.ಸಿ. ಬಿಲ್ಲಿನಲ್ಲಿ ಡ್ರಾ ಮಾಡಿದ

ಹಣದಿಂದ ವೆಚ್ಚ ಭರಿಸಲಾಗಿರುವುದನ್ನು ಗಮನಿಸಲಾಗಿದ್ದು, ಈ ಸಂಬಂಧ ದಾಖಲಾತಿಗಳನ್ನು ಹಾಜರು ಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ: 214, ದಿನಾಂಕ: 06.11.2021ರಂದು ನೀಡಲಾಗಿತ್ತು, ಆದರೆ ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ. ಆದ್ದರಿಂದ ಈ ಸಂಬಂಧ ವೆಚ್ಚ ಭರಿಸಲಾದ ಒಟ್ಟು ಮೊತ್ತ ರೂ.37,99,844/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ-46ರಲ್ಲಿ ನೀಡಲಾಗಿದೆ.

## 30.6 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು ಡ್ರಾ ಮಾಡುವಾಗ ನಿಯಮಾವಳಿಗಳನ್ನು ಉಲ್ಲಂಘಿಸಿರುವುದು.

ವಿಶ್ವ ವಿದ್ಯಾನಿಲಯದಲ್ಲಿ 2019-20ನೇ ಸಾಲಿನಲ್ಲಿ ಎ.ಸಿ.ಬಿಲ್ಲುಗಳ.ಮೂಲಕ ಹಣ ಡ್ರಾ ಮಾಡಿ, ಸದರಿ ಸಾಲಿನಲ್ಲಿ ಹೊಂದಾಣಿಕೆಯಾಗದೆಯೇ ಮುಂದಿನ ಸಾಲಿನಲ್ಲಿ ಎನ್.ಡಿ.ಸಿ. ಸಲ್ಲಿಕೆಯಾಗಿರುವ ಎಸಿಬಿಲ್ಲುಗಳ ವಿವರಗಳನ್ನು ಅನುಬಂಧ-43ರಲ್ಲಿ ನೀಡಲಾಗಿದೆ. ಎ.ಸಿ.ಬಿಲ್ಲುಗಳ ಮುಖಾಂತರ ಹಣ ಡ್ರಾ ಮಾಡಿ, ಎನ್.ಡಿ.ಸಿ.ಸಲ್ಲಿಸಲಾಗಿರುವ ಬಿಲ್ಲುಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನತೆಗಳು ಕಂಡು ಬಂದಿರುತ್ತವೆ.

1. ಸಾದಿಲ್ವಾರು ವೆಚ್ಚದ ಕೈ ಪಿಡಿ ನಿಯಮ - 1958 ರ ನಿಯಮ-36(ii)ರ ರೀತ್ಯಾ ತುರ್ತು ವೆಚ್ಚಗಳಿಗೆ ಅವಶ್ಯಕವಿರುವ ಹಣವನ್ನು ಬಿಟ್ಟು ಇನ್ನಾವುದೇ ಉದ್ದೇಶಕ್ಕೆ ಎ.ಸಿ. ಬಿಲ್ಲಿನ ಮೂಲಕ ಹಣ ಡ್ರಾ ಮಾಡುವಂತಿಲ್ಲ.
2. ಸಾದಿಲ್ವಾರು ವೆಚ್ಚ ಕೈಪಿಡಿ, 1958 ನಿಯಮ 37(iii)ರ ರೀತ್ಯಾ ಎ.ಸಿ. ಬಿಲ್ಲುಗಳ ಮೂಲಕ ಡ್ರಾ ಮಾಡಿದ ಹಣಕ್ಕೆ, ಹಣವನ್ನು ಡ್ರಾ ಮಾಡಿದ 1 ತಿಂಗಳೊಳಗಾಗಿ ಎನ್‌ಡಿಸಿ ಬಿಲ್ಲುಗಳನ್ನು ಸಕ್ಷಮ ಅಧಿಕಾರಿಯವರಿಗೆ ಸಲ್ಲಿಸಬೇಕಾಗಿರುತ್ತದೆ. ಆದರೆ ಕೆಲವು ಎಸಿ ಬಿಲ್ಲುಗಳಿಗೆ 1 ದಿನ ದಿಂದ 592 ದಿನಗಳ ವರೆಗೆ ತಡವಾಗಿ ಎನ್‌ಡಿಸಿ ಬಿಲ್ಲುಗಳನ್ನು ಸಲ್ಲಿಸಲಾಗಿದೆ. ಹೀಗೆ ತಡವಾಗಿ ಎನ್.ಡಿ.ಸಿ ಸಲ್ಲಿಸಿರುವ ಅವಧಿಗೆ ಸಂಬಂಧಿಸಿದವರಿಂದ ಅನ್ವಯವಾಗುವ ದರದಲ್ಲಿ ಬಡ್ಡಿ ವಸೂಲಿಸಲು ಪರಿಶೀಲಿಸಬಹುದಾಗಿದೆ.
3. ಸರ್ಕಾರದ ಆದೇಶ ಸಂಖ್ಯೆ. ಆ.ಇ. 01 ಟಿಸಿಇ 2019, ದಿ. 04-05-2019 ರನ್ವಯ ಸರಕು ಸಾಮಗ್ರಿಗಳನ್ನು ರೂ. 10,000/- ರವರೆಗೆ ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಲು ಅವಕಾಶವಿರುತ್ತದೆ. ರೂ. 10,000/- ಮೀರಿದ ಖರೀದಿಗಳನ್ನು ದರಪಟ್ಟಿ ಕರೆದು ಮಾಡಬೇಕಾಗಿರುತ್ತದೆ. ಕೆಟಿಪಿಪಿ ಅಧಿನಿಯಮ, 1999ರ ಪ್ರಕರಣ- 4(2)ರನ್ವಯ ರೂ. 1,00,000/-ಮೀರಿದ ಯಾವುದೇ ಖರೀದಿಯನ್ನು ಟೆಂಡರ್ ಪ್ರಕ್ರಿಯೆ ಕೈಗೊಂಡು ಖರೀದಿಸಬೇಕಾಗಿರುತ್ತದೆ. ಆದರೆ ಎಸಿ ಬಿಲ್ಲುಗಳಿಗೆ ಸಲ್ಲಿಸಲಾದ ಕೆಲವು ಎನ್‌ಡಿಸಿ ಬಿಲ್ಲುಗಳಲ್ಲಿ ನಿಯಮ ಉಲ್ಲಂಘಿಸಿ ದರಪಟ್ಟಿ ಹಾಗೂ ಟೆಂಡರ್ ಆಹ್ವಾನಿಸದೆ ಸರಕು/ಸೇವೆಗಳನ್ನು ಪಡೆದುಕೊಂಡಿರುವುದು ಕಂಡುಬಂದಿರುತ್ತದೆ.

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ ಹಣ ಡ್ರಾ ಮಾಡುವುದನ್ನು ಕೇವಲ ಅನಿವಾರ್ಯ ಮತ್ತು ತುರ್ತು ಸಂದರ್ಭಗಳಿಗೆ ಮಾತ್ರ ಸೀಮಿತ ಗೊಳಿಸುವಂತೆ ಸೂಚಿಸಿದೆ. ಅಲ್ಲದೆ ಒಂದು ಬಾರಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನಲ್ಲಿ ಹಣವನ್ನು ಡ್ರಾ ಮಾಡಿದ ನಂತರ ಅದು ತೀರುವಳಿ ಯಾಗುವವರೆಗೆ ಮತ್ತೆ ಎ.ಸಿ. ಬಿಲ್ಲಿನಲ್ಲಿ ಡ್ರಾ ಮಾಡಲು ಅವಕಾಶವಿಲ್ಲದಿರುವುದಿಲ್ಲ. ಆದ್ದರಿಂದ ಇಂತಹ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಲು ಹಾಗೂ ವಿಳಂಬವಾಗಿ ಎನ್.ಡಿ.ಸಿ. ಸಲ್ಲಿಸಲು ಕಾರಣರಾದವರ ಮೇಲೆ ಆಡಳಿತ್ಮಾಕ ಕ್ರಮ ಕೈಗೊಳ್ಳಲು ಸೂಚಿಸಿದೆ.

**31. ಸಹಾಯಾನುದಾನಗಳು**

2019-20ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ವಿಶ್ವವಿದ್ಯಾಲಯಕ್ಕೆ ಈ ಕೆಳಕಂಡ ಕೋಷ್ಟಕದಲ್ಲಿನ ವಿವರಗಳಂತೆ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ.

(ಲಕ್ಷ ರೂಗಳಲ್ಲಿ)

| ಕ್ರ.ಸಂ | ವಿವರಗಳು | ಬಿಡುಗಡೆಯಾದಮೊತ್ತ |
|---|---|---|
| 1 | ಬ್ಲಾಕ್ ಗ್ರಾಂಟ್(ವೇತನಾನುದಾನ) | 5225.00 |
| 2 | ಬ್ಲಾಕ್ ಗ್ರಾಂಟ್ (ನಿವೃತ್ತಿ ವೇತನಾನುದಾನ) | 290.00 |
| 3 | ಅಭಿವೃದ್ಧಿ ಅನುದಾನ | 94.00 |

| | | |
|---|---|---|
| 4 | ವಿಘಯೋ/ ಗಿರಿಜನ ಉಪಯೋಜನೆ | 6.00 |
| | ಒಟ್ಟು | **5615.00** |

**32. ವಿದ್ಯಾರ್ಥಿ ವೇತನ ಮತ್ತು ಬಹುಮಾನಗಳ ದತ್ತಿಗಳು**

**32.1 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ವಸತಿ ನಿಲಯದ ವಿದ್ಯಾರ್ಥಿಗಳಿಂದ ಮೆಸ್ ಬಾಬ್ತು ಸರ್ಕಾರದಿಂದ ಮರು ಭರಿಕೆಯಾಗದಿರುವುದು.**

ವಿಶ್ವ ವಿದ್ಯಾನಿಲಯದ ವ್ಯಾಪ್ತಿಗೆ ಬರುವ ವಸತಿ ನಿಲಯಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನೀಡಲಾಗುವ ಊಟೋಪಚಾರದ ವೆಚ್ಚಗಳನ್ನು ಸರ್ಕಾರದಿಂದ ಮರುಭರಿಕೆ ಮಾಡಿಸಿಕೊಳ್ಳಬೇಕಾಗುತ್ತದೆ. ಆದರೆ 2019-20ನೇ ಸಾಲಿನ ಊಟೋಪಚಾರದ ವೆಚ್ಚ ರೂ.74,16,271/- ಗಳನ್ನು ವಿಶ್ವ ವಿದ್ಯಾನಿಲಯಕ್ಕೆ ಮರು ಭರಿಕೆಯಾಗದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಸದರಿ ಮೊತ್ತ ಮರುಭರಿಕೆಯಾಗದಿದ್ದಲ್ಲಿ ವಿಶ್ವ ವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗುವ ಸಂಭವವಿರುವುದರಿಂದ ಶೀಘ್ರವೇ ವಿಶ್ವ ವಿದ್ಯಾನಿಯವು ಈ ಬಗ್ಗೆ ಸೂಕ್ತ ಆಡಳಿತಾತ್ಮಕ ಕ್ರಮ ಕೈ ಗೊಂಡು ವಿದ್ಯಾರ್ಥಿಗಳಿಂದ/ಸರ್ಕಾರದಿಂದ ಊಟೋಪಚಾರದ ವೆಚ್ಚವನ್ನು ವಸೂಲಿಸಲು/ಮರುಭರಿಕೆ ಮಾಡಿಕೊಳ್ಳಲು ಸೂಚಿಸಿದೆ. ವಿವರವು ಈ ಕೆಳಕಂಡಂತಿದೆ.

| ಕ್ರ.ಸಂ | ವಸತಿ ನಿಲಯಗಳ ಹೆಸರು | ಮೊತ್ತ |
|---|---|---|
| 1 | ನಿಲಯ ಪಾಲಕರು, ಮಹಿಳಾ ವಿದ್ಯಾರ್ಥಿನಿಲಯ, ಮಂಗಳೂರು | 1896564 |
| 2 | ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ, ಮಂಗಳೂರು | 787639 |
| 3 | ಪುರುಷರ ವಿದ್ಯಾರ್ಥಿ ನಿಲಯ, ಮಂಗಳೂರು | 3475838 |
| 4 | ಪುರುಷರ ವಿದ್ಯಾರ್ಥಿ ನಿಲಯ, ಚಿಕ್ಕಆಳುವಾರ | 414251 |
| 5 | ಮಹಿಳೆಯರ ವಿದ್ಯಾರ್ಥಿ ನಿಲಯ, ಚಿಕ್ಕಆಳುವಾರ | 841979 |
| | **ಒಟ್ಟುರೂ.** | **7416271** |

**32.2 ವಿದ್ಯಾರ್ಥಿ ನಿಲಯಗಳಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕ ಸರ್ಕಾರದಿಂದ ಮರು ಭರಿಕೆಯಾಗದಿರುವುದು ಹಾಗೂ ವಿದ್ಯಾರ್ಥಿಗಳಿಂದ ಕಡಿಮೆ ಶುಲ್ಕ ವಸೂಲಿಸಿರುವುದು.**

ವಿಶ್ವ ವಿದ್ಯಾನಿಲಯದ ವ್ಯಾಪ್ತಿಯ ವಸತಿ ನಿಲಯಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಶುಲ್ಕದಲ್ಲಿ ವಿನಾಯಿತಿ ನೀಡಿರುವ ವಿವರಗಳನ್ನು ಪರಿಶೀಲಿಸಲಾಗಿ ಸದರಿ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ಬೇಡಿಕೆ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ವಿಶ್ವವಿದ್ಯಾನಿಲಯಕ್ಕೆ ಸದರಿ ಶುಲ್ಕಗಳ ಮೊತ್ತ ರೂ.1,75,96,000/- ಗಳನ್ನು ಮರುಭರಿಕೆಯಾಗದಿರುವುದನ್ನು ಗಮನಿಸಲಾಗಿದೆ. ಈ ಬಗ್ಗೆ ವಿವರಣೆ ಕೋರಿ ವಿಚಾರಣಾ ಪತ್ರ ಸಂಖ್ಯೆ: 180/ ದಿನಾಂಕ: 29.10.2021ನ್ನು ವಿಶ್ವ ವಿದ್ಯಾನಿಲಯದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕೋಶ (cell)ಕ್ಕೆ ನೀಡಲಾಗಿದ್ದು, ವಿಶ್ವ ವಿದ್ಯಾನಿಲಯದವರು ಇದಕ್ಕೆ ಯಾವುದೇ ಉತ್ತರ ನೀಡಿರುವುದಿಲ್ಲ. ವಿವರವನ್ನು ಅನುಬಂಧ-51ರಲ್ಲಿ ನೀಡಲಾಗಿದೆ. ಮಹಿಳೆಯರ ವಸತಿ ನಿಲಯ, ಜ್ಞಾನ ಕಾವೇರಿ, ಚಿಕ್ಕಆಳುವಾರದಲ್ಲಿ ವಿದ್ಯಾರ್ಥಿಗಳಿಂದ ರೂ. 5900.00ಗಳ ಕಡಿಮೆ ಪ್ರವೇಶಾತಿ ಶುಲ್ಕವನ್ನು ವಸೂಲಿಸಿದ್ದು, ಈ ಬಗ್ಗೆ ವಿವರಣೆ ಕೋರಿ ವಿಚಾರಣಾ ಪತ್ರ ಸಂಖ್ಯೆ:152/ದಿನಾಂಕ:27.10.2021ನ್ನು ನೀಡಿದಾಗಲೂ ವಿಶ್ವ ವಿದ್ಯಾನಿಲಯದವರು ಯಾವುದೇ ಉತ್ತರ ನೀಡಿರುವುದಿಲ್ಲ. ಆದ್ದರಿಂದ ಈ ಕೆಳಕಂಡ ವಿದ್ಯಾರ್ಥಿಗಳಿಂದ ಕಡಿಮೆ ವಸೂಲಿ ಮಾಡಿರುವ ಪ್ರವೇಶಾತಿ ಶುಲ್ಕವನ್ನು ವಸೂಲಿಸಿ ವಿಶ್ವ ವಿದ್ಯಾನಿಲಯದ ಬ್ಯಾಂಕ್ ಖಾತೆಗೆ ಜಮೆ ಮಾಡಲು ಸೂಚಿಸಿದೆ.

| ಕ್ರ.ಸಂ | ವಿದ್ಯಾರ್ಥಿಗಳಹೆಸರು | ಬೇಡಿಕೆಮೊತ್ತ | ವಸೂಲಾತಿಮೊತ್ತ | ಬಾಕಿಮೊತ್ತ |
|---|---|---|---|---|
| 1 | ಗೌತಮಿ ಜಿ.ಎ | 10400.00 | 5000.00 | 5400.00 |

| | | | | |
|---|---|---|---|---|
| 2 | ಸಂಗೀತಾ ಬಿ.ಎಂ. | 1000.00 | 500.00 | 500.00 |
| | **ಒಟ್ಟುಮೊತ್ತ** | **11400.00** | **5500.00** | **5900.00** |

**33. ಭವಿಷ್ಯನಿಧಿ**

ವಿಶ್ವ ವಿದ್ಯಾನಿಲಯದ ಉದ್ಯೋಗಿಗಳಿಗೆ ಯಾವುದೇ ಭವಿಷ್ಯನಿಧಿ ಖಾತೆಗಳು ಇರುವುದಿಲ್ಲ

**34. ಪಿಂಚಣಿ ಸೌಲಭ್ಯ ಯೋಜನೆಗಳು**

**34.1 ನೂತನ ಪಿಂಚಣಿ ಯೋಜನೆಗೆ (NPS) ಒಳಪಡುವ ವಿಶ್ವ ವಿದ್ಯಾನಿಲಯದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರ ವಿವರವನ್ನು ಎನ್.ಎಸ್.ಡಿ.ಎಲ್ ಸಂಸ್ಥೆಯೊಂದಿಗೆ ನೊಂದಣಿ ಮಾಡಿಸದೆ ಭಾರತೀಯ ಜೀವ ವಿಮಾ ನಿಗಮಕ್ಕೆ (LIC) ವಂತಿಗೆಯನ್ನು ಜಮೆ ಮಾಡುತ್ತಿರುವುದು.**

ವಿಶ್ವ ವಿದ್ಯಾನಿಲಯದಲ್ಲಿ ನೂತನ ಪಿಂಚಣಿ ಯೋಜನೆಗೆ ಒಳಪಡುವ ಸಿಬ್ಬಂದಿ ವರ್ಗದವರ ವಿವರವನ್ನು ಎನ್ .ಎಸ್.ಡಿ.ಎಲ್ಸಂಸ್ಥೆಯೊಂದಿಗೆ ನೊಂದಣಿ ಮಾಡಿಸದೆ ಭಾರತೀಯ ಜೀವ ವಿಮಾ ನಿಗಮಕ್ಕೆ ವಂತಿಗೆಯನ್ನು ಜಮೆ ಮಾಡುತ್ತಿರುವುದು ಲೆಕ್ಕ ತಪಾಸಣೆಯಲ್ಲಿ ಕಂಡು ಬಂದಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ(ವಿಶೇಷ) 04 ಪಿಇಟಿ 200, ದಿನಾಂಕ: 31.03.2006 ರಂತೆ ನೂತನ ಪಿಂಚಣಿ ಯೋಜನೆಗೆ ಒಳಪಡುವ ನೌಕರರ ಹೆಸರನ್ನು ಎನ್.ಎಸ್.ಡಿ.ಎಲ್‌ನಲ್ಲಿ ನೊಂದಾಯಿಸಿದ ನಂತರ ನೌಕರರ ವಂತಿಕೆ ಹಾಗೂ ವಿಶ್ವವಿದ್ಯಾನಿಲಯ ವಂತಿಗೆಯ ಮೊತ್ತವನ್ನು ಎನ್.ಎಸ್.ಡಿ.ಎಲ್ ಮುಂಖಾತರ ಸಿಬ್ಬಂದಿಗಳ ಖಾತೆಗೆ ಜಮೆ ಮಾಡ ಬೇಕಾಗಿರುತ್ತದೆ. ಆದರೆ ಇದುವರೆಗೂ ಎನ್.ಎಸ್.ಡಿ.ಎಲ್. ಸಂಸ್ಥೆಯೊಂದಿಗೆ ನೊಂದಣಿ ಮಾಡಿಸಿರುವುದಿಲ್ಲ. 2019-20ನೇ ಸಾಲಿನಲ್ಲಿ ವಿಶ್ವ ವಿದ್ಯಾನಿಲಯದಿಂದ ವಂತಿಗೆ ಮೊತ್ತ ರೂ.1,40,00,000/-ಗಳನ್ನು ಭಾರತೀಯ ಜೀವ ವಿಮಾ ನಿಗಮಕ್ಕೆ ಪಾವತಿ ಮಾಡಿರುವುದು ಲೆಕ್ಕ ತಪಾಸಣೆಯಲ್ಲಿ ಕಂಡು ಬಂದಿರುತ್ತದೆ. ಈ ಬಗ್ಗೆ ವಿವರಣೆ ಕೋರಿ ನೀಡಿದ ವಿಚಾರಣಾ ಪತ್ರ ಸಂಖ್ಯೆ: 49/ದಿನಾಂಕ:06.09.2021ಕ್ಕೆ ವಿಶ್ವ ವಿದ್ಯಾನಿಲಯದವರು ದಿನಾಂಕ:09.09.2021 ರಂದು ಉತ್ತರಿಸಿ ದಿನಾಂಕ: 01.04.2006ರ ನಂತರ ನೇಮಕ ಗೊಂಡ ಸಿಬ್ಬಂದಿಗಳಿಗೆ ಹೊಸ ಪಿಂಚಣಿ ಯೋಜನೆಯನ್ನು ಭಾರತೀಯ ಜೀವ ವಿಮಾ ನಿಗಮದ ಮೂಲಕ ನಿರ್ವಹಿಸಲು ವಿಶ್ವ ವಿದ್ಯಾನಿಲಯವು ಹೊರಡಿಸಿರುವ ಆದೇಶಗಳನ್ನು ಮಾತ್ರ ಒದಗಿಸಿರುತ್ತಾರೆ.

ಮುಖ್ಯ ಪ್ರಧಾನ ವ್ಯವಸ್ಥಾಪಕರು, ಪಿಎಫ್‌ಆರ್‌ಡಿಎ ಇವರು ತಮ್ಮ ಪತ್ರ ಸಂ: ಪಿಎಫ್‌ಆರ್ ಡಿಎ/03/04/01/302/2017D:14.06.2019ರಲ್ಲಿ ವಿಶ್ವವಿದ್ಯಾನಿಲಯದ ಕುಲಪತಿಗಳಿಗೆ ವಿಶ್ವ ವಿದ್ಯಾನಿಲಯದ ಸಿಬ್ಬಂದಿ ವರ್ಗದವರ ಮಾಹಿತಿಯನ್ನು ಅದುವರೆಗೂ ಎನ್.ಎಸ್.ಡಿ.ಎಲ್ ನೊಂದಣಿ ಮಾಡಿಸಿರುವುದಿಲ್ಲವೆಂದು ಆಕ್ಷೇಪಿಸಿ ಕೂಡಲೇ ನೊಂದಣಿ ಮಾಡಿಸಲು ಸೂಚಿಸಿರುತ್ತಾರೆ. ಈ ವಿಷಯದ ಬಗ್ಗೆ ಕೂಡಲೇ ಕ್ರಮ ವಹಿಸುವಂತೆ ಹಿಂದಿನ ಲೆಕ್ಕ ಪರಿಶೋಧನಾ ತಿಳಿಸಿದ್ದಾಗ್ಯೂ ವಿಶ್ವ ವಿದ್ಯಾನಿಲಯದಿಂದ ಯಾವುದೇ ಕ್ರಮ ಆಗಿರುವುದಿಲ್ಲ. ವಿಶ್ವ ವಿದ್ಯಾನಿಲಯದ ನೌಕರರಿಂದ ವಂತಿಗೆ ಸಂಗ್ರಹಿಸಿ ಎನ್.ಎಸ್.ಡಿ.ಎಲ್. ರವರಿಗೆ ಕಟ್ಟುವ ವರೆಗಿನ ಅವಧಿಗೆ ಬಡ್ಡಿಯನ್ನು ಪಾವತಿಸಬೇಕಿರುವುದರಿಂದ, ಸದರಿ ಬಡ್ಡಿಯನ್ನು ಈ ಲೋಪಕ್ಕೆ ಕಾರಣರಾದ ವಿಶ್ವ ವಿದ್ಯಾನಿಲಯದ ಅಧಿಕಾರಿ/ಸಿಬ್ಬಂದಿವರ್ಗದವರಿಂದ ವಸೂಲಿಸಲು ಪರಿಶೀಲಿಸಬಹುದಾಗಿದೆ.

**34.2 ಪಿಂಚಣಿ ಪ್ರಕರಣಗಳಲ್ಲಿ ಅಂತಿಮ ವೇತನವನ್ನು ದೃಡೀಕರಿಸಿಕೊಂಡ ತಃಖ್ತೆಯನ್ನು ನಿರ್ವಹಿಸದೇ ಇರುವುದು.**

2019-20ನೇ ಸಾಲಿನಲ್ಲಿ ಪಾವತಿಸಲಾದ ಪಿಂಚಣಿ ಪ್ರಕರಣಗಳ ಕಡತಗಳನ್ನು ಪರಿಶೀಲಿಸಲಾಗಿ ಪಿಂಚಣಿ ಮೊತ್ತದ ಲೆಕ್ಕಾಚಾರದ ವಿವರ ಮಾತ್ರ ಕಡತದಲ್ಲಿ ಲಭ್ಯವಿದ್ದು ಬೋಧಕರು/ ಬೋಧಕೇತರರು ನಿವೃತ್ತಿ ಹೊಂದಿದ ದಿನಾಂಕಕ್ಕೆ ಅಂತಿಮ ವೇತನದ ದೃಢೀಕರಣ, ನೌಕರರು ಸೇವಾ ಅವಧಿಯಲ್ಲಿ ಪಡೆದ ವೇತನಗಳ ನಿಗದಿಯ ಪರಿಶೀಲನೆ ಹಾಗೂ ಪಿಂಚಣಿ, ಕುಟುಂಬ ಪಿಂಚಣಿ, ಪರಿವರ್ತಿತ ಪಿಂಚಣಿ, ನಿವೃತ್ತಿ/ ಮರಣ ಉಪದಾನಗಳ ಲೆಕ್ಕಾಚಾರದ ತಃಖ್ತೆಯನ್ನು ನಮೂನೆ-7 ಮತ್ತು ನಮೂನೆ-7ಎ ನಲ್ಲಿ ನಿರ್ವಹಿಸಿರುವುದಿಲ್ಲ. ಬೋಧಕರು/ಬೋಧಕೇತರರುಗಳ ಪಡೆದಿರುವ ವೇತನಗಳ ಮರು ಲೆಕ್ಕಚಾರದ ತಃಖ್ತೆಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣಾಪತ್ರ ಸಂಖ್ಯೆ 159/ದಿನಾಂಕ: 29.10.2021ನ್ನು ನೀಡಲಾಗಿತ್ತು. ಇದಕ್ಕೆ ವಿಶ್ವವಿದ್ಯಾನಿಲಯದವರು ದಿನಾಂಕ: 07-01-2022ರಂದು ನೀಡಿರುವ ಉತ್ತರದಲ್ಲಿ ಮುಂದಿನ ದಿನಗಳಲ್ಲಿ ನಿವೃತ್ತಿ ಹೊಂದುವ ಸಿಬ್ಬಂದಿಗಳ ಮೂಲ ವೇತನವನ್ನು ದೃಢೀಕರಿಸಲಾಗುವುದು ಎಂದು ತಿಳಿಸಿರುತ್ತಾರೆ. ಅನುಪಾಲನಾ ವರದಿಯಲ್ಲಿ ತಿಳಿಸಿರುವಂತೆ ಕ್ರಮ ವಹಿಸಲು ಸೂಚಿಸಿದೆ.

**34.3 ತಾತ್ಕಾಲಿಕ ಸೇವಾ ಅವಧಿಯನ್ನು ಪಿಂಚಣಿ ಸೌಲಭ್ಯಕ್ಕಾಗಿ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಿರುವುದು.**

ಶ್ರೀ ಎಜಿಲಿಯನ್ ರೆನ್ನಿ ಡಿ'ಸೋಜಾ, ನಿವೃತ್ತ ಪ್ರ.ದ.ಸ. ವಿಶ್ವ ವಿದ್ಯಾಲಯ ಕಾಲೇಜು, ಮಂಗಳೂರು ಇವರು ದಿನಾಂಕ 08.01.1995 ರಲ್ಲಿ ತಾತ್ಕಾಲಿಕ ನೆಲೆಯಲ್ಲಿ ಸೇವೆಗೆ ಸೇರಿರುತ್ತಾರೆ. ಸದರಿಯವರನ್ನು ವಿಶ್ವ ವಿದ್ಯಾನಿಲಯದ ಅಧಿಕೃತ ಜ್ಞಾಪನಾ ಸಂಖ್ಯೆ ಎಂಯು/33/ಇಎಸ್‌ಟಿ (2)/97-98, ದಿನಾಂಕ 28.09.2005ರ ಅನ್ವಯ ದಿನಾಂಕ 29.09.2005ರಿಂದ ಖಾಯಂ ನೌಕರರೆಂದು ಪರಿಗಣಿಸಲಾಗಿರುತ್ತದೆ. ವಿಶ್ವ ವಿದ್ಯಾನಿಲಯದ ಆದೇಶ ಸಂಖ್ಯೆ ಮಂವಿ/41/ಸಿಬ್ಬಂದಿ(2)/2015-16, ದಿನಾಂಕ 31.05.2018ರಲ್ಲಿ ಸದರಿಯವರಿಗೆ ದಿನಾಂಕ: 08.01.1995ರಿಂದ ನೀಡಲಾದ ವೇತನ ಭತ್ಯೆಗಳನ್ನು ಅರ್ಹತಾದಾಯಕವಲ್ಲವೆಂದೂ, ಖಾಯಂ ಪೂರ್ವ ಸೇವಾ ಅವಧಿಯನ್ನು ಪಿಂಚಣಿ ಮತ್ತು ರಜಾ ಸೌಲಭ್ಯಕ್ಕೆ ಮಾತ್ರ ಪರಿಗಣಿಸಲಾಗುವುದೆಂದು ತಿಳಿಸಿ, ದಿನಾಂಕ 08.01.1995 ರಿಂದ ಸೇವೆಗೆ ಖಾಯಂ ಆದ ದಿನಾಂಕ 29.09.2005 ರ ವರೆಗೆ ಪಾವತಿಸಿದ ಹೆಚ್ಚುವರಿ ವೇತನವನ್ನು ಸದರಿ ನೌಕರರ ವೇತನದಲ್ಲಿ ಕಡಿತಗೊಳಿಸಲು ಆದೇಶವಾಗಿರುತ್ತದೆ. ಅದರಂತೆ ಹೆಚ್ಚುವರಿ ಪಾವತಿ ಆಗಿದ್ದ ಮೊತ್ತವನ್ನು ನೌಕರರ ಪಿಂಚಣಿ ಮೊತ್ತದಲ್ಲಿ ಕಡಿತ ಗೊಳಿಸಲಾಗಿದೆ. ಶ್ರೀ ಎಜಿಲಿಯನ್ ರೆನ್ನಿ ಡಿ'ಸೋಜಾರವರ ಪಿಂಚಣಿ ಲೆಕ್ಕಚಾರದ ಕಡತವನ್ನು ಪರಿಶೀಲಿಸಿದಾಗ ಕುಲಸಚಿವರು ತಮ್ಮ ಟಿಪ್ಪಣಿ ಸಂಖ್ಯೆ ಮಂವಿ/41/ಸಿಬ್ಬಂದಿ(2)/2015-16, ದಿನಾಂಕ:14.05.2019ರಲ್ಲಿ ಖಾಯಂ ಪೂರ್ವ ಸೇವೆಯ ಅವಧಿಯನ್ನು ರಜೆ ಮತ್ತು ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವುದು ಎಂದು ಪ್ರಾಂಶುಪಾಲರಿಗೆ ತಿಳಿಸಿರುತ್ತಾರೆ ಹಾಗೂ ವಿಶ್ವ ವಿದ್ಯಾನಿಲಯದ ಪತ್ರ ಸಂಖ್ಯೆ ಮಂವಿ/07/ಸಿಬ್ಬಂದಿ(2)/2019-20, ದಿನಾಂಕ: 19.09.2019ರಲ್ಲಿ ತಾತ್ಕಾಲಿಕ ನೆಲೆಯಲ್ಲಿ ಸೇವೆ ಸಲ್ಲಿಸಿ 2005ರಲ್ಲಿ ಖಾಯಂ ಗೊಂಡ ನೌಕರರ ಖಾಯಂ ಪೂರ್ವದ ಸೇವೆಯನ್ನು ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವ ಬಗ್ಗೆ ಪರಿನಿಯಮವನ್ನು ರಚಿಸಲು ಕ್ರಮಕೈ ಗೊಳ್ಳಲಾಗಿರುತ್ತದೆ. ಸದರಿ ಪರಿನಿಯಮಕ್ಕೆ ಸರ್ಕಾರದಿಂದ ಅನುಮೋದನೆ ದೊರಕುವವರೆಗೆ ದಿನಾಂಕ: 14.05.2019ರ ಟಿಪ್ಪಣಿಯಲ್ಲಿ ಸೂಚಿಸಿದಂತೆ ಕ್ರಮ ಕೈ ಗೊಳ್ಳಲು ತಿಳಿಸಲಾಗಿದೆ ಎಂದು ಪ್ರಾಂಶುಪಾಲರಿಗೆ ತಿಳಿಸಿರುತ್ತಾರೆ. ಅದರಂತೆ ಸದರಿಯವರ ತಾತ್ಕಾಲಿಕ ಸೇವಾ ಅವಧಿಯನ್ನು ಪಿಂಚಣಿ ಸೌಲಭ್ಯಕ್ಕೆ ಪರಿಗಣಿಸಲು ಮಾಡಿ ಕೊಂಡಿರುವ ಪರಿನಿಯಮದ ಮಾಹಿತಿಯನ್ನು ಹಾಗೂ ಸದರಿ ಪರಿನಿಯಮವು ಸರ್ಕಾರದಿಂದ ಅನುಮೋದನೆಗೊಂಡ ದಾಖಲೆಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ವಿಚಾರಣಾಪತ್ರ ಸಂಖ್ಯೆ:231/ದಿನಾಂಕ: 08.11.2021ರಲ್ಲಿ ಕೋರಲಾಗಿದ್ದು, ವಿಶ್ವ ವಿದ್ಯಾನಿಲಯದವರು ಯಾವುದೇ ಮಾಹಿತಿಯನ್ನು/ ದಾಖಲೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಶ್ರೀ ಎಜಿಲಿಯನ್ ರೆನ್ನಿ ಡಿ'ಸೋಜಾರವರು ದಿನಾಂಕ:31.08.2019ರಂದು ವಯೋ ನಿವೃತ್ತಿ ಹೊಂದಿದ್ದು ದಿನಾಂಕ: 08.01.1995 ರಿಂದ ದಿನಾಂಕ: 28.09.2005 ರವರೆಗೆ ಸಲ್ಲಿಸಿದ ಖಾಯಂ ಪೂರ್ವ ಸೇವಾ ಅವಧಿಯನ್ನು ಪಿಂಚಣಿ ಸೌಲಭ್ಯಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಿ ಪಿಂಚಣಿ ಸೌಲಭ್ಯಗಳ ಒಟ್ಟು ಮೊತ್ತ ರೂ. 12,67,852-00 ಗಳನ್ನು ಧನಾದೇಶ ಸಂಖ್ಯೆ 591780, ದಿನಾಂಕ 16.03.2020ರಲ್ಲಿ ಹಾಗೂ ಮಾರ್ಚ್-2020 ಮಾಹೆಯ ಪಿಂಚಣಿ ರೂ.13013-00 ಗಳನ್ನು ಧನಾದೇಶ ಸಂಖ್ಯೆ591781/27.03.2020ರಲ್ಲಿ, ಒಟ್ಟುರೂ. ರೂ.12,80,865-00ಗಳನ್ನು ಪಾವತಿಸಲಾಗಿರುತ್ತದೆ. ಸದರಿಯವರಿಗೆ ತಾತ್ಕಾಲಿಕ ಸೇವೆಯನ್ನೂ ಅರ್ಹ ಸೇವೆಯೆಂದು ಪರಿಗಣಿಸಿ ಪಾವತಿಸಲಾದ ಹಾಗೂ ತಾತ್ಕಾಲಿಕ ಸೇವೆಯನ್ನು ಹೊರತುಪಡಿಸಿದರೆ ಪಾವತಿಸಬೇಕಾಗಿದ್ದ ಪಿಂಚಣಿ ಲೆಕ್ಕಚಾರದ ವಿವರಗಳು ಕೆಳಗಿನಂತಿವೆ.

49 ಅರ್ಧ ವಾರ್ಷಿಕ ಅರ್ಹ ಸೇವೆ (ತಾತ್ಕಾಲಿಕ ಸೇವೆಯನ್ನೂ ಪರಿಗಣಿಸಿದರೆ)ಗೆ ನಿಗದಿ ಪಡಿಸಿದ ಪಿಂಚಣಿ ಮೊತ್ತ ರೂ.16701.00, ಪರಿವರ್ತಿತ ಪಿಂಚಣಿ ಮಂಜೂರಾತಿ ನಂತರ ರೂ.11,134.00

32 ಅರ್ಧ ವಾರ್ಷಿಕ ಅರ್ಹಸೇವೆ (ತಾತ್ಕಾಲಿಕ ಸೇವೆ ಪರಿಗಣಿಸದೆ)ಗೆ ನಿಗದಿಪಡಿಸ ಬೇಕಾದ ಪಿಂಚಣಿ ಮೊತ್ತ ರೂ.10907.00, ಪರಿವರ್ತಿತ ಪಿಂಚಣಿ ಮಂಜೂರಾತಿ ನಂತರ ಪಿಂಚಣಿ ಮೊತ್ತ ರೂ.7,271.00

| ವಿವರ | 49 ಅ.ವಾ.ಅಸೇ ಪರಿಗಣನೆ | 32 ಅ.ವಾ.ಅಸೇ ಪರಿಗಣನೆ | ವ್ಯತ್ಯಾಸ |
|---|---|---|---|
| ಸೆಪ್ಟೆಂಬರ್ 2019 ರಿಂದ ಫೆಬ್ರವರಿ 2020ರವರೆಗೆ ಪಾವತಿಸಿದ ಪಿಂಚಣಿ ಮೊತ್ತ | ರೂ.1,11,480-00 | ರೂ.72,804-00 | ರೂ.38,676-00 |
| ಮಾರ್ಚ್ 2020 ಮಾಹೆಯ ಪಿಂಚಣಿ ಮೊತ್ತ | ರೂ.13,013-00 | ರೂ.6,567-00 | ರೂ.6446-00 |
| ನಿವೃತ್ತಿ ಉಪದಾನ | ರೂ.5,01,025-00 | ರೂ.3,27,200-00 | ರೂ.1,73,825-00 |
| ಪರಿವರ್ತಿತ ಪಿಂಚಣಿ | ರೂ.6,55,347-00 | ರೂ.4,27,912-00 | ರೂ.2,27,435-00 |

| | | | |
|---|---|---|---|
| ಒಟ್ಟು | ರೂ.12,80,865-00 | ರೂ.8,34,483-00 | ರೂ.4,46,382-00 |

ಸದರಿ ನೌಕರರಿಗೆ ಖಾಯಂ ಪೂರ್ವ ಸೇವಾ ಅವಧಿಯನ್ನೂ ಪಿಂಚಣಿ ಸೌಲಭ್ಯಕ್ಕೆ ಪರಿಗಣಿಸಿರುವುದಕ್ಕೆ ಸರ್ಕಾರವು ಅನುಮೋದನೆ ಪಡೆದಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ವಿಶ್ವ ವಿದ್ಯಾನಿಲಯದವರು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಇದಕ್ಕೆ ವಿಶ್ವ ವಿದ್ಯಾನಿಲಯವು ದಿನಾಂಕ: 07-01-2022 ರಂದು ನೀಡಿರುವ ಉತ್ತರದಲ್ಲಿ ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಂತೆ ಹಾಗೂ ದಿನಾಂಕ: 27-08-2021ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಖಾಯಂ ಪೂರ್ವ ಸೇವಾ ಅವಧಿಯನ್ನು ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ ಮಾನ್ಯ ನ್ಯಾಯಾಲಯದ ಆದೇಶದಲ್ಲಿ ಖಾಯಂ ಪೂರ್ವ ಸೇವಾ ಅವಧಿಯನ್ನು ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವಂತೆ ತಿಳಿಸಿರುವುದಿಲ್ಲ. ಅಲ್ಲದೆ ವಿಶ್ವ ವಿದ್ಯಾನಿಲಯವು ಈ ಬಗ್ಗೆ ಪರಿನಿಯಮ ರೂಪಿಸಿ ಮಾನ್ಯ ಕುಲಾಧಿಪತಿಗಳ ಅನುಮೋದನೆ ಪಡೆದಿರುವ ಬಗ್ಗೆಯಾಗಲೀ ಅಥವಾ ನೇಮಕಾತಿಗೆ ಮತ್ತು ನೇಮಕಾತಿ ನಿಬಂಧನೆಗಳಿಗೆ ಸರ್ಕಾರದ ಅನುಮೋದನೆ ಪಡೆದಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ. ಹೀಗಾಗಿ ಶ್ರೀ ಎಜಿಲಿಯನ್ ರೆನ್ನಿ ಡಿ'ಸೋಜಾರವರ ಖಾಯಂ ಪೂರ್ವ ಅವಧಿಯನ್ನು ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸಿ ಹೆಚ್ಚುವರಿಯಾಗಿ ಡ್ರಾ ಮಾಡಿ ಪಾವತಿಸಿರುವ ಮೊತ್ತ ರೂ.4,46,382.00 ಗಳನ್ನು ವಸೂಲಿಸಲು ಹಾಗೂ ಸದರಿ ನೌಕಕರರಿಗೆ ವಾಸ್ತವವಾಗಿ ಪರಿವರ್ತಿತ ಪಿಂಚಣಿ ಮಂಜೂರಾತಿ ನಂತರ ಮಾಹೆಯಾನ ರೂ.7,271.00ಗಳಂತೆ ಪಾವತಿಸಬೇಕಿದ್ದು, ಅದರಂತೆ ಕ್ರಮ ವಹಿಸಲು ಸೂಚಿಸಿದೆ.

**34.4 ಪಿಂಚಣಿ ಪಾವತಿಗೆ ಸಂಬಂಧಿಸಿದಂತೆ ಸೇವಾ ಪುಸ್ತಕವನ್ನು ಪರಿಶೀಲನೆಗೆ ಹಾಜರು ಪಡಿಸದೇ ಇರುವುದು**

2019-20ನೇ ಸಾಲಿನಲ್ಲಿ ವಿಶ್ವ ವಿದ್ಯಾನಿಲಯದ ನಿವೃತ್ತ ನೌಕರರಿಗೆ ಪಿಂಚಣಿ ಸವಲತ್ತುಗಳನ್ನು ಪಾವತಿಸಿರುವುದಕ್ಕೆ ಸಂಬಂಧಿಸಿದಂತೆ ಕಡತಗಳನ್ನು ಪರಿಶೀಲಿಸಲಾಗಿ ಶ್ರೀಮತಿ ಕಮಲ ಕೆ.ಪಿ, ನಿವೃತ್ತ ಸಹಪ್ರಾಧ್ಯಾಪಕರು ಇವರ ಸೇವಾ ವಹಿಯು ಸಂಬಂಧಿಸಿದ ಕಡತದಲ್ಲಿ ಪರಿಶೋಧನೆಗೆ ಲಭ್ಯವಿರುವುದಿಲ್ಲ. ಆದ್ದರಿಂದ ಸದರಿಯವರ ಸೇವಾಪುಸ್ತಕವನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸುವಂತೆ ವಿಚಾರಣಾಪತ್ರ ಸಂಖ್ಯೆ 160/2021-22, ದಿನಾಂಕ:29.10.2021ರಲ್ಲಿ ಕೋರಲಾಗಿದ್ದು, ಸದರಿಯವರ ಸೇವಾವಹಿಯನ್ನು ಪರಿಶೀಲನೆಗೆ ಹಾಜರು ಪಡಿಸಿರುವುದಿಲ್ಲ. ಶ್ರೀಮತಿ ಕಮಲ ಕೆ.ಪಿ, ನಿವೃತ್ತ ಸಹ ಪ್ರಾಧ್ಯಾಪಕರು ಇವರಿಗೆ ಪಾವತಿಸಿರುವ ನಿವೃತ್ತಿ ಸೌಲಭ್ಯಗಳು ಮತ್ತು ಪಿಂಚಣಿಯ ವಿವರಗಳು ಕೆಳಗಿನಂತಿರುತ್ತವೆ.

| **ಕ್ರ. ಸಂ** | **ಮಾಹೆ** | **ವೋಚರ್ ನಂ./** | **ಕ್ರ.ಸಂ** | **ಮಾಹೆ** | **ವೋಚರ್ ನಂ./** |
|---|---|---|---|---|---|
| 01 | -- | 09/ 27.09.2019 | 216661/ 27.09.2019 | 2555615-00 | ಪಿಂಚಣಿ- 428624-00 (02.02.2019 ರಿಂದ 31.08.2019 ಡಿ.ಸಿ.ಆರ್.ಜಿ.-756138-00 |
| 02 | 09/2019 | 08/26.09.19 | ----- | 48246-00 | ಒಟ್ಟುಪಿಂಚಣಿ ಬಿಲ್ಲಿನ ಮೊತ್ತ ರೂ.404229-00 ರಲ್ಲಿ |
| 03 | 10/2019 | 11/25.10.19 | ---- | 48246-00 | ಒಟ್ಟು ಪಿಂಚಣಿ ಬಿಲ್ಲಿನ ಮೊತ್ತ ರೂ. 452475-00 ರಲ್ಲಿ |
| 04 | 07/19 ರಿಂದ 10/19 | 12/08.11.19 | ----- | 9576-00 | ಒಟ್ಟು ಡಿ.ಎ. ಅರಿಯರ್ಸ್ ಮೊತ್ತ ರೂ.86166-00 ರಲ್ಲಿ |
| 05 | 11/2019 | 13/27.11.19 | ---- | 50640-00 | ಒಟ್ಟು ಪಿಂಚಣಿ ಬಿಲ್ಲಿನ ಮೊತ್ತ ರೂ.474615-00 ರಲ್ಲಿ |
| 06 | 12/2019 | 14/27.12.19 | ---- | 50640-00 | ಒಟ್ಟು ಪಿಂಚಣಿ ಬಿಲ್ಲಿನ ಮೊತ್ತ ರೂ.474615-00 ರಲ್ಲಿ |
| 07 | 01/2020 | 15/27.01.20 | ---- | 50640-00 | ಒಟ್ಟು ಪಿಂಚಣಿ ಬಿಲ್ಲಿನ ಮೊತ್ತ ರೂ.474615-00 ರಲ್ಲಿ |
| 08 | 02/2020 | 16/25.02.20 | ---- | 50640-00 | ಒಟ್ಟು ಪಿಂಚಣಿ ಬಿಲ್ಲಿನ ಮೊತ್ತ ರೂ.474615-00 ರಲ್ಲಿ |
| 09 | 03/2020 | 17/27.03.20 | | 50640-00 | ಒಟ್ಟು ಪಿಂಚಣಿ ಬಿಲ್ಲಿನ ಮೊತ್ತ ರೂ.474615-00 ರಲ್ಲಿ |
| | | | **ಒಟ್ಟುರೂ.** | **2914883-00** | |

ಸದರಿಯವರ ಪಿಂಚಣಿ, ಕುಟುಂಬ ಪಿಂಚಣಿ, ಪರಿವರ್ತಿತ ಪಿಂಚಣಿ, ನಿವೃತ್ತಿ/ ಮರಣ ಉಪದಾನಗಳ ಲೆಕ್ಕಾಚಾರದ ತಃಖ್ತೆಯನ್ನು ನಮೂನೆ-7 ಮತ್ತು ನಮೂನೆ-7ಎ ನಲ್ಲಿ ನಿರ್ವಹಿಸಿರುವುದಿಲ್ಲ. ಇವರ ಸೇವಾವಹಿಯನ್ನು ಹಾಜರುಪಡಿಸದೇ ಇರುವುದರಿಂದ ಸದರಿಯವರಿಗೆ ಪಾವತಿಸಲಾದ ಒಟ್ಟು ಪಿಂಚಣಿ ಮೊತ್ತ ರೂ. 2914883-00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

### 35. ಪುಸ್ತಕಗಳ ಮಾರಾಟ

2019-20ನೇ ಸಾಲಿನಲ್ಲಿ ಪ್ರಸಾರಾಂಗ ವಿಭಾಗದಲ್ಲಿ ಪುಸ್ತಕಗಳ ಮಾರಾಟದಿಂದ ಒಟ್ಟು 9,83,054/-ಗಳು ಸ್ವೀಕೃತಿಯಾಗಿರುತ್ತದೆ. ಪುಸ್ತಕಗಳ ದಾಸ್ತಾನಿನ ವಿವರಗಳನ್ನು ಅನುಬಂಧ-40ರಲ್ಲಿ ನೀಡಲಾಗಿದೆ

### 35.2 ಪ್ರಸಾರಾಂಗ ವಿಭಾಗದಿಂದ ಸಾಲ ನೀಡಲಾದ ಪುಸ್ತಗಳ ಪೂರ್ಣ ಮೊತ್ತವನ್ನು ವಸೂಲಿ ಮಾಡದಿರುವುದು.

ಪ್ರಸಾರಾಂಗ ವಿಭಾಗದಿಂದ ನಿರ್ವಹಿಸಲಾಗಿರುವ ಸಾಲದ ರಶೀತಿ ಪುಸ್ತಕಗಳನ್ನು ಪರಿಶೀಲಿಸಿದಾಗ ರೂ.8,10,037/-ಗಳ ಮೌಲ್ಯದ ಪುಸ್ತಕಗಳನ್ನು ಸಾಲದ ರೂಪದಲ್ಲಿ ವಿವಿಧ ಪುಸ್ತಕ ಮಾರಾಟಗಾರರಿಗೆ ನೀಡಿದ್ದು, ಸದರಿಯವರಿಂದ ರೂ.6,65,239/-ಗಳನ್ನು ಮಾತ್ರ ವಸೂಲಿಸಿದ್ದು, ಬಾಕಿ ರೂ.1,44,798/-ಗಳನ್ನು ಸಂಬಂದಿಸಿದವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಲು ಸೂಕ್ತ ಕ್ರಮವಹಿಸಲು ಸೂಚಿಸಿದೆ.

### 36. ಲೆಕ್ಕಪರಿಶೋಧನಾ ಶುಲ್ಕ

2015-16ನೇ ಸಾಲಿನಿಂದ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಲೆಕ್ಕ ಶೀರ್ಷಿಕೆಗೆ ಸಂದಾಯ ಮಾಡಬೇಕಿರುವ ಲೆಕ್ಕಪರಿಶೋಧನಾ ಶುಲ್ಕದ ವಿವರಗಳು ಕೆಳಕಂಡಂತಿರುತ್ತದೆ.

| ವರ್ಷ | ಆರಂಭಿಕಶಿಲ್ಕು | ಚಾಲ್ತಿ ವರ್ಷದ ಆಡಿಟ್ ಶುಲ್ಕ | ಒಟ್ಟು ಮೊತ್ತ | ಚಾಲ್ತಿ ವರ್ಷದ ಪಾವತಿ | ಬಾಕಿ ಮೊತ್ತ |
|---|---|---|---|---|---|
| 2015-16 | 0 | 1266311 | 1266311 | 0 | 1266311 |
| 2016-17 | 1266311 | 1231811 | 2498122 | 0 | 2498122 |
| 2017-18 | 2498122 | 1939097 | 4437219 | 0 | 4437219 |
| 2018-19 | 4437219 | 1190995 | 5628214 | 0 | 5628214 |
| 2019-20 | 5628214 | 1500335 | 7128549 | 0 | 7128549 |

ಬಾಕಿ ಉಳಿದಿರುವ ಲೆಕ್ಕಪರಿಶೋಧನಾ ಶುಲ್ಕವನ್ನು ಇಲಾಖೆ ಲೆಕ್ಕ ಶೀರ್ಷಿಕೆ 0070-60-110-0-01-000ಗೆ ಜಮೆ ಮಾಡಿ, ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

### ಸಾಮಾನ್ಯ ಅಭಿಪ್ರಾಯ

1. ಹಿಂದಿನ ಸಾಲುಗಳಲ್ಲಿ ಇತ್ಯರ್ಥವಾಗದೇ ಬಾಕಿ ಉಳಿದಿರುವ ಲೆಕ್ಕಪರಿಶೋಧನಾ ವರದಿಗಳ ಕಂಡಿಕೆಗಳಿಗೆ ಅನುಪಾಲನಾ ವರದಿಗಳನ್ನು ಪೂರಕ ದಾಖಲೆಗಳೊಂದಿಗೆ ಸಕ್ಷಮ ಪ್ರಾಧಿಕಾರದ ಮೂಲಕ ಸಲ್ಲಿಸದಿರುವುದು ಮತ್ತು ಶೀಘ್ರ ಇತ್ಯರ್ಥಕ್ಕೆ ಕ್ರಮ ವಹಿಸದಿರುವುದನ್ನು ಆಕ್ಷೇಪಿಸಲಾಗಿದೆ.
2. ಆಯವ್ಯಯ ಅಂದಾಜುಪಟ್ಟಿ ಹಾಗೂ ವಾರ್ಷಿಕ ಲೆಕ್ಕ ಪತ್ರ ವರದಿಗಳನ್ನು ನಿಗದಿತ ಅವಧಿಯೊಳಗೆ ಸಿದ್ಧಪಡಿಸಿ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲು ಸೂಚಿಸಿದೆ.
3. ವಿಶ್ವ ವಿದ್ಯಾನಿಲಯವು ವಿವಿಧ ಸ್ನಾತಕ/ಸ್ನಾತಕೋತ್ತರ ಪದವಿ/ಡಿಪ್ಲೋಮಾ ಕೋರ್ಸುಗಳಿಗೆ ಸಂಬಂಧಿಸಿದಂತೆ, ಪ್ರವೇಶ ಪಡೆದ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕಕ್ಕೆ ಸಂಬಂಧಿಸಿದಂತೆ ಬೇಡಿಕೆ, ವಸೂಲಾತಿ ಮತ್ತು ಬಾಕಿ (DCB Register) ವಹಿಯನ್ನು ಕ್ರಮಬದ್ಧವಾಗಿ ನಿರ್ವಹಿಸಲು ಸೂಚಿಸಿದೆ.
4. ವಿಶ್ವ ವಿದ್ಯಾನಿಲಯದಲ್ಲಿ ಕುಲಪತಿ, ಕುಲಸಚಿವರು, ಹಣಕಾಸು ಅಧಿಕಾರಿ ಮುಂತಾದ ಆಡಳಿತಾತ್ಮಕ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳು ಕ್ರಮವಾಗಿ ತಿಂಗಳಿಗೆ 8 ಮತ್ತು 16 ಗಂಟೆಗಳ ಕಾಲ ತರಗತಿಗಳನ್ನು ತೆಗೆದುಕೊಳ್ಳಬೇಕೆಂದು

ಸರ್ಕಾರದ ನಿರ್ದೇಶನವಿದ್ದಾಗ್ಯೂ ಹಣಕಾಸು ಅಧಿಕಾರಿಗಳನ್ನು ಹೊರತುಪಡಿಸಿ ಉಳಿದವರು ಸರ್ಕಾರದ ನಿರ್ದೇಶನಗಳನ್ನು ಪಾಲಿಸದಿರುವುದನ್ನು ಗಮನಿಸಲಾಗಿದೆ.

5. ಹೂಡಿಕೆಗೆ ಸಂಬಂಧಿಸಿದಂತೆ ಹೂಡಿಕೆ ಸಮಿತಿ ಮತ್ತು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಸರಕಾರದ ನಿಯಮ/ ಮಾರ್ಗಸೂಚಿಯನ್ವಯ ಹೂಡಿಕೆ ಮಾಡಲು ಸೂಚಿಸಿದೆ.

6. ವಿಶ್ವ ವಿದ್ಯಾನಿಲಯದಲ್ಲಿ ಆಸ್ತಿ ವಹಿ ನಿರ್ವಹಣೆ ಮಾಡಿರುವುದಿಲ್ಲ. ಹೀಗಾಗಿ ವಿಶ್ವ ವಿದ್ಯಾನಿಲಯಕ್ಕೆ ಸೇರಿರುವ ಚರಾಸ್ತಿ ಮತ್ತು ಸ್ಥಿರಾಸ್ಥಿಗಳನ್ನು ದೃಢಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಇದರಿಂದಾಗಿ ವಿಶ್ವ ವಿದ್ಯಾನಿಲಯದ ಹೆಸರಿಗೆ ನೊಂದಣಿಯಾಗದಿರುವ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಮಾಡಲು ಹೋಗಿ ತಡೆಯುಂಟಾಗಿ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ ಬಂದಿದ್ದ ಹಣವನ್ನು ಬಡ್ಡಿ ಸಹಿತ ಹಿಂದಿರುಗಿಸಿರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಗಿದೆ.

7. ವಿಶ್ವ ವಿದ್ಯಾನಿಲಯದಲ್ಲಿ ಕಾಮಗಾರಿ ವಹಿ ನಿರ್ವಹಿಸದಿರುವುದು ಹಾಗೂ ಅಳತೆ ಪುಸ್ತಕದಲ್ಲಿ ಅಳತೆ ಪರಿಶೀಲನೆಯನ್ನು ಮಾಡದೆಯೇ ನಿಯಮ ಬಾಹಿರವಾಗಿ ಬಿಲ್ಲುಪಾವತಿಸಿರುವುದನ್ನು ಗಮನಿಸಲಾಗಿದೆ.

8. ವಿಶ್ವವಿದ್ಯಾಲಯವು ಕೆ.ಸಿ.ಎಸ್.ಆರ್, ಕೆ.ಎಫ್.ಸಿ., ಎಂ.ಸಿ.ಇ., ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ಸರಕಾರದ ಸುತ್ತೋಲೆ ನಿಯಮಗಳಡಿ ಕಾರ್ಯ ನಿರ್ವಹಿಸಬೇಕಿದ್ದು, ಹಲವು ಸಂದರ್ಭಗಳಲ್ಲಿ ಈ ಕಾಯ್ದೆ/ ನಿಯಮಗಳನ್ನು ಉಲ್ಲಂಘಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

9. ಕಂಡಿಕೆ.14.1, 23.13, 23.15 ಹಾಗೂ 23.16ರಲ್ಲಿನ ವಿವರಗಳಂತೆ ವಿಶ್ವ ವಿದ್ಯಾನಿಲಯದಲ್ಲಿ ತಂತ್ರಾಂಶದ ಬಾಬ್ತು ವೆಚ್ಚಗಳನ್ನು ಭರಿಸಿದ್ದು, ವಿಶ್ವ ವಿದ್ಯಾನಿಲಯದಲ್ಲೇ ಗಣಕ ವಿಜ್ಞಾನ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗವಿರುವುದರಿಂದ ಅಲ್ಲಿನ ತಜ್ಞರು ಮತ್ತು ಸೌಲಭ್ಯಗಳನ್ನು ಬಳಸಿ ಕೊಂಡು ಈ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿದ್ದಲ್ಲಿ ಹಣಕಾಸು ಉಳಿತಾಯವಾಗುವುದರ ಜೊತೆಗೆ, ತಂತ್ರಾಂಶ ರೂಪಿಸುವ ಯೋಜನೆಯಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವ ಮೂಲಕ ಅವರುಗಳಿಗೆ ಪ್ರಾಯೋಗಿಕ ಅನುಭವ ದೊರೆಯುವಂತೆ ಮಾಡಬಹುದಾಗಿತ್ತು. ಈ ಬಗ್ಗೆ ವಿಶ್ವ ವಿದ್ಯಾನಿಲಯದಲ್ಲೇ ಲಭ್ಯವಿದ್ದ ತಜ್ಞರ ಹಾಗೂ ಮೂಲ ಸೌಕರ್ಯಗಳನ್ನು ಬಳಸಿಕೊಳ್ಳದೇ ಹೊರ ಏಜೆನ್ಸಿಗಳಿಂದ ಈ ಸೇವೆಗಳನ್ನು ಪಡೆದಿರುವುದು ಸರಿಯಾದ ಕ್ರಮವಾಗಿರುವುದಿಲ್ಲ.

10. ಬೋಧಕ/ಬೋಧಕೇತರ ವರ್ಗದವರಿಗೆ ಯು.ಜಿ.ಸಿ./ಸರ್ಕಾರಿ ಆದೇಶವನ್ನು ಮೀರಿ ಸಂಭಾವನೆ/ ಗೌರವಧನವನ್ನು ನೀಡಿರುವುದು, ಕೆ.ಸಿ.ಎಸ್.ಆರ್. ನಿಯಮಗಳನ್ನು ಮೀರಿ ಹೆಚ್ಚುವರಿಯಾಗಿ ಪ್ರಯಾಣಭತ್ಯೆ, ದಿನಭತ್ಯೆ ಹಾಗೂ ಇತರೆ ಭತ್ಯೆಗಳನ್ನು ಪಾವತಿಸಿರುವುದನ್ನು ಗಮನಿಸಲಾಗಿದೆ. ಈ ಬಗ್ಗೆ ವಿಶ್ವ ವಿದ್ಯಾಲಯವು ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದೆ.

11. ಬೋದಕೇತರ ಹುದ್ದೆಗಳನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳದಂತೆ ಹಾಗೂ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಖಾಲಿ ಇರುವ ಹುದ್ದೆಗಳಿಗೆ ಮಾತ್ರ ಸರ್ಕಾರದ ಪೂರ್ವಾನುಮತಿ ಪಡೆದು ಹೊರಗುತ್ತಿಗೆ ಮೇಲೆಮಾತ್ರ ಸೇವೆ ಪಡೆಯಬೇಕೆಂಬ ಸರ್ಕಾರದ ನಿರ್ದೇಶನಗಳನ್ನು ಉಲ್ಲಂಘಿಸಿ ಮಂಜೂರಾದ ಹುದ್ದೆಗಳಿಗಿಂತಲೂ ಹೆಚ್ಚು ಮಂದಿಯನ್ನು ತಾತ್ಕಾಲಿಕ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವುದನ್ನು ಗಮನಿಸಲಾಗಿದೆ.

12. ಎ.ಸಿ. ಬಿಲ್‌ಗಳ ಮೂಲಕ ಮುಂಗಡ ಡ್ರಾ ಮಾಡುವ ಸಂದರ್ಭದಲ್ಲಿ ಸರ್ಕಾರದ ನಿಯಮವನ್ನು ಪಾಲಿಸದೇ ಇರುವುದು ಮತ್ತು ವೋಚರುಗಳೊಡನೆ ಎನ್.ಡಿ.ಸಿ.ಯನ್ನು ತಡವಾಗಿ ಸಲ್ಲಿಸಿರುವುದು ಅಥವಾ ಸಲ್ಲಿಸದೇ ಇರುವುದನ್ನು ಗಮನಿಸಲಾಗಿದೆ.

13. ವಿಶ್ವ ವಿದ್ಯಾನಿಲಯಕ್ಕೆ ವಿವಿಧ ಸಂಸ್ಥೆಗಳಿಂದ ಮಂಜೂರಾದ ಸಂಶೋಧನಾ ಯೋಜನೆಗಳನ್ನು ನಿಗದಿತ ಕಾಲಾವಧಿಯೊಳಗೆ ಪೂರ್ಣಗೊಳಿಸದಿರುವುದು ಅಥವಾ ಸ್ಥಗಿತ ಗೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಇದರಿಂದಾಗಿ ವಿಶ್ವ ವಿದ್ಯಾನಿಲಯಕ್ಕೆ ಮುಂದೆ ಹೊಸದಾಗಿ ಸಂಶೋಧನಾ ಯೋಜನೆಗಳು ಮಂಜೂರಾಗದೆ ಸಂಶೋಧನಾ ಮತ್ತು ಶೈಕ್ಷಣಿಕ ಚಟುವಟಿಕೆಗಳು ಕುಂಠಿತ ಗೊಳ್ಳುವ ಸಾಧ್ಯತೆ ಇರುತ್ತದೆ.

ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ
ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು